ಬುಧವಾರ, ಆಗಸ್ಟ್ 6, 2025 ₹ 7.00

prajavani.net prajavani

www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಈಜು: ಪೂರ್ವಿಗೆ ಚಿನ್ನ

ಬೆಂಗಳೂರಿನ ಬಸವನಗುಡಿ ಈಜು ಕೇಂದ್ರದಲ್ಲಿ ನಡೆದ 41ನೇ ಸಬ್ ಜೂನಿಯರ್ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಬಾಲಕಿಯರ 100ಮೀ ಫ್ರೀಸ್ಟೈಲ್ ವಿಭಾಗದಲ್ಲಿ ಚಿನ್ನದ ಪದಕ ಗಳಿಸಿದ ಗೋವಾದ ಪೂರ್ವಿ ರಿತೇಶ್ ನಾಯ್ಕ್



ಸಂಶೋಧನಾ ಘಟಕಕ್ಕೆ ಚಾಲನೆ

ಐಐಟಿ ಮದ್ರಾಸ್‌ನಲ್ಲಿ ಸ್ಥಾಪಿಸಿರುವ ಭಾರತೀಯ ಸೇನಾ ಸಂಶೋಧನಾ ಘಟಕ ‘ಅಗ್ನಿ ಶೋಧ’ವನ್ನು ಸೇನಾ ಮುಖ್ಯಸ್ಥ ಜನರಲ್ ಉಪೇಂದ್ರ ದ್ವಿವೇದಿ ಅವರು ಉದ್ಘಾಟಿಸಿದರು






ಕಾಂಗ್ರೆಸ್ ಪಕ್ಷದ ನಿಷ್ಠಾವಂತ ಹಿರಿಯ ಬಲಿಷ್ಠ ನಾಯಕರು ಹಾಗೂ
ಕರ್ನಾಟಕ ಸರ್ಕಾರದ ಮಾನ್ಯ ಗೃಹ ಮಂತ್ರಿಗಳಾದ ಸನ್ಮಾನ್ಯ
ಶ್ರೀ. ಡಾ.ಜಿ.ಪರಮೇಶ್ವರ್ ಜೀ ರವರಿಗೆ
ಹುಟ್ಟುಹಬ್ಬದ ಹಾರ್ದಿಕ
ಶುಭಾಶಯಗಳು
ಶ್ರೀ. ಎ.ಸಿ ಶ್ರೀನಿವಾಸ್ ರವರು
ಶಾಸಕರು
ಪುಲಿಕೇಶಿನಗರ ವಿಧಾನಸಭಾ ಕ್ಷೇತ್ರ ಹಾಗೂ
ಬಿ.ಡಿ.ಎ. ಸದಸ್ಯರು

prajavani.net prajavani www.prajavani.net

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನ ಪತ್ರಿಕೆ

ಅಘೋಷಿತ ಆದಾಯ



ಆದಾಯ ತೆರಿಗೆ ಇಲಾಖೆಯು 2024-25ನೇ ಆರ್ಥಿಕ ವರ್ಷದಲ್ಲಿ ನಡೆಸಿದ ಸಮೀಕ್ಷೆಯಲ್ಲಿ ದೇಶದಲ್ಲಿ ₹30,444 ಕೋಟಿ ಅಘೋಷಿತ ಆದಾಯ ಪತ್ತೆಯಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ

ವಿಮಾನ ಪ್ರಯಾಣಕ್ಕೆ ನಿರ್ಬಂಧ



ಪ್ರಸಕ್ತ ವರ್ಷದಲ್ಲಿ ಜುಲೈ 30ರವರೆಗೆ 48 ಜನರಿಗೆ ವಿಮಾನ ಪ್ರಯಾಣವನ್ನು ನಿರ್ಬಂಧಿಸಲಾಗಿದೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ. 2024ರಲ್ಲಿ 82 ಮಂದಿಗೆ ವಿಮಾನ ಪ್ರಯಾಣ ನಿರ್ಬಂಧಿಸಲಾಗಿತ್ತು

ಸೆನ್ಸೆಕ್ಸ್ 80,710 | ನಿಫ್ಟಿ 24,649 | $/₹ 87.88 | ಚಿನ್ನ (Std. 10g) ₹1,05,500 (ಬೆಂಗಳೂರು) | ಶುದ್ಧ ಬೆಳ್ಳಿ (kg) ₹1,19,500 (ಬೆಂಗಳೂರು)

ಸಾರಿಗೆ ಮುಷ್ಕರಕ್ಕೆ ಎರಡು ದಿನ ತಡೆ

ಹೈಕೋರ್ಟ್ ವಿಭಾಗೀಯ ಪೀಠದಲ್ಲಿ ಪ್ರಕರಣದ ವಿಚಾರಣೆ ನಾಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಮಂಗಳವಾರ ಶುರುವಾಗಿದ್ದ ಸಾರಿಗೆ ನಿಗಮಗಳ ನೌಕರರ ಮುಷ್ಕರಕ್ಕೆ ಎರಡು ದಿನ ತಡೆ ಬಿದ್ದಿದೆ.

'ಮುಷ್ಕರ ನಡೆಸಿದರೆ ಬಂಧಿಸಿ' ಎಂದು ಸರ್ಕಾರಕ್ಕೆ ಹೈಕೋರ್ಟ್ ಸೂಚಿಸಿತ್ತು. ಗುರುವಾರ (ಆ.7) ಮತ್ತೆ ಈ ವಿಷಯ ಕೋರ್ಟ್ ಮುಂದೆ ಬರಲಿದ್ದು, ಅಲ್ಲಿಯವರೆಗೆ ಮುಷ್ಕರ ನಡೆಸದಿರಲು ನೌಕರರ ಸಂಘಟನೆಗಳು ನಿರ್ಧರಿಸಿವೆ.

ವೇತನ ಪರಿಷ್ಕರಣೆ, 38 ತಿಂಗಳ ಹೆಚ್ಚುವರಿ ವೇತನ ಬಾಕಿ ಪಾವತಿ ಸೇರಿದಂತೆ ಬೇಡಿಕೆಗಳ ಈಡೇರಿಕೆಗೆ ಒತ್ತಾಯಿಸಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಕಾರ್ಮಿಕರ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಮಂಗಳವಾರದಿಂದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆ ನೀಡಿತ್ತು. ಈ ಬಗ್ಗೆ ಸಲ್ಲಿಕೆಯಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ವಿಚಾರಣೆ ನಡೆಸಿದ್ದ ಹೈಕೋರ್ಟ್‌ನ ವಿಭಾಗೀಯ ಪೀಠ, ಒಂದು ದಿನ ತಡೆ ನೀಡಿ ಆದೇಶಿಸಿತ್ತು. ಹಾಗಿದ್ದರೂ ಕೆಲವು ನಿಗಮಗಳ ನೌಕರರು ಮುಷ್ಕರ ಆರಂಭಿಸಿದ್ದರು. ಹೀಗಾಗಿ, ದೂರ ಪ್ರಯಾಣದ ಕೆಎಸ್‌ಆರ್‌ಟಿಸಿ ಬಸ್‌ಗಳು ಮಂಗಳವಾರ ಬೆಳಿಗ್ಗೆ ರಸ್ತೆಗಿಳಿಯಲಿಲ್ಲ. ಮುಷ್ಕರ ಆರಂಭವಾದ ಕೆಲ ಗಂಟೆಗಳಲ್ಲೇ ಹೈಕೋರ್ಟ್ ಚಾಟಿ ಬೀಸಿತು. ಹೀಗಾಗಿ, ಮಧ್ಯಾಹ್ನದ ವೇಳೆಗೆ ನೌಕರರು ಕೆಲಸಕ್ಕೆ ಮರಳಿದರು. ರಾತ್ರಿ ಹೊತ್ತಿಗೆ ವಿವಿಧ ನಿಗಮಗಳ ಶೇಕಡ 80.04ರಷ್ಟು ಬಸ್‌ಗಳು ರಸ್ತೆಗಿಳಿದವು.

ಬಿಎಂಟಿಸಿ ಬಿಟ್ಟು, ಉಳಿದ ನಿಗಮಗಳ ವ್ಯಾಪ್ತಿಯಲ್ಲಿ ನಡೆದ ಮುಷ್ಕರ ಮಧ್ಯಾಹ್ನದವರೆಗೆ ಭಾಗಶಃ ನಡೆಯಿತು. ಶೇ 40ರಷ್ಟು ಬಸ್ ಸೇವೆ ಸ್ಥಗಿತಗೊಂಡಿರೆ, ಶೇ 60ರಷ್ಟು ಬಸ್‌ಗಳು ಸಂಚರಿಸಿದವು.

7



ಸಾರಿಗೆ ಸಂಸ್ಥೆಗಳು ಹಿಂದೆಂದೂ ಕೇಳರಿಯದ ರೀತಿಯಲ್ಲಿ ಲಾಭದಲ್ಲಿವೆ ಎಂದು ಸುಳ್ಳು ಹೇಳಿ, ಪುಟಗಟ್ಟಲೆ ಜಾಹೀರಾತು ಕೊಟ್ಟು ಬಿಟ್ಟಿ ಪ್ರಚಾರ ಪಡೆದಿದ್ದೇ ಸಿದ್ದರಾಮಯ್ಯನವರ ಏಕೈಕ ಸಾಧನೆ

ಆರ್. ಅಶೋಕ, ವಿರೋಧ ಪಕ್ಷದ ನಾಯಕ



ನಮ್ಮ ವಿರುದ್ಧ ಆರೋಪ ಮಾಡುವ ಮೊದಲು, ಸಾರಿಗೆ ಸಚಿವರಾಗಿ ನೀವು ಮತ್ತು ನಿಮ್ಮ ಸರ್ಕಾರ ರಾಜ್ಯ ರಸ್ತೆ ಸಾರಿಗೆ ನೌಕರರಿಗೆ ಮಾಡಿರುವ ಮೋಸ, ದ್ರೋಹದ ಇತಿಹಾಸವನ್ನು ನೆನಪು ಮಾಡಿಕೊಳ್ಳಿ

ಸಿದ್ದರಾಮಯ್ಯ, ಮುಖ್ಯಮಂತ್ರಿ



ಬೆಂಗಳೂರಿನ ಮೆಜೆಸ್ಟಿಕ್ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಪ್ರಯಾಣಿಕರನ್ನು ಕರೆದುಕೊಂಡು ಹೋಗಲು ಕಾರೊಂದು ನಿಂತಿತ್ತು ಚಿತ್ರ:ಕಿಶೋರ್ ಕುಮಾರ್ ಬೋಳಾರ್

ಮುಷ್ಕರ ನಿಲ್ಲಿಸದಿದ್ದರೆ ಬಂಧಿಸಿ: ಹೈಕೋರ್ಟ್



ಬೆಂಗಳೂರು: 'ಸಾರಿಗೆ ನೌಕರರು ಕೂಡಲೇ ತಮ್ಮ ಮುಷ್ಕರ ನಿಲ್ಲಿಸಬೇಕು. ಮುಷ್ಕರ ನಿಲ್ಲಿಸಲಾಗಿದೆ ಎಂಬುದರ ಬಗ್ಗೆ ಬುಧವಾರ (ಆ.6) ನ್ಯಾಯಾಲಯಕ್ಕೆ ಮಾಹಿತಿ ನೀಡಬೇಕು. ಒಂದು ವೇಳೆ ಮುಷ್ಕರ ಮುಂದುವರಿಸಿದ್ದೇ ಆದರೆ ಬಂಧಿಸಲು ಆದೇಶಿಸಲಾಗುವುದು' ಎಂದು ಹೈಕೋರ್ಟ್, ಮುಷ್ಕರಕ್ಕೆ ಕರೆ ನೀಡಿರುವ ಕರ್ನಾಟಕ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿಗೆ ಕಠಿಣ ಎಚ್ಚರಿಕೆ ನೀಡಿದೆ.

'ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿಯ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ತಡೆ ನೀಡಬೇಕು' ಎಂದು ಕೋರಿ ನಗರದ ಜೆ.ಸುನಿಲ್ ಸೇರಿದಂತೆ ಐವರು ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

'ಮುಷ್ಕರವನ್ನು ಒಂದು ದಿನದ ಮಟ್ಟಿಗೆ ಸ್ಥಗಿತಗೊಳಿಸಿ, ಸರ್ಕಾರದ ಜೊತೆಗಿನ ಮಾತುಕತೆಯ ವಿವರವನ್ನು ನ್ಯಾಯಾಲಯಕ್ಕೆ ಸಲ್ಲಿಸಿ ಎಂಬ ಹೈಕೋರ್ಟ್ ಆದೇಶವನ್ನು ಕಡೆಗಣಿಸಲಾಗಿದೆ' ಎಂಬ ಅರ್ಜಿದಾರರ ಪರ ವಕೀಲರ ಆರೋಪಕ್ಕೆ ನ್ಯಾಯಪೀಠ ತೀಕ್ಷ್ಣವಾಗಿ ಪ್ರತಿಕ್ರಿಯಿಸಿತು.

7

'ಸರ್ಕಾರ ಅವಕಾಶ ಬಳಸಿಕೊಳ್ಳಲಿ'

ಹೈಕೋರ್ಟ್ ಆದೇಶವನ್ನು ಗೌರವಿಸಿ, ಮುಷ್ಕರ ಮುಂದೂಡಲು ತೀರ್ಮಾನಿಸಿದ್ದೇವೆ. ಸರ್ಕಾರ ಈ ಅವಕಾಶ ಉಪಯೋಗಿಸಿಕೊಂಡು ಬೇಡಿಕೆಗಳನ್ನು ಇತ್ಯರ್ಥ ಮಾಡಬೇಕು. ಸಾರಿಗೆ ನಿಗಮಗಳ ಎಲ್ಲ ನೌಕರರಿಗೂ ನ್ಯಾಯ ಕೊಡಬೇಕು' ಎಂದು ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮಗಳ ಜಂಟಿ ಕ್ರಿಯಾ ಸಮಿತಿ ಆಗ್ರಹಿಸಿದೆ. ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಈ ಕುರಿತು ಮಾತನಾಡಿದ ಕ್ರಿಯಾ ಸಮಿತಿಯ ಅಧ್ಯಕ್ಷ ಎಚ್.ವಿ. ಅನಂತ ಸುಬ್ಬರಾವ್, 'ಪ್ರಯಾಣಿಕರಿಗೆ ತೊಂದರೆಯಾಗುತ್ತದೆ ಎಂದು ಸಲ್ಲಿಕೆಯಾದ ಸಾರ್ವಜನಿಕ ಹಿತಾಸಕ್ತಿ ಅರ್ಜಿಯ ವಿಚಾರಣೆ ನಡೆಸಿದ್ದ ಹೈಕೋರ್ಟ್ ಮುಷ್ಕರ ಮುಂದೂಡುವಂತೆ ಸೂಚಿಸಿತ್ತು. ಜಂಟಿ ಕ್ರಿಯಾ ಸಮಿತಿ ಕರೆ ನೀಡಿದ್ದರಿಂದಾಗಿ, ಒಬ್ಬರೇ ತೀರ್ಮಾನ ತೆಗೆದುಕೊಳ್ಳುವಂತಿರಲಿಲ್ಲ. ಸಮಿತಿಯ ಎಲ್ಲ ಪದಾಧಿಕಾರಿಗಳು ಚರ್ಚಿಸಿ, ಕೋರ್ಟ್ ನಿರ್ದೇಶನದಂತೆ ಮುಂದೂಡುವ ನಿರ್ಧಾರ ತೆಗೆದುಕೊಂಡಿದ್ದೇವೆ. ಆ.7ರ ತೀರ್ಪು ನೋಡಿಕೊಂಡು ಮುಂದಿನ ನಿರ್ಧಾರ ತೆಗೆದುಕೊಳ್ಳುತ್ತೇವೆ' ಎಂದರು.

7



ಮೇಘಸ್ಫೋಟದಿಂದಾಗಿ ಉತ್ತರಾಖಂಡದ ಉತ್ತರಕಾಶಿ ಜಿಲ್ಲೆಯ ಧಾರಾಲಿಯಲ್ಲಿ ಮಂಗಳವಾರ ದಿಢೀರ್ ಪ್ರವಾಹ ಉಂಟಾಗಿ ಹಲವಾರು ಕಟ್ಟಡಗಳು ಕೊಚ್ಚಿಕೊಂಡು ಹೋಗಿವೆ —ಪಿಟಿಐ ಚಿತ್ರ

ಉತ್ತರಕಾಶಿ: ಐವರು ಸಾವು, 50 ಜನರು ನಾಪತ್ತೆ

ಮೇಘಸ್ಫೋಟ: ಕೊಚ್ಚಿಹೋದ ಊರು

ಪ್ರಜಾವಾಣಿ ವಾರ್ತೆ/ಪಿಟಿಐ

ಉತ್ತರಕಾಶಿ (ಉತ್ತರಾಖಂಡ)/ಲಖನೌ: ಮೇಘಸ್ಫೋಟ ಪರಿಣಾಮ ಉತ್ತರಾಖಂಡದ ಉತ್ತರಕಾಶಿಯಲ್ಲಿ ಮಂಗಳವಾರ ದಿಢೀರ್ ಪ್ರವಾಹ ಉಂಟಾಗಿದ್ದು, ಐವರು ಮೃತಪಟ್ಟು, ಇತರ 50 ಮಂದಿ ನಾಪತ್ತೆಯಾಗಿದ್ದಾರೆ

ಧಾರಾಲಿ ಖೀರಗರ್ದ್ ಹಾಗೂ ಸುತ್ತಲಿನ ಪ್ರದೇಶಗಳಲ್ಲಿ ಮಣ್ಣು ಮಿಶ್ರಿತ ನೀರು ರಭಸದಿಂದ ಹರಿಯುತ್ತಿದ್ದ ಪರಿಣಾಮ, ಹಲವಾರು ಮನೆಗಳು ಕೊಚ್ಚಿ ಹೋಗಿವೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಧಾರಾಲಿಯು ಈ ಮಾರ್ಗದಲ್ಲಿನ ಪ್ರಮುಖ ತಂಗುದಾಣವಾಗಿದ್ದು, ಇಲ್ಲಿ ಹೋಟೆಲ್‌ಗಳು, ರೆಸ್ಟೋರೆಂಟ್ ಹಾಗೂ ಹೋಂಸ್ಟೇಗಳು ಇವೆ. ಪ್ರಸಿದ್ಧ ಯಾತ್ರಾಸ್ಥಳ ಗಂಗೋತ್ರಿಯು ಧಾರಾಲಿಯಿಂದ 18 ಕಿ.ಮೀ. ದೂರದಲ್ಲಿದೆ.

ಖೀರಗಂಗಾ ನದಿಯ ಜಲಾನಯನ ಪ್ರದೇಶದಲ್ಲಿ ಮೇಘಸ್ಫೋಟ ಸಂಭವಿಸಿದ್ದರಿಂದ ದಿಢೀರ್ ಪ್ರವಾಹ ಕಂಡುಬಂದಿದೆ ಎಂದು ಸ್ಥಳೀಯರು ಹೇಳಿದ್ದಾರೆ.

11

ಪ್ರಮುಖ ಅಂಶಗಳು

- ಪ್ರವಾಸಿಗರು ಸೇರಿ 100ಕ್ಕೂ ಹೆಚ್ಚು ಜನರು ಕಟ್ಟಡಗಳ ಅವಶೇಷಗಳಡಿ ಸಿಲುಕಿರಬಹುದು ಎಂದು ಮೂಲಗಳು ಹೇಳಿವೆ
- 20–25 ಹೋಟೆಲ್‌ಗಳು/ಹೋಂ ಸ್ಟೇಗಳು ಕೊಚ್ಚಿಕೊಂಡು ಹೋಗಿವೆ
- ಇಂಡೊ–ಟಿಬೆಟ್ ಗಡಿ ಪೊಲೀಸ್‌ನ (ಐಟಿಬಿಪಿ) ಪಡೆಯ 16 ಸದಸ್ಯರಿರುವ ತಂಡ ಧಾರಾಲಿಗೆ ತೆರಳಿದ್ದು, ರಕ್ಷಣಾ ಕಾರ್ಯ ಕೈಗೆತ್ತಿಕೊಂಡಿದೆ
- ಮಾಟ್ಲಿಯಲ್ಲಿರುವ ಐಟಿಬಿಪಿಯ 12ನೇ ಬೆಟಾಲಿಯನ್, ಸ್ಥಳಕ್ಕೆ ತೆರಳಿದ್ದು, ರಕ್ಷಣಾ ಕಾರ್ಯಕ್ಕೆ ಕೈಜೋಡಿಸಿದೆ
- ರಕ್ಷಣಾ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದ 8ರಿಂದ 10 ಯೋಧರು ನಾಪತ್ತೆಯಾಗಿದ್ದಾರೆ. ಆದರೆ ಸೇನೆ ಇದನ್ನು ದೃಢಪಡಿಸಿಲ್ಲ
- ಮಣ್ಣು ಮಿಶ್ರಿತ ನೀರು ಹಾಗೂ ಹೂಳು ತಗ್ಗು ಪ್ರದೇಶಗಳತ್ತ ನುಗ್ಗುತ್ತಿರುವ ಕಾರಣ ಇಲ್ಲಿನ ನಿವಾಸಿಗಳಲ್ಲಿ ಆತಂಕ ಮನೆ ಮಾಡಿದೆ

ಸಹಾಯವಾಣಿ ಆರಂಭ: ಜಿಲ್ಲಾಡಳಿತವು ಸಹಾಯವಾಣಿ ಆರಂಭಿಸಿದೆ. 01374-222126, 222722, 9456556431 ಸಂಪರ್ಕಿಸಿ ಹೆಚ್ಚಿನ ಮಾಹಿತಿ ಪಡೆಯಬಹುದು ಎಂದು ತಿಳಿಸಿದೆ. ನದಿಗಳಿಂದ ದೂರ ಇರುವಂತೆ ಜಿಲ್ಲಾಡಳಿತ ಜನರಿಗೆ ಮನವಿ ಮಾಡಿದೆ.

ರೆಡ್ ಅಲರ್ಟ್ ಘೋಷಣೆ

ಧಾರಾಲಿ ಪ್ರದೇಶದಲ್ಲಿ ಭಾರಿ ಮಳೆ ಬೀಳುವ ಸಾಧ್ಯತೆ ಇದೆ ಎಂದು ಮುನ್ಸೂಚನೆ ನೀಡಿರುವ ಭಾರತೀಯ ಹವಾಮಾನ ಇಲಾಖೆ (ಐಎಂಡಿ), ರೆಡ್ ಅಲರ್ಟ್ ಘೋಷಿಸಿದೆ.

ಉತ್ತರಾಖಂಡದ ಹಲವು ಪ್ರದೇಶಗಳಲ್ಲಿ 21 ಸೆಂ.ಮೀ. ಮಳೆಯಾಗಿದೆ ಎಂದು ಐಎಂಡಿ ತಿಳಿಸಿದೆ.

ಇನ್ನೊಂದು ದೂರು ಎಸ್‌ಐಟಿಗೆ ವರ್ಗ

ಮಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ 15 ವರ್ಷಗಳ ಹಿಂದೆ ಬಾಲಕಿಯ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸದೆ, ಎಫ್‌ಐಆರ್ ದಾಖಲಿಸದೆಯೇ ಹೂತು ಹಾಕಲಾಗಿದೆ ಎಂದು ಆರೋಪಿಸಿ ಕಡಬ ತಾಲ್ಲೂಕಿನ ಇಚ್ಲಂಪಾಡಿ ಗ್ರಾಮದ ಜಯಂತ್ ಟಿ. ಎಂಬುವರು ನೀಡಿದ್ದ ದೂರನ್ನು ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ವರ್ಗಾಯಿಸಲಾಗಿದೆ.

ವಿವರ 7

ಕೇಂದ್ರ–ರಾಜ್ಯ ಸಂಘರ್ಷ

• ವರುಣ ಹೆಗಡೆ

ಬೆಂಗಳೂರು: ಜನರಿಗೆ ಆರೋಗ್ಯ ಭರವಸೆ ಒದಗಿಸುವ 'ಆಯುಷ್ಮಾನ್ ಭಾರತ್' ಯೋಜನೆಯ ಅನುದಾನಕ್ಕೆ ಸಂಬಂಧಿಸಿ ರಾಜ್ಯ ಮತ್ತು ಕೇಂದ್ರ ಸರ್ಕಾರದ ನಡುವೆ ಸಂಘರ್ಷ ಏರ್ಪಟ್ಟಿದೆ. ಕೇಂದ್ರದಿಂದ ಹೆಚ್ಚಿನ ನೆರವು ಸಿಗದ ಕಾರಣ ಸದ್ಯ ರಾಜ್ಯ ಸರ್ಕಾರವೇ ಯೋಜನೆಯ ಶೇಕಡ 75ರಷ್ಟು ವೆಚ್ಚ ಭರಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ.

ರಾಜ್ಯ ಸರ್ಕಾರದ ಸಹಭಾಗಿತ್ವದಲ್ಲಿ ಅನುಷ್ಠಾನಗೊಂಡಿರುವ ಕೇಂದ್ರ ಸರ್ಕಾರದ ಈ ಯೋಜನೆಯಡಿ, ಐದು ವರ್ಷಗಳಲ್ಲಿ ₹7,239 ಕೋಟಿ ಬಳಕೆ ಮಾಡಲಾಗಿದೆ.

10

2,965	588	1,650
ಯೋಜನೆಯಡಿ ನೋಂದಾಯಿತ ಸರ್ಕಾರಿ ಆಸ್ಪತ್ರೆಗಳು	ಯೋಜನೆಯಡಿ ನೋಂದಾಯಿತ ಖಾಸಗಿ ಆಸ್ಪತ್ರೆಗಳು	ಯೋಜನೆಯಡಿ ಬರುವ ಚಿಕಿತ್ಸಾ ಪ್ಯಾಕೇಜ್‌ಗಳು

ಕೋಟಿ ದಾಟಿದ ಪ್ರಕರಣ

ರಾಜ್ಯದಲ್ಲಿ 'ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ' ಯೋಜನೆಯಡಿ ಚಿಕಿತ್ಸೆ ಪಡೆದುಕೊಳ್ಳುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಹೆಚ್ಚುತ್ತಲೇ ಇದೆ. 2020ರಲ್ಲಿ ಯೋಜನೆಯಡಿ ಚಿಕಿತ್ಸೆ ಪಡೆದವರ ವಾರ್ಷಿಕ ಸಂಖ್ಯೆ ಎಂಟು ಲಕ್ಷದ ಆಸುಪಾಸಿನಲ್ಲಿದ್ದರೆ, ಆ ಸಂಖ್ಯೆ 2024ರಲ್ಲಿ 35 ಲಕ್ಷ ದಾಟಿದೆ. ಐದು ವರ್ಷಗಳಲ್ಲಿ 1.09 ಕೋಟಿ ಪ್ರಕರಣಗಳಲ್ಲಿ ಚಿಕಿತ್ಸೆ ಒದಗಿಸಲಾಗಿದೆ.

10



ಯೋಜನೆಯಡಿ ರಾಜ್ಯ ಸರ್ಕಾರವೇ ಶೇ 75ರಷ್ಟು ಅನುದಾನ ಒದಗಿಸುತ್ತಿದೆ. ಕೇಂದ್ರದ ಪಾಲು ಶೇ 25ರಷ್ಟು ಮಾತ್ರ. ಚಿಕಿತ್ಸಾ ಪ್ಯಾಕೇಜ್ ದರ ಪರಿಷ್ಕರಿಸಿದರೆ ಕೇಂದ್ರದ ಪಾಲು ಇನ್ನಷ್ಟು ಕಡಿಮೆ ಆಗಲಿದೆ

ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

'ಭಾರತದ ಮೇಲೆ ಇನ್ನಷ್ಟು ಸುಂಕ'

ನವದೆಹಲಿ (ಪಿಟಿಐ): 'ಮುಂದಿನ 24 ಗಂಟೆಗಳಲ್ಲಿ ಭಾರತದ ಮೇಲೆ ಗಣನೀಯ ಪ್ರಮಾಣದಲ್ಲಿ ತೆರಿಗೆ ಹೆಚ್ಚು ಮಾಡಲಾಗುವುದು' ಎಂದು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಮಂಗಳವಾರ ಎಚ್ಚರಿಕೆ ನೀಡಿದ್ದಾರೆ.

ವಿವರ 10

ಚಿನಕುರುಳಿ ಪ್ರಕಾಶ್ ಶೆಟ್ಟಿ



'ಗಂಗೆ ನಿಮ್ಮ ಪಾದ ತೊಳೆಯಲು ಬಂದಿದ್ದಾಳೆ'

ಪ್ರಜಾವಾಣಿ ವಾರ್ತೆ

ಲಖನೌ: 'ಗಂಗಾ ಮಾತೆ ನಿಮ್ಮ ಪಾದ ತೊಳೆಯಲೆಂದೇ ಬಂದಿದ್ದಾಳೆ. ಮಾತೆಯ ದರ್ಶನ ಮಾತ್ರದಿಂದ ನೀವು ನೇರವಾಗಿ ಸ್ವರ್ಗಕ್ಕೆ ಹೋಗುವಿರಿ. ಆದರೆ, ವಿರೋಧ ಪಕ್ಷಗಳ ನಾಯಕರು ನಿಮಗೆ ತಪ್ಪು ಮಾಹಿತಿ ನೀಡುತ್ತಿದ್ದಾರೆ...'

ಉತ್ತರ ಪ್ರದೇಶ ಸಚಿವ ಸಂಜಯ ನಿಶಾದ್ ಅವರು, ಕಾನ್ಪುರ ಗ್ರಾಮಾಂತರ ಜಿಲ್ಲೆಯ ಭೋಗಿನಿಪುರದ ಪ್ರವಾಹ ಪೀಡಿತ ಪ್ರದೇಶಗಳಿಗೆ ಭೇಟಿ ನೀಡಿದ ವೇಳೆ ಹೇಳಿರುವ ಮಾತುಗಳಿವು.

'ಪ್ರವಾಹದಿಂದಾಗಿ ನಮ್ಮ ಮನೆಗಳು ನಾಶವಾಗಿವೆ. ಎಲ್ಲಿಗೆ ಹೋಗಬೇಕು ಎಂಬುದು ತಿಳಿಯದೆ ಸಂಕಷ್ಟಕ್ಕೆ ಸಿಲುಕಿದ್ದೇವೆ' ಎಂದು ದೂರಿದ ಸಂತ್ರಸ್ತರನ್ನು ಉದ್ದೇಶಿಸಿ ಅವರು ಈ ಮಾತು ಹೇಳಿದ್ದಾರೆ.



ಸಂಜಯ ನಿಶಾದ್

'ಗಂಗಾ ಮಾತೆ ತನ್ನ ಪುತ್ರರ ಪಾದಗಳನ್ನು ತೊಳೆಯುವುದಕ್ಕಾಗಿ ಬರುತ್ತಾಳೆ. ಆಕೆಯ ದರ್ಶನದಿಂದ ಪುತ್ರರೆಲ್ಲಾ ಸ್ವರ್ಗಕ್ಕೆ ಹೋಗುತ್ತಾರೆ' ಎಂದೂ ಸಚಿವ ನಿಶಾದ್ ಹೇಳಿದ್ದಾರೆ.

ಸಚಿವರ ಈ ಮಾತುಗಳಿರುವ ವಿಡಿಯೊ ಸಾಮಾಜಿಕ ಜಾಲತಾಣದಲ್ಲಿ ವ್ಯಾಪಕವಾಗಿ ಹಂಚಿಕೆಯಾಗಿದೆ. ಸಂಜಯ ಅವರು ನಿಶಾದ್ ಪಕ್ಷದ ಅಧ್ಯಕ್ಷ. ಈ ಪಕ್ಷ ಆಡಳಿತಾರೂಢ ಬಿಜೆಪಿಯ ಮಿತ್ರಪಕ್ಷವೂ ಆಗಿದೆ.

ಜನರಿಗೆ ಅಚ್ಚರಿ

ಸಚಿವರ ಮಾತುಗಳಿಂದ ಪ್ರವಾಹಪೀಡಿತ ಜನರು ಅಚ್ಚರಿಗೊಳಗಾಗಿದರು. 'ತಾವು ಭೇಟಿ ನೀಡಿದ್ದ ಗ್ರಾಮಗಳು ಗಂಗಾ ನದಿ ತೀರದಲ್ಲಿ ಅಲ್ಲ, ಯಮುನಾ ನದಿ ತೀರದಲ್ಲಿನವು ಎಂಬ ಬಗ್ಗೆ ಸಚಿವರಿಗೆ ಮಾಹಿತಿ ಇರಲಿಲ್ಲ' ಎಂದು ಗ್ರಾಮಸ್ಥರು ನಂತರ ಹೇಳಿದ್ದಾರೆ.

ಪ್ರಬುದ್ಧ ಯೋಜನೆ- ಸಸೆಕ್ಸ್ ವಿ.ವಿಯಲ್ಲಿ ಪಿಎಚ್‌.ಡಿ ಅಧ್ಯಯನ

ಮಾಜಿ ದೇವದಾಸಿ ಪುತ್ರಿಯ ಸಾಗರೋಲ್ಲಂಘನೆ

• ಎಂ.ಜಿ.ಬಾಲಕೃಷ್ಣ

ಹೊಸಪೇಟೆ (ವಿಜಯನಗರ): ತಾಲ್ಲೂಕಿನ ನಾಗೇನಹಳ್ಳಿಯಲ್ಲಿ ದೇವದಾಸಿ ಕುಟುಂಬದಲ್ಲಿ ಜನಿಸಿದ್ದ ಕಾಮಾಕ್ಷಿ, ಅಂತರರಾಷ್ಟ್ರೀಯ ಇಂಗ್ಲಿಷ್ ಭಾಷಾ ಪರೀಕ್ಷೆಯಲ್ಲಿ (ಐಇಎಲ್‌ಟಿಎಸ್) ಉತ್ತೀರ್ಣರಾಗಿ, ಇಂಗ್ಲೆಂಡ್‌ನ ಸಸೆಕ್ಸ್ ವಿಶ್ವವಿದ್ಯಾಲಯದಲ್ಲಿ ಪಿಎಚ್‌.ಡಿ ವ್ಯಾಸಂಗಕ್ಕೆ ಅರ್ಹತೆ ಗಳಿಸಿದ್ದಾರೆ.

ಶಾಲಾ ಶಿಕ್ಷಣದಿಂದ ಪದವಿಯವರೆಗೆ ಅವರು ಕನ್ನಡ ಮಾಧ್ಯಮದಲ್ಲೇ ಓದಿದ್ದಾರೆ.

ರಾಜ್ಯ ಸರ್ಕಾರದ ಸಮಾಜ ಕಲ್ಯಾಣ ಇಲಾಖೆಯ 'ಪ್ರಬುದ್ಧ' ಯೋಜನೆಯಡಿ ವಿದೇಶದಲ್ಲಿ ಉನ್ನತ ಸಂಶೋಧನೆ ಮಾಡಲು ಆಯ್ಕೆಯಾದ ದೇವದಾಸಿ ಕುಟುಂಬದಿಂದ ಬಂದ ಮೊದಲ ಯುವತಿ ಕಾಮಾಕ್ಷಿ. ಸೆಪ್ಟೆಂಬರ್‌ನಲ್ಲಿ ಇಂಗ್ಲೆಂಡ್‌ಗೆ ಪ್ರಯಾಣ ಬೆಳೆಸುವರು. ನಾಲ್ಕು ವರ್ಷಗಳ ಅವರ ಅಧ್ಯಯನದ ಸಂಪೂರ್ಣ ವೆಚ್ಚವನ್ನು ಇಲಾಖೆ ಭರಿಸುತ್ತದೆ.

ಕಠಿಣ ಹಾದಿ: ಕಾಮಾಕ್ಷಿ ಅವರು ಈವರೆಗೆ ಸವೆಸಿದ ಹಾದಿ ಕಠಿಣವಾದದ್ದು. ಬಡತನಕ್ಕಿಂತ 'ಅಪ್ಪ ಯಾರು' ಎಂಬ ಕೊಂಕು ಅವರನ್ನು ಹೆಚ್ಚು ಬಾಧಿಸಿತು. ಶಾಲೆ, ಕಾಲೇಜುಗಳಲ್ಲಿ ಮುಜುಗರ ಅನುಭವಿಸಿದರು. ತಮ್ಮಂತೆಯೇ ಇತರರು ನೋವು ಅನುಭವಿಸಬಾರದು ಎಂದು ಪಣತೊಟ್ಟರು.

10

'ವೀಸಾಕ್ಕೆ ಹಣ ಹೊಂದಿಸಬೇಕು'



ಕಾಮಾಕ್ಷಿ

ಕಾಮಾಕ್ಷಿ ಅವರು ಇಂಗ್ಲೆಂಡ್‌ಗೆ ಹೋಗಲು ವೀಸಾ ವ್ಯವಸ್ಥೆ ಮಾಡಿಕೊಳ್ಳಬೇಕು. ಅದಕ್ಕೆ ₹3.50 ಲಕ್ಷ ಅಗತ್ಯವಿದೆ. ಸದ್ಯಕ್ಕೆ ₹2 ಲಕ್ಷ ಸಂಗ್ರಹವಾಗಿದೆ. ಇನ್ನೂ ಒಂದೂವರೆ ಲಕ್ಷ ಸಂಗ್ರಹ ಆಗಬೇಕಿದೆ. ಅದಕ್ಕಾಗಿ ಪ್ರಯತ್ನ ಮುಂದುವರಿದಿದೆ.

ತಂದೆ ಇಲ್ಲವೇ ಎಂಬ ಪ್ರಶ್ನೆ ಪದೇ ಪದೇ ಮನಸ್ಸು ಗಾಸಿಗೊಳಿಸಿದೆ. ದೇವದಾಸಿಯರ ಮಕ್ಕಳು ಅದನ್ನು ಮೀರಿ ಸಾಗಬೇಕಿದೆ. ಉನ್ನತ ಶಿಕ್ಷಣ ಪಡೆಯುವುದರಿಂದ ಸಾಧನೆ ಸಾಧ್ಯ

ಕಾಮಾಕ್ಷಿ, ಸಸೆಕ್ಸ್ ವಿ.ವಿಯಲ್ಲಿ ಪಿಎಚ್‌.ಡಿ ಅಧ್ಯಯನಕ್ಕೆ ಆಯ್ಕೆ ಆದವರು

ಪ್ರಬುದ್ಧ ಯೋಜನೆಗೆ ಕಾಮಾಕ್ಷಿ ಅವರು ಅರ್ಹ ಅಭ್ಯರ್ಥಿ. ಉನ್ನತ ವ್ಯಾಸಂಗ ಮಾಡಿ, ದೇವದಾಸಿಯರ ಜೀವನ ಸುಧಾರಿಸಲು ಶ್ರಮಿಸಿದರೆ ಸಾರ್ಥಕವಾಗುತ್ತದೆ

ಆನಂದ ತಾಳಿ, ಉಪನಿರ್ದೇಶಕ, ಸಮಾಜ ಕಲ್ಯಾಣ ಇಲಾಖೆ

ಸಮಗ್ರ ಪುನರ್ವಸತಿಗೆ ಸರ್ಕಾರದ ಯತ್ನ

ಸರ್ಕಾರದ ಅಂಕಿ ಅಂಶದ ಪ್ರಕಾರ, ರಾಜ್ಯದಲ್ಲಿ 46,660 ದೇವದಾಸಿಯರಿದ್ದು, ವಿಜಯನಗರ ಜಿಲ್ಲೆಯಲ್ಲಿ ಅತ್ಯಧಿಕ 8,191 ಮಂದಿ ಇದ್ದಾರೆ. ಆದರೆ. ಎಲ್ಲರಿಗೂ ಪಿಂಚಣಿ, ನಿವೇಶನ, ಮನೆ, ಬ್ಯಾಂಕ್ ಸಾಲ ಸೌಲಭ್ಯ ಸಿಗಬೇಕು ಎಂಬುದಕ್ಕೆ ನಿರಂತರ ಯತ್ನ ನಡೆದಿದೆ. ಮರು ಸಮೀಕ್ಷೆ ಮತ್ತು ಸಮಗ್ರ ಪುನರ್ವಸತಿ ಕಲ್ಪಿಸಲು ಸರ್ಕಾರ ಮುಂದಾಗಿದೆ. ದೇವದಾಸಿ ಮಕ್ಕಳಿಗೆ ಪಿತೃತ್ವ ಹಕ್ಕು ಕಲ್ಪಿಸುವ ಕರ್ನಾಟಕ ದೇವದಾಸಿ ಪದ್ಧತಿ ತಡೆ ಮಸೂದೆಯೂ ಅದರ ಒಂದು ಭಾಗ.

ಹವಾಮಾನ ಮುನ್ಸೂಚನೆ: ನಗರದಲ್ಲಿ ಮೋಡ ಕವಿದ ವಾತಾವರಣ. ಅಲ್ಲಲ್ಲಿ ಮಳೆ ಸಾಧ್ಯತೆ

ವೈಟ್ ಟಾಪಿಂಗ್: ಸಂಚಾರ ಮಾರ್ಪಾಡು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವೈಟ್‌ಫೀಲ್ಡ್ ಸಂಚಾರ ಪೊಲೀಸ್ ಠಾಣಾ ವ್ಯಾಪ್ತಿಯ ಬಳಗೆರೆ 'ಟಿ' ಜಂಕ್ಷನ್‌ನಿಂದ ಪಣತ್ತೂರು ರೈಲ್ವೆ ಸೇತುವೆ ಜಂಕ್ಷನ್‌ವರೆಗೆ ಬಿಬಿಎಂಪಿ ವತಿಯಿಂದ ವೈಟ್ ಟಾಪಿಂಗ್ ಕಾಮಗಾರಿ ಕೈಗೊಂಡಿರುವುದರಿಂದ ವಾಹನ ಸಂಚಾರದಲ್ಲಿ ಮಾರ್ಪಾಡು ಮಾಡಲಾಗಿದೆ.

ಆಗಸ್ಟ್ 6ರಿಂದ 10ರವರೆಗೆ ಪಣತ್ತೂರು ರೈಲ್ವೆ ಸೇತುವೆ ರಸ್ತೆಯಿಂದ ಬಳಗೆರೆ 'ಟಿ' ಜಂಕ್ಷನ್‌ವರೆಗೆ ವಾಹನ ಸಂಚಾರ ನಿರ್ಬಂಧಿಸಲಾಗಿದೆ.



ಪರ್ಯಾಯ ಮಾರ್ಗ: ಪಣತ್ತೂರು ಕಡೆಯಿಂದ ಬಳಗೆರೆ ಕಡೆಗೆ ಹೋಗುವ ವಾಹನ ಸವಾರರು ಪಣತ್ತೂರು ದಿಣ್ಣೆ ರಸ್ತೆಯಲ್ಲಿ ಚಲಿಸಿ ಪಣತ್ತೂರು ದಿಣ್ಣೆ ಬಳಿ ಎಡ ತಿರುವು ಪಡೆದುಕೊಳ್ಳಬೇಕು. ಸಿಲ್ವರ್ ಓಕ್ ರಸ್ತೆಯಿಂದ ಬಳಗೆರೆ, ವಿಬ್‌ಗಯಾರ್ ರಸ್ತೆ ಮತ್ತು ವರ್ತೂರು ಕಡೆಗೆ ಸಂಚರಿಸಬಹುದು.

ಬಳಗೆರೆ 'ಟಿ' ಜಂಕ್ಷನ್ ಕಡೆಯಿಂದ ಪಣತ್ತೂರು ಕಡೆಗೆ ಹೋಗುವ ವಾಹನ ಸವಾರರು ಪಣತ್ತೂರು ದಿಣ್ಣೆ ರಸ್ತೆ, ವಿಬ್‌ಗಯಾರ್ ರಸ್ತೆ ಹಾಗೂ ಮಾರತ್ತಹಳ್ಳಿ ಸೇತುವೆ ಮೂಲಕ ಪಣತ್ತೂರು ಕಡೆಗೆ ಹೋಗಬಹುದು ಎಂದು ಸಂಚಾರ ವಿಭಾಗದ ಡಿಸಿಪಿ ಸಾಹಿಲ್ ಬಾಗ್ಲಾ ತಿಳಿಸಿದ್ದಾರೆ.

ಹೊಸ ವಿಭಾಗ ಉದ್ಘಾಟನೆಗೆ ಸಜ್ಜು

ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯ
ರೂಸಾ: ₹55 ಕೋಟಿ ಅನುದಾನ

● ಎ.ಎಂ.ಸುರೇಶ

ಬೆಂಗಳೂರು: ಐದು ವರ್ಷಗಳ ಹಿಂದೆ ಅಸ್ತಿತ್ವಕ್ಕೆ ಬಂದಿರುವ ಮಹಾರಾಣಿ ಕ್ಲಸ್ಟರ್ ವಿಶ್ವವಿದ್ಯಾಲಯದಲ್ಲಿ ಸ್ನಾತಕೋತ್ತರ ಕೋರ್ಸ್‌ಗಳಿಗಾಗಿ ನೂತನ ಶೈಕ್ಷಣಿಕ ವಿಭಾಗ ಸಿದ್ಧವಾಗಿದ್ದು, ಇದೇ ತಿಂಗಳಲ್ಲಿ ಉದ್ಘಾಟನೆಯಾಗಲಿದೆ.

ರೂಸಾ ಯೋಜನೆಯಡಿ ವಿಶ್ವವಿದ್ಯಾಲಯಕ್ಕೆ ₹55 ಕೋಟಿ ಅನುದಾನ ಮಂಜೂರಾಗಿತ್ತು. ಈ ಪೈಕಿ ₹8 ಕೋಟಿ ವೆಚ್ಚದಲ್ಲಿ ಶೈಕ್ಷಣಿಕ ವಿಭಾಗ ನಿರ್ಮಿಸಿದ್ದು, ನೆಲ ಮಹಡಿ, ಮೊದಲ ಹಾಗೂ ಎರಡನೇ ಮಹಡಿಯಲ್ಲಿ 20 ಕೊಠಡಿಗಳು ಇವೆ. ಸ್ನಾತಕೋತ್ತರ ಕೋರ್ಸ್‌ಗಳ ತರಗತಿಗಳಿಗೆ ಇವು ಬಳಕೆಯಾಗಲಿವೆ.

'ಪಿಎಂ ಉಷಾ ಯೋಜನೆಯಡಿ ₹19.77 ಕೋಟಿ ಅನುದಾನ ಬಂದಿದ್ದು, ವಿಶ್ವವಿದ್ಯಾಲಯದ ಅಧೀನದಲ್ಲಿ ಇರುವ ವಿಎಚ್‌ಡಿ ಕೇಂದ್ರೀಯ ಗೃಹ ವಿಜ್ಞಾನ ಕಾಲೇಜಿನಲ್ಲಿ ಶೈಕ್ಷಣಿಕ ವಿಭಾಗ ನಿರ್ಮಿಸಲಾಗುತ್ತದೆ. ಇದಲ್ಲದೆ ಕ್ಲಸ್ಟರ್ ವಿ.ವಿ ಆವರಣದಲ್ಲಿನ ಶೈಕ್ಷಣಿಕ ವಿಭಾಗದ ಮೇಲೆ ಇನ್ನೂ ಎರಡು ಮಹಡಿಗಳನ್ನು ನಿರ್ಮಿಸುವ ಉದ್ದೇಶವಿದೆ. ಈ ಕಾರ್ಯ ಪೂರ್ಣಗೊಂಡ ನಂತರ ಇನ್ನಷ್ಟು ಕೋರ್ಸ್‌ಗಳನ್ನು ಆರಂಭಿಸುತ್ತೇವೆ' ಎಂದು ಹಂಗಾಮಿ ಕುಲಪತಿ ಟಿ.ಎಂ.ಮಂಜುನಾಥ್ 'ಪ್ರಜಾವಾಣಿ'ಗೆ ತಿಳಿಸಿದರು.

ಹೊಸ ಕೋರ್ಸ್: ಮುಂಬರುವ ಶೈಕ್ಷಣಿಕ ಸಾಲಿನಿಂದ (2026–27) ಐದು ವರ್ಷದ ಎಲ್‌ಎಲ್‌ಬಿ, ಬಿ.ಇಡಿ ಸೇರಿದಂತೆ ಹೊಸ ಕೋರ್ಸ್‌ಗಳು ಆರಂಭವಾಗಲಿವೆ. ಇದಕ್ಕೆ ಬೇಕಾದ ಸಿದ್ಧತೆಗಳನ್ನು ಈಗಾಗಲೇ ಮಾಡುತ್ತಿದ್ದು, ಕೈಗೆಟುಕುವ ದರದಲ್ಲಿ ವಿದ್ಯಾರ್ಥಿಗಳು ಹೊಸ ಕೋರ್ಸ್‌ಗಳಿಗೆ ಪ್ರವೇಶ ಪಡೆಯಬಹುದಾಗಿದೆ.

ಇದಲ್ಲದೆ ಮುಂದಿನ ವರ್ಷದಿಂದ ಪಿಎಚ್‌.ಡಿ ವ್ಯಾಸಂಗಕ್ಕೂ ಅವಕಾಶ ಕಲ್ಪಿಸಲಾಗುತ್ತದೆ. ಇಲ್ಲಿ ಮಂಜೂರಾದ 272 ಬೋಧಕ ಹುದ್ದೆಗಳ ಪೈಕಿ 142 ಮಂದಿ ಕಾಯಂ ಬೋಧಕರಿದ್ದಾರೆ. ರಾಜ್ಯದ ಬೇರೆ ಯಾವುದೇ ವಿಶ್ವವಿದ್ಯಾಲಯದಲ್ಲಿ ಇಷ್ಟೊಂದು ಸಂಖ್ಯೆಯಲ್ಲಿ ಕಾಯಂ ಬೋಧಕರಿಲ್ಲ. ಅತಿಥಿ ಉಪನ್ಯಾಸಕರ ಮೇಲೆ ಬಹುತೇಕ ವಿಶ್ವವಿದ್ಯಾಲಯಗಳು ಅವಲಂಬನೆಯಾಗಿವೆ. ಆದರೆ, ನಮ್ಮ ವಿಶ್ವವಿದ್ಯಾಲಯದಲ್ಲಿ ಕಾಯಂ ಬೋಧಕರು ಅಧಿಕ ಸಂಖ್ಯೆಯಲ್ಲಿ ಇರುವುದರಿಂದ ಸಂಶೋಧನಾ ವಿದ್ಯಾರ್ಥಿಗಳಿಗೆ ಮಾರ್ಗದರ್ಶಕರ ಕೊರತೆ ಇಲ್ಲ ಎಂದು ಮಂಜುನಾಥ್ ತಿಳಿಸಿದರು.

ವಿಶ್ವವಿದ್ಯಾಲಯದಲ್ಲಿ ಇದುವರೆಗೆ 22 ಸ್ನಾತಕೋತ್ತರ ವಿಭಾಗಗಳು ಇದ್ದವು. ಈ ವರ್ಷ ಕನ್ನಡ ಎಂ.ಎ ಶುರುವಾಗಿದೆ. ಇದೂ ಸೇರಿ 23 ವಿಭಾಗಗಳಿವೆ. ಡೇಟಾ ಸೈನ್ಸ್, ಕೃತಕ ಬುದ್ಧಿಮತ್ತೆಯ (ಎಐ) ಸ್ನಾತಕೋತ್ತರ ಕೋರ್ಸ್‌ಗಳು ಕಳೆದ ವರ್ಷ ಶುರುವಾಗಿದ್ದು, ಇದಕ್ಕೆ ಭಾರಿ ಬೇಡಿಕೆ ಇದೆ. ವಿವಿಧ ವಿಭಾಗಗಳಲ್ಲಿ ಸುಮಾರು ಐದು ಸಾವಿರ ವಿದ್ಯಾರ್ಥಿನಿಯರು ಕಲಿಯುತ್ತಿದ್ದಾರೆ.

ಇದಲ್ಲದೆ ಬಿಎಸ್‌ಸಿ, ಬಿಸಿಎನಲ್ಲಿ ಡೇಟಾ ಸೈನ್ಸ್, ಕೃತಕ ಬುದ್ಧಿಮತ್ತೆ ಕೋರ್ಸ್‌ಗಳಿದ್ದು, ಈಚೆಗೆ ಈ ಕೋರ್ಸ್‌ಗಳಿಗೆ ಪ್ರವೇಶ ಪಡೆಯುವವರ ಸಂಖ್ಯೆ ಹೆಚ್ಚಾಗಿದೆ. ವಾರ್ಷಿಕ ₹35 ಸಾವಿರ ಶುಲ್ಕವನ್ನು ಈ ಕೋರ್ಸ್‌ಗಳಿಗೆ ನಿಗದಿಪಡಿಸಲಾಗಿದೆ.

ಮೆಗಾ ಹಾಸ್ಟೆಲ್: ₹15 ಕೋಟಿ ವೆಚ್ಚದಲ್ಲಿ ಮೆಗಾ ಹಾಸ್ಟೆಲ್ ನಿರ್ಮಾಣವಾಗಿದ್ದು, 1200 ವಿದ್ಯಾರ್ಥಿನಿಯರಿಗೆ ಪ್ರವೇಶ ಅವಕಾಶ ಕಲ್ಪಿಸಬಹುದು. ಸದ್ಯ 900 ವಿದ್ಯಾರ್ಥಿನಿಯರು ಇದ್ದಾರೆ.

ಹಿಂದೆ ಇದ್ದ ಎರಡು ಹಳೆಯ ಹಾಸ್ಟೆಲ್ ಕಟ್ಟಡಗಳನ್ನು ನವೀಕರಿಸಬೇಕಾಗಿದೆ. ಈ ಕೆಲಸ ಪೂರ್ಣವಾದರೆ ಇನ್ನೂ 800 ವಿದ್ಯಾರ್ಥಿನಿಯರಿಗೆ ಪ್ರವೇಶ ನೀಡಬಹುದು. ಪಿಎಂ ಉಷಾ ಯೋಜನೆಯಡಿ ಮಂಜೂರಾಗಿರುವ ಅನುದಾನವನ್ನು ನವೀಕರಣಕ್ಕೆ ಬಳಸಿಕೊಳ್ಳಲಾಗುತ್ತದೆ. ಸಂಶೋಧನಾ ವಿದ್ಯಾರ್ಥಿನಿಯರಿಗೆ, ಹೊಸ ಕೋರ್ಸ್‌ಗಳಿಗೆ ಪ್ರವೇಶ ಪಡೆದ ವಿದ್ಯಾರ್ಥಿನಿಯರಿಗೆ ಇಲ್ಲಿ ವಸತಿ ವ್ಯವಸ್ಥೆ ಮಾಡಿಕೊಡುವ ಉದ್ದೇಶವನ್ನು ವಿ.ವಿ ಹೊಂದಿದೆ.



ಮೆಗಾ ವಸತಿ ನಿಲಯದ ಹೊರ ನೋಟ

ಅಂಕಿ ಅಂಶಗಳು

272 ಮಂಜೂರಾದ ಬೋಧಕ ಹುದ್ದೆಗಳು

142 ಹಾಲಿ ಇರುವ ಬೋಧಕರು

168 ಮಂಜೂರಾದ ಬೋಧಕೇತರ ಹುದ್ದೆಗಳು

8 ಹಾಲಿ ಇರುವ ಕಾಯಂ ಬೋಧಕೇತರ ಸಿಬ್ಬಂದಿ

ಇನ್ನೂ ಬಾರದ ಅನುದಾನ

ಹಳೆಯ ಕಟ್ಟಡಗಳಲ್ಲಿಎಲೆಕ್ಟ್ರಿಕಲ್ ಕೆಲಸಗಳಿಗಾಗಿ ₹3.4 ಕೋಟಿ, ಸಿವಿಲ್ ಕಾಮಗಾರಿಗಳಿಗೆ ₹2.5 ಕೋಟಿ, ಅಭಿವೃದ್ಧಿ ಕಾರ್ಯಗಳಿಗೆ ₹7 ಕೋಟಿ, ಎಸ್‌ಸಿಎಸ್‌ಟಿ–ಟಿಎಸ್‌ಪಿ ಯೋಜನೆಯಡಿ ₹3.7 ಕೋಟಿ ಸೇರಿದಂತೆ ಒಟ್ಟು 20.9 ಕೋಟಿ ಅನುದಾನ ನೀಡುವಂತೆ ಕೋರಿ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿದೆ. ಆದರೆ, ಇನ್ನೂ ಅನುದಾನ ಮಂಜೂರಾಗಿಲ್ಲ. ಸರ್ಕಾರ ಆದಷ್ಟು ಬೇಗ ಅನುದಾನ ನೀಡಿದರೆ ವಿದ್ಯಾರ್ಥಿನಿಯರಿಗೆ ಇನ್ನಷ್ಟು ಸೌಲಭ್ಯಗಳನ್ನು ಕಲ್ಪಿಸಿಕೊಡಬಹುದು ಎಂದು ಮಂಜುನಾಥ ಅಭಿಪ್ರಾಯಪಟ್ಟರು.

ಫಿಲ್ಮ್ ಮೇಕಿಂಗ್ ಅರ್ಜಿ ಆಹ್ವಾನ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯ ವಿದ್ಯುನ್ಮಾನ ಮಾಧ್ಯಮ (ಎಲೆಕ್ಟ್ರಾನಿಕ್ ಮೀಡಿಯಾ) ವಿಭಾಗದಲ್ಲಿ ಎಂ.ಎಸ್ಸಿ ಎಲೆಕ್ಟ್ರಾನಿಕ್ ಮೀಡಿಯಾ, ಎಂಎಸ್ಸಿ ಫಿಲ್ಮ್ ಮೇಕಿಂಗ್ ಹಾಗೂ ಎಂಎಸ್ಸಿ ಗ್ರಾಫಿಕ್ಸ್ ಅಂಡ್ ಅನಿಮೇಷನ್ ಸ್ನಾತಕೋತ್ತರ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನಿಸಲಾಗಿದೆ.


ಆಸಕ್ತ ಅಭ್ಯರ್ಥಿಗಳು ಉನ್ನತ ಶಿಕ್ಷಣ ಇಲಾಖೆಯ ಯುಯುಸಿಎಂಎಸ್ ಆನ್‌ಲೈನ್ ಪೋರ್ಟಲ್ (https://uucms.karnataka.gov.in) ಮೂಲಕ ಅರ್ಜಿ ಸಲ್ಲಿಸಬಹುದು. ಅರ್ಜಿ ಸಲ್ಲಿಸಲು ಆಗಸ್ಟ್ 15 ಕೊನೆ ದಿನ. ದಂಡ ಶುಲ್ಕದೊಂದಿಗೆ ಅರ್ಜಿ ಸಲ್ಲಿಸಲು ಆಗಸ್ಟ್ 18 ಕೊನೆಯ ದಿನ.



ಪದ ಸಂಸ್ಥೆ ಆಯೋಜಿಸಿದ್ದ ಮೂರು ದಿನಗಳ ಪೌರಾಣಿಕ ರಂಗೋತ್ಸವ ಉದ್ಘಾಟನಾ ಕಾರ್ಯಕ್ರಮದಲ್ಲಿ (ಎಡದಿಂದ ಕುಳಿತವರು) ಹಾಸನ ರಘು ಮತ್ತು ಬಾನು ಮುಷ್ತಾಕ್ ಅವರಿಗೆ 'ಪದ' ಗೌರವ ನೀಡಿ ಸನ್ಮಾನಿಸಲಾಯಿತು. ಸಂಸ್ಥೆಯ ಕಾರ್ಯದರ್ಶಿ ಪದ ದೇವರಾಜ್, ಸಾಹಿತಿ ಬಂಜಗೆರೆ ಜಯಪ್ರಕಾಶ್, ಕರ್ನಾಟಕ ಗೃಹ ಮಂಡಳಿ ಆಯುಕ್ತ ಕೆ.ಎ. ದಯಾನಂದ, ಸಂಸ್ಥೆಯ ಅಧ್ಯಕ್ಷ ಅವಿರತ ಹರೀಶ್ ಉಪಸ್ಥಿತರಿದ್ದರು ಪ್ರಜಾವಾಣಿ ಚಿತ್ರ

ನಾಗರಾಜ್‌ಗೆ 'ಸಾಧನಾಚಾರ್ಯ' ಪ್ರಶಸ್ತಿ

ಬೆಂಗಳೂರು: ರಾಜಾಜಿನಗರದ ಸ್ವರ ಸೌರಭ ಸಂಸ್ಥೆ ನೀಡುವ ಸಂಗೀತ ವಿದ್ಯಾ ಸಾಗರ ಆರ್.ಆರ್. ಕೇಶವ ಮೂರ್ತಿ ಸ್ಮಾರಕ 'ಸಾಧನಾಚಾರ್ಯ ಪ್ರಶಸ್ತಿ'ಗೆ ಪಿಟೀಲು ವಾದಕ ಮೈಸೂರು ಎಂ.ನಾಗರಾಜ್ ಆಯ್ಕೆಯಾಗಿದ್ದಾರೆ.



ಮೈಸೂರು ನಾಗರಾಜ್

ಸಂಸ್ಥೆಯು ಇದೇ 10ರಂದು ಚೌಡಯ್ಯ ಸ್ಮಾರಕ ಸಭಾಂಗಣದಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಂಡಿದೆ. ಅಂದು ಬೆಳಿಗ್ಗೆ 10 ಗಂಟೆಗೆ ಸುಮಾ ಸುಧೀಂದ್ರ ಹಾಗೂ ಶಫೀಕ್ ಖಾನ್ ಅವರಿಂದ ವೀಣೆ ಮತ್ತು ಸಿತಾರ್ ಜುಗಲ್‌ಬಂದಿ ನಡೆಯಲಿದೆ. ಪ್ರಶಸ್ತಿ ಪ್ರದಾನ ಸಮಾರಂಭದ ಅಧ್ಯಕ್ಷತೆಯನ್ನು ಶ್ಯಾಮಸುಂದರ ಶರ್ಮ ವಹಿಸುತ್ತಾರೆ.

ಸಂಜೆ 5 ಗಂಟೆಗೆ ಸುಮಾ ಹೆಗಡೆ ಅವರಿಂದ ಸಂತೂರ್ ವಾದನ ನಡೆಯಲಿದೆ. ಸಂಜೆ 6.15ಕ್ಕೆ ಮೈಸೂರು ನಾಗರಾಜ್ ಮತ್ತು ಮೈಸೂರು ಕಾರ್ತಿಕ್ ಅವರಿಂದ ದ್ವಂದ್ವ ಪಿಟೀಲು ವಾದನ ಕಾರ್ಯಕ್ರಮ ನಡೆಯಲಿದೆ ಎಂದು ಸಂಸ್ಥೆಯ ಸಂಸ್ಥಾಪಕ ವೆಂಕಟೇಶ್ ತಿಳಿಸಿದ್ದಾರೆ.


ನಗರದಲ್ಲಿ ಇಂದು

'ಕನಕ ಸಂಸ್ಕೃತಿ ಸಂಚಲನ' ಕನಕ ನಡೆ–ನುಡಿ ಉತ್ಸವ: ಉದ್ಘಾಟನೆ: ಕಾ.ತ. ಚಿಕ್ಕಣ್ಣ, ಅಧ್ಯಕ್ಷತೆ: ಅಂಟೋನಿ ಡೆವಿಸ್, ಕನಕ ಸಾಹಿತ್ಯ ಸಮನ್ವಯ: ಮಂಜುಳಾ ಜಿ.ಎಚ್., ಆಯೋಜನೆ: ಸಂತಕವಿ ಕನಕದಾಸ ಮತ್ತು ತತ್ವಪದಕಾರರ ಅಧ್ಯಯನ ಕೇಂದ್ರ, ಸ್ಥಳ: ಕ್ರೈಸ್ಟ್ ಅಕಾಡೆಮಿ ಇನ್‌ಸ್ಟಿಟ್ಯೂಟ್ ಫಾರ್ ಅಡ್ವಾನ್ಸ್ ಸ್ಟಡೀಸ್, ಹುಲ್ಲಹಳ್ಳಿ, ಬೆಳಿಗ್ಗೆ 10

ವಚನ ಶ್ರಾವಣ: ವಚನ ಗಾಯನ: ಮೀನಾಕ್ಷಿ ಮೇಟಿ, ಟಿ.ಎಂ. ಜಾನಕಿ, **ವಚನ ಚಿಂತನ:** ಎಸ್. ಪಿನಾಕಪಾಣಿ, ಅತಿಥಿ: ಶಕುಂತಲ ಬಾಗಲಕೋಟೆ, ಅಧ್ಯಕ್ಷತೆ: ರಾಜಶ್ರೀ, ಆಯೋಜನೆ: ವಚನಜ್ಯೋತಿ ಬಳಗ, ಸ್ಥಳ: ಅಕ್ಷಯ ಪ್ರೀ ಸ್ಕೂಲ್ ಅಂಗಳ, 3ನೇ ತಿರುವು, 1ನೇ ಮುಖ್ಯರಸ್ತೆ, ಮಲ್ಲತ್ತಹಳ್ಳಿ, ಬೆಳಿಗ್ಗೆ 10

ಪೌರಾಣಿಕ ರಂಗೋತ್ಸವ: 'ಶ್ರೀಕೃಷ್ಣ ಸಂದಾನ' ನಾಟಕ ಪ್ರದರ್ಶನ, ಪದ ಗೌರವ: ಕಲ್ಲೂರು ಶ್ರೀನಿವಾಸ್, ಆಯೋಜನೆ: ಪದ, ಸ್ಥಳ: ಸಾಂಸ್ಕೃತಿಕ ಸಮುಚ್ಚಯ, ಕಲಾಗ್ರಾಮ, ಮಲ್ಲತ್ತಹಳ್ಳಿ, ಸಂಜೆ 4.30

'ಶ್ರೀಮದ್ ರಾಮಾಯಣ' ಪ್ರವಚನ: ವಿಶ್ವಪ್ರಸನ್ನತೀರ್ಥ ಸ್ವಾಮೀಜಿ, ಆಯೋಜನೆ ಹಾಗೂ ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, 45ನೇ ಅಡ್ಡರಸ್ತೆ, ಜಯನಗರ 5ನೆ ಬಡಾವಣೆ, ಸಂಜೆ 6.30



ವಿಶ್ವಪ್ರಸನ್ನತೀರ್ಥ ಸ್ವಾಮೀಜಿ

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ–ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ nagaradalli_indu@prajavani.co.in

ಚಿಟಿಕೆ ಸುದ್ದಿ

‘ನೈಸರ್ಗಿಕ ಬಣ್ಣ ಬಳಕೆ’



ಬೆಂಗಳೂರು: ‘ಆಹಾರ ಪದಾರ್ಥಗಳ ಗುಣಮಟ್ಟದಲ್ಲಿ ಯಾವುದೇ ರಾಜಿ ಮಾಡಿಕೊಳ್ಳದೆ, ನೈಸರ್ಗಿಕ ಬಣ್ಣ ಬಳಕೆಗೆ ಆದ್ಯತೆ ನೀಡಿದ್ದೇವೆ’ ಎಂದು ಎನ್‌ಕೆಪಿ ಎಂಪೈರ್ ವೆಂಚರ್ಸ್ ತಿಳಿಸಿದೆ.

ಇತ್ತೀಚೆಗೆ ಎಂಪೈರ್ ರೆಸ್ಟೋರೆಂಟ್‌ನ ಚಿಕನ್ ಕಬಾಬ್ ಮಾದರಿ ಸಂಗ್ರಹಿಸಿದ್ದ ಆಹಾರ ಸುರಕ್ಷತಾ ಅಧಿಕಾರಿಗಳು, ಆ ಮಾದರಿಗಳ್ನು ರಾಜ್ಯ ಆಹಾರ ಪ್ರಯೋಗಾಲಯದಲ್ಲಿ ಪರೀಕ್ಷೆಗೆ ಒಳಪಡಿಸಿದ್ದರು. ಅಸುರಕ್ಷಿತ ಬಣ್ಣ ಬಳಕೆಗೆ ಸಂಬಂಧಿಸಿದಂತೆ ನೋಟಿಸ್ ನೀಡಿದ್ದರು. ಈ ಬಗ್ಗೆ ಸ್ಪಷ್ಟನೆ ನೀಡಿರುವ ರೆಸ್ಟೋರೆಂಟ್ ವ್ಯವಸ್ಥಾಪಕರು, ‘ನಾವು ಬಳಕೆ ಮಾಡುತ್ತಿದ್ದ ಕೃತಕ ಬಣ್ಣವು ಭಾರತೀಯ ಆಹಾರ ಸುರಕ್ಷತೆ ಮತ್ತು ಗುಣಮಟ್ಟ ಪ್ರಾಧಿಕಾರದ ಮಾನ್ಯತೆ ಹೊಂದಿತ್ತು. ಆದರೂ ನೀಡಲಾದ ಸೂಚನೆ ಅನುಸಾರ ಆ ಬಣ್ಣ ಬಳಕೆಯನ್ನು ಸ್ಥಗಿತಗೊಳಿಸಿದ್ದೇವೆ. ಈಗ ನೈಸರ್ಗಿಕ ಬಣ್ಣವನ್ನು ಮಾತ್ರ ಬಳಸುತ್ತಿದ್ದೇವೆ’ ಎಂದು ಹೇಳಿದ್ದಾರೆ.

‘ಗ್ರಾಹಕರು ವದಂತಿಗಳಿಗೆ ಕಿವಿಗೊಡಬಾರದು. ಆರು ದಶಕಗಳಿಂದ ಗುಣಮಟ್ಟದ ಮತ್ತು ರುಚಿಯಾದ ಆಹಾರ ಪದಾರ್ಥಗಳನ್ನು ಒದಗಿಸುತ್ತಿದ್ದೇವೆ’ ಎಂದು ತಿಳಿಸಿದ್ದಾರೆ.

ಕಸಾಪಗೆ ಮನ್‌ಪ್ರೀತ್ ಸಿಂಗ್ ನಾಮನಿರ್ದೇಶನ



ಬೆಂಗಳೂರು: ಕನ್ನಡ ಸಾಹಿತ್ಯ ಪರಿಷತ್ತಿನ (ಕಸಾಪ) ಕೇಂದ್ರ ಕಾರ್ಯಕಾರಿ ಸಮಿತಿಯ ಸಂಘ ಸಂಸ್ಥೆಗಳ ಪ್ರತಿನಿಧಿಯಾಗಿ ಮನ್‌ಪ್ರೀತ್ ಸಿಂಗ್ ಅವರನ್ನು ನಾಮನಿರ್ದೇಶನ ಮಾಡಲಾಗಿದೆ.

‘ಮನ್‌ಪ್ರೀತ್ ಸಿಂಗ್ ಅವರು ಸಿಖ್ ಸಮುದಾಯಕ್ಕೆ ಸೇರಿದ್ದರೂ ಕನ್ನಡ ಭಾಷೆ ಮತ್ತು ಸಂಸ್ಕೃತಿಯ ಬಗ್ಗೆ ಅಗಾಧ ಪ್ರೀತಿ ಹೊಂದಿದ್ದಾರೆ. ಸಂಘ ಸಂಸ್ಥೆಗಳ ಜತೆಗೆ ಒಡನಾಟ ಹೊಂದಿದ್ದಾರೆ’ ಎಂದು ಕಸಾಪ ಅಧ್ಯಕ್ಷ ಮಹೇಶ ಜೋಶಿ ತಿಳಿಸಿದ್ದಾರೆ.

ಬಿಬಿಎಂಪಿ: ಮುಖ್ಯ ಎಂಜಿನಿಯರ್ ವರ್ಗ

ಬೆಂಗಳೂರು: ಬಿಬಿಎಂಪಿಯ ಐವರು ಮುಖ್ಯ ಎಂಜಿನಿಯರ್‌ಗಳನ್ನು ವರ್ಗಾವಣೆ ಮಾಡಿ ನಗರಾಭಿವೃದ್ಧಿ ಇಲಾಖೆ ಆದೇಶಿಸಿದೆ.

ಬಿ.ಜಿ. ರಾಘವೇಂದ್ರ ಅವರನ್ನು ಬೆಂಗಳೂರು ಘನತ್ಯಾಜ್ಯ ನಿರ್ವಹಣಾ ನಿಯಮಿತದ (ಬಿಎಸ್‌ಡಬ್ಲ್ಯುಎಂಎಲ್) ಮುಖ್ಯ ಎಂಜಿನಿಯರ್ ಹುದ್ದೆಗೆ ವರ್ಗಾಯಿಸಲಾಗಿದೆ. ಬಿಬಿಎಂಪಿ ರಸ್ತೆ ಮೂಲಸೌಕರ್ಯ ವಿಭಾಗದ ಮುಖ್ಯ ಎಂಜಿನಿಯರ್ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ಎಂ. ಲೋಕೇಶ್ ಅವರನ್ನು ಮಹದೇವಪುರ ವಲಯದ ಮುಖ್ಯ ಎಂಜಿನಿಯರ್, ಎಸ್.ಪಿ. ರಂಗನಾಥ್ ಅವರನ್ನು ಯಲಹಂಕ ವಲಯದ ಮುಖ್ಯ ಎಂಜಿನಿಯರ್, ಒಎಫ್‌ಸಿ ವಿಭಾಗದ ಸಿಇ ಹುದ್ದೆಗೆ ಹಾಗೂ ಕೆ.ವಿ. ರವಿ ಅವರನ್ನು ಗುಣ ಭರವಸೆ ಮತ್ತು ಗುಣ ನಿಯಂತ್ರಣ ವಿಭಾಗದ ಮುಖ್ಯ ಎಂಜಿನಿಯರ್ ಹುದ್ದೆಗೆ ವರ್ಗಾಯಿಸಲಾಗಿದೆ.

23 ಮಂದಿಗೆ 1 ವರ್ಷ ಜೈಲು

ತುಮಕೂರು: ಕೋವಿಡ್ ಲಾಕ್‌ಡೌನ್ ಸಮಯದಲ್ಲಿ ಪೊಲೀಸ್ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ್ದ 23 ಮಂದಿಗೆ ಗುಬ್ಬಿ ಪಟ್ಟಣದ ಎಸಿಜೆ ಮತ್ತು ಜೆಎಂಎಫ್‌ಸಿ ನ್ಯಾಯಾಲಯ 1 ವರ್ಷ ಜೈಲು ಶಿಕ್ಷೆ, ತಲಾ ₹15 ಸಾವಿರ ದಂಡ ವಿಧಿಸಿದೆ. 2021ರ ಜುಲೈ 3ರಂದು ಗುಬ್ಬಿ ತಾಲ್ಲೂಕಿನ ಚಿಕ್ಕಕುನ್ನಾಲ ಗ್ರಾಮದಲ್ಲಿ ಪೊಲೀಸ್ ಸಿಬ್ಬಂದಿ ಮೇಲೆ ಹಲ್ಲೆ ನಡೆಸಿದ್ದರು.

6 ಹೊಸ ಬಡಾವಣೆಗೆ ಹಸಿರು ನಿಶಾನೆ

6217 ಎಕರೆ ಭೂಸ್ವಾಧೀನ: ಮಾಲೀಕರಿಗೆ 40:60 ಅನುಪಾತದಲ್ಲಿ ಪರಿಹಾರ

• ಕೆ.ಎಸ್.ಸುನಿಲ್

ಬೆಂಗಳೂರು: ಬೆಂಗಳೂರು ಬ್ಯುಸಿನೆಸ್ ಕಾರಿಡಾರ್ (ಪಿಆರ್‌ಆರ್–2) ಸುತ್ತ ಮುತ್ತ ಹೊಸದಾಗಿ ಆರು ಬಡಾವಣೆಗಳನ್ನು ನಿರ್ಮಿಸುತ್ತಿದ್ದು, ಆರು ಸಾವಿರ ಎಕರೆ ಜಮೀನು ಸ್ವಾಧೀನಕ್ಕೆ ಪ್ರಾಥಮಿಕ ಅಧಿಸೂಚನೆ ಹೊರಡಿಸಲು ನಗರಾಭಿವೃದ್ಧಿ ಇಲಾಖೆಯು ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರಕ್ಕೆ (ಬಿಡಿಎ) ಅನುಮೋದನೆ ನೀಡಿದೆ.

ಹೊಸೂರು ರಸ್ತೆಯಿಂದ ಬನ್ನೇರುಘಟ್ಟ ರಸ್ತೆ, ಕನಕಪುರ ರಸ್ತೆ ಮೂಲಕ ಮೈಸೂರು ರಸ್ತೆವರೆಗೆ ಪಿಆರ್‌ಆರ್–2ಕ್ಕೆ ಹೊಂದಿಕೊಂಡಂತೆ ಆರು ಬಡಾವಣೆಗಳನ್ನು ಒಟ್ಟು 6,217 ಎಕರೆ 3.88 ಗುಂಟೆ ವಿಸ್ತೀರ್ಣದ ಪ್ರದೇಶದಲ್ಲಿ ನಿರ್ಮಿಸಲಾಗುತ್ತದೆ.

ಈ ಬಡಾವಣೆಗಳನ್ನು ಸಾರ್ವಜನಿಕ ಸಹಭಾಗಿತ್ವದ ಮಾದರಿಯಲ್ಲಿ ನಿರ್ಮಿಸಲಾಗುತ್ತಿದ್ದು, ಜಮೀನು ಕಳೆದುಕೊಳ್ಳುವ ಭೂ ಮಾಲೀಕರಿಗೆ 40:60 ಅನುಪಾತದಲ್ಲಿ ಅಭಿವೃದ್ಧಿ ಪಡಿಸಿದ ನಿವೇಶನ ಅಥವಾ ನಗದು ಪರಿಹಾರ ನೀಡಲಾಗುತ್ತದೆ.

ಪ್ರಾಧಿಕಾರದ ವತಿಯಿಂದ ಯೋಜನಾಬದ್ಧವಾಗಿ ಬಡಾವಣೆಗಳನ್ನು ರಚಿಸಿ, ಸಾರ್ವಜನಿಕರಿಗೆ ನ್ಯಾಯೋಚಿತ ದರದಲ್ಲಿ ನಿವೇಶಗಳನ್ನು ಹಂಚಿಕೆ ಮಾಡುವುದು ಹಾಗೂ ಭೂ ಸ್ವಾಧೀನ ಪಡಿಸಿಕೊಳ್ಳುತ್ತಿರುವ ಜಮೀನುಗಳು ಕೆ.ಟಿ.ಸಿ.ಪಿ ಕಾಯ್ದೆ 1961ರ ಕಲಂ 12 (1) (ಬಿ) (ಸಿ) ಮತ್ತು (ಎಫ್)ಗೆ ಒಳಪಡದಿರುವ ಬಗ್ಗೆ ಖಚಿತ ಪಡಿಸಿಕೊಳ್ಳುವಂತೆ ನಗರಾಭಿವೃದ್ಧಿ ಇಲಾಖೆ ಹೊರಡಿಸಿರುವ ಆದೇಶದಲ್ಲಿ ತಿಳಿಸಲಾಗಿದೆ.

ಈಗಾಗಲೇ ಕೆಲವು ರೈತರಿಗೆ ನೋಟಿಸ್ ಜಾರಿ ಮಾಡುತ್ತಿದ್ದು, ಭೂ ದಾಖಲೆಗಳನ್ನು ಒದಗಿಸಲು ಸೂಚಿಸಲಾಗಿದೆ. ಮೈಸೂರು ರಸ್ತೆಯಿಂದ ಮಾಗಡಿ ರಸ್ತೆವರೆಗೆ ನಾಡಪ್ರಭು ಕೆಂಪೇಗೌಡ ಬಡಾವಣೆ ನಿರ್ಮಾಣ ಆಗಿದೆ. ಹೀಗಾಗಿ ಮೈಸೂರು ರಸ್ತೆಯಿಂದ ಹೊಸೂರು ರಸ್ತೆವರೆಗಿನ ಗ್ರಾಮಗಳಲ್ಲಿ ಹೊಸ ಬಡಾವಣೆಗಳನ್ನು ನಿರ್ಮಿಸಲು ನಿರ್ಧರಿಸಲಾಗಿದೆ.

ಆರು ಹೊಸ ಬಡಾವಣೆಗಳಿಗಾಗಿ 22 ಗ್ರಾಮಗಳ ಸರ್ವೆ ನಂಬರ್‌ಗಳನ್ನು ಗುರುತಿಸಿದ್ದು, 50 ಸಾವಿರಕ್ಕೂ ಹೆಚ್ಚು ನಿವೇಶನಗಳನ್ನು ಅಭಿವೃದ್ಧಿಪಡಿಸಲು ಉದ್ದೇಶಿಸಲಾಗಿದೆ. 100 ಮೀ. ಅಗಲದ ಪಿಆರ್‌ಆರ್–2 ಅನ್ನು ನಿರ್ಮಿಸಲು ಉದ್ದೇಶಿಸಲಾಗಿದ್ದು, ಸಂಪರ್ಕ ರಸ್ತೆಗಳು ಹಾಗೂ ವಾಣಿಜ್ಯ ಚಟುವಟಿಕೆಗಳಿಗೂ ಹೆಚ್ಚು ಪ್ರಾಮುಖ್ಯ ಸಿಗಲಿದೆ ಎಂದು ಬಿಡಿಎ ಮೂಲಗಳು ತಿಳಿಸಿವೆ.

‘ಬೆಂಗಳೂರು ನಗರ ವೇಗವಾಗಿ ಬೆಳೆಯುತ್ತಿರುವುದರಿಂದ ವಾಹನಗಳ ಸುಗಮ ಸಂಚಾರಕ್ಕೆ ಹಾಗೂ ಸಂಚಾರ ದಟ್ಟಣೆ ಕಡಿಮೆ ಮಾಡಲು ಪಿಆರ್‌ಆರ್ ರಸ್ತೆ ಬಹುಮುಖ್ಯ ಪಾತ್ರ ನಿರ್ವಹಿಸುತ್ತದೆ. ಜೊತೆಗೆ ವೈಜ್ಞಾನಿಕ ಮತ್ತು ವಿಶಾಲವಾದ ಬಡಾವಣೆ ನಿರ್ಮಿಸುವುದರಿಂದ ಸಾರ್ವಜನಿಕರಿಗೆ ವಸತಿ ಸೌಲಭ್ಯ ಕಲ್ಪಿಸಬಹುದು. ಹೈಕೋರ್ಟ್ ಮತ್ತು ಸುಪ್ರೀಂ ಕೋರ್ಟ್ ಹಲವು ಪ್ರಕರಣಗಳಲ್ಲಿ ಅನಧಿಕೃತ ಬಡಾವಣೆಗಳನ್ನು ತಡೆಗಟ್ಟಲು ಕಟ್ಟುನಿಟ್ಟಿನ ಕ್ರಮಕೈಗೊಳ್ಳುವಂತೆ ನಿರ್ದೇಶನ ನೀಡಿದೆ. ಹಾಗಾಗಿ ಹೊಸ ಬಡಾವಣೆಗಳ ನಿರ್ಮಾಣದಿಂದ ಅನಧಿಕೃತ ಬಡಾವಣೆಯನ್ನು ತಡೆಗಟ್ಟಬಹುದು’ ಎಂದು ಬಿಡಿಎ ಅಧಿಕಾರಿಗಳು ತಿಳಿಸಿದರು.

ಮುಖ್ಯಾಂಶಗಳು

- ಜಮೀನು ಸ್ವಾಧೀನಕ್ಕೆ ಸೂಚನೆ
- ಈಗಾಗಲೇ ಹಲವರಿಗೆ ನೋಟಿಸ್



ಯಾವ ಬಡಾವಣೆಗೆ ಎಲ್ಲಿ, ಎಷ್ಟು ಜಮೀನು?

ಬಡಾವಣೆ–1	ಮಾರಗೊಂಡನಹಳ್ಳಿ	84 ಎಕರೆ 23 ಗುಂಟೆ
ಬಡಾವಣೆ–2	ಹುಲಿಮಂಗಲ, ಬೆಟ್ಟದಾಸನಪುರ, ಎಸ್.ಬಿಂಗೀಪುರ	516 ಎಕರೆ 21 ಗುಂಟೆ
ಬಡಾವಣೆ–3	ಹುಲ್ಲಹಳ್ಳಿ	216 ಎಕರೆ 20 ಗುಂಟೆ
ಬಡಾವಣೆ–4	ಬೇಗೂರು, ಹೊಮ್ಮದೇವನಹಳ್ಳಿ, ಕಮ್ಮನಹಳ್ಳಿ, ಮೈಲಸಂದ್ರ, ಎಲ್ಲೇನಹಳ್ಳಿ, ಹುಲ್ಲಳ್ಳಿ	510 ಎಕರೆ
ಬಡಾವಣೆ–5	ಬಿ.ಎಂ.ಕಾವಲ್, ಕಗ್ಗಲಿಪುರ, ಯು.ಎಂ.ಕಾವಲ್, ಅಗರ, ಗುಳಕಮಲ್ಲೆ, ಒ.ಬಿ.ಚೂಡನಹಳ್ಳಿ, ಉತ್ತರಿ	4206 ಎಕರೆ 29 ಗುಂಟೆ
ಬಡಾವಣೆ–6	ಬಿ.ಎಂ.ಕಾವಲ್, ದೇವಗೆರೆ, ಗಂಗಸಂದ್ರ, ಗುಡಿಮಾವು	652 ಎಕರೆ 30 ಗುಂಟೆ

ಹೃದಯ ಸಮಸ್ಯೆ ಪತ್ತೆಗಾಗಿ ಎಐ ಮಾದರಿ ಅಭಿವೃದ್ಧಿ

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ಕೃತಕ ಬುದ್ಧಿಮತ್ತೆ (ಎಐ) ತಂತ್ರಜ್ಞಾನ ಬಳಸಿಕೊಂಡು ಕೇವಲ ಹತ್ತು ಸೆಕೆಂಡ್‌ಗಳಲ್ಲಿ ಹೃದಯ ಸಮಸ್ಯೆ ಪತ್ತೆ ಮಾಡುವ ಮಾದರಿಯನ್ನು ಅಭಿವೃದ್ಧಿಪಡಿಸಲಾಗಿದೆ’ ಎಂದು ನಾರಾಯಣ ಹೆಲ್ತ್ ತಿಳಿಸಿದೆ.

‘ಒಂದು ಲಕ್ಷಕ್ಕೂ ಹೆಚ್ಚು ಇಸಿಜಿ ಚಿತ್ರಣಗಳು ಮತ್ತು ‘ಎಕೋಕಾರ್ಡಿಯೋಗ್ರಾಮ್’ ವರದಿಗಳ ಜೋಡಣೆಯ ಆಧಾರದ ಮೇಲೆ ಎಐ ಮಾದರಿಯನ್ನು ತರಬೇತಿಗೊಳಿಸಲಾಗಿದೆ. ಈ ಮಾದರಿಯು ಅತ್ಯುತ್ತಮ ಫಲಿತಾಂಶವನ್ನು ಒದಗಿಸಿದೆ. 14 ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ 57 ಸಾವಿರಕ್ಕೂ ಹೆಚ್ಚು ರೋಗಿಗಳ ಮೇಲೆ ಪ್ರಾಯೋಗಿಕ ಪರೀಕ್ಷೆ ಮಾಡಿ, ಹೃದಯ ಸಮಸ್ಯೆ ಪತ್ತೆ ಮಾಡಲಾಗಿದೆ. ಸಂಸ್ಥೆಯ ಕ್ಲಿನಿಕಲ್ ಸಂಶೋಧನಾ ತಂಡ ಮತ್ತು ವಿಶ್ಲೇಷಣಾ ತಂಡ ಈ ಮಾದರಿ ಅಭಿವೃದ್ಧಿಪಡಿಸಿದೆ’ ಎಂದು ಸಂಸ್ಥೆಯ ವೈದ್ಯರು ಮಾಹಿತಿ ನೀಡಿದ್ದಾರೆ.

‘ವೈದ್ಯಕೀಯ ಪರಿಣತಿ, ಸಂಶೋಧನೆ ಮತ್ತು ಅತ್ಯಾಧುನಿಕ ತಂತ್ರಜ್ಞಾನದ ಸಂಯೋಜನೆಯಿಂದ ಈ ಮಾದರಿ ಅಭಿವೃದ್ಧಿಪಡಿಸಲಾಗಿದೆ. ಸರಳ ಇಸಿಜಿಯ ಮೂಲಕ ಹೃದಯ ವೈಫಲ್ಯವನ್ನು ತಕ್ಷಣವೇ ಪತ್ತೆ ಮಾಡಿ, ರೋಗ ನಿರ್ಣಯಿಸಲು ಸಹಕಾರಿಯಾಗಲಿದೆ’ ಎಂದು ನಾರಾಯಣ ಹೆಲ್ತ್‌ನ ಸಂಸ್ಥಾಪನಾಧ್ಯಕ್ಷ ಡಾ. ದೇವಿಪ್ರಸಾದ್ ಶೆಟ್ಟಿ ತಿಳಿಸಿದ್ದಾರೆ.

‘ವಿಭಜಕ ರಾಜಕಾರಣಕ್ಕೆ ಭಾಷೆಯೇ ಸೌಹಾರ್ದ ಔಷಧ’

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಬಿಳಿಮಲೆ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಅಲ್ಪಸಂಖ್ಯಾತ ಮತ್ತು ಬಹುಸಂಖ್ಯಾತ ಸಮುದಾಯಗಳ ನಡುವಿನ ಸಾಮರಸ್ಯ ಕದಡುವ ವಿಭಜಕ ರಾಜಕಾರಣಕ್ಕೆ ಭಾಷೆಯೇ ಸೌಹಾರ್ದ ಔಷಧ’ ಎಂದು ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಪುರುಷೋತ್ತಮ ಬಿಳಿಮಲೆ ಅಭಿಪ್ರಾಯಪಟ್ಟರು.

ಕರ್ನಾಟಕ ರಾಜ್ಯ ಅಲ್ಪಸಂಖ್ಯಾತರ ಆಯೋಗ ಮತ್ತು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಜಂಟಿಯಾಗಿ ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ‘ಅರೇಬಿಕ್ ಮದರಸಾಗಳ ಶಿಕ್ಷಕರಿಗೆ ಕನ್ನಡ ಕಲಿಸುವ ಅಭಿಯಾನ’ದಲ್ಲಿ ಭಾಗವಹಿಸಿ, ಮಾತನಾಡಿದರು.

‘ಭಾಷೆಯ ಮೂಲಕ ಯಾವುದೇ ಸಮುದಾಯ ಅವಮಾನಕ್ಕೆ ಒಳಗಾಗಬಾರದು. ರಾಜ್ಯ ಭಾಷೆಯನ್ನು ಕಲಿತ ಸಮುದಾಯ, ತಾನು ವಾಸಿಸುವ ನಾಡಿನಲ್ಲಿ ಸಾಮರಸ್ಯದಿಂದ ಜೀವಿಸಲು ತನ್ನದೇ ಆದ ಚೈತನ್ಯ ಪಡೆಯುತ್ತದೆ. ಹಾಗಾಗಿ, ಅಲ್ಪಸಂಖ್ಯಾತರು ಕನ್ನಡ ಕಲಿಯುವುದು ಮುಖ್ಯವಾಗುತ್ತದೆ. ಭಾಷಾ ಸಾಮರಸ್ಯದ ಜೊತೆಗೆ ಸಾಂಸ್ಕೃತಿಕ ಸಾಮರಸ್ಯ ಏರ್ಪಡುವುದೂ ಮುಖ್ಯ. ಪ್ರಾಧಿಕಾರವು ವಿದ್ಯಾರ್ಥಿ ಸಮೂಹದ ಉಪಯೋಗಕ್ಕಾಗಿ ‘ಕನ್ನಡ ಭಾಷಾ ಸಾಮರಸ್ಯದ ನೆಲೆಗಳು’ ಶೀರ್ಷಿಕೆಯಡಿ ನೂರು ಪುಸ್ತಕಗಳನ್ನು ಹೊರ ತರುವ ಕೆಲಸ ಮಾಡುತ್ತಿದೆ. ಶೀಘ್ರದಲ್ಲಿ ಈ ಪುಸ್ತಕಗಳು ಬಿಡುಗಡೆಯಾಗಲಿವೆ’ ಎಂದು ಹೇಳಿದರು.



ಪುರುಷೋತ್ತಮ ಬಿಳಿಮಲೆ

‘ಅಲ್ಪಸಂಖ್ಯಾತ ಸಮುದಾಯ ಕನ್ನಡವನ್ನು ನಿರೀಕ್ಷಿತ ಮಟ್ಟದಲ್ಲಿ ಕಲಿಯದೆ ಇರುವುದಕ್ಕೂ ವಿಭಜಕ ರಾಜಕಾರಣವೇ ಕಾರಣವಾಗಿದ್ದು, ಸಾಮರಸ್ಯದ ದೃಷ್ಟಿಯಿಂದ ಎಲ್ಲವನ್ನೂ ಮರೆತು ರಾಜ್ಯಭಾಷೆಯನ್ನು ಕಲಿಯಲು ಮುಂದಾಗಬೇಕು. ಮುಂದಿನ ದಿನಗಳಲ್ಲಿ ಕ್ರೈಸ್ತ ಸಮುದಾಯ ಸೇರಿದಂತೆ ಎಲ್ಲ ಅಲ್ಪಸಂಖ್ಯಾತ ಸಮುದಾಯಗಳಿಗೆ ಕನ್ನಡ ಕಲಿಸುವ ಪ್ರಯತ್ನವನ್ನು ಪ್ರಾಧಿಕಾರ ನಡೆಸಲಿದೆ’ ಎಂದರು.

‘ಉರ್ದು ಅಕಾಡೆಮಿಗೆ ಲಭ್ಯವಿರುವ ಸ್ವಾಯತ್ತತೆಯನ್ನು ಗೌಣವಾಗಿಸದೆ, ಅದನ್ನು ಮುಖ್ಯವಾಹಿನಿಯಲ್ಲಿ ಉಳಿಸುವ ಉದ್ದೇಶದಿಂದ ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಡಿ ತರಬೇಕು’ ಎಂದು ಬಿಳಿಮಲೆ ಅವರು ಅಲ್ಪಸಂಖ್ಯಾತರ ಕಲ್ಯಾಣ ಸಚಿವ ಜಮೀರ್ ಅಹಮದ್ ಅವರಿಗೆ ಆಗ್ರಹಿಸಿದರು.

ಇದಕ್ಕೆ ಸ್ಪಂದಿಸಿದ ಸಚಿವರು, ‘ಈ ಕುರಿತಂತೆ ಖಂಡಿತವಾಗಿಯೂ ಕ್ರಮ ವಹಿಸುತ್ತೇನೆ’ ಎಂದು ಭರವಸೆ ನೀಡಿದರು.

ಕನ್ನಡ ಕಲಿಕೆ: ಅಲ್ಪಸಂಖ್ಯಾತ ಆಯೋಗದ ಅಧ್ಯಕ್ಷ ಯು. ನಿಸಾರ್ ಅಹಮದ್, ‘ರಾಜ್ಯದಲ್ಲಿರುವ ಎಲ್ಲ ಎರಡು ಸಾವಿರ ಮದರಸಾಗಳಲ್ಲಿ ಕನ್ನಡ ಕಲಿಸಲು ಕನ್ನಡ ಅಭಿವೃದ್ಧಿ ಪ್ರಾಧಿಕಾರ ಕ್ರಮವಹಿಸಲಿದೆ. ಇದಕ್ಕೆ ಅಲ್ಪಸಂಖ್ಯಾತರ ಆಯೋಗವು ಸಹಕಾರ ನೀಡಲಿದೆ. ಪಠ್ಯಕ್ರಮವನ್ನು ಆಯೋಗವು ಪ್ರಾಧಿಕಾರದ ಸಲಹೆಯಂತೆ ರೂಪಿಸಲಿದೆ’ ಎಂದು ಹೇಳಿದರು.

ಇದೇ ವೇಳೆ ಮಾತನಾಡಿದ ಸಚಿವ ಜಮೀರ್ ಅಹಮದ್, ‘ಮಸೀದಿಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಮೌಲ್ವಿಗಳಿಗೂ ಕನ್ನಡ ಬೋಧಿಸಲು ಕ್ರಮ ವಹಿಸಲಾಗುವುದು’ ಎಂದು ಹೇಳಿದರು.

ಕನ್ನಡ ಅಭಿವೃದ್ಧಿ ಪ್ರಾಧಿಕಾರದ ಕಾರ್ಯದರ್ಶಿ ಸಂತೋಷ ಹಾನಗಲ್ಲ ಹಾಗೂ ಅಲ್ಪಸಂಖ್ಯಾತ ಆಯೋಗದ ಕಾರ್ಯದರ್ಶಿ ಮಾಜುದ್ದೀನ್ ಖಾನ್ ಉಪಸ್ಥಿತರಿದ್ದರು.

₹38 ಕೋಟಿ ವೆಚ್ಚದ ಕಾಮಗಾರಿಗೆ ಚಾಲನೆ

ಪ್ರಜಾವಾಣಿ ವಾರ್ತೆ

ಯಲಹಂಕ: ಲೋಕೋಪಯೋಗಿ ಹಾಗೂ ಬಿಡಿಎ ಅನುದಾನದಡಿಯಲ್ಲಿ ಯಲಹಂಕ ಕ್ಷೇತ್ರ ವ್ಯಾಪ್ತಿಯ ವಿವಿಧ ಗ್ರಾಮಗಳಲ್ಲಿ ₹38 ಕೋಟಿ ವೆಚ್ಚದಲ್ಲಿ ಕೈಗೊಂಡಿರುವ ಪ್ರಮುಖ ಸಂಪರ್ಕರಸ್ತೆಗಳಅಭಿವೃದ್ಧಿಕಾಮಗಾರಿಗೆ ಬೈರಾಪುರ ಗ್ರಾಮದಲ್ಲಿ ಶಾಸಕ ಎಸ್.ಆರ್.ವಿಶ್ವನಾಥ್ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ‘ಹಳ್ಳಿ-ಹಳ್ಳಿಗಳ ನಡುವಿನ ಸಂಪರ್ಕ ರಸ್ತೆಗಳು ತೀರಾ ಹಾಳಾಗಿದ್ದು, ರಸ್ತೆಗಳು ಕಿರಿದಾಗಿವೆ. ಇದರಿಂದ ವಾಹಗಳ ಸಂಚಾರಕ್ಕೆ ತೊಂದರೆಯಾಗುತ್ತಿತ್ತು. ಹೀಗಾಗಿ ರಸ್ತೆಯ ಎರಡೂ ಕಡೆ ಸೇರಿ ಒಟ್ಟು 7 ಅಡಿಗಳಷ್ಟು ವಿಸ್ತರಣೆ ಮಾಡಲಾಗುತ್ತಿದೆ. ಅದಕ್ಕನುಗುಣವಾಗಿ ಚರಂಡಿ ನಿರ್ಮಿಸಲಾಗುತ್ತಿದೆ. ಗ್ರಾಮೀಣ ಪ್ರದೇಶಗಳಲ್ಲಿ ಕಾಂಕ್ರೀಟ್ ರಸ್ತೆ ಅಭಿವೃದ್ಧಿಪಡಿಸಲಾಗುತ್ತದೆ. ಈ ಎಲ್ಲ ಕಾಮಗಾರಿಗಳಿಗೆ ಈಗ ಚಾಲನೆ ನೀಡಲಾಗಿದೆ’ ಎಂದು ತಿಳಿಸಿದರು.

‘ರಾಜಾನುಕುಂಟೆ-ಮಧುರೆ ಮುಖ್ಯರಸ್ತೆಯು ತೀರಾ ಹಾಳಾಗಿರುವುದರಿಂದ ಸಾರ್ವಜನಿಕರು ತೊಂದರೆ ಅನುಭವಿಸುತ್ತಿದ್ದಾರೆ. ಈ ಬಗ್ಗೆ ವಿಧಾನಸಭೆ ಅಧಿವೇಶನದಲ್ಲಿ ಪ್ರಶ್ನಿಸಿದ್ದೇನೆ. ಕೆಎಸ್‌ಆರ್‌ಡಿಸಿ ವತಿಯಿಂದ ರಸ್ತೆ ಅಭಿವೃದ್ಧಿಯಾಗಬೇಕಾಗಿದೆ. ಈ ಸಂಬಂಧ ಸಂಸ್ಥೆಯ ಅಧ್ಯಕ್ಷ ಎಚ್.ಸಿ.ಬಾಲಕೃಷ್ಣ ಹಾಗೂ ಸಚಿವ ಕೃಷ್ಣ ಬೈರೇಗೌಡ ಅವರೊಂದಿಗೆ ಸಭೆಯನ್ನೂ ನಡೆಸಲಾಗಿದೆ. ಕಂದಾಯ ಇಲಾಖೆಯ ಅಧಿಕಾರಿಗಳಿಂದ ಸಮೀಕ್ಷೆ ಕಾರ್ಯವನ್ನೂ ನಡೆಸಲಾಗಿದೆ. ರೈತರಿಗೆ ಪರಿಹಾರ ನೀಡುವುದು ವಿಳಂಬವಾಗುತ್ತಿದ್ದು, ಇದರಿಂದ ರಸ್ತೆಗೆ ಅಗತ್ಯವಿರುವ ಭೂಮಿಯನ್ನು ಸ್ವಾಧೀನಪಡಿಸಿಕೊಳ್ಳಲು ಸಮಸ್ಯೆಯಾಗುತ್ತಿದೆ. ಈ ಪ್ರಕ್ರಿಯೆ ಪೂರ್ಣಗೊಂಡ ಕಾಮಗಾರಿ ಆರಂಭಿಸಲಾಗುವುದು’ ಎಂದರು.

ಬಿಜೆಪಿ ಮುಖಂಡರಾದ ದಿಬ್ಬೂರು ಜಯಣ್ಣ, ಎಸ್.ಎನ್.ರಾಜಣ್ಣ, ಸತೀಶ್ ಕಡತನಮಲೆ, ಡಿ.ಜಿ.ಅಪ್ಪಯಣ್ಣ, ರಾಮಮೂರ್ತಿ, ಅದ್ದೆ ವಿಶ್ವನಾಥಪುರ ಮಂಜುನಾಥ್, ಎಸ್.ಜಿ.ಪ್ರಶಾಂತ್ ರೆಡ್ಡಿ, ಕೆ.ಸಿ.ಬಾಬು, ಎಂ.ಮೋಹನ್ ಕುಮಾರ್, ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶಾಂತಮ್ಮ, ಸಂಜೀವಯ್ಯ, ಅಮರಾವತಮ್ಮ, ಮಾಜಿ ಅಧ್ಯಕ್ಷ ಕೆ.ಆರ್.ತಿಮ್ಮೇಗೌಡ, ಮಾಜಿ ಉಪಾಧ್ಯಕ್ಷ ಹೇಮಂತ್‌ಕುಮಾರ್ ಮತ್ತಿತರರು ಉಪಸ್ಥಿತರಿದ್ದರು.

ವಲಯದ ಹೊರಗೂ ಪರಿಶೀಲನೆ

ಇ–ಖಾತಾ: ಭ್ರಷ್ಟಾಚಾರ ತಡೆಗೆ ಎಫ್‌ಐಎಫ್‌ಒ ವ್ಯವಸ್ಥೆ ಜಾರಿ – ಮುನೀಶ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಇ-ಖಾತಾ ನೀಡುವ ಪ್ರಕ್ರಿಯೆಯಲ್ಲಿ ಪಾರದರ್ಶಕತೆ ಕಾಪಾಡಿಕೊಂಡು, ಭ್ರಷ್ಟಾಚಾರ ನಿಯಂತ್ರಿಸಲು ‘ಫಸ್ಟ್ ಇನ್ ಫಸ್ಟ್ ಔಟ್’ (ಎಫ್‌ಐಎಫ್‌ಒ) ವ್ಯವಸ್ಥೆಯನ್ನು ಜಾರಿಗೆ ತರಲಾಗಿದೆ ಎಂದು ಬಿಬಿಎಂಪಿ ಕಂದಾಯ ವಿಭಾಗದ ವಿಶೇಷ ಆಯುಕ್ತ ಮುನೀಶ್ ಮೌದ್ಗಿಲ್ ತಿಳಿಸಿದರು.

ಇ-ಖಾತಾ ಪ್ರಕ್ರಿಯೆಯಲ್ಲಿ ನಾಗರಿಕರು ಮತ್ತು ಅಧಿಕಾರಿಗಳ ನಡುವಿನ ನೇರ ಸಂಪರ್ಕವನ್ನು ಕಡಿಮೆಗೊಳಿಸಲಾಗುತ್ತದೆ. ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸಿದ ಮೇಲೆ, ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಅಧಿಕಾರಿಗಳಿಗೆ ‘ರ್‍ಯಾಂಡಮ್’ ಆಗಿ ವರ್ಗಾವಣೆಯಾಗುತ್ತದೆ. ಅವರು ಮೂರು ದಿನದಲ್ಲಿ ಅರ್ಜಿಯನ್ನು ವಿಲೇವಾರಿ ಮಾಡುತ್ತಾರೆ ಎಂದು ಮಾಹಿತಿ ನೀಡಿದರು.

ಆನ್‌ಲೈನ್‌ನಲ್ಲಿ ಅರ್ಜಿಗಳು ಕೆಲವು ವಲಯ ಅಥವಾ ಉಪ ವಿಭಾಗದಲ್ಲಿ ಹೆಚ್ಚಿರುತ್ತವೆ. ಕೆಲವು ಕಡೆ ಕಡಿಮೆ ಇರುತ್ತವೆ. ಹೀಗಾಗಿ, ಬಿಬಿಎಂಪಿ ವ್ಯಾಪ್ತಿಯಲ್ಲಿ ಸಲ್ಲಿಕೆಯಾಗುವ ಅರ್ಜಿಗಳನ್ನು ‘ಮೊದಲು ಬಂದ ಅರ್ಜಿ’ಯೆಂದು ಪರಿಗಣಿಸಿ, ಸಹಾಯಕ ಕಂದಾಯ ಅಧಿಕಾರಿ, ಉಪ ಕಂದಾಯ ಅಧಿಕಾರಿಗಳಿಗೆ ವರ್ಗವಾಗುತ್ತದೆ. ಆಯಾ ಉಪ ವಿಭಾಗದ ಅರ್ಜಿ ಅವರಿಗೇ (ಎಆರ್‌ಒ) ಹೋಗಬೇಕೆಂದೇನೂ ಇಲ್ಲ. ಯಾರಲ್ಲಿ ಕಡಿಮೆ ಕಡತಗಳಿರುತ್ತವೋ ಅವರಿಗೆ ಸ್ವಯಂಚಾಲಿತವಾಗಿ ಅರ್ಜಿ ರವಾನೆಯಾಗುತ್ತದೆ’ ಎಂದು ಹೇಳಿದರು.

ಈ ವ್ಯವಸ್ಥೆಯಿಂದ ನಾಗರಿಕರು ತಮ್ಮ ವ್ಯಾಪ್ತಿಯ ಕಂದಾಯ ಅಧಿಕಾರಿಗಳನ್ನು ಸಂಪರ್ಕಿಸುವಂತಿಲ್ಲ. ಬಿಬಿಎಂಪಿ ವ್ಯಾಪ್ತಿಯಲ್ಲಿರುವ ಯಾವ ಕಂದಾಯ ವಿಭಾಗದ ಅಧಿಕಾರಿಯಾದರೂ ಆನ್‌ಲೈನ್ ಅರ್ಜಿಯನ್ನು ಪರಿಗಣಿಸಿ, ಇ-ಖಾತಾಗೆ ಅನುಮೋದನೆ ನೀಡುತ್ತಾರೆ. ಇದರಿಂದ ಮಧ್ಯವರ್ತಿಗಳನ್ನು ತಡೆದಂತಾಗುತ್ತದೆ ಎಂದು ಮುನೀಶ್ ತಿಳಿಸಿದರು.

ಆನ್‌ಲೈನ್‌ನಲ್ಲಿ ಅರ್ಜಿ ಹಂಚಿಕೆಯಾದ ಮೂರು ದಿನಗಳಲ್ಲಿ ಅಧಿಕಾರಿ ಅದನ್ನು ವಿಲೇವಾರಿ ಮಾಡಬೇಕು. ಇಲ್ಲದಿದ್ದರೆ ಮುಂದಿನ ಹಂತದ ಅಧಿಕಾರಿಗೆ ಅರ್ಜಿ ರವಾನೆಯಾಗುತ್ತದೆ. ಅವರೂ ಮೂರು ದಿನದಲ್ಲಿ ಅರ್ಜಿ ವಿಲೇವಾರಿ ಮಾಡದಿದ್ದರೆ, ಸ್ವಯಂಚಾಲಿತವಾಗಿ ಇ-ಖಾತಾ ಅನುಮೋದನೆಯಾಗುತ್ತದೆ ಎಂದರು.

ಇ-ಖಾತಾ, ಹೊಸ ಖಾತಾ ಹಾಗೂ ಕಂದಾಯ ವಿಭಾಗಕ್ಕೆ ಸಂಬಂಧಿಸಿದ 50 ಆನ್‌ಲೈನ್ ಅರ್ಜಿಗಳನ್ನು ಪ್ರತಿ ಅಧಿಕಾರಿಗೆ ನಿತ್ಯವೂ ಹಂಚಲಾಗುತ್ತದೆ. ಅವುಗಳನ್ನು ಅವರು ವಿಲೇವಾರಿ ಮಾಡಿದ ನಂತರ ಮತ್ತೆ ಅರ್ಜಿ ಹಂಚಿಕೆ ಪ್ರಕ್ರಿಯೆ ಆರಂಭವಾಗುತ್ತದೆ ಎಂದು ಹೇಳಿದರು.

ಪಿಒಪಿ ಮೂರ್ತಿ: ಪ್ರಕರಣ ದಾಖಲಿಸಲು ಸೂಚನೆ

ಬೆಂಗಳೂರು: ನಗರದಲ್ಲಿ ಪರಿಸರ ಸ್ನೇಹಿ ಗೌರಿ-ಗಣೇಶ ಮೂರ್ತಿಗಳನ್ನು ಪ್ರತಿಷ್ಠಾಪಿಸಿ, ಹಬ್ಬ ಆಚರಿಸುವಂತೆ ನಾಗರಿಕರಲ್ಲಿ ಅರಿವು ಮೂಡಿಸಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಪ್ಲಾಸ್ಟರ್ ಆಫ್ ಪ್ಯಾರಿಸ್ (ಪಿಒಪಿ) ವಸ್ತುಗಳನ್ನು ಬಳಸಿ ಗಣೇಶ ಮೂರ್ತಿಗಳನ್ನು ತಯಾರಿಸುವುದನ್ನು ಸಂಪೂರ್ಣವಾಗಿ ನಿಷೇಧಿಸಲಾಗಿದೆ. ಪಿಒಪಿ ಗಣೇಶ ಮೂರ್ತಿಗಳನ್ನು ತಯಾರಿಸುವವರ ಮೇಲೆ ಕೇಸ್ ದಾಖಲಿಸಬೇಕು ಎಂದು ಹೇಳಿದರು.

ನೀರಿನ ಅದಾಲತ್ ನಾಳೆ

ಬೆಂಗಳೂರು: ಜಲ ಮಂಡಳಿಯ ವಿವಿಧ ಉಪ ವಿಭಾಗಗಳಲ್ಲಿ ಆಗಸ್ಟ್ 7ರಂದು ಬೆಳಿಗ್ಗೆ 9.30ರಿಂದ 11 ಗಂಟೆಯವರೆಗೆ ನೀರಿನ ಅದಾಲತ್ ಹಮ್ಮಿಕೊಳ್ಳಲಾಗಿದೆ.

ವಿವಿಧ ಉಪ ವಿಭಾಗಗಳಾದ ಪೂರ್ವ 1-1, ಪೂರ್ವ 2-1, ಆಗ್ನೇಯ -1, ಆಗ್ನೇಯ 4, ಪಶ್ಚಿಮ 1-1, ಪಶ್ಚಿಮ-2, ವಾಯವ್ಯ -1, ವಾಯವ್ಯ-3 ಕೇಂದ್ರ 1-1, ಈಶಾನ್ಯ-1 ಉತ್ತರ 1-1ಕ್ಕೆ ಸಂಬಂಧಿಸಿದಂತೆ ನೀರಿನ ಬಿಲ್ಲು, ನೀರು ಮತ್ತು ಒಳಚರಂಡಿ ಸಂಪರ್ಕ ಕಲ್ಪಿಸುವಲ್ಲಿನ ವಿಳಂಬ, ಗೃಹ ಬಳಕೆಯಿಂದ ಗೃಹೇತರ ಬಳಕೆಗೆ ಪರಿವರ್ತನೆ ವಿಳಂಬ ಮತ್ತಿತರ ಕುಂದು ಕೊರತೆಗಳಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸಲಾಗುವುದು. ಅದಾಲತ್ ಸೇವಾ ಠಾಣೆಗಳಲ್ಲಿ ನೀರಿನ ಅದಾಲತ್ ನಡೆಯಲಿದೆ. ಸಾರ್ವಜನಿಕರು ಕುಂದು ಕೊರತೆಗಳಿಗೆ ಸಂಬಂಧಿಸಿದಂತೆ ಮಂಡಳಿಯ ಸಹಾಯವಾಣಿ 1916ಕ್ಕೆ ಕರೆ ಮಾಡಿ ದೂರುಗಳನ್ನು ದಾಖಲಿಸಬಹುದು. 8762228888 ಸಂಖ್ಯೆಗೆ ಕರೆ ಮಾಡಿ ದೂರು ಸಲ್ಲಿಸಬಹುದಾಗಿದೆ ಎಂದು ಜಲಮಂಡಳಿ ಪ್ರಕಟಣೆ ತಿಳಿಸಿದೆ.

ಕೆರೆಗೆ ಕೊಳಚೆ: ನಿಯಂತ್ರಿಸಲು ಸೂಚನೆ

ಬೆಂಗಳೂರು: ನಗರದಲ್ಲಿರುವ ಕೆರೆಗಳಿಗೆ ಕೊಳಚೆ ನೀರು ಬರುವುದನ್ನು ಪರಿಣಾಮಕಾರಿಯಾಗಿ ನಿಯಂತ್ರಿಸಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ಮಹೇಶ್ವರ್ ರಾವ್ ಅವರು ಬೆಂಗಳೂರು ಜಲಮಂಡಳಿ ಅಧಿಕಾರಿಗಳಿಗೆ ಸೂಚಿಸಿದರು.

‘ಯಾವ ಕೆರೆಗಳಿಗೆ ಕೊಳಚೆ ನೀರು ಸೇರುತ್ತಿದೆಯೋ ಅಂತಹ ಕಡೆಗಳಲ್ಲಿ ‘ತಿರುವು ಮಾರ್ಗ’ ಮಾಡಬೇಕು. ಕೆರೆಗಳ ಪಕ್ಕದಲ್ಲಿರುವ ಒಳಚರಂಡಿಗಳಿಂದ ಕೊಳಚೆ ನೀರು ಉಕ್ಕಿ ಹರಿಯುತ್ತಿರುವುದರಿಂದ ವಾಯುವಿಹಾರ ಮಾರ್ಗ ಹಾಳಾಗಿ, ಕೆರೆಗೆ ಕಲುಷಿತ ನೀರು ಸೇರುತ್ತಿದೆ. ಅದನ್ನು ತಪ್ಪಿಸಲು ಕೂಡಲೇ ದುರಸ್ತಿ ಕಾರ್ಯಗಳನ್ನು ಕೈಗೊಳ್ಳಬೇಕು’ ಎಂದು ಅಧಿಕಾರಿಗಳ ಸಭೆಯಲ್ಲಿ ಹೇಳಿದರು. ಕೊಳಚೆ ನೀರನ್ನು ಅನಧಿಕೃತವಾಗಿ ಮಳೆ ನೀರುಗಾಲುವೆಗಳಿಗೆ ಹರಿಸುತ್ತಿರುವವರನ್ನು ಪತ್ತೆ ಮಾಡಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದು ಸೂಚಿಸಿದರು. ಜಲಮಂಡಳಿ ವತಿಯಿಂದ ನಡೆಯುತ್ತಿರುವ ತ್ಯಾಜ್ಯ ನೀರು ಸಂಸ್ಕರಣಾ ಘಟಕಗಳ (ಎಸ್‌ಟಿಪಿ) ಕಾಮಗಾರಿಗಳನ್ನು ತ್ವರಿತವಾಗಿ ಪೂರ್ಣಗೊಳಿಸಬೇಕು. ಅದರಿಂದ ಸಂಸ್ಕರಣೆಯಾದ ನೀರನ್ನು ಮಾತ್ರ ಕೆರೆಗಳಿಗೆ ಬಿಡಬೇಕು ಎಂದರು.

ಎರಡನೇ ಹಂತದ ಭೂ ಸುರಕ್ಷಾ ಯೋಜನೆಗೆ ಚಾಲನೆ

ಮಾರ್ಚ್‌ಗೆ ಒಂದು ಕೋಟಿ ಪುಟ ಗಣಕೀಕರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪ ವಿಭಾಗಾಧಿಕಾರಿಗಳು ಹಾಗೂ ಜಿಲ್ಲಾಧಿಕಾರಿಗಳ ಕಚೇರಿಗಳಲ್ಲಿನ ಪ್ರಮುಖ ಭೂ ದಾಖಲೆಗಳನ್ನು ಗಣಕೀಕರಣಗೊಳಿಸುವ ಕಾರ್ಯ ಮುಂದಿನ ವರ್ಷದ ಮಾರ್ಚ್‌ಗೆ ಪೂರ್ಣಗೊಳ್ಳಲಿದೆ ಎಂದು ಕಂದಾಯ ಸಚಿವ ಕೃಷ್ಣ ಬೈರೇಗೌಡ ತಿಳಿಸಿದರು.

ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ ಭೂ ಸುರಕ್ಷಾ ಯೋಜನೆಗೆ ಮಂಗಳವಾರ ಚಾಲನೆ ನೀಡಿದ ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ‘ಎರಡನೇ ಹಂತದಲ್ಲಿ ಉಪ ವಿಭಾಗಾಧಿಕಾರಿ, ಜಿಲ್ಲಾಧಿಕಾರಿಗಳ ಕಚೇರಿಗಳಲ್ಲಿ ಇರುವ ಒಂದು ಕೋಟಿ ಪುಟಗಳಷ್ಟು ದಾಖಲೆಗಳನ್ನು ಗಣಕೀಕರಣಗೊಳಿಸಲಾಗುವುದು’ ಎಂದರು.

ಹಳೆಯ ದಾಖಲೆಗಳು ಶಿಥಿಲ ಆಗದಂತೆ ತಡೆಯುವುದು ಮತ್ತು ಮಧ್ಯವರ್ತಿಗಳ ಹಾವಳಿ ಇಲ್ಲದೆ ಜನರಿಗೆ ಸುಲಭವಾಗಿ ದಾಖಲೆಗಳು ಲಭ್ಯವಾಗುವಂತೆ ನೋಡಿಕೊಳ್ಳುವುದು ಈ ಯೋಜನೆಯ ಉದ್ದೇಶ. ಮನೆಯಿಂದಲೇ ಆನ್‌ಲೈನ್‌ನಲ್ಲಿ ದಾಖಲೆಗಳನ್ನು ಪಡೆಯಬಹುದು.



ಕೃಷ್ಣ ಬೈರೇಗೌಡ ಅವರು ಬೆಂಗಳೂರು ನಗರ ಜಿಲ್ಲಾಧಿಕಾರಿಗಳ ಕಾರ್ಯಾಲಯದಲ್ಲಿ ಹಳೆಯ ಭೂ ದಾಖಲೆಗಳನ್ನು ಸ್ಕ್ಯಾನ್ ಮಾಡುವ ಮೂಲಕ ಭೂ ಸುರಕ್ಷಾ ಯೋಜನೆಗೆ ಮಂಗಳವಾರ ಚಾಲನೆ ನೀಡಿದರು. ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ರಾಜೇಂದ್ರ ಕುಮಾರ್ ಕಟಾರಿಯಾ, ಬೆಂಗಳೂರು ನಗರ ಜಿಲ್ಲಾಧಿಕಾರಿ ಜಿ. ಜಗದೀಶ್ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಒಂದು ವೇಳೆ ಈ ಕುರಿತ ತಾಂತ್ರಿಕ ಜ್ಞಾನ ಇಲ್ಲದಿದ್ದರೆ, ಜನರು ನಾಡ ಕಚೇರಿಗಳಿಗೆ ಹೋಗಬಹುದು. ಕೇಂದ್ರ ಕಚೇರಿಗೆ ಬರುವ ಅಗತ್ಯವಿಲ್ಲ ಎಂದು ಪ್ರತಿಪಾದಿಸಿದರು.

ಯೋಜನೆ ಪೂರ್ಣಗೊಳ್ಳುವವರೆಗೂ ದಾಖಲೆಗಳಿಗಾಗಿ ಕಾಯಬೇಕಾಗಿಲ್ಲ. ಭೂ ಸುರಕ್ಷಾ ಯೋಜನೆಯಡಿ ಅರ್ಜಿ ಹಾಕಿದರೆ, ಗ್ರಾಹಕರು ಕೇಳಿದ ಮಾಹಿತಿಯನ್ನು ಸ್ಕ್ಯಾನ್ ಮಾಡಿ ಡಿಜಿಟಲ್ ರೂಪದಲ್ಲಿ ನೀಡಲಾಗುತ್ತದೆ. ಡಿಜಿಟಲೀಕರಣದಿಂದ ದಾಖಲೆಗಳನ್ನು ತಿದ್ದುವುದು, ಕಳೆದು ಹೋಗಿವೆ ಎಂದು ಸುಳ್ಳು ಹೇಳುವ ಪರಿಪಾಟಕ್ಕೆ ಕಡಿವಾಣ ಬೀಳಲಿದೆ. ಮಧ್ಯವರ್ತಿಗಳ ಹಾವಳಿ, ಶೋಷಣೆ ತಪ್ಪಲಿದೆ ಎಂದು ಹೇಳಿದರು.

‘ಭೂ ಮಾಫಿಯಾಗೆ ಕಡಿವಾಣ’

‘ಆಸ್ತಿಗಳ ಲೂಟಿ ಮಾಡಲು ಬೆಂಗಳೂರು ಸುತ್ತಮುತ್ತ ಈ ಹಿಂದೆ ಅನೇಕ ನಕಲಿ ದಾಖಲೆಗಳನ್ನು ಸೃಷ್ಟಿಸಲಾಗಿದೆ. ಇದರಲ್ಲಿ ಇಲಾಖೆಯ ಅಧಿಕಾರಿಗಳ ಕೈವಾಡವೂ ಇದೆ. ಇಂತಹ ಕೆಲವು ಪ್ರಕರಣಗಳಲ್ಲಿ ನ್ಯಾಯಾಲಯದಲ್ಲೂ ಹಿನ್ನಡೆಯಾಗಿದೆ. ಆದರೆ, ನಾವು ಇಷ್ಟಕ್ಕೆ ಸುಮ್ಮನಾಗುವುದಿಲ್ಲ. ಸುಪ್ರೀಂ ಕೋರ್ಟ್‌ನಲ್ಲೂ ಹೋರಾಟ ಮಾಡುತ್ತೇವೆ’ ಎಂದು ಕೃಷ್ಣ ಬೈರೇಗೌಡ ಹೇಳಿದರು.

‘ನಾವು ಕೈ ಕಟ್ಟಿಕೊಂಡು ಸುಮ್ಮನಿರುವುದಿಲ್ಲ. ದಾಖಲೆಗಳ ಸತ್ಯಾಸತ್ಯತೆ ಬಗ್ಗೆ ಅನುಮಾನ ಬಂದರೆ, ಅವುಗಳ ನೈಜತೆ ಬಗ್ಗೆ ತಿಳಿಯಲು ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ (ಎಫ್‌ಎಸ್‌ಎಲ್) ಕಳುಹಿಸುತ್ತೇವೆ. ದಾಖಲೆಗಳು ನಕಲಿ ಎಂದು ಗೊತ್ತಾದರೆ ಕಾನೂನು ಹೋರಾಟ ಮುಂದುವರಿಸುತ್ತೇವೆ. ತಪ್ಪಿತಸ್ಥರ ವಿರುದ್ಧ ದಿಟ್ಟ ಕ್ರಮ ಕೈಗೊಳ್ಳಲಾಗುವುದು’ ಎಂದು ತಿಳಿಸಿದರು.

ಟೆಕಿಗೆ ₹1.49 ಲಕ್ಷ ವಂಚನೆ

ಬೆಂಗಳೂರು: ಟೆಲಿಗ್ರಾಂ ಮೆಸೆಂಜರ್‌ನಲ್ಲಿ ಬಂದ ಲಿಂಕ್ ಕ್ಲಿಕ್ ಮಾಡಿದ ನಗರದ ಸಾಫ್ಟ್‌ವೇರ್ ಎಂಜಿನಿಯರ್‌ಗೆ ಕಾಲ್ ಗರ್ಲ್ ಹಾಗೂ ಸ್ಪಾ ಸೇವೆ ಒದಗಿಸುವುದಾಗಿ ಹೇಳಿ ₹1.49 ಲಕ್ಷ ವಂಚಿಸಿರುವ ಘಟನೆ ನಡೆದಿದೆ.

ನಗರದ ಖಾಸಗಿ ಕಂಪನಿಯ ಉದ್ಯೋಗಿ ಎಂ.ಡಿ.ದಸ್ತಗಿರ್ ಅವರ ದೂರು ಆಧರಿಸಿ, ಇಶಾನಿ ರೆಡ್ಡಿ ಎಂಬವರ ವಿರುದ್ಧ ಹೈಗ್ರೌಂಡ್ಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ದಸ್ತಗಿರ್ ಅವರು ಟೆಲಿಗ್ರಾಂ ಮೆಸೆಂಜರ್‌ನಲ್ಲಿ ಬಂದ ಲಿಂಕ್ ಕ್ಲಿಕ್ ಮಾಡಿ, ಇಶಾನಿ ರೆಡ್ಡಿ ಅವರನ್ನು ಸಂಪರ್ಕಿಸಿದ್ದರು. ಕಾಲ್ ಗರ್ಲ್ ಹಾಗೂ ಸ್ಪಾ ಸೇವೆ ನೀಡಲಾಗುವುದು. ಇದಕ್ಕೆ ₹299 ಪಾವತಿಸಬೇಕು ಎಂದಿದ್ದಾರೆ. ಬಳಿಕ ಮತ್ತೆ ಹಣ ನೀಡುವಂತೆ ಆರೋಪಿ ಕೇಳಿದ್ದರಿಂದ ಹಂತ ಹಂತವಾಗಿ ₹1.49 ಲಕ್ಷ ಹಣವನ್ನು ಬ್ಯಾಂಕ್ ಖಾತೆಗೆ ವರ್ಗಾಯಿಸಿದ್ದಾಗಿ ಎಂದು ಪೊಲೀಸರು ತಿಳಿಸಿದ್ದಾರೆ.

ಹಣ ಪಾವತಿಸಿದರೂ ಯಾವುದೇ ಸೇವೆ ಒದಗಿಸದ ಕಾರಣ ಹಣವನ್ನು ವಾಪಸ್ ಮಾಡುವಂತೆ ಟೆಕಿ ಕೇಳಿದ್ದಾರೆ. ಆದರೆ ವಾಪಸ್ ನೀಡಲಿಲ್ಲ. ರಾಷ್ಟ್ರೀಯ ಸೈಬರ್ ಅಪರಾಧ ಪೋರ್ಟಲ್‌ಗೆ ಮಾಹಿತಿ ನೀಡಿ, ಪೊಲೀಸರಿಗೆ ದೂರು ನೀಡಿದ್ದು, ತನಿಖೆ ನಡೆಯುತ್ತಿದೆ.

ಡಿಜಿಟಲ್ ಅರೆಸ್ಟ್: ವೃದ್ಧರಿಗೆ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ 81 ವರ್ಷದ ವೃದ್ಧರೊಬ್ಬರನ್ನು 'ಡಿಜಿಟಲ್ ಅರೆಸ್ಟ್' ಹೆಸರಿನಲ್ಲಿ ಬೆದರಿಸಿದ ಸೈಬರ್ ವಂಚಕ ₹1.77 ಕೋಟಿ ಸುಲಿಗೆ ಮಾಡಿರುವ ಘಟನೆ ನಡೆದಿದೆ.

ಸದಾನಂದ ನಗರದ ಎನ್‌ಜಿಇಎಫ್ ಲೇಔಟ್ ನಿವಾಸಿ ಜಿ.ವಸಂತ್ ಕುಮಾರ್ ಅವರ ದೂರು ಆಧರಿಸಿ, ಪೂರ್ವ ವಿಭಾಗದ ಸೆನ್ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

'ಜುಲೈ 5 ರಂದು ಮುಂಬೈನ ಕೊಲಾಬಾ ಪೊಲೀಸ ಹೆಸರಿನಲ್ಲಿ ಸಂದೀಪ್ ಜಾಧವ್ ಎಂಬಾತ ಕರೆ ಮಾಡಿ, 'ನನ್ನ ಆಧಾರ್ ಸಂಖ್ಯೆಯನ್ನು ಬಳಸಿಕೊಂಡು ಬ್ಯಾಂಕ್‌ವೊಂದರಲ್ಲಿ ಖಾತೆ ತೆರೆಯಲಾಗಿದೆ ಹಾಗೂ ಜೆಟ್ ಏರ್‌ವೇಸ್‌ನ ನರೇಶ್ ಗೋಯಲ್ ಜೊತೆ ನಂಟು ಇದೆ ಎನ್ನಲಾದ ಹಣ ಅಕ್ರಮ ವರ್ಗಾವಣೆಗೆ ಈ ಖಾತೆಯನ್ನು ಬಳಸಿಕೊಳ್ಳಲಾಗಿದೆ' ಎಂದು ಹೇಳಿದ. ನಂತರ ಪೊಲೀಸ್ ಅಧಿಕಾರಿಗಳು ಎಂದು ಹೇಳಿಕೊಂಡು ಹಲವರು ಕರೆ ಮಾಡಿ, ಜುಲೈ 9ರಿಂದ 15ರವರೆಗೆ ಡಿಜಿಟಲ್ ಅರೆಸ್ಟ್ ಮಾಡಿರುವುದಾಗಿ ಹೇಳಿದರು.

ವಿಡಿಯೊ ಕರೆ ಮೂಲಕ ವಾಟ್ಸ್‌ಆ್ಯಪ್‌ನಲ್ಲಿ ನಕಲಿ ಬಂಧನದ ವಾರಂಟ್ ತೋರಿಸಿ ಬೆದರಿಸಿದರು' ಎಂದು ದೂರಿನಲ್ಲಿ ತಿಳಿಸಿದ್ದಾರೆ.

'ವಂಚಕನ ಮಾತು ನಂಬಿ ನನ್ನ ಬ್ಯಾಂಕ್ ಖಾತೆಗಳ ವಿವರಗಳನ್ನು ನೀಡಿದೆ. ತನಿಖೆಯ ಉದ್ದೇಶದಿಂದ ನನ್ನ ಖಾತೆಯಲ್ಲಿರುವ ಹಣವನ್ನು ಬೇರೊಂದು ಖಾತೆಗೆ ವರ್ಗಾಯಿಸಿ, ಸುರಕ್ಷಿತವಾಗಿ ಇಡಲಾಗುವುದು ಎಂದು ಹೇಳಿದ. ಹಾಗಾಗಿ ಆತ ಸೂಚಿಸಿದ ಬ್ಯಾಂಕ್ ಖಾತೆಗಳಿಗೆ ಆರ್‌ಟಿಜಿಎಸ್ ಮೂಲಕ ₹1.77 ಕೋಟಿ ಹಣವನ್ನು ವರ್ಗಾವಣೆ ಮಾಡಿದೆ. ಹಣ ವರ್ಗಾವಣೆ ಬಳಿಕ ಕರೆ ಕಡಿತಗೊಳಿಸಲಾಯಿತು. ವಿಚಾರಣೆ ಮುಗಿದ ಬಳಿಕವೂ ಮರಳಿ ನನ್ನ ಖಾತೆಗೆ ಹಣ ವರ್ಗಾವಣೆ ಮಾಡಲಿಲ್ಲ. ವಂಚನೆಗೆ ಒಳಗಾಗಿರುವುದು ಗೊತ್ತಾಯಿತು' ಎಂದು ದೂರಿನಲ್ಲಿ ಉಲ್ಲೇಖಿಸಿದ್ದಾರೆ.

ಕಳೆದುಕೊಂಡಿರುವ ಹಣವನ್ನು ವಾಪಸ್ ಕೊಡಿಸುವಂತೆ ಹಾಗೂ ವಂಚಕರ ವಿರುದ್ಧ ಕ್ರಮ ಕೈಗೊಳ್ಳುವಂತೆ ದೂರಿನಲ್ಲಿ ಕೋರಿದ್ದಾರೆ.

ಪ್ರಕರಣ ದಾಖಲಿಸಿಕೊಂಡಿರುವ ಪೊಲೀಸರು, ಹಣ ವರ್ಗಾವಣೆಯಾಗಿರುವ ಬ್ಯಾಂಕ್ ದಾಖಲೆಗಳ ವಿವರಗಳನ್ನು ಕಲೆಹಾಕುತ್ತಿದ್ದಾರೆ.

ಕಾರ್ಮಿಕನ ಕೊಲೆ: ಆರೋಪಿ ಸೆರೆ

ಬೆಂಗಳೂರು: ಸುತ್ತಿಗೆಯಿಂದ ಹಲ್ಲೆ ನಡೆಸಿ, ಟೈಲ್ಸ್ ಕಾರ್ಮಿಕರೊಬ್ಬರನ್ನು ಕೊಲೆ ಮಾಡಿ ಪರಾರಿಯಾಗಿದ್ದ ಆರೋಪಿಯನ್ನು ವರ್ತೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬಿಹಾರದ ಸೀತಾರಾಮ್ ಬಂಧಿತ ಕೂಲಿ ಕಾರ್ಮಿಕ. ಕೊಲೆಯಾದ ಜಿತೇಂದ್ರ ಅಲಿಯಾಸ್ ಬಬ್ಲು ಹಾಗೂ ಆರೋಪಿ ಸೀತಾರಾಮ್ ಬಿಹಾರದವರಾಗಿದ್ದು, ಬೆಂಗಳೂರಿನಲ್ಲಿ ಟೈಲ್ಸ್ ಕೆಲಸ ಮಾಡುತ್ತಿದ್ದರು.

'ವರ್ತೂರಿನ ರಾಮಗೊಂಡನಹಳ್ಳಿಯ ಖಾಸಗಿ ಶಾಲೆ ಕಟ್ಟಡದಲ್ಲಿ ಇಬ್ಬರೂ ಕೆಲಸ ಮಾಡುತ್ತಿದ್ದರು. ಈ ವೇಳೆ ವಿಮಲ್ ಗುಟ್ಕಾ ತರುವಂತೆ ಜಿತೇಂದ್ರಗೆ ಆರೋಪಿ ಹೇಳಿದ. ಕಿರಿಯನಾದರೂ ನನಗೆ ಕೆಲಸ ಹೇಳುತ್ತಾನೆಂದು ಸೀತಾರಾಮ್ ಕೋಪಗೊಂಡಿದ್ದ. ಜುಲೈ 28ರಂದು ರಾತ್ರಿ ಇಬ್ಬರೂ ಮದ್ಯ ಸೇವಿಸಿದ್ದಾರೆ. ವಿಮಲ್ ತರುವ ವಿಚಾರಕ್ಕೆ ಗಲಾಟೆ ನಡೆದು, ಆರೋಪಿ ಸುತ್ತಿಗೆಯಿಂದ ತಲೆಗೆ ಹೊಡೆದು, ಕೊಲೆ ಮಾಡಿ ಪರಾರಿಯಾಗಿದ್ದ' ಎಂದು ಪೊಲೀಸರು ತಿಳಿಸಿದ್ದಾರೆ.

'ಮಾರನೆಯ ದಿನ ಕೆಲಸಕ್ಕೆ ಬಂದ ಕಾರ್ಮಿಕರಿಗೆ ಕೊಲೆ ವಿಚಾರ ಗೊತ್ತಾಯಿತು. ಪ್ರಕರಣ ದಾಖಲಿಸಿಕೊಂಡು, ಪರಾರಿಯಾಗಿದ್ದ ಆರೋಪಿಯ ಪತ್ತೆ ಮಾಡಿ, ಬಂಧಿಸಲಾಗಿದೆ' ಎಂದು ಪೊಲೀಸರು ತಿಳಿಸಿದ್ದಾರೆ.

ಅಪರಾಧ ಸುದ್ದಿ

ನಾಯಿ ಮೇಲೆ ಕಾರು ಹರಿಸಿದ ಚಾಲಕ

ಬೆಂಗಳೂರು: ರಸ್ತೆಯಲ್ಲಿ ಮಲಗಿದ್ದ ಬೀದಿ ನಾಯಿಯ ಮೇಲೆ ಕಾರಿನ ಚಕ್ರ ಹರಿಸಿರುವ ಘಟನೆ ಎಚ್‌ಎಎಲ್ ಮೂರನೇ ಹಂತದ ಬಿಡಿಎ ಬಡಾವಣೆಯಲ್ಲಿ ನಡೆದಿದೆ. ಈ ಬಗ್ಗೆ ಬಿಡಿಎ ಬಡಾವಣೆಯ ನಿವಾಸಿ ಅಭಿಜಿತ್ ದಾಸ್ ಅವರು ಜೀವನ್ ಬಿಮಾನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ.

'ಆಗಸ್ಟ್ 3ರಂದು ಬಿಡಿಎ ಬಡಾವಣೆಯ ಎರಡನೇ ಕ್ರಾಸ್ ಬಳಿಯ ಬೇಕರಿ ಮುಂಭಾಗದಲ್ಲಿ ಮಲಗಿದ್ದ ನಾಯಿಯ ಮೇಲೆ ಕಾರಿನ ಚಾಲಕ ಉದ್ದೇಶಪೂರ್ವಕವಾಗಿ ಚಕ್ರ ಹರಿಸಿ, ಅದರ ಸಾವಿಗೆ ಕಾರಣರಾಗಿದ್ದಾರೆ. ಬೀದಿ ನಾಯಿ ಸಾವಿಗೆ ಕಾರಣರಾದ ಅವರನ್ನು ಕೂಡಲೇ ಬಂಧಿಸಿ, ಕಾನೂನು ಕ್ರಮ ಕೈಗೊಳ್ಳುವಂತೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

ರಮ್ಯಾಗೆ ಅಶ್ಲೀಲ ಸಂದೇಶ: ಐ.ಪಿ ವಿಳಾಸ ಪತ್ತೆ

ಪ್ರಜಾವಾಣಿ ವಾರ್ತೆ


ನಟಿ ರಮ್ಯಾ

ಬೆಂಗಳೂರು: ನಟಿ, ಮಾಜಿ ಸಂಸದೆ ರಮ್ಯಾ ಅವರಿಗೆ ಸಾಮಾಜಿಕ ಜಾಲತಾಣದಲ್ಲಿ ಅಶ್ಲೀಲ ಹಾಗೂ ಬೆದರಿಕೆ ಸಂದೇಶ ಕಳುಹಿಸಿದ್ದ ಪ್ರಕರಣ ಸಂಬಂಧ ತನಿಖೆ ತೀವ್ರಗೊಳಿಸಿರುವ ಸಿಸಿಬಿ ಪೊಲೀಸರು, 47 ಮಂದಿಯ ಐ.ಪಿ ವಿಳಾಸಗಳನ್ನು ಪತ್ತೆ ಹಚ್ಚಿದ್ದಾರೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಸಿಸಿಬಿ ಪೊಲೀಸರು 15 ಮಂದಿಯನ್ನು ಗುರುತಿಸಿದ್ದು, ಈ ಪೈಕಿ ನಾಲ್ವರು ಆರೋಪಿಗಳನ್ನು ಬಂಧಿಸಿ, ವಿಚಾರಣೆಗೆ ಒಳಪಡಿಸಿದ್ದಾರೆ. ಪ್ರಕರಣಕ್ಕೆ ಸಂಬಂಧಿಸಿದಂತೆ ರಮ್ಯಾ ಅವರಿಂದಲೂ ಪೊಲೀಸರು ಮಾಹಿತಿ ಕಲೆಹಾಕಿದ್ದಾರೆ.

ಬಳ್ಳಾರಿ, ಚಿತ್ರದುರ್ಗ, ಬೆಂಗಳೂರು, ಕೋಲಾರ ಸೇರಿ ವಿವಿಧ ಜಿಲ್ಲೆಗಳಲ್ಲಿರುವ ಉಳಿದ ಆರೋಪಿಗಳಿಗೆ ಹುಡುಕಾಟ ನಡೆಸಲಾಗುತ್ತಿದೆ. ನಗರದ ಹೊರವಲಯದಲ್ಲಿರುವ ಕೆಲವು ವ್ಯಕ್ತಿಗಳ ಖಾತೆಗಳಿಂದಲೂ ಬೆದರಿಕೆ ಸಂದೇಶ ಬಂದಿರುವುದು ಗೊತ್ತಾಗಿದೆ. ಕೆಲವರು ಕ್ಷಮೆ ಕೇಳಿದ್ದಾರೆ. ಮಾಹಿತಿ ಇಲ್ಲದೆ ಸಂದೇಶ ಮಾಡಿರುವುದಾಗಿ ಮತ್ತೆ ಕೆಲವರು ಹೇಳಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಚಿತ್ರದುರ್ಗದ ರೇಣುಕಸ್ವಾಮಿ ಕೊಲೆ ಪ್ರಕರಣದಲ್ಲಿ ದರ್ಶನ್ ಮತ್ತು ಇತರ ಆರೋಪಿಗಳಿಗೆ ಜಾಮೀನು ನೀಡಿದ್ದ ಕರ್ನಾಟಕ ಹೈಕೋರ್ಟ್ ಕ್ರಮಕ್ಕೆ ಸುಪ್ರೀಂ ಕೋರ್ಟ್ ಛೀಮಾರಿ ಹಾಕಿತ್ತು. ಜಾಮೀನಿನ ಮೇಲಿನ ಆದೇಶವನ್ನು ಕಾಯ್ದಿರಿಸಿದೆ. ಈ ಬೆಳವಣಿಗೆಯ ನಂತರ ರಮ್ಯಾ ಅವರು ತಮ್ಮ 'ಎಕ್ಸ್' ಖಾತೆಯಲ್ಲಿ ಪೋಸ್ಟ್ ಮಾಡಿ 'ಭಾರತದ ಸಾಮಾನ್ಯ ಜನರಿಗೆ ಸುಪ್ರೀಂ ಕೋರ್ಟ್ ಒಂದು ಭರವಸೆಯ ಕಿರಣ' ಎಂದಿದ್ದರು. 'ರೇಣುಕಸ್ವಾಮಿ ಕುಟುಂಬಕ್ಕೆ ನ್ಯಾಯ ಸಿಗಲಿದೆ ಎನ್ನುವ ನಿರೀಕ್ಷೆಯಲ್ಲಿ' ಎಂದು ಅದರಲ್ಲಿ ಉಲ್ಲೇಖಿಸಿದ್ದರು.

ರಮ್ಯಾ ಅವರು ಈ ಪೋಸ್ಟ್ ಹಾಕಿದ ಬಳಿಕ ಅವರ 'ಇನ್‌ಸ್ಟಾಗ್ರಾಂ' ಖಾತೆಗಳಿಗೆ ಅವಹೇಳನಕಾರಿ ಸಂದೇಶಗಳು ಬಂದಿದ್ದವು. ಸಂದೇಶಗಳ ಸ್ಕ್ರೀನ್‌ಶಾಟ್ ಅನ್ನು ರಮ್ಯಾ ತೆಗೆದುಕೊಂಡು ಪೊಲೀಸರಿಗೆ ದೂರು ನೀಡಿದ್ದರು.

ಗೋವಿಂದ ರೆಡ್ಡಿ ಕೆ–ರೈಡ್ ಎಂ.ಡಿ

ಬೆಂಗಳೂರು: ಮೂಲಸೌಕರ್ಯ ಅಭಿವೃದ್ಧಿ, ಬಂದರು ಒಳನಾಡು ಜಲಸಾರಿಗೆ ಇಲಾಖೆ ಜಂಟಿ ಕಾರ್ಯದರ್ಶಿ ಗೋವಿಂದರೆಡ್ಡಿ ಅವರಿಗೆ ಕೆ–ರೈಡ್ ವ್ಯವಸ್ಥಾಪಕ ನಿರ್ದೇಶಕ ಹುದ್ದೆಯನ್ನು ಹೆಚ್ಚುವರಿಯಾಗಿ ನೀಡಲಾಗಿದೆ.

ಬ್ಯಾಂಕ್ ಗ್ಯಾರಂಟಿ: ₹1.90 ಕೋಟಿ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬ್ಯಾಂಕ್ ಗ್ಯಾರಂಟಿ ಕೊಡಿಸುವುದಾಗಿ ಆಮಿಷವೊಡ್ಡಿ ಗುತ್ತಿಗೆದಾರರೊಬ್ಬರಿಗೆ ₹1.90 ಕೋಟಿ ವಂಚಿಸಲಾಗಿದೆ.

ಗಂಗಾನಗರದ ನಿವಾಸಿ, ಗುತ್ತಿಗೆದಾರ ಹೇಮಂತ್ ಮುದ್ದಪ್ಪ ಅವರ ದೂರು ಆಧರಿಸಿ, ಸಿಸಿಬಿ ಪೊಲೀಸರು ಚೆನ್ನೈನ ಬಲರಾಮನ್, ಅರಸು ಸುಬ್ರಮಣ್ಯಂ ಅಲಿಯಾಸ್ ಸಂಜಯ್ ಎಂಬುವವರ ವಿರುದ್ಧ ಪ್ರಕರಣ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ.

'ಹೇಮಂತ್ ಅವರು 2023ರಲ್ಲಿ ಮೈಸೂರು ಮಹಾನಗರ ಪಾಲಿಕೆ ಹಾಗೂ ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ಘನ ತ್ಯಾಜ್ಯ ಸಂಸ್ಕರಣೆ ಮತ್ತು ವಿಲೇವಾರಿಗಾಗಿ ಕರೆದಿದ್ದ ಟೆಂಡರ್‌ನಲ್ಲಿ ಗುಜರಾತ್‌ನ ಡಿ.ಎಚ್. ಪಟೇಲ್ ಕಂಪನಿಯ ಅಧಿಕೃತ ಪ್ರತಿನಿಧಿಯಾಗಿ ಭಾಗವಹಿಸಿದ್ದರು. ಕಾಮಗಾರಿಯ ಪರವಾನಗಿ ಹಾಗೂ ಕಾರ್ಯಾದೇಶ ಪಡೆಯಲು ಪಾಲಿಕೆಗೆ ಟೆಂಡರ್ ಮೌಲ್ಯದ ಶೇಕಡ 10ರಷ್ಟು ಬ್ಯಾಂಕ್ ಖಾತರಿಯನ್ನು ನೀಡಬೇಕಿತ್ತು. ಇದಕ್ಕಾಗಿ ಆನ್‌ಲೈನ್‌ನಲ್ಲಿ ಗ್ಯಾರಂಟಿ ನೀಡುವ ಖಾಸಗಿ ಬ್ಯಾಂಕ್‌ಗಳ ಕುರಿತು ಹುಡುಕಾಟ ನಡೆಸಿದ್ದರು' ಎಂದು ಪೊಲೀಸರು ತಿಳಿಸಿದ್ದಾರೆ.

'ಯುರೊ ಎಕ್ಸಿಮ್ ಬ್ಯಾಂಕ್‌ನಲ್ಲಿ ಅಗತ್ಯ ಮಾಹಿತಿಗಳನ್ನು ದಾಖಲಿಸಿದ್ದರು. ಈ ಬ್ಯಾಂಕ್‌ನ ಮಾಜಿ ವ್ಯವಸ್ಥಾಪಕ ಎಂದು ಹೇಳಿಕೊಂಡು ಬಲರಾಮನ್, ಹೇಮಂತ್‌ಗೆ ಕರೆ ಮಾಡಿದ್ದ. ಇತ್ತೀಚೆಗೆ ಯುರೊ ಎಕ್ಸಿಮ್ ಬ್ಯಾಂಕ್‌ನ ಕೆಲಸ ಬಿಟ್ಟಿದ್ದು, ಹಲವರಿಗೆ ಬ್ಯಾಂಕ್ ಖಾತರಿ ಒದಗಿಸಿರುವುದಾಗಿ ಹೇಳಿ, ಕೆಲ ಪಿಡಿಎಫ್‌ನ ಪ್ರತಿಗಳನ್ನು ಕಳಿಸಿದ್ದ. ಇದನ್ನು ಹೇಮಂತ್ ನಂಬಿದ್ದರು' ಎಂದು ಹೇಳಿದ್ದಾರೆ.

'ಅರಸು ಸುಬ್ರಮಣ್ಯಂ ಎಂಬಾತನನ್ನು ಆರೋಪಿ ಬಲರಾಮನ್ ಹೇಮಂತ್‌ಗೆ ಪರಿಚಯಿಸಿದ್ದ. ಮೂವರು ಹಲವಾರು ಬಾರಿ ಮೊಬೈಲ್ ಕರೆ ಮಾಡಿ ಮಾತನಾಡಿದ್ದರು. ಎರಡು ಪಾಲಿಕೆಯ ಕಾರ್ಯಾದೇಶಗಳನ್ನು ಪಡೆದುಕೊಳ್ಳಲು ₹8.5 ಕೋಟಿಯ ಬ್ಯಾಂಕ್ ಖಾತರಿ ಕೊಡಿಸಲು ಬಲರಾಮನ್ ಹಾಗೂ ಸಂಜಯ್ ₹2.5 ಕೋಟಿ ಕಮಿಷನ್ ಕೊಡುವಂತೆ ತಿಳಿಸಿದ್ದರು. ಇದಕ್ಕೆ ಒಪ್ಪಿಕೊಂಡು ದೂರುದಾರ ಹಂತ–ಹಂತವಾಗಿ ₹1.90 ಕೋಟಿ ನೀಡಿದರು. ನಂತರ ಪಾಲಿಕೆಗೆ ನೀಡಿದ್ದ ಎರಡು ಬ್ಯಾಂಕ್ ಗ್ಯಾರಂಟಿಗಳು ನಕಲಿ ಎಂದು ಗೊತ್ತಾಗಿದೆ. ಹಣ ವಾಪಸ್ ಕೇಳಿದಾಗ, ಕೊಲೆ ಮಾಡುವುದಾಗಿ ಆರೋಪಿಗಳು ಬೆದರಿಕೆ ಹಾಕಿದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ

₹1.60 ಕೋಟಿ ವಿದ್ಯಾರ್ಥಿವೇತನ ವಿತರಣೆ



ಯಲಹಂಕ: ವಿದ್ಯಾರ್ಥಿಗಳು ಪರೀಕ್ಷೆಗಳಲ್ಲಿ ಅಂಕ ಗಳಿಸುವುದಕ್ಕಿಂತಲೂ ಜೀವನದ ಮೌಲ್ಯಗಳಿಗೆ ಹೆಚ್ಚಿನ ಒತ್ತು ನೀಡಬೇಕಾದುದು ಅತಿ ಮುಖ್ಯ ಎಂದು ಮೈಸೂರು ವಿಶ್ವವಿದ್ಯಾಲಯದ ಕುಲಸಚಿವ(ಮೌಲ್ಯಮಾಪನ) ಪ್ರೊ.ಎನ್.ನಾಗರಾಜ ಅಭಿಪ್ರಾಯಪಟ್ಟರು.

ಶೇಷಾದ್ರಿಪುರ ಪ್ರಥಮದರ್ಜೆ ಕಾಲೇಜಿನಲ್ಲಿ ಆಯೋಜಿಸಿದ್ದ ಪದವಿ ತರಗತಿಗಳ ನೂತನ ವಿದ್ಯಾರ್ಥಿಗಳಿಗೆ 33ನೇ ಪುನರ್ಮನನ ಹಾಗೂ ಮೆರಿಟ್ ವಿದ್ಯಾರ್ಥಿವೇತನ ಪ್ರಶಸ್ತಿ ಪ್ರದಾನ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು.

'ಶಿಕ್ಷಣ ಕ್ಷೇತ್ರದಲ್ಲಿ ಗುರುಗಳ ಪಾತ್ರ ಮಹತ್ತರವಾದುದು. ನಾವು ಜೀವನದಲ್ಲಿ ಎಷ್ಟೇ ಉನ್ನತ ಸ್ಥಾನಕ್ಕೆ ಏರಿ, ಏನೇ ಸಾಧನೆ ಮಾಡಿದ್ದರೂ ಅದಕ್ಕೆಲ್ಲಾ ಗುರುಗಳ ಪಾಠ ಮತ್ತು ಪರಿಶ್ರಮವೇ ಕಾರಣ' ಎಂದರು.

ಶಿಕ್ಷಣ ತಜ್ಞ ವೂಡೆ.ಪಿ.ಕೃಷ್ಣ ಮಾತನಾಡಿ, 'ಪ್ರತಿಭೆಯನ್ನು ಗುರುತಿಸಿ ಪ್ರೋತ್ಸಾಹಿಸುವ ಕಾರ್ಯವನ್ನು ಶೇಷಾದ್ರಿಪುರ ಶಿಕ್ಷಣ ಸಂಸ್ಥೆ ಹಿಂದಿನಿಂದಲೂ ನಡೆಸಿಕೊಂಡು ಬಂದಿದೆ. ಈ ವರ್ಷ ಶೇಷಾದ್ರಿಪುರ ಸಮೂಹ ಶಿಕ್ಷಣ ಸಂಸ್ಥೆಗಳಲ್ಲಿ ಅಧ್ಯಯನ ಮಾಡಿ ಪಿಯು ಪರೀಕ್ಷೆಯಲ್ಲಿ ಅತ್ಯುನ್ನತ ಅಂಕಗಳಿಸಿದ ವಿದ್ಯಾರ್ಥಿಗಳಿಗೆ ಒಟ್ಟು ₹1.60 ಕೋಟಿ ಮೆರಿಟ್ ವಿದ್ಯಾರ್ಥಿವೇತನ ವಿತರಿಸಲಾಗಿದೆ' ಎಂದು ತಿಳಿಸಿದರು.

ಶೇಷಾದ್ರಿಪುರ ಶಿಕ್ಷಣದತ್ತಿಯ ಉಪಾಧ್ಯಕ್ಷ ಟಿ.ಎಸ್.ಹೆಂಜಾರಪ್ಪ, ಸಹ ಕಾರ್ಯದರ್ಶಿ ಎಂ.ಎಸ್. ನಟರಾಜ್, ಧರ್ಮದರ್ಶಿ ಅಶೋಕ್, ಆಂತರಿಕ ಗುಣಮಟ್ಟ ಭರವಸೆ ಕೋಶದ (ಐಕ್ಯೂಎಸಿ)ಸಮನ್ವಯಾಧಿಕಾರಿ ಎಂ.ಎಲ್.ಅಶೋಕ್, ಪ್ರಾಂಶುಪಾಲ ಎಸ್.ಎನ್.ವೆಂಕಟೇಶ್, ಸ್ಫೂರ್ತಿ ಸಾಂಸ್ಕೃತಿಕ ಸಮಿತಿಯ ಸಂಚಾಲಕ ಪ್ರೊ.ಸಿದ್ದಲಿಂಗಸ್ವಾಮಿ.ಎಚ್.ಎಂ ಮತ್ತಿತರರು ಉಪಸ್ಥಿತರಿದ್ದರು.


ಕರ್ನಾಟಕ ಮಹಿಳಾ ಯಕ್ಷಗಾನ ಸಂಸ್ಥೆಯು ಇತ್ತೀಚೆಗೆ ನಗರದಲ್ಲಿ ಆಯೋಜಿಸಿದ್ದ 'ಮಹಿಳಾ ಉತ್ಸವ–2025'ರಲ್ಲಿ ಸಂಸ್ಥೆಯ ಮುಖ್ಯಸ್ಥೆ ಗೌರಿ ಕೆ. ಹಾಗೂ ಯಕ್ಷಗಾನ ಕಲಾವಿದರು ಪಾಲ್ಗೊಂಡಿದ್ದರು

368 ಮರಗಳ ಪಾರಂಪರಿಕ ತಾಣ

ಬೆಂಗಳೂರು: ಕಂಟೋನ್ಮೆಂಟ್ ರೈಲ್ವೆ ಕಾಲೊನಿಯಲ್ಲಿರುವ 368 ಮರಗಳಿರುವ ಪ್ರದೇಶವನ್ನು ಜೀವವೈವಿಧ್ಯ ಪಾರಂಪರಿಕ ತಾಣ ಎಂದು ಘೋಷಿಸಲು ಕರ್ನಾಟಕ ಜೀವವೈವಿಧ್ಯ ಮಂಡಳಿ ನಿರ್ಧರಿಸಿದೆ.

ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಅಧ್ಯಕ್ಷತೆಯಲ್ಲಿ ಜೂನ್ 25ರಂದು ನಡೆದ ವಿಶೇಷ ಸಭೆಯಲ್ಲಿ 'ಕಂಟೋನ್ಮೆಂಟ್ ರೈಲ್ವೆ ಕಾಲೊನಿಯ ಆವರಣದಲ್ಲಿರುವ ಸುಮಾರು ಎಂಟು ಎಕರೆಯಲ್ಲಿ 368 ವಿವಿಧ ಜಾತಿಯ ಮರಗಳ ಕುರಿತು ಚರ್ಚಿಸಿ, ಜೀವ ವೈವಿಧ್ಯ ಕಾಯ್ದೆ–2002 ಮತ್ತು ಕರ್ನಾಟಕ ಜೀವ ವೈವಿಧ್ಯ ನಿಯಮಗಳು–2005ರ ನಿಯಮ 20ರಡಿ ಆ ಪ್ರದೇಶವನ್ನು ಜೀವವೈವಿಧ್ಯ ಪಾರಂಪರಿಕ ತಾಣ ಎಂದು ಘೋಷಿಸಲು ನಿರ್ಧರಿಸಲಾಯಿತು' ಎಂದು ಜೀವವೈವಿಧ್ಯ ಮಂಡಳಿ ಸದಸ್ಯ ಕಾರ್ಯದರ್ಶಿ ತಿಳಿಸಿದ್ದಾರೆ.

ಈ ಪ್ರದೇಶದಲ್ಲಿರುವ ಮರಗಳು, ಗಿಡಗಳು, ಪೊದೆಗಳು, ಪಕ್ಷಿ ಮತ್ತು ಪ್ರಾಣಿಗಳ ಸಮೀಕ್ಷೆ ಮಾಡಲು ಕ್ರಮ ಕೈಗೊಳ್ಳಲಾಗಿದೆ. ಈ ಪ್ರದೇಶವನ್ನು ಜೀವವೈವಿಧ್ಯ ಪಾರಂಪರಿಕ ತಾಣವನ್ನಾಗಿ ಘೋಷಿಸಲು ಕ್ರಮ ಕೈಗೊಳ್ಳಲಾಗುತ್ತಿದೆ. ಈ ಬಗ್ಗೆ ಸಾರ್ವಜನಿಕ ಪ್ರಕಟಣೆ ಹೊರಡಿಸಿದ್ದು, ಆಗಸ್ಟ್ 30ರೊಳಗೆ ಆಕ್ಷೇಪಣೆ, ಸಲಹೆಗಳಿದ್ದರೆ ನೀಡಬಹುದು ಎಂದು ಹೇಳಿದ್ದಾರೆ.

'ಕಂಟೋನ್ಮೆಂಟ್ ರೈಲ್ವೆ ಕಾಲೊನಿಯಲ್ಲಿ ವಾಣಿಜ್ಯ ಉದ್ದೇಶಕ್ಕಾಗಿ 368 ಮರಗಳನ್ನು ಕಡಿಯುವುದನ್ನು ವಿರೋಧಿಸಿ ಪರಿಸರ ಕಾರ್ಯಕರ್ತರು, ವಿಶ್ವ ಪರಿಸರ ದಿನದಂದು ಮರಗಳಿಗೆ 'ವೃಕ್ಷ ರಕ್ಷಾ ಬಂಧನ'ವಾಗಿ ಕೆಂಪು ಪಟ್ಟಿಯನ್ನು ಕಟ್ಟಿದ್ದರು.

'ಮರಗಳನ್ನು ಕಡಿಯಲು ಅವಕಾಶ ನೀಡದೆ, ಪಾರಂಪರಿಕ ಮರಗಳನ್ನು ರಕ್ಷಿಸಬೇಕು' ಎಂದು 'ಪರಿಸರಕ್ಕಾಗಿ ನಾವು' ಸಂಘಟನೆ ಅಧ್ಯಕ್ಷ ಎ.ಟಿ. ರಾಮಸ್ವಾಮಿ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ, ಅರಣ್ಯ ಸಚಿವ ಈಶ್ವರ ಬಿ. ಖಂಡ್ರೆ ಅವರಲ್ಲದೆ, ಪ್ರಧಾನಿ ನರೇಂದ್ರ ಮೋದಿ, ರೈಲ್ವೆ ಸಚಿವ ಅಶ್ವಿನಿ ವೈಷ್ಣವ್, ರೈಲ್ವೆ ಖಾತೆ ರಾಜ್ಯ ಸಚಿವ ವಿ. ಸೋಮಣ್ಣ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೂ ಪತ್ರ ಬರೆದಿದ್ದರು.

ಲಾಲ್‌ಬಾಗ್: ಫಲಪುಷ್ಪ ಪ್ರದರ್ಶನ ನಾಳೆಯಿಂದ

ರಾಣಿ ಚನ್ನಮ್ಮ, ಸಂಗೊಳ್ಳಿ ರಾಯಣ್ಣ ವಿಷಯಾಧಾರಿತ ಪ್ರದರ್ಶನ ಆಯೋಜನೆ

ಪ್ರಜಾವಾಣಿ ವಾರ್ತೆ


ಲಾಲ್‌ಬಾಗ್‌ನ ಗಾಜಿನ ಮನೆಯಲ್ಲಿ ನಡೆಯಲಿರುವ ಫಲಪುಷ್ಪ ಪ್ರದರ್ಶನದಲ್ಲಿ ಕಿತ್ತೂರು ಕೋಟೆಯ ಮಾದರಿಗೆ ಕಲಾವಿದರು ಹೂವುಗಳನ್ನು ಜೋಡಿಸಿದರು ಪ್ರಜಾವಾಣಿ ಚಿತ್ರ: ರಂಜು ಪಿ.

ಬೆಂಗಳೂರು: 'ವೀರರಾಣಿ ಕಿತ್ತೂರು ಚನ್ನಮ್ಮ ಮತ್ತು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ವಿಷಯ ಆಧಾರಿತ ಸ್ವಾತಂತ್ರ್ಯೋತ್ಸವ ಫಲಪುಷ್ಪ ಪ್ರದರ್ಶನವು ಲಾಲ್‌ಬಾಗ್‌ನಲ್ಲಿ ಆಗಸ್ಟ್ 7ರಿಂದ 18ರವರೆಗೆ ನಡೆಯಲಿದೆ' ಎಂದು ತೋಟಗಾರಿಕೆ ಇಲಾಖೆಯ ಕಾರ್ಯದರ್ಶಿ ಶಮ್ಲಾ ಇಕ್ಬಾಲ್ ತಿಳಿಸಿದರು.

ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಈ ವರ್ಷ ನಡೆಯುವ ಫಲಪುಷ್ಪ ಪ್ರದರ್ಶನದಲ್ಲಿ ವೀರರಾಣಿ ಕಿತ್ತೂರು ಚನ್ನಮ್ಮ ಮತ್ತು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಅವರಿಗೆ ಪುಷ್ಪ ಗೌರವ ಸಲ್ಲಿಸಲು ತಯಾರಿ ಮಾಡಿಕೊಳ್ಳಲಾಗುತ್ತಿದೆ. ರಾಣಿ ಚನ್ನಮ್ಮ ಮತ್ತು ಸಂಗೊಳ್ಳಿ ರಾಯಣ್ಣರ ಜೀವನ, ಸಾಧನೆ, ಹೋರಾಟದ ಹಾದಿಯನ್ನು ಪುಷ್ಪಗಳಲ್ಲಿ ಅನಾವರಣಗೊಳಿಸಲಾಗುತ್ತಿದೆ. ಕಿತ್ತೂರಿನ ಐತಿಹಾಸಿಕ ಕೋಟೆ ಹೂವುಗಳಲ್ಲಿ ಅನಾವರಣಗೊಳ್ಳಲಿದೆ. ಈ ಬಾರಿಯ ಫಲಪುಷ್ಪ ಪ್ರದರ್ಶನಕ್ಕೆ 10 ಲಕ್ಷಕ್ಕೂ ಹೆಚ್ಚು ಜನರು ಭೇಟಿ ನೀಡುವ ನಿರೀಕ್ಷೆ ಇದೆ' ಎಂದು ಮಾಹಿತಿ ನೀಡಿದರು.

'ತೋಟಗಾರಿಕೆ ಇಲಾಖೆ ಹಮ್ಮಿಕೊಂಡಿರುವ 218ನೇ ಫಲಪುಷ್ಪ ಪ್ರದರ್ಶನಕ್ಕೆ ವೇದಿಕೆ ಸಜ್ಜುಗೊಂಡಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಗುರುವಾರ (ಆಗಸ್ಟ್ 7) ಬೆಳಿಗ್ಗೆ 10ಕ್ಕೆ ಪ್ರದರ್ಶನವನ್ನು ಉದ್ಘಾಟಿಸಲಿದ್ದಾರೆ. ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್, ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಭಾಗವಹಿಸಲಿದ್ದು, ಚಿಕ್ಕಪೇಟೆ ವಿಧಾನಸಭಾ ಕ್ಷೇತ್ರದ ಶಾಸಕ ಉದಯ್ ಬಿ. ಗರುಡಾಚಾರ್ ಅಧ್ಯಕ್ಷತೆ ವಹಿಸಲಿದ್ದಾರೆ' ಎಂದು ತಿಳಿಸಿದರು.

ತೋಟಗಾರಿಕೆ ಇಲಾಖೆ ನಿರ್ದೇಶಕ ಡಿ.ಎಸ್. ರಮೇಶ್ ಮಾತನಾಡಿ, 'ಗಾಜಿನ ಮನೆಯ ಕೇಂದ್ರ ಭಾಗದಲ್ಲಿ ರಾಣಿ ಚನ್ನಮ್ಮ ಹಾಗೂ ಸಂಗೊಳ್ಳಿ ರಾಯಣ್ಣ ಅವರ ಕಾರ್ಯಕ್ಷೇತ್ರವಾಗಿದ್ದ ಕಿತ್ತೂರು ಕೋಟೆ ಮಾದರಿಯು ಪುಷ್ಪಗಳಲ್ಲಿ ಅನಾವರಣಗೊಳ್ಳಲಿದೆ. ಇದು 18 ಅಡಿ ಎತ್ತರ 34 ಅಡಿ ಸುತ್ತಳತೆಯನ್ನು ಹೊಂದಿದೆ. ಒಂದು ಬಾರಿಗೆ ಹಸಿರು, ಬಿಳಿ, ಕಂದು ಹಾಗೂ ಗುಲಾಬಿ ವರ್ಣದ 1.5 ಲಕ್ಷ ಡಚ್ ಗುಲಾಬಿ ಹೂವು, 1.5 ಲಕ್ಷ ಹೈಬ್ರೀಡ್ ಸೇವಂತಿಗೆ ಹಾಗೂ 30 ಸಾವಿರ ಕೋಲ್ಕತ್ತ ಸೇವಂತಿಗೆ ಹೂವುಗಳನ್ನು ಬಳಸಿಕೊಂಡು ಈ ಪರಿಕಲ್ಪನೆ ಸಿದ್ಧಪಡಿಲಾಗುತ್ತಿದೆ. ರಾಣಿ ಚನ್ನಮ್ಮ ಅವರು ಕುದುರೆಯ ಮೇಲೆ ಖಡ್ಗ ಹಿಡಿದು ಕುಳಿತಿರುವ ಹಾಗೂ ಸಂಗೊಳ್ಳಿ ರಾಯಣ್ಣ ಅವರು ಖಡ್ಗ ಹಿಡಿದು ನಿಂತಿರುವ ಬೃಹತ್ ಪ್ರತಿಮೆಗಳು ರಾರಾಜಿಸಲಿವೆ' ಎಂದು ಮಾಹಿತಿ ನೀಡಿದರು.

ಗಾಜಿನ ಮನೆಯ ಕೇಂದ್ರ ಭಾಗದ ಬಲಬದಿಯಲ್ಲಿ ಕೋಟೆ ವಿನ್ಯಾಸ ವರ್ಟಿಕಲ್ ಗಾರ್ಡನ್ ಮಾದರಿ, ರಾಷ್ಟ್ರ ಲಾಂಛನ ಹಾಗೂ ಜಾನಪದ ಕಲಾವಿದರ ಕಲಾಕೃತಿಗಳು ಇರಲಿವೆ. ಎಡಭಾಗದಲ್ಲಿ ಆಲದಮರ, ಅಶ್ವಾರೂಢ ಸಂಗೊಳ್ಳಿ ರಾಯಣ್ಣನ ಪ್ರತಿಮೆ, ರಾಯಣ್ಣ ಹುತಾತ್ಮರಾದ ಸನ್ನಿವೇಶ ಇರಲಿದೆ. ರಾಣಿ ಚನ್ನಮ್ಮನವರ ಐಕ್ಯಸ್ಮಾರಕದ ಪುಷ್ಪ ಮಾದರಿ ಕಣ್ಮನ ಸೆಳೆಯಲಿದೆ. ಹಿಂಭಾಗದಲ್ಲಿ ರಾಣಿ ಅಬ್ಬಕ್ಕ ದೇವಿ, ಚೆನ್ನಾ ಭೈರಾದೇವಿ, ಬೆಳವಡಿ ಮಲ್ಲಮ್ಮ, ಕೆಳದಿ ಚನ್ನಮ್ಮ, ವೀರಮ್ಮಾಜಿ, ಒನಕೆ ಓಬವ್ವನವರ ಪ್ರತಿಮೆಗಳು ಇರಲಿವೆ' ಎಂದರು.

ತೋಟಗಾರಿಕೆ ಇಲಾಖೆ ಜಂಟಿ ನಿರ್ದೇಶಕ ಎಂ. ಜಗದೀಶ್, ಉಪ ನಿರ್ದೇಶಕ ಎಚ್.ಟಿ. ಬಾಲಕೃಷ್ಣ ಸುದ್ದಿಗೋಷ್ಠಿಯಲ್ಲಿದ್ದರು.

ಪ್ರವೇಶ ಶುಲ್ಕ ಹೀಗಿದೆ...

ಲಾಲ್‌ಬಾಗ್‌ನ ಎಲ್ಲ ಪ್ರವೇಶ ದ್ವಾರಗಳಲ್ಲಿ ಎಲೆಕ್ಟ್ರಾನಿಕ್ ಟಿಕೆಟ್ ಯಂತ್ರಗಳ ವ್ಯವಸ್ಥೆ ಮಾಡಲಾಗಿದೆ. https:/hasiru.karnataka.gov.in/flowershow/login.aspx ಕೊಂಡಿ ಬಳಸಿ ಆನ್‌ಲೈನ್ ಮೂಲಕ ಟಿಕೆಟ್ ಬುಕ್ಕಿಂಗ್ ಮಾಡಿಕೊಳ್ಳಬಹುದು.

- ₹80 ವಯಸ್ಕರಿಗೆ
- ₹100 ರಜಾ ದಿನಗಳಲ್ಲಿ
- ₹30 ಮಕ್ಕಳಿಗೆ

ಸಮವಸ್ತ್ರ ಧರಿಸಿ ಬರುವ ಶಾಲಾ ವಿದ್ಯಾರ್ಥಿಗಳಿಗೆ ಪ್ರವೇಶ ಉಚಿತ

ಪ್ರದರ್ಶನದ ಸಮಯ: ಬೆಳಿಗ್ಗೆ 6ರಿಂದ ಸಂಜೆ 7ರವರೆಗೆ

ಅಂಕಿ ಅಂಶಗಳು

- **₹3 ಕೋಟಿ** ಫಲಪುಷ್ಪ ಪ್ರದರ್ಶನದ ಒಟ್ಟು ವೆಚ್ಚ
- **10 ಲಕ್ಷ** ಫಲಪುಷ್ಪ ಪ್ರದರ್ಶನಕ್ಕೆ ಭೇಟಿ ನೀಡುವವರ ಅಂದಾಜು ಸಂಖ್ಯೆ
- **136** ಉದ್ಯಾನದಲ್ಲಿ ಅಳವಡಿಸಿರುವ ಸಿ.ಸಿ.ಟಿ.ವಿ ಕ್ಯಾಮೆರಾಗಳು
- **30 ಲಕ್ಷ** ಅಂದಾಜು ಬಳಕೆಯಾಗುವ ಹೂ ಕುಂಡಗಳು, ಪ್ರತ್ಯೇಕಿಸಿದ ಹೂಗಳ ಸಂಖ್ಯೆ

ವಾಹನ ನಿಲುಗಡೆ ಎಲ್ಲಿ?			
	ಹಾಪ್‌ಕಾಮ್ಸ್ ಆವರಣ ಮತ್ತು ಜೆ.ಸಿ. ರಸ್ತೆಯಲ್ಲಿರುವ ಬಿಬಿಎಂಪಿ ಬಹುಮಹಡಿ ವಾಹನ ನಿಲ್ದಾಣ	ಶಾಂತಿನಗರ ಬಸ್ ನಿಲ್ದಾಣದ ಬಹುಮಹಡಿ ವಾಹನ ನಿಲ್ದಾಣ	ಅಲ್ ಅಮೀನ್ ಕಾಲೇಜು ಮೈದಾನ

ಮುಖ್ಯಾಂಶಗಳು

- ಆಗಸ್ಟ್ 7ರಿಂದ 12 ದಿನಗಳ ಕಾಲ ನಡೆಯಲಿರುವ ಫಲಪುಷ್ಪ ಪ್ರದರ್ಶನ
- ಫಲಪುಷ್ಪ ಪ್ರದರ್ಶನಕ್ಕೆ 105 ವಿಧದ ಹೂವುಗಳ ಬಳಕೆ
- ರಾಯಣ್ಣ ಹುತಾತ್ಮರಾದ ಸನ್ನಿವೇಶ ಹೂವುಗಳಲ್ಲಿ ಅನಾವರಣ


ನಗರದ ಉಪ್ಪಾರಪೇಟೆ ಪೊಲೀಸ್ ಠಾಣೆಗೆ ದೂರು ನೀಡಿದ ಬಿಜೆಪಿ ಮುಖಂಡರು

ಕಾಂಪೌಂಡ್ ನೆಲಸಮ ಬಿಜೆಪಿ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಇದ್ದ ಪ್ರಾಚೀನ ಕಾಲದ ತಡೆಗೋಡೆಯನ್ನು (ಕಾಂಪೌಂಡ್) ನೆಲಸಮ ಮಾಡಿರುವುದರ ವಿರುದ್ಧ ಬಿಜೆಪಿಯು ಉಪ್ಪಾರಪೇಟೆ ಪೊಲೀಸ್ ಠಾಣೆಯಲ್ಲಿ ದೂರು ನೀಡಿದೆ.

2024ರ ಲೋಕಸಭಾ ಚುನಾವಣೆಯಲ್ಲಿ ಮತಗಳ್ಳತನ ನಡೆದಿದೆ ಎಂದು ಆರೋಪಿಸಿ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಪ್ರತಿಭಟನೆ ಹಮ್ಮಿಕೊಂಡಿರುವ ಸಲುವಾಗಿ ತಡೆಗೋಡೆಯನ್ನು ನೆಲಸಮ ಮಾಡಿ, ಕಾಂಕ್ರೀಟ್ ರಸ್ತೆ ಮಾಡಿದ ಕಾರ್ಯಕ್ರಮ ಆಯೋಜಕರು ಮತ್ತು ಅಧಿಕಾರಿಗಳ ವಿರುದ್ಧ ಸೂಕ್ತ ಕಾನೂನು ಕ್ರಮ ಜರುಗಿಸಿ ನ್ಯಾಯ ದೊರಕಿಸಿ ಕೊಡಬೇಕು ಎಂದು ದೂರಿನಲ್ಲಿ ಕೋರಲಾಗಿದೆ.

ಅಲ್ಲದೇ, ಪಾರ್ಕಿನಲ್ಲಿ ದೊಡ್ಡ ಮರಗಳನ್ನು ಕಡಿದು ಹಾಕಿ ಪರಿಸರ ನಾಶಪಡಿಸಿದ್ದಾರೆ ಎಂದು ಬಿಬಿಎಂಪಿ ಅರಣ್ಯಾಧಿಕಾರಿಗೆ ದೂರು ಸಲ್ಲಿಸಲಾಯಿತು. ಯಾವುದೇ ರೀತಿಯ ಅಧಿಕೃತ ಪರವಾನಗಿ ಇಲ್ಲದೇ ಆಡಳಿತಾರೂಢ ಪಕ್ಷ ಅಧಿಕಾರ ದುರ್ಬಳಕೆ ಮಾಡಿಕೊಂಡು ಮರಗಳನ್ನು ಕತ್ತರಿಸಿರುವುದು ಕಾನೂನುಬಾಹಿರ ಕೃತ್ಯವಾಗಿದೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

ಶಾಸಕ ಸಿ.ಕೆ.ರಾಮಮೂರ್ತಿ, ಬೆಂಗಳೂರು ಉತ್ತರ ಜಿಲ್ಲಾಧ್ಯಕ್ಷ ಎಸ್. ಹರೀಶ್, ಬೆಂಗಳೂರು ಕೇಂದ್ರ ಜಿಲ್ಲಾಧ್ಯಕ್ಷ ಸಪ್ತಗಿರಿ ಗೌಡ, ಪ್ರಕೋಷ್ಠಗಳ ರಾಜ್ಯ ಸಂಚಾಲಕ ದತ್ತಾತ್ರಿ, ಕಾನೂನು ಪ್ರಕೋಷ್ಠದ ರಾಜ್ಯ ಸಂಚಾಲಕ ವಸಂತ್ ಕುಮಾರ್ ಹಾಗೂ ಪ್ರಮುಖರು ಉಪಸ್ಥಿತರಿದ್ದರು.

ಕಾಲ್ತುಳಿತ: ಡಿಎನ್‌ಎ ಅರ್ಜಿ ವಿಚಾರಣೆ 7ಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೆಂಗಳೂರು ರಾಯಲ್ ಚಾಲೆಂಜರ್ಸ್ (ಆರ್‌ಸಿಬಿ) ವಿಜಯೋತ್ಸವದ ವೇಳೆ ಚಿನ್ನಸ್ವಾಮಿ ಕ್ರೀಡಾಂಗಣದ ಬಳಿ ಕಾಲ್ತುಳಿತದಲ್ಲಿ 11 ಜನ ಮೃತಪಟ್ಟ ಘಟನೆಗೆ ಸಂಬಂಧಿಸಿದಂತೆ ನಿವೃತ್ತ ನ್ಯಾಯಮೂರ್ತಿ ಜಾನ್ ಮೈಕಲ್ ಕುನ್ಹ ವಿಚಾರಣಾ ಆಯೋಗ ಸಲ್ಲಿಸಿರುವ ವರದಿಯನ್ನು ರದ್ದುಗೊಳಿಸಬೇಕು' ಎಂದು ಕೋರಲಾದ ಅರ್ಜಿಯ ವಿಚಾರಣೆಯನ್ನು ಹೈಕೋರ್ಟ್ ಇದೇ 7ಕ್ಕೆ ಮುಂದೂಡಿದೆ.

'ಪ್ರಶ್ನಿಸಲಾಗಿರುವ ನ್ಯಾಯಮೂರ್ತಿ ಕುನ್ಹ ವರದಿಯನ್ನು ರದ್ದುಗೊಳಿಸಬೇಕು' ಎಂದು ಕೋರಿ ಡಿಎನ್‌ಎ ಎಂಟರ್‌ಟೈನ್‌ಮೆಂಟ್ ನೆಟ್‌ವರ್ಕ್ಸ್ ನಿರ್ದೇಶಕ ಸುನಿಲ್ ಮ್ಯಾಥ್ಯೂ ಸಲ್ಲಿಸಿರುವ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಜಯಂತ್ ಬ್ಯಾನರ್ಜಿ ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, 'ನ್ಯಾ. ಕುನ್ಹ ವರದಿಯನ್ನು ಈತನಕ ನಮಗೆ ನೀಡಿಲ್ಲ. ಆದರೆ, ವರದಿಯು ಮಾಧ್ಯಮಗಳಲ್ಲಿ ಸೋರಿಕೆಯಾಗುತ್ತಿದೆ' ಎಂಬ ಅಂಶವನ್ನು ಪುನರುಚ್ಚರಿಸಿದರು. ವಿಚಾರಣೆಯನ್ನು ಇದೇ 7ಕ್ಕೆ ಮುಂದೂಡಲಾಗಿದೆ.

ನರೇಂದ್ರ ಸ್ವಾಮಿ ನೇಮಕ: ಹೈಕೋರ್ಟ್ ನೋಟಿಸ್

ಹೈಕೋರ್ಟ್ ಸುದ್ದಿ

ಬೆಂಗಳೂರು: 'ಮಳವಳ್ಳಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಶಾಸಕ ಪಿ.ಎಂ.ನರೇಂದ್ರಸ್ವಾಮಿ ಅವರನ್ನು ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ (ಕೆಎಸ್‌ಪಿಸಿಬಿ) ಅಧ್ಯಕ್ಷರನ್ನಾಗಿ ನೇಮಕ ಮಾಡಿ ಸಂಪುಟ ದರ್ಜೆ ಸ್ಥಾನಮಾನ ನೀಡಿ ಲಾಭದಾಯಕ ಹುದ್ದೆಗೆ ಅವಕಾಶ ಮಾಡಿಕೊಡಲಾಗಿದೆ' ಎಂದು ಆಕ್ಷೇಪಿಸಿ ಹೈಕೋರ್ಟ್‌ಗೆ ಮತ್ತೊಂದು ಅರ್ಜಿ ಸಲ್ಲಿಸಲಾಗಿದೆ.

ಈ ಸಂಬಂಧ ಹೈಕೋರ್ಟ್ ವಕೀಲ ಎಂ.ಶ್ರೇಯಸ್ ಸಲ್ಲಿಸಿರುವ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ವಿಭು ಬಖ್ರು ನೇತೃತ್ವದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಅರ್ಜಿದಾರರ ಪರ ವಕೀಲರು, 'ಇದೇ ವಿಷಯಕ್ಕೆ ಸಂಬಂಧಿಸಿದಂತೆ ಸಲ್ಲಿಕೆಯಾಗಿರುವ ಇನ್ನಷ್ಟು ಅರ್ಜಿಗಳು ಇದೇ 13ರಂದು ವಿಚಾರಣೆಗೆ ನಿಗದಿಯಾಗಿವೆ. ಹಾಗಾಗಿ, ಈ ಅರ್ಜಿಯಲ್ಲೂ ಪ್ರತಿವಾದಿಗಳಿಗೆ ನೋಟಿಸ್ ಜಾರಿಗೊಳಿಸಿ, ಬೇರೆ ಅರ್ಜಿಗಳೊಂದಿಗೆ ಸೇರ್ಪಡೆ ಗೊಳಿಸಿ ವಿಚಾರಣೆ ನಡೆಸಬೇಕು' ಎಂದು ಕೋರಿದರು. ಇದನ್ನು ಮಾನ್ಯ ಮಾಡಿದ ನ್ಯಾಯಪೀಠ, ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿ, ಅರಣ್ಯ ಇಲಾಖೆ ಪ್ರಧಾನ ಕಾರ್ಯದರ್ಶಿ, ಶಾಸಕ ಪಿ.ಎಂ.ನರೇಂದ್ರ ಸ್ವಾಮಿ, ಮಾಲಿನ್ಯ ನಿಯಂತ್ರಣ ಮಂಡಳಿ ಸದಸ್ಯ ಕಾರ್ಯದರ್ಶಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿ ವಿಚಾರಣೆ ಮುಂದೂಡಿತು.

ಪಿ.ಎಂ.ನರೇಂದ್ರ ಸ್ವಾಮಿ ಅವರನ್ನು ಕೆಎಸ್‌ಪಿಸಿಬಿ ಅಧ್ಯಕ್ಷರನ್ನಾಗಿ ನೇಮಕ ಮಾಡಿ ಅರಣ್ಯ ಇಲಾಖೆ 2025ರ ಫೆಬ್ರುವರಿ 5ರಂದು ಅಧಿಸೂಚನೆ ಹೊರಡಿಸಿತ್ತು. ಅವರಿಗೆ ಸಂಪುಟ ದರ್ಜೆ ಸ್ಥಾನಮಾನ ನೀಡಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಏಪ್ರಿಲ್ 29ರಂದು ಆದೇಶಿಸಿತ್ತು.

ಪ್ರಧಾನಿಗೆ ಆಹ್ವಾನ ನೀಡಿದ್ದು ನಾವೇ: ಡಿಕೆಶಿ

'ನಮ್ಮ ಮೆಟ್ರೊ ಹಳದಿ ಮಾರ್ಗ: ಜನರ ಸೇವೆ ಮುಖ್ಯವೇ ಹೊರತು ಕ್ರೆಡಿಟ್ ರಾಜಕಾರಣವಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಮ್ಮ ಮೆಟ್ರೊ ಹಳದಿ ಮಾರ್ಗ ಉದ್ಘಾಟನೆ ಮಾಡಿ ಎಂದು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಮುಖ್ಯಮಂತ್ರಿ ಹಾಗೂ ನಾನು ಮನವಿ ಮಾಡಿದ್ದೆವು. ಈ ವಿಷಯದಲ್ಲಿ ಜನರ ಸೇವೆ ಮುಖ್ಯವೇ ಹೊರತು ಕ್ರೆಡಿಟ್ ರಾಜಕಾರಣವಲ್ಲ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

ನಮ್ಮ ಮೆಟ್ರೊ ಹಳದಿ ಮಾರ್ಗದಲ್ಲಿ ಆರ್.ವಿ. ರಸ್ತೆ ನಿಲ್ದಾಣದಿಂದ ಬೊಮ್ಮಸಂದ್ರದವರೆಗೆ ಮಂಗಳವಾರ ಪರಿಶೀಲಿಸಿದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ಪ್ರಧಾನಿಯವರು ನಮ್ಮ ಆಹ್ವಾನಕ್ಕೆ ಸ್ಪಂದಿಸಿ ಸಮಯ ನೀಡಿದ್ದು, ಐಐಎಂಬಿಯಲ್ಲಿನ ಸಭಾಂಗಣದಲ್ಲಿ ಆಗಸ್ಟ್ 10ರಂದು ಹಳದಿ ಮಾರ್ಗಕ್ಕೆ ಚಾಲನೆ ನೀಡಲಿದ್ದಾರೆ. ₹7,610 ಕೋಟಿ ವೆಚ್ಚದಲ್ಲಿ ನಿರ್ಮಾಣವಾಗಿರುವ 19.15 ಕಿಲೋಮೀಟರ್ ಉದ್ದದ ಮೆಟ್ರೊ ಹಳದಿ ಮಾರ್ಗ 16 ನಿಲ್ದಾಣಗಳನ್ನು ಹೊಂದಿದೆ. ಪ್ರಾರಂಭದಲ್ಲಿ 25 ನಿಮಿಷಕ್ಕೆ ಒಂದು ರೈಲು ಸಂಚರಿಸಲಿದೆ' ಎಂದು ಮಾಹಿತಿ ನೀಡಿದರು.

'ಮೆಟ್ರೊ ರೈಲಿನಲ್ಲಿ ಪ್ರಧಾನಿ, ಮುಖ್ಯಮಂತ್ರಿ, ಸ್ಥಳೀಯ ಶಾಸಕರು ಅಂದು ಪ್ರಯಾಣ ಮಾಡಲಿದ್ದಾರೆ. ಡಬಲ್ ಡೆಕರ್ ಯೋಜನೆ ಭೂಸ್ವಾಧೀನಕ್ಕೆ ಒಂದಷ್ಟು ಅನುದಾನದ ಕೊರತೆಯಿದೆ. ಈ ಬಗ್ಗೆ ಪ್ರಧಾನಿಗೆ ಮನವಿ ಸಲ್ಲಿಸಲಾಗುವುದು' ಎಂದರು.

'ಮೆಟ್ರೊ ಕೇವಲ ಕೇಂದ್ರ ಸರ್ಕಾರದ ಯೋಜನೆಯಲ್ಲ. ಇದರಲ್ಲಿ ರಾಜ್ಯದ ಪಾಲುದಾರಿಕೆಯೂ ಇದೆ. ಅವರ ಕಡೆಯಿಂದ ಅಧ್ಯಕ್ಷರಿದ್ದರೆ, ನಮ್ಮ ಕಡೆಯಿಂದ ವ್ಯವಸ್ಥಾಪಕ ನಿರ್ದೇಶಕರು ಇರುತ್ತಾರೆ. ಇಲ್ಲಿ ಯಾರಿಗೂ ಕಿವಿ ಮೇಲೆ ಹೂ ಇಲ್ಲ. ನಾವು ಜನರ ಸೇವೆ ಮಾಡುತ್ತಿದ್ದೇವೆ. ಜವಾಬ್ದಾರಿಯುತ ಸ್ಥಾನದಲ್ಲಿರುವ ನಾವು, ನಮ್ಮ ಜವಾಬ್ದಾರಿ ನಿರ್ವಹಣೆ ಮಾಡಿದ್ದೇವೆ. ಎಲ್ಲದರಲ್ಲೂ ತಪ್ಪು ಹುಡುಕಿ, ಗಲಾಟೆ ಮಾಡುವ ಸಂಸದರು ಅನುದಾನ ಕೊಡಿಸಲಿ. ಒಬ್ಬರೂ ಅನುದಾನದ ಬಗ್ಗೆ ಮಾತನಾಡುವುದಿಲ್ಲ. ಬರೀ ತಪ್ಪು ಕಂಡುಹಿಡಿದು ಮಾತನಾಡುತ್ತಾರೆ' ಎಂದು ಹೇಳಿದರು.

'ಸುರಕ್ಷತೆಗೆ ಆದ್ಯತೆ ನೀಡಲಾಗಿದೆ. ಹೀಗಾಗಿ ಅನನುಭವಿಗಳ ಮಾತಿಗೆ ತಲೆ ಕೆಡಿಸಿಕೊಳ್ಳುವುದಿಲ್ಲ. ಹಳದಿ ಮಾರ್ಗದಲ್ಲಿ ಕಾರ್ಯಾಚರಣೆಗೆ ಜುಲೈ 31ರಂದು ಪ್ರಮಾಣಪತ್ರ ಲಭಿಸಿದೆ. ತೇಜಸ್ವಿ ಸೂರ್ಯ ಆತುರದಲ್ಲಿರುವ ಹುಡುಗ, ಅನುಭವವಿಲ್ಲ. ಈ ಕೆಲಸಗಳನ್ನು ಆತುರದಲ್ಲಿ ಮಾಡಲು ಆಗುವುದಿಲ್ಲ' ಎಂದರು.

ನಗರಾಭಿವೃದ್ಧಿ ಸಚಿವ ಬಿ.ಎಸ್. ಸುರೇಶ್, ಬಿಡಿಎ ಅಧ್ಯಕ್ಷ ಹ್ಯಾರಿಸ್, ಶಾಸಕರಾದ ಎಂ. ಕೃಷ್ಣಪ್ಪ, ಸಿ.ಕೆ. ರಾಮಮೂರ್ತಿ, ಸತೀಶ್ ರೆಡ್ಡಿ ಉಪಸ್ಥಿತರಿದ್ದರು.

ಮುಖ್ಯಾಂಶಗಳು

- ಗಲಾಟೆ ಮಾಡುವ ಸಂಸದರು ಅನುದಾನ ಕೊಡಿಸಲಿ
- ತೇಜಸ್ವಿ ಸೂರ್ಯ ಆತುರದಲ್ಲಿರುವ ಹುಡುಗ, ಅನುಭವವಿಲ್ಲ
- ಮೆಟ್ರೊ ಹಳದಿ ಮಾರ್ಗ: ಪ್ರಮಾಣಪತ್ರ ಸಿಕ್ಕಿದೆ


ಡಿ.ಕೆ. ಶಿವಕುಮಾರ್ ಹಾಗೂ ಬಿ.ಎಸ್. ಸುರೇಶ್ ಅವರು ದ್ವಿಚಕ್ರ ವಾಹನದಲ್ಲಿ ಹೆಬ್ಬಾಳ ಜಂಕ್ಷನ್‌ನಲ್ಲಿ ಹೊಸದಾಗಿ ನಿರ್ಮಾಣವಾಗಿರುವ ಮೇಲ್ಸೇತುವೆಯಲ್ಲಿ ಸಂಚರಿಸಿದರು

'ಹೆಬ್ಬಾಳ ಜಂಕ್ಷನ್‌ನಲ್ಲಿ ಹೊಸ ಸುರಂಗ ರಸ್ತೆ'

'ಹೆಬ್ಬಾಳ– ನಾಗವಾರ ಕಡೆಯಿಂದ ಎಸ್ಟೀಮ್ ಮಾಲ್‌ನಿಂದ ಕೃಷಿ ವಿಶ್ವವಿದ್ಯಾಲಯವರೆಗೆ 1.5 ಕಿ.ಮೀ. ಸುರಂಗ ರಸ್ತೆಯನ್ನು ನಿರ್ಮಿಸಲಾಗುತ್ತದೆ' ಎಂದು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹೇಳಿದರು.

'ಈ ಯೋಜನೆ ಸಚಿವ ಸಂಪುಟದ ಮುಂದೆ ಬರಲಿದೆ. ಮುಖ್ಯ ಸುರಂಗ ರಸ್ತೆ ಬೇರೆ, ಈ ಹೊಸ ಸುರಂಗ ರಸ್ತೆ ಬೇರೆ. ಇದನ್ನು ಎರಡು ವರ್ಷದಲ್ಲಿ ಪೂರ್ಣಗೊಳಿಸಬೇಕು ಎಂದು ಬಿ–ಸ್ಮೈಲ್ ಎಂಜಿನಿಯರ್‌ಗಳಿಗೆ ತಿಳಿಸಲಾಗಿದೆ' ಎಂದರು.

'ಹೆಬ್ಬಾಳ ಜಂಕ್ಷನ್‌ನಲ್ಲಿ ಕೆ.ಆರ್. ಪುರದಿಂದ ಮೇಖ್ರಿ ವೃತ್ತದ ಕಡೆಗಿನ ಮೇಲ್ಸೇತುವೆಯನ್ನು ಆಗಸ್ಟ್ 15ರೊಳಗೆ ಮುಖ್ಯಮಂತ್ರಿಯವರು ಉದ್ಘಾಟಿಸಲಿದ್ದಾರೆ. ಆ ನಂತರ, ಇನ್ನೊಂದು ಭಾಗದ ಮೇಲ್ಸೇತುವೆ ನಿರ್ಮಿಸಲಾಗುವುದು' ಎಂದು ತಿಳಿಸಿದರು.

ಕಾಲೇಜು ಶುಲ್ಕ ವರ್ಗಾವಣೆಗೆ ಪೋರ್ಟಲ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೀಟು ಹಂಚಿಕೆ ವೇಳೆ ಸಂಗ್ರಹಿಸಿದ ಶುಲ್ಕವನ್ನು ವಿದ್ಯಾರ್ಥಿಗಳು ಪ್ರವೇಶ ಪಡೆದ ಕಾಲೇಜುಗಳಿಗೆ ಒಂದೇ ಕಂತಿನಲ್ಲಿ (ಶೇ 100) ಪಾವತಿಸಲು ಕರ್ನಾಟಕ ಪರೀಕ್ಷಾ ಪ್ರಾಧಿಕಾರ (ಕೆಇಎ) ಮುಂದಾಗಿದೆ.

ಸೀಟು ಹಂಚಿಕೆ ವೇಳೆ ವಿದ್ಯಾರ್ಥಿಗಳು ಯಾವ ಕಾಲೇಜು ಹಾಗೂ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೋ, ಆ ಕಾಲೇಜು ಹಾಗೂ ಕೋರ್ಸ್‌ಗಳಿಗೆ ನಿಗದಿ ಮಾಡಿರುವ ಮೊತ್ತವನ್ನು ಕೆಇಎ ಖಾತೆಗೆ ಜಮಾ ಮಾಡುತ್ತಾರೆ. ನಂತರವೇ ಸೀಟು ಖಚಿತತೆಯ ಪತ್ರ ಡೌನ್‌ಲೋಡ್ ಮಾಡಿಕೊಂಡು ಆಯಾ ಕಾಲೇಜುಗಳಿಗೆ ಪ್ರವೇಶ ಪಡೆಯುತ್ತಾರೆ. ಪ್ರವೇಶ ಖಚಿತಪಡಿಸಿಕೊಂಡ ನಂತರ ಶೇ 80ರಷ್ಟು ಹಣವನ್ನು ಆಯಾ ಕಾಲೇಜುಗಳ ಖಾತೆಗೆ ವರ್ಗಾವಣೆ ಮಾಡಲಾಗುತ್ತಿತ್ತು. ನಂತರ ಆಯಾ ವಿಶ್ವವಿದ್ಯಾಲಯಗಳು ಪ್ರವೇಶ ಖಾತ್ರಿಪಡಿಸಿದ ನಂತರ ಉಳಿದ ಶೇ 20ರಷ್ಟು ಮೊತ್ತವನ್ನು ಬಿಡುಗಡೆ ಮಾಡಲಾಗುತ್ತಿತ್ತು.

ಕಾಲೇಜುಗಳಿಗೆ ಶುಲ್ಕ ಪಾವತಿಯ ವಿಳಂಬ ತಪ್ಪಿಸಲು ಕೆಇಎ ಹೊಸ ಕಾಲೇಜು ಪೋರ್ಟಲ್ ಸಿದ್ಧಪಡಿಸಿದೆ. ಮೊದಲ ಸುತ್ತು ಸೇರಿದಂತೆ ವಿವಿಧ ಸುತ್ತುಗಳಲ್ಲಿ ಸೀಟು ಪಡೆದ ವಿದ್ಯಾರ್ಥಿಗಳು ಕಾಲೇಜುಗಳಿಗೆ ಪ್ರವೇಶ ಪಡೆಯುತ್ತಿದ್ದಂತೆ ಪೋರ್ಟಲ್ ಮೂಲಕ ಮಾಹಿತಿ ಸಿಗಲಿದೆ. ತಕ್ಷಣ ಶುಲ್ಕ ವರ್ಗಾವಣೆ ಮಾಡಲಾಗುತ್ತದೆ.

'ಪರೀಕ್ಷೆ ಬರೆಯುವಾಗ ಪ್ರವೇಶ ಪತ್ರದ ಜತೆಗಿನ ಪೋಟೊ ಜತೆಗೂ ತುಲನೆ ಮಾಡಿ ಅದೇ ವಿದ್ಯಾರ್ಥಿ ಎನ್ನುವುದನ್ನೂ ಪೋರ್ಟಲ್ ಖಚಿತಪಡಿಸಲಿದೆ. ಇದರಿಂದ ನಕಲಿ ವಿದ್ಯಾರ್ಥಿಗಳು ಪ್ರವೇಶ ಪಡೆಯುವುದನ್ನು ತಪ್ಪಿಸಬಹುದು, ಸೀಟ್ ಬ್ಲಾಕಿಂಗ್ ದಂಧೆಯನ್ನೂ ತಡೆಯಬಹುದು. ಶೇ 100ರಷ್ಟು ಶುಲ್ಕವನ್ನು ತಕ್ಷಣವೇ ಕಾಲೇಜುಗಳ ಖಾತೆಗೆ ಜಮೆ ಮಾಡಬಹುದು. ಪ್ರವೇಶಕ್ಕೆ ನಿಗದಿಪಡಿಸಿದ ಕೊನೆ ದಿನಾಂಕದ ಒಳಗೆ ಯಾರೆಲ್ಲ ಕಾಲೇಜುಗಳಿಗೆ ವರದಿ ಮಾಡಿಕೊಳ್ಳುವುದಿಲ್ಲವೊ ಅವರನ್ನು ಪ್ರಕ್ರಿಯೆಯಿಂದ ಹೊರ ಹಾಕಲಾಗುತ್ತದೆ. ಅವರ ಸೀಟುಗಳನ್ನು ಮುಂದಿನ ಸುತ್ತಿನ ಸೀಟು ಹಂಚಿಕೆಗೆ ಪರಿಗಣಿಸಲಾಗುವುದು' ಎನ್ನುತ್ತಾರೆ ಕೆಇಎ ಕಾರ್ಯನಿರ್ವಾಹಕ ನಿರ್ದೇಶಕ ಎಚ್. ಪ್ರಸನ್ನ.

ಇದುವರೆಗೂ ಸರ್ಕಾರಿ ಕಾಲೇಜು ಹೊರತುಪಡಿಸಿ, ಖಾಸಗಿ ಕಾಲೇಜುಗಳಿಗೆ ಸೀಟು ಹಂಚಿಕೆಯಾದ ಅಭ್ಯರ್ಥಿಗಳ ದಾಖಲೆ ಪರಿಶೀಲನೆ ಮತ್ತು ಸಂಗ್ರಹ ಕೆಇಎ ಕಚೇರಿಯಲ್ಲೇ ನಡೆಯುತ್ತಿತ್ತು. ಆದರೆ, ಈ ವರ್ಷದಿಂದ ಈ ಪ್ರಕ್ರಿಯೆಯನ್ನು ಕಾಲೇಜು ಹಂತದಲ್ಲೇ ಮಾಡಲಾಗುತ್ತಿದೆ.

ಚಿಟಿಕೆ ಸುದ್ದಿ

ಸುವರ್ಣ ಮಹೋತ್ಸವ ಸಮಾರೋಪ ಆಗಸ್ಟ್ 10ಕ್ಕೆ

ಬೆಂಗಳೂರು: ಬಿಲ್ಲವ ಅಸೋಸಿಯೇಷನ್ ಸುವರ್ಣ ಮಹೋತ್ಸವದ ಸಮಾರೋಪ ಸಮಾರಂಭವು ಆಗಸ್ಟ್ 10ರಂದು ಅರಮನೆ ಮೈದಾನದ ವೈಟ್ ಪೆಟಲ್ಸ್ ಸಭಾಂಗಣದಲ್ಲಿ ನಡೆಯಲಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಎಂ. ವೇದಕುಮಾರ್, ಸೋಲೂರಿನ ಆರ್ಯ ಈಡಿಗ ಮಹಾ ಸಂಸ್ಥಾನ ಮಠದ ಪೀಠಾಧಿಪತಿ ವಿಖ್ಯಾತಾನಂದ ಸ್ವಾಮೀಜಿ ಅವರು ಸಮಾರಂಭದ ಸಾನ್ನಿಧ್ಯ ವಹಿಸಲಿದ್ದಾರೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಕಾರ್ಯಕ್ರಮ ಉದ್ಘಾಟಿಸಲಿದ್ದು, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು 'ಬಿಲ್ಲವರ ಆಚಾರ ವಿಚಾರಗಳು' ಎಂಬ ಪುಸ್ತಕ ಬಿಡುಗಡೆಗೊಳಿಸಲಿದ್ದಾರೆ. ವಿಧಾನಸಭೆ ಸಭಾಧ್ಯಕ್ಷ ಯು.ಟಿ. ಖಾದರ್ ಸ್ಮರಣ ಸಂಚಿಕೆ ಬಿಡುಗಡೆ ಮಾಡಲಿದ್ದು, ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ' ಎಂದು ಮಾಹಿತಿ ನೀಡಿದರು.

'ಅಡ್ವೊಕಥಾನ್' 10ಕ್ಕೆ

ಬೆಂಗಳೂರು: ಜಸ್ಟಿಟಿಯಾ ಪ್ರಗತಿಪರ ಕಾನೂನು ಸಂಸ್ಥೆಯಿಂದ ಇದೇ 10ರಂದು ಸ್ವಾತಂತ್ರ್ಯ ಉದ್ಯಾನದಲ್ಲಿ ಅಡ್ವೊಕಥಾನ್ ಎಂಬ ನಡಿಗೆ ಹಾಗೂ ಓಟ ನಡೆಯಲಿದೆ.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಸ್ಥೆಯ ಸಂಸ್ಥಾಪಕ ಸೀಕ್ವೇರಿಯಾ, 'ನೇಷನ್ಸ್ ಫಿಟ್ ಇಂಡಿಯಾ' ಚಳವಳಿಯ ಅಂಗವಾಗಿ ಕಾನೂನಿನ ವೃತ್ತಿಪರರು ಮತ್ತು ಸಾರ್ವಜನಿಕರಲ್ಲಿ ಬಾಲ ಅಪರಾಧಗಳು ಕುರಿತು ಅರಿವು ಮೂಡಿಸುವ ಉದ್ದೇಶದಿಂದ ಅಡ್ವೊಕಥಾನ್ ಆಯೋಜಿಸಲಾಗಿದೆ. ಇದು ಶಾರೀರಿಕ ಹಾಗೂ ಮಾನಸಿಕ ಆರೋಗ್ಯದ ವೃದ್ಧಿಗೆ ಸಹಕಾರಿ ಆಗಲಿದೆ' ಎಂದು ತಿಳಿಸಿದರು.

'ನ್ಯಾಯ ಮತ್ತು ಒಳಗೊಳ್ಳುವಿಕೆಗಾಗಿ 3 ಕಿ.ಮೀ ನಡಿಗೆ, 5 ಕಿ.ಮೀ ಅಡ್ವೊಕಸಿ ಓಟ ಹಾಗೂ 10 ಕಿ.ಮೀ ಟೈಮ್ ಚಾಲೆಂಜ್ ಓಟ ಇದೆ' ಎಂದು ತಿಳಿಸಿದರು.

ಮಾಹಿತಿಗೆ: 84314 16864.

ತರಬೇತಿಗೆ ಅರ್ಜಿ ಆಹ್ವಾನ

ಬೆಂಗಳೂರು: ರಾಜ್ಯ ಸರ್ಕಾರದ ಸಚಿವಾಲಯ ಗ್ರಂಥಾಲಯದಲ್ಲಿ 2025-26ನೇ ಸಾಲಿಗೆ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನಕ್ಕೆ ಸಂಬಂಧಿಸಿ ಅಪ್ರೆಂಟಿಸ್ ಟೆಕ್ನಿಶಿಯನ್ ತರಬೇತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನದಲ್ಲಿ ಡಿಪ್ಲೊಮಾ ಉತ್ತೀರ್ಣರಾದ ಅಭ್ಯರ್ಥಿಗಳು ಸೆಪ್ಟೆಂಬರ್ 10ರೊಳಗೆ ಅರ್ಜಿ ಸಲ್ಲಿಸಬಹುದು ಎಂದು ಪ್ರಕಟಣೆ ತಿಳಿಸಿದೆ. ವಿಳಾಸ: ಮುಖ್ಯ ಗ್ರಂಥಾಧಿಕಾರಿ ಸಚಿವಾಲಯ ಗ್ರಂಥಾಲಯ, ಕೊಠಡಿ ಸಂಖ್ಯೆ-21 ನೆಲಮಹಡಿ, ವಿಧಾನಸೌಧ, ಬೆಂಗಳೂರು- 560 001. ಮಾಹಿತಿಗೆ: 080-22033462 ಅಥವಾ ಇ-ಮೇಲ್: ksecretariatlibrary@gmail.com

ಉದ್ಘಾಟನಾ ಕಾರ್ಯಕ್ರಮದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಬಣ್ಣನೆ

ತಂತ್ರಜ್ಞಾನದ ದೂರದೃಷ್ಟಿಗೆ ಶಕ್ತಿ ತುಂಬಿದ ಸ್ಯಾಪ್‌ಲ್ಯಾಬ್ಸ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸ್ಯಾಪ್ ಲ್ಯಾಬ್ಸ್ ಇಂಡಿಯಾ ಇನ್ನೋವೇಷನ್ ಪಾರ್ಕ್, ನಮ್ಮ ರಾಜ್ಯದ ತಂತ್ರಜ್ಞಾನದ ದೂರದೃಷ್ಟಿಗೆ ಶಕ್ತಿ ತುಂಬಿದೆ. ಸಾಮರ್ಥ್ಯ, ವಿಶ್ವಾಸಾರ್ಹತೆ ಹಾಗೂ ಶ್ರೇಷ್ಠತೆಯಲ್ಲಿನ ನಮ್ಮ ಬದ್ಧತೆಗೆ ಕನ್ನಡಿ ಹಿಡಿದಂತಿದೆ' ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಬಣ್ಣಿಸಿದರು.

ದೇವನಹಳ್ಳಿಯಲ್ಲಿ ಆರಂಭವಾದ ಸ್ಯಾಪ್ ಲ್ಯಾಬ್ಸ್ ಇಂಡಿಯಾ (ಎಸ್‌ಎಪಿ) ಇನ್ನೋವೇಷನ್ ಪಾರ್ಕ್ ಅನ್ನು ಮಂಗಳವಾರ ಉದ್ಘಾಟಿಸಿ ಅವರು ಮಾತನಾಡಿದರು.

'ಸಾಫ್ಟ್‌ವೇರ್ ಅಲ್ಲದೇ ಕ್ವಾಂಟಮ್ ಕಂಪ್ಯೂಟಿಂಗ್, ಕೃತಕ ಬುದ್ಧಿಮತ್ತೆ, ಮಷಿನ್ ಲರ್ನಿಂಗ್ ಹಾಗೂ ಕೈಗಾರಿಕೆ 4.0 ಸೇರಿದಂತೆ 21ನೇ ಶತಮಾನವನ್ನು ವ್ಯಾಖ್ಯಾನಿಸಬಲ್ಲ ತಂತ್ರಜ್ಞಾನದಲ್ಲಿಯೂ ಬೆಂಗಳೂರು ಮುಂದಿದೆ. ಈಗ ಸ್ಯಾಪ್ ಲ್ಯಾಬ್ಸ್ ಹೊಸ ಸೇರ್ಪಡೆಯಾಗಿದ್ದು, ಕರ್ನಾಟಕ, ಭಾರತದ ಶಕ್ತಿಕೇಂದ್ರವಾಗಿ ಬೆಳೆಯುವ ಹೊಸ ಅಧ್ಯಾಯಕ್ಕೆ ಮುನ್ನುಡಿ ಬರೆದಿದೆ' ಎಂದು ವಿಶ್ಲೇಷಿಸಿದರು.

'ಸ್ಯಾಪ್ ಲ್ಯಾಬ್ಸ್‌ನವರು ವಿಶ್ವದರ್ಜೆಯ ಕ್ಯಾಂಪಸ್ ನಿರ್ಮಾಣಕ್ಕೆ ದೇವನಹಳ್ಳಿಯ ಈ ಪ್ರದೇಶದ ಆಯ್ಕೆ ನಿಜಕ್ಕೂ ಸಾಂಕೇತಿಕವಾಗಿದೆ. 15,000 ವೃತ್ತಿಪರರು ಕೆಲಸ ಮಾಡುವಂತೆ ವಿನ್ಯಾಸಗೊಳಿಸಿರುವ ಈ ಕ್ಯಾಂಪಸ್ ಭವಿಷ್ಯದಲ್ಲಿ ಉನ್ನತ ಮೌಲ್ಯವುಳ್ಳ ಉದ್ಯೋಗ ಸೃಷ್ಟಿ ಹಾಗೂ ಯುವಜನರಿಗೆ ಅವಕಾಶಗಳನ್ನು ಒದಗಿಸುವ ನಮ್ಮ ಧ್ಯೇಯಕ್ಕೆ ಮೈಲುಗಲ್ಲಾಗಲಿದೆ' ಎಂದರು.

'ಕರ್ನಾಟಕ ಇಂದು ಭಾರತದ ಜಿಡಿಪಿಗೆ ಶೇ 8ಕ್ಕಿಂತಲೂ ಹೆಚ್ಚು ಕೊಡುಗೆ ನೀಡುತ್ತಿದೆ. ಐ.ಟಿ ರಫ್ತಿನಲ್ಲಿ ಶೇ 35ರಷ್ಟು ಪಾಲನ್ನು ಹೊಂದಿದೆ. ಶೇ 40ಕ್ಕೂ ಹೆಚ್ಚು ಭಾರತದ ಎಲೆಕ್ಟ್ರಾನಿಕ್ಸ್ ಮತ್ತು ಸಂಶೋಧನಾ ರಫ್ತಿಗೆ ಕೇಂದ್ರವಾಗಿದ್ದು, 500ಕ್ಕೂ ಹೆಚ್ಚು ಜಾಗತಿಕ ಸಾಮರ್ಥ್ಯ ಕೇಂದ್ರಗಳು, 18 ಸಾವಿರಕ್ಕೂ ಹೆಚ್ಚು ಸ್ಟಾರ್ಟ್‌ಅಪ್‌ಗಳಿವೆ. ಭಾರತ ಶೇ 40ರಷ್ಟು ಯೂನಿಕಾರ್ನ್‌ಗಳನ್ನು ಹೊಂದಿದೆ. ಅದರಲ್ಲಿ ಶೇ 40ಕ್ಕೂ ಹೆಚ್ಚು ಬೆಂಗಳೂರಲ್ಲೇ ನೆಲಸಿವೆ' ಎಂದು ವಿವರಿಸಿದರು.

ಕಾರ್ಯಕ್ರಮದಲ್ಲಿ ಐಟಿ–ಬಿಟಿ ಸಚಿವ ಪ್ರಿಯಾಂಕ್ ಖರ್ಗೆ, ಇಲಾಖೆ ಕಾರ್ಯದರ್ಶಿ ಏಕರೂಪ ಕೌರ್, ಸ್ಯಾಪ್ ಲ್ಯಾಬ್ಸ್ ಇಂಡಿಯಾದ ವ್ಯವಸ್ಥಾಪಕ ನಿರ್ದೇಶಕಿ ಸಿಂಧು ಗಂಗಾಧರನ್ ಪಾಲ್ಗೊಂಡಿದ್ದರು.


ಸ್ಯಾಪ್‌ಲ್ಯಾಬ್ಸ್ ಇನ್ನೋವೇಷನ್ ಪಾರ್ಕ್ ಉದ್ಘಾಟನೆ ಕಾರ್ಯಕ್ರಮದಲ್ಲಿ ಭಾಗವಹಿಸಲು ಎಲೆಕ್ಟ್ರಿಕ್ ವಾಹನದಲ್ಲಿ ಬಂದ ಸಿದ್ದರಾಮಯ್ಯ. ಪ್ರಿಯಾಂಕ್ ಖರ್ಗೆ ಜೊತೆಯಲ್ಲಿದ್ದರು

> ಏರ್‌ಪೋರ್ಟ್‌ಗೆ ಮೆಟ್ರೊ ಮಾರ್ಗ ನಿರ್ಮಾಣ, ಉಪನಗರ ರೈಲು ಯೋಜನೆ 2029ರೊಳಗೆ ಪೂರ್ಣವಾಗಲಿದೆ. ಸಮತೋಲಿತ, ವಿಕೇಂದ್ರೀಕೃತ ಮತ್ತು ಸುಸ್ಥಿರ ಅಭಿವೃದ್ಧಿಗೆ ನಮ್ಮ ಸರ್ಕಾರ ಬದ್ಧ
> **ಸಿದ್ದರಾಮಯ್ಯ**, ಮುಖ್ಯಮಂತ್ರಿ

ಮೈಸೂರು ರೇಸ್

ಮೂನ್ ಸ್ಟಾರ್ ಗೆಲ್ಲುವ ನಿರೀಕ್ಷೆ

ಮೈಸೂರು ರೇಸ್ ಕ್ಲಬ್ ಮಿಲಿಯನ್ ಬುಧವಾರದ ಮೈಸೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಮೂನ್ ಸ್ಟಾರ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:30ಕ್ಕೆ ಪ್ರಾರಂಭವಾಗಲಿರುವ ದಿನದ ಎಂಟು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಓಷನ್ ಆಫ್ ಗ್ರೇಸ್, ಕೊಸೆಟ್ 7, ನ್ಯಾಚುರಲ್ ಲುಕ್ 10
2ನೇ ರೇಸ್: ಅಲ್ಯೂರಿಂಗ್ ಬ್ಯೂಟಿ 10, ಸೂಪರ್ ಸೆಕ್ಸಿ 2, ನಿಂಬಲ್ ಸ್ಪಿರಿಟ್ 8
3ನೇ ರೇಸ್: ಮ್ಯಾಗ್ನೆಟಿಕ್ 1, ರಾಕ್ ಬ್ಯಾಂಕ್ 5, ಕೀ ಟು ದಿ ಮಿಂಟ್ 4
4ನೇ ರೇಸ್: ಓಷನ್ 1, ಸೆರಾಯ್ 3, ಟೈಗರ್‌ಕಿಂಗ್ 7
5ನೇ ರೇಸ್: ಪ್ರೆಟ್ಟಿ ಮೂವ್ 7, ಚಾಯ್ಸ್ 2, ದಿ ಗೋಲ್ಡನ್ ಸನ್‌ರೈಸ್ 3
6ನೇ ರೇಸ್: ಮೂನ್ ಸ್ಟಾರ್ 7, ಮೆಹ್ಲರ್ 3, ಡಾಂಕಸ್ಟರ್ ಬೆಲ್ 6
7ನೇ ರೇಸ್: ಪಾರ್ಕ್ ವೆಸ್ಟ್ 6, ಬೌಂಟಿಫುಲ್ ಬ್ಯೂಟಿ 3, ಒನ್ ಡೈಮಂಡ್ 1
8ನೇ ರೇಸ್: ಕಾನ್ಫಿಡೆಂಟ್ ಗೇಮ್ 1, ಮಿಸ್ಟಿಕ್ ಡಿವೈನ್ 2, ರೆಡ್ ಫಾಲ್ಕನ್ 3

ಉತ್ತಮ ಬೆಟ್: ಕಾನ್ಫಿಡೆಂಟ್ ಗೇಮ್

ಜಾಕ್‌ಪಾಟ್‌ಗೆ	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
4,5,6,7,8	1,2,3	3,4,5	6,7,8



ಬ್ರಿಲಿಯಂಟ್ ಲ್ಯಾಬ್ಸ್‌ನ 'ಹಲೋ' ಸ್ಮಾರ್ಟ್ ಕನ್ನಡಕದಲ್ಲಿ ಡಿಸ್‌ಪ್ಲೇ, ಸ್ಪೀಕರ್, ಸೆನ್ಸರ್‌ಗಳಿವೆ. ಸಂಭಾಷಣೆಗಳನ್ನು ಕೇಳುವ, ನೋಡುವ, ಮಾತನಾಡುವ ಎ.ಐ. ಸಹಾಯಕ 'ನೋವಾ' ಕೂಡ ಇದರಲ್ಲಿ ಅಡಕವಾಗಿದೆ.

ಇ-ರೂಪಾಯಿ ಕೊಳೆಯಾಗದು ಕಳೆದುಹೋಗದು

ಭಾರತೀಯ ರಿಸರ್ವ್ ಬ್ಯಾಂಕ್ ರೂಪಿಸಿರುವ ಈ ಡಿಜಿಟಲ್ ರೂಪಾಯಿ ಅಥವಾ ಇ-ರುಪೀ ವ್ಯವಸ್ಥೆಯು ಮುಂದೆ ಇಂಟರ್ನೆಟ್ ಇಲ್ಲದೆಯೇ ಹಣ ವರ್ಗಾವಣೆಗೆ ಅನುವು ಮಾಡಿಕೊಡಲಿದೆ.



• ಅವಿನಾಶ್ ಬಿ.

ಕಳೆದ ಆರು ಹಣಕಾಸು ವರ್ಷಗಳಲ್ಲಿ ಭಾರತೀಯರು 65 ಸಾವಿರ ಕೋಟಿ ಬಾರಿ ಯುಪಿಐ (ಯುನಿಫೈಡ್ ಪೇಮೆಂಟ್ ಇಂಟರ್ಫೇಸ್), ಸರಳವಾಗಿ ಹೇಳಬಹುದಾದರೆ, 'ಆನ್‌ಲೈನ್ ಪೇಮೆಂಟ್' ವ್ಯವಸ್ಥೆ ಬಳಸಿ ಹಣಕಾಸು ವಹಿವಾಟು ನಡೆಸಿದ್ದು, 12 ಸಾವಿರ ಟ್ರಿಲಿಯನ್ ರೂಪಾಯಿ ವ್ಯವಹಾರ ನಡೆಸಿದ್ದಾರೆ ಎಂದು ಕೇಂದ್ರ ಸರ್ಕಾರ ಇತ್ತೀಚೆಗೆ ತಿಳಿಸಿತ್ತು. ಕೈಯಲ್ಲಿ ಅಥವಾ ಸಾಂಪ್ರದಾಯಿಕ ಪರ್ಸ್‌ನಲ್ಲಿ ನೋಟುಗಳಿಲ್ಲದೆಯೇ, ಡಿಜಿಟಲ್ ಪಾವತಿ ಮೂಲಕ ಈ ವಹಿವಾಟು ನಡೆದಿದೆ. ಯುಪಿಐ ವ್ಯವಸ್ಥೆಯಲ್ಲಿ ಗೂಗಲ್ ಪೇ, ಭೀಮ್ ಆ್ಯಪ್, ಫೋನ್‌ಪೇ, ಪೇಟಿಎಂ ಮುಂತಾದ ಅದೆಷ್ಟೋ ಡಿಜಿಟಲ್ ವ್ಯಾಲೆಟ್‌ಗಳ (ಡಿಜಿಟಲ್ ಪರ್ಸ್ ಅಂತ ಹೇಳಬಹುದು) ಮೂಲಕ ಈ ವಹಿವಾಟು ನಡೆದಿದ್ದು, ಜನರು ನಗದು ಹಣವನ್ನು ಕೈಯಲ್ಲಿರಿಸಿಕೊಳ್ಳುವುದು ಕಡಿಮೆಯಾಗುತ್ತಿದೆ. ಈ ಡಿಜಿಟಲ್ ಕ್ರಾಂತಿಗೆ ಮತ್ತೊಂದು ಸೇರ್ಪಡೆ ಇ-ರುಪೀ (e-₹) ಅಥವಾ ಡಿಜಿಟಲ್ ರೂಪಾಯಿ.

• ಏನಿದು ಡಿಜಿಟಲ್ ರೂಪಾಯಿ ಅಥವಾ e-₹?

ಡಿಜಿಟಲ್ ರೂಪಾಯಿ ಅಥವಾ ಇ-₹ ಎಂಬುದು ಭಾರತದ ಕೇಂದ್ರೀಯ ಬ್ಯಾಂಕಿನ ಡಿಜಿಟಲ್ ಕರೆನ್ಸಿ (ಸೆಂಟ್ರಲ್ ಬ್ಯಾಂಕ್ ಡಿಜಿಟಲ್ ಕರೆನ್ಸಿ - CBDC). ಸರಳವಾಗಿ ಹೇಳುವುದಾದರೆ ನಮ್ಮ ಪರ್ಸಿನಲ್ಲಿ ಇರುವ ನೋಟುಗಳ ಬದಲಾಗಿ, ನಮ್ಮದೇ ಆನ್‌ಲೈನ್ ಪರ್ಸ್‌ನಲ್ಲಿ ಇರಿಸುವ ಹಣ. ಆದರೆ, ಜೇಬಿನಲ್ಲಿರುವ ದುಡ್ಡಿನಂತೆಯೇ ಈ ಪರ್ಸ್‌ನಲ್ಲಿರುವ ಹಣಕ್ಕೂ ಬಡ್ಡಿ ದೊರೆಯುವುದಿಲ್ಲ. ಡಿಜಿಟಲ್ ವ್ಯಾಲೆಟ್ ತೆರೆದು ನೋಡಿದರೆ, ಅದರಲ್ಲಿ ನಾವು ಹಾಕಿದ ಹಣದ ಮೊತ್ತವು, ₹ 500, 200, 100, 20, 10, 5, 1. ಹೀಗೆ ನೋಟುಗಳು ಹಾಗೂ ನಾಣ್ಯಗಳ ರೂಪದಲ್ಲಿ ಗೋಚರಿಸುತ್ತವೆ.

• ಇ-ರೂಪಾಯಿ ಹೇಗೆ ಕೆಲಸ ಮಾಡುತ್ತದೆ?

ಬಹುತೇಕ ಈಗಿನ ಯುಪಿಐ (ಗೂಗಲ್‌ಪೇ-ಫೋನ್‌ಪೇ) ಮಾದರಿಯಲ್ಲೇ, ಒಂದು ಆ್ಯಪ್ ಮೂಲಕ ಇದು ಕೆಲಸ ಮಾಡುತ್ತದೆ. ಸದ್ಯಕ್ಕೆ ಇದು ಬೆಂಗಳೂರು ಸಹಿತ ಪ್ರಮುಖ ನಗರಗಳಲ್ಲಿ ಪ್ರಾಯೋಗಿಕವಾಗಿ (ಪೈಲಟ್) ಚಾಲ್ತಿಗೆ ಬಂದಿದೆ. ಕ್ಯುಆರ್ ಕೋಡ್ ಸ್ಕ್ಯಾನ್ ಮಾಡುವ ಮೂಲಕ ಅಥವಾ ನಿರ್ದಿಷ್ಟ ಮೊಬೈಲ್ ಸಂಖ್ಯೆಗೆ (ಈ ಸಂಖ್ಯೆಯೂ ಇ-ರೂಪಾಯಿ ಬಳಕೆಗೆ ನೋಂದಾಯಿಸಿರಬೇಕು) ಹಣ ವರ್ಗಾಯಿಸಬಹುದು.

• ಗೂಗಲ್‌ಪೇ-ಫೋನ್‌ಪೇಗಿಂತ ಇ-ರೂಪಾಯಿ ಹೇಗೆ ಭಿನ್ನ?

ಗೂಗಲ್‌ಪೇ ಅಥವಾ ಫೋನ್‌ಪೇ ಆ್ಯಪ್‌ಗಳು ಎರಡು ಬ್ಯಾಂಕುಗಳ ನಡುವೆ ಮಧ್ಯವರ್ತಿ ರೂಪದಲ್ಲಿ ಕೆಲಸ ಮಾಡುತ್ತವೆ. ಆದರೆ ರಿಸರ್ವ್ ಬ್ಯಾಂಕ್ ರೂಪಿಸಿರುವ ಈ ಡಿಜಿಟಲ್ ರೂಪಾಯಿ ವ್ಯವಸ್ಥೆಯಲ್ಲಿ ಎರಡು ಬ್ಯಾಂಕುಗಳು ನೇರವಾಗಿ ಸಂವಹನ ಮಾಡಿಕೊಳ್ಳುತ್ತವೆ. ಯುಪಿಐ ಅಥವಾ ಬ್ಯಾಂಕಿನ ಸರ್ವರ್ ಕೈಕೊಟ್ಟಾಗ, ನಡುವೆ ಸಿಲುಕಿಕೊಳ್ಳುವ ಹಣ ವಾಪಸ್ ಬರಲು ಕಾಯಬೇಕಾಗಬಹುದು. ಆದರೆ, 'ಇ-ಪರ್ಸ್'ನಲ್ಲಿ ಹಾಗಾಗದು. ಇದಕ್ಕೆ ಥರ್ಡ್ ಪಾರ್ಟಿ ಆ್ಯಪ್ ಬೇಕಾಗಿರುವುದಿಲ್ಲ, ನಮ್ಮದೇ ಬ್ಯಾಂಕಿನ ಆ್ಯಪ್ ಬಳಸಿದರೆ ಸಾಕಾಗುತ್ತದೆ. ಹಣ ಲೋಡ್ ಮಾಡುವುದು (ಡಿಜಿಟಲ್ ಪರ್ಸ್‌ಗೆ ತುಂಬಿಸುವುದು) ಮತ್ತು ಪರ್ಸ್‌ನಿಂದ ಮರಳಿ ಬ್ಯಾಂಕ್ ಖಾತೆಗೆ ವರ್ಗಾಯಿಸುವುದು ತತ್‌ಕ್ಷಣದಲ್ಲೇ ಆಗುತ್ತದೆ. ಮುಂದಿನ ದಿನಗಳಲ್ಲಿ, ಇಂಟರ್ನೆಟ್ ಸೌಕರ್ಯದ ಅಗತ್ಯವಿಲ್ಲದೆಯೇ ಇ-ರೂಪಾಯಿ ಬಳಕೆಗೆ ಅವಕಾಶ ಮಾಡಿಕೊಡುವ ಬಗ್ಗೆ ತಂತ್ರಜ್ಞಾನದ ಅಭಿವೃದ್ಧಿ ಆಗುತ್ತಿದೆ. ಇದಕ್ಕೆ ಆಯಾ ಬ್ಯಾಂಕ್ ಖಾತೆಗೆ ಲಿಂಕ್ ಆಗಿರುವ ಫೋನ್ ನಂಬರ್ ಸಾಕಾಗುತ್ತದೆ. ಈ ರೀತಿಯ ಆಫ್‌ಲೈನ್ ಬಳಕೆ ವ್ಯವಸ್ಥೆಯು ಕಾರ್ಯರೂಪಕ್ಕೆ ಬಂದರೆ ವಿಶೇಷವಾಗಿ ಗ್ರಾಮೀಣ ಹಾಗೂ ಇಂಟರ್ನೆಟ್ ತಲುಪದಿರುವ ಊರುಗಳಿಗೆ ವರದಾನವಾಗಲಿದೆ.ಸದ್ಯಕ್ಕೆ ನಮ್ಮ ಡಿಜಿಟಲ್ ಪರ್ಸ್‌ನಲ್ಲಿ ಗರಿಷ್ಠ ₹1 ಲಕ್ಷ ಮಾತ್ರ ಇರಿಸಬಹುದು ಹಾಗೂ ದಿನಕ್ಕೆ ₹25,000 ವಹಿವಾಟು ನಡೆಸಬಹುದಾಗಿದೆ.

ಇ-ರೂಪಾಯಿಯ ಪ್ರಯೋಜನವೇನು?

ವಿಶೇಷತಃ ಸರ್ಕಾರಿ ನಿಧಿಗಳನ್ನು, ಸಬ್ಸಿಡಿ ಮುಂತಾದವುಗಳನ್ನು ಪಡೆಯಲು ಫಲಾನುಭವಿಗಳಿಗೆ ಇ-ರುಪೀ (ಎಲೆಕ್ಟ್ರಾನಿಕ್ ರೂಪಾಯಿ) ಅನಿವಾರ್ಯವಾಗಬಹುದು. ಬ್ಯಾಂಕ್ ಖಾತೆಯಿಂದ ಒಂದಿಷ್ಟು ಹಣವನ್ನು ಈ ಪರ್ಸ್‌ನಲ್ಲಿಟ್ಟುಕೊಂಡರೆ, ಬೇಕಾದಾಗ ಸಣ್ಣ ಮೊತ್ತವನ್ನು ವ್ಯಯಿಸಲು ಅನುಕೂಲ. ಯುಪಿಐಯಲ್ಲಿ ಆಗಿರುವಂತೆ ಸಣ್ಣಪುಟ್ಟ ವಹಿವಾಟುಗಳು ಬ್ಯಾಂಕ್ ಪಾಸ್‌ಬುಕ್‌ನಲ್ಲಿ ದಾಖಲಾಗುವ ಬದಲು, ಈ ಪರ್ಸ್‌ನಲ್ಲೇ ದಾಖಲಾಗುತ್ತವೆ. ಇದಲ್ಲದೆ, ಇ-ರೂಪಾಯಿ ಮೂಲಕ ಮಾಡುವ ವಹಿವಾಟುಗಳಿಗೆ ಯಾವುದೇ ರೀತಿಯ ಶುಲ್ಕಗಳು ಇರುವುದಿಲ್ಲ ಮತ್ತು ಈ ಪರ್ಸ್‌ನಲ್ಲಿ ಕನಿಷ್ಠ ಬ್ಯಾಲೆನ್ಸ್ ಹಣ ಇರಿಸುವ ಅಗತ್ಯವಿರುವುದಿಲ್ಲ. ಭವಿಷ್ಯದಲ್ಲಿ ಅಂತರರಾಷ್ಟ್ರೀಯ ಹಣಕಾಸು ವಹಿವಾಟುಗಳಿಗೂ ಯಾವುದೇ ವಿನಿಮಯ ಶುಲ್ಕದ ಅಗತ್ಯವಿಲ್ಲದೆ ಇ-ರೂಪಾಯಿಯನ್ನು ಬಳಸುವ ಕುರಿತ ಯೋಜನೆಗಳು ರೂಪುಗೊಳ್ಳುತ್ತಿವೆ. ನೋಟುಗಳಾದರೆ ಹರಿದು ಹೋಗುತ್ತವೆ, ಕೊಳೆಯಾಗಿರುತ್ತವೆ. ಆದರೆ ಇದರಲ್ಲಿರುವ ಹಣಕ್ಕೆ ಆ ಸಮಸ್ಯೆ ಇರುವುದಿಲ್ಲ.

ಒಂದು ರೀತಿಯಲ್ಲಿ ವರ್ಡ್, ಚಿತ್ರ ಅಥವಾ ಬೇರಾವುದೇ ಫಿಸಿಕಲ್ ದಾಖಲೆಗಳ ಸ್ಥಾನದಲ್ಲಿ ಈಗ ಪಿಡಿಎಫ್ ರೂಪವೇ ಹೆಚ್ಚು ಜನಪ್ರಿಯವಾಗಿರುವಂತೆ, ನಗದು ಹಣದ ಸ್ಥಾನದಲ್ಲಿ ಇ-ರುಪೀ ಬಂದಿದೆ. ಇನ್ನೂ ಶೈಶವಾವಸ್ಥೆಯಲ್ಲಿ ಇರುವ ಹಾಗೂ ನಗದು ರಹಿತ ವಹಿವಾಟಿನತ್ತ ಮುಖ್ಯ ಹೆಜ್ಜೆಯಾಗಿರುವ ಈ ಇ-ರುಪೀ ಪರಿಕಲ್ಪನೆ ಬಗ್ಗೆ ಇನ್ನಷ್ಟೇ ಪ್ರಚಾರವಾಗಬೇಕಿದೆ. ಸದ್ಯಕ್ಕೆ ಸೀಮಿತ ನಗರಗಳಲ್ಲಿ ಮಾತ್ರ ಇದರ ಸೇವೆ ಪ್ರಾಯೋಗಿಕವಾಗಿ ದೊರೆಯುತ್ತಿದೆ. ಆದರೆ ಇದು ಯುಪಿಐಗೆ ಪರ್ಯಾಯವಾಗಬಹುದೇ ಮತ್ತು ಭಾರತದ ಆರ್ಥಿಕತೆಗೆ ಎಷ್ಟರ ಮಟ್ಟಿಗೆ ಬಲ ತುಂಬಬಹುದು ಎಂಬುದನ್ನು ಕಾದು ನೋಡಬೇಕಿದೆ.

• ಇ-ರೂಪಾಯಿ ಬಳಕೆ ಎಷ್ಟು ಸುರಕ್ಷಿತ?

ಇದು ಯುಪಿಐ ಆಧಾರಿತವೂ ಅಲ್ಲ, ಬಿಟ್‌ಕಾಯಿನ್‌ಗಳಂತಹ ಕ್ರಿಪ್ಟೋಕರೆನ್ಸಿಯೂ ಅಲ್ಲ. ನಮ್ಮಲ್ಲಿರುವ ಹಣವನ್ನು ಆನ್‌ಲೈನ್ ಪರ್ಸ್‌ನಲ್ಲಿ ಇರಿಸಲು ಅತ್ಯಂತ ಸುರಕ್ಷಿತ ಮಾದರಿ ಇದು. ನಮ್ಮ ಜೇಬಿನಲ್ಲಿರುವ ಪರ್ಸ್ ಕಳೆದುಹೋದರೆ ಸಿಗುವುದು ಕಷ್ಟ. ಆದರೆ, ಇ-ರೂಪಾಯಿ ಆ್ಯಪ್ ಇರುವ ಫೋನ್ ಕಳೆದುಹೋದರೆ ನಮ್ಮ ಡಿಜಿಟಲ್ ಪರ್ಸ್‌ನಲ್ಲಿರುವ ಹಣಕ್ಕೇನೂ ಆಗದು. ಬೇರೆ ಸಾಧನದಲ್ಲಿ ಆ್ಯಪ್ ಅಳವಡಿಸಿ ಪುನಃ ಲಾಗಿನ್ ಆಗಬಹುದು.

ಪಿ. ಡಿ. ಎಂ. ಎಂಬ ಪದ್ಮಪತ್ರದ ಜಲಬಿಂದು!

• ಕ್ಷಮಾ ವಿ. ಭಾನುಪ್ರಕಾಶ್



ಕಾವಲಿಯ ಮೇಲೆ ನೀವು ಹರವಿದ ದೋಸೆಯ ಹಿಟ್ಟು ಗರಿಗರಿಯಾಗಿಯೋ, ಮಲ್ಲಿಗೆಯಂತೆ ಮೃದುವಾಗಿಯೋ ದೋಸೆಯಾಗಿಯೋ ಏಳದೆ, ಕಾವಲಿಗೆ ಅಂಟಿ ಕೂತರೆ, ಅಲ್ಲಿಗೆ ಅಂದಿನ ಬೆಳಗು ಕಿರಿಕಿರಿಯ ಸೆರಗು ಹೊದ್ದಿತೆಂದೇ ಅರ್ಥ.ಇಂತಹ ಸಮಸ್ಯೆಗೆ ಪರಿಹಾರವೆಂಬಂತೆ ಮನೆಮನೆ ಅಡುಗೆಮನೆಯನ್ನು ಸೇರಿದ್ದೇ 'ನಾನ್-ಸ್ಟಿಕ್' ಪಾತ್ರೆಗಳು.1930ರ ದಶಕದಲ್ಲಿ ಕಂಡುಹಿಡಿಯಲಾದ 'ಪಾಲಿ ಟೆಟ್ರಾಫ್ಲೋರೋ ಇಥಲೀನ್' ಎಂಬ ರಾಸಾಯನಿಕವು ಇದಕ್ಕೆಲ್ಲಾ ಕಾರಣ. ತವಾ, ಕಡಾಯಿಯಂತಹ ಅನೇಕ ರೂಪದಲ್ಲಿ ಪ್ರತ್ಯಕ್ಷವಾದ ನಾನ್-ಸ್ಟಿಕ್ ಪಾತ್ರೆಗಳನ್ನು ಬಳಸಿದವರು, ಅದರ 'ಅಂಟಿಯೂ ಅಂಟದಂತಿರುವ' ಬಗೆಯನ್ನು ಕಂಡು ಅಚ್ಚರಿ ಪಟ್ಟು, ಮತ್ತಷ್ಟು ದೋಸೆಹಿಟ್ಟಿಗೆ ಅಕ್ಕಿ ನೆನೆಸಿಟ್ಟರು! ನಾನ್-ಸ್ಟಿಕ್ ಪಾತ್ರೆಗಳ ಹೊಟ್ಟೆಗೆ ಮೆತ್ತಲಾದ ಈ 'ಪಾಲಿ ಟೆಟ್ರಾ ಫ್ಲೋರೋ ಇಥಲೀನ್', ಎಂದರೆ 'ಟೆಫ್ಲಾನ್' ಎಂಬ ರಾಸಾಯನಿಕವನ್ನು ಕಂಡುಹಿಡಿದ ವಿಜ್ಞಾನಿಗಳು, ಅಡುಗೆಮನೆಯಲ್ಲಿ ಸಮಯವನ್ನು ಉಳಿಸಿ, ಕಿರಿಕಿರಿಯನ್ನು ತಪ್ಪಿಸಿ ಜಗತ್ಪ್ರಸಿದ್ಧರಾದರು.

ಟೆಫ್ಲಾನನ್ನು ಕೇವಲ ಪಾತ್ರೆಗಳಲ್ಲಿ ಮಾತ್ರವಲ್ಲ, ಗಾಡಿಗಳ ಬಣ್ಣ ಹಾಳಾಗದಂತೆ ಅದರ ಮೇಲೊಂದು ಪದರವಾಗಿ, ವೈದ್ಯಕೀಯ ಉಪಕರಣಗಳ ಮೇಲ್ಪದರವಾಗಿ, 'ವಾಲ್ವ್'ಗಳು, 'ಬುಶ್-ಬೇರಿಂಗ್'ಗಳು, ವಿದ್ಯುತ್ ತಂತಿಗಳ ಹೊರಕವಚದಲ್ಲಿ - ಹೀಗೆ ಅನೇಕ ಕಡೆ ಬಳಸಲಾಗುತ್ತಿದ್ದರೂ, ಅಲ್ಲೆಲ್ಲೂ ಆರೋಗ್ಯಕ್ಕೆ 'ಟೆಫ್ಲಾನ್'ನಿಂದ ಸಮಸ್ಯೆಯಿಲ್ಲ; ಸಾಮಾನ್ಯವಾಗಿ ಸುರಕ್ಷಿತ ಎಂದು ಸಾಬೀತಾಗಿದ್ದರೂ, ನಾನ್-ಸ್ಟಿಕ್ ಪಾತ್ರೆಗಳಲ್ಲಿ ಬಹಳ ಹೆಚ್ಚಿನ ತಾಪಮಾನ ಬಳಸಿ ಅಡುಗೆ ಮಾಡಿದಾಗ ಮಾತ್ರ, ಇವು ಜನರ ಉದರವನ್ನು ಸೇರಿ ಅನೇಕ ಆರೋಗ್ಯ ಸಮಸ್ಯೆಗಳಿಗೆ ಕಾರಣವಾದ ಉದಾಹರಣೆಗಳಿವೆ. ವಿಜ್ಞಾನಿಗಳ ಪ್ರಕಾರ ಜಠರದ ಸಮಸ್ಯೆ, ಥೈರಾಯ್ಡ್ ಸಮಸ್ಯೆ, ರೋಗನಿರೋಧಕತೆಯಲ್ಲಿ ಇಳಿಕೆಯಷ್ಟೇ, ಅಲ್ಲದೇ ಕೆಲಬಗೆಯ ಕ್ಯಾನ್ಸರ್‌ಗೆ ಕೂಡ ಕಾರಣವಾಗಬಹುದು. ಹೀಗಿರುವಾಗ, ಟೆಫ್ಲಾನ್‌ಗಿಂತಲೂ ಸುರಕ್ಷಿತವಾದ ರಾಸಾಯನಿಕವೊಂದನ್ನು ತಯಾರಿಸಬೇಕು; ಇಲ್ಲಿ, ವಿಜ್ಞಾನಿಗಳಿಗೆ ಸವಾಲೆಂದರೆ, ನೀರನ್ನು ಮಾತ್ರವಲ್ಲ, ಎಣ್ಣೆಯನ್ನೂ ದೂರವಿಡುವ ರಾಸಾಯನಿಕವನ್ನು ತಯಾರಿಸುವುದು!

ನಾನ್-ಸ್ಟಿಕ್ ಪಾತ್ರೆಗಳಲ್ಲಿ ಬಹಳ ಹೆಚ್ಚಿನ ತಾಪಮಾನ ಬಳಸಿ ಅಡುಗೆ ಮಾಡಿದಾಗ ಅದರಲ್ಲಿರುವ 'ಟೆಫ್ಲಾನ್' ಅಂಶ ನಮ್ಮ ಹೊಟ್ಟೆಯನ್ನು ಸೇರಿ, ಅನೇಕ ಆರೋಗ್ಯ ಸಮಸ್ಯೆಗಳನ್ನು ಉಂಟು ಮಾಡುತ್ತದೆ

ಸಾಮಾನ್ಯವಾಗಿ, ರಾಸಾಯನಿಕಗಳು ನೀರಿನಲ್ಲಿ ಕರಗುವುದಾದರೆ, ಎಣ್ಣೆಯಂತಹ ಸಂಯುಕ್ತ ಪದಾರ್ಥಗಳೊಂದಿಗೆ ಬೆರೆಯುವುದಿಲ್ಲ. ಉದಾಹರಣೆಗೆ, ನಾವು ದಿನನಿತ್ಯವೂ ಬಳಸುವ ಉಪ್ಪು. ನೀರಿಗೆ ಹಾಕಿದಾಕ್ಷಣವೇ ಕರಗುವ ಉಪ್ಪನ್ನು, ಒಮ್ಮೆ ಎಣ್ಣೆಗೆ ಹಾಕಿ ನೋಡಿ? ಅದು ಕರಗದು! ಇನ್ನು, ಎಣ್ಣೆಯೊಂದಿಗೆ ರಾಸಾಯನಿಕವಾಗಿ ಬೆರೆಯಬಲ್ಲ ಪದಾರ್ಥಗಳು, ನೀರಿನೊಂದಿಗೆ ಸೇರುವುದಿಲ್ಲ. ಇದು ಧ್ರುವೀಯತೆಯನ್ನು ಪ್ರದರ್ಶಿಸುವ 'ಪೋಲಾರ್-ನಾನ್ ಪೋಲಾರ್' ರಾಸಾಯನಿಕಗಳ 'ಜಾತಿವಾದ'ದ ಕಥೆ! ಹಾಗಾಗಿ, ನೀರು ಮತ್ತು ಎಣ್ಣೆ - ಇವೆರಡನ್ನೂ ಸಮಾನವಾಗಿ ದೂರವಿಡುವ ರಾಸಾಯನಿಕವೊಂದು ಬೇಕೆಂದಾಗ, ಸಹಜವಾಗಿಯೇ, ಸಂಶೋಧಕರು ಬೇರೆಯದೇ ದಿಕ್ಕಿನಲ್ಲಿ ಯೋಚಿಸಬೇಕಾಯ್ತು. ಟೊರೊಂಟೋದ ಅನ್ವಯಿಕ ವಿಜ್ಞಾನ ವಿಶ್ವವಿದ್ಯಾಲಯದ ವಿಜ್ಞಾನಿಗಳು ಇಂತಹ ಹೊಸದೊಂದು ಪಾಲಿಮರ್ ಅನ್ನು ತಯಾರಿಸಿದ್ದಾರೆ; ಇದು ಟೆಫ್ಲಾನ್‌ಗಿಂತಲೂ ಸುರಕ್ಷಿತ ಎಂದೂ ಸಾಬೀತು ಪಡಿಸಿದ್ದಾರೆ.

ಪ್ರೊಫೆಸರ್ ಕೆವಿನ್ ಗೊಲೊವಿನ್ ಮತ್ತು ಅವರ ತಂಡದ ಸಂಶೋಧಕರು ತಯಾರಿಸಿದ ಈ ಪಾಲಿಮರ್ 'ಪಾಲಿ ಡೈಮೀಥೈಲ್ ಸಿಲಾಕ್ಸೇನ್' (ಪಿ. ಡಿ. ಎಂ.). ಈ ಹೊಸ ಪಾಲಿಮರನ್ನು ಅರ್ಥ ಮಾಡಿಕೊಳ್ಳುವ ಮುನ್ನ ನಮ್ಮ ಹಳೆಯ 'ಟೆಫ್ಲಾನ್' ಎನ್ನುವ ಪಾಲಿಮರನ್ನು ಅರ್ಥೈಸಿಕೊಳ್ಳಬೇಕು. 'ಪಾಲಿಮರ್' ಎಂದರೆ ಅನೇಕ ಮಣಿಗಳನ್ನು ಪೋಣಿಸಿ ಮಾಡಿದ ಸರದಂತಹ ಉದ್ದನೆಯ ರಾಸಾಯನಿಕ; ಅನೇಕ ಪರ್/ಪಾಲಿ ಫ್ಲೋರೋ ಆಲ್ಕೈಲ್ ಘಟಕಗಳನ್ನು ಮಣಿಯಂತೆ ಪೋಣಿಸಿ ಅಂದರೆ, ರಾಸಾಯನಿಕವಾಗಿ ಜೋಡಿಸಿ, ತಯಾರಿಸಿದ ಸರ, ಅಂದರೆ ಪಾಲಿಮರ್, ನಮ್ಮ ಟೆಫ್ಲಾನ್. ಇಲ್ಲಿ ಪ್ರತಿ ಘಟಕದ ಪ್ರತಿ ಇಂಗಾಲದ ಅಣುವಿಗೂ, ಹಲವು ಫ್ಲೋರೀನ್ ಅಣುಗಳು ರಾಸಾಯನಿಕವಾಗಿ ಅಂಟಿಕೊಂಡಿರುತ್ತವೆ. ಈ ಇಂಗಾಲ-ಫ್ಲೋರೀನ್ ರಾಸಾಯನಿಕ ಬಂಧವು ಅಷ್ಟೇನೂ ಪ್ರತಿಕ್ರಿಯಾತ್ಮಕವಲ್ಲದ, ತನ್ನ ಪಾಡಿಗೆ ತಾನಿರುವ ಜಾಯಮಾನದವು; ಈ ಪ್ರತಿ ರಾಸಾಯನಿಕ ಬಂಧದ ನಿರ್ಲಿಪ್ತತೆಯೇ, ಒಟ್ಟಾರೆಯಾಗಿ ಪಿ.ಎಫ್.ಎ. ಪದಾರ್ಥಕ್ಕೂ ನೀರಿಗೆ ಅಂಟದ, ಎಣ್ಣೆಯನ್ನೂ ಅಂಟಿಸಿಕೊಳ್ಳದ ಗುಣ ನೀಡಿದೆ. ಹಾಗಾಗಿ, ಟೆಫ್ಲಾನ್‌ನ ಕಣಗಳು ನಮ್ಮ ಆಹಾರದ ಜೊತೆಗೆ ಉದರವನ್ನು ಸೇರಿದರೆ, ಅದು ತನ್ನ ರಾಸಾಯನಿಕ ನಿರ್ಲಿಪ್ತತೆಯಿಂದ ಹಾಗೇ ಉಳಿದು, ಆಹಾರದೊಂದಿಗೆ ಜೀರ್ಣವಾಗದೇ, ನಮ್ಮ ಜೀರ್ಣಾಂಗವ್ಯವಸ್ಥೆಯ ಭಾಗವಾಗಿಯೇ ಉಳಿದುಬಿಡುತ್ತದೆ; ಅಥವಾ ಹೊರಬಂದರೂ, ಪ್ರಕೃತಿಯಲ್ಲಿ ಜೈವಿಕಶೇಖರಣೆಗೆ ಕಾರಣವಾಗಿ, ಆಹಾರಸರಪಳಿಯ ಭಾಗವಾಗಿ ಮತ್ತೆಂದೋ ನಮ್ಮನ್ನು ಕಾಡದೇ ಬಿಡುವುದಿಲ್ಲ.

ಹಾಗಾಗಿಯೇ, ಪಿ.ಎಫ್.ಎ.ಗಳ (ಪರ್/ಪಾಲಿ ಫ್ಲೋರೋ ಆಲ್ಕೈಲ್ ರಾಸಾಯನಿಕಗಳು) ಬದಲಿಗೆ ಈಗ ತಯಾರಿಸಲಾದ ನಾನ್-ಸ್ಟಿಕ್ ರಾಸಾಯನಿಕವಾದ ಪಾಲಿ ಡೈಮೀಥೈಲ್ ಸಿಲಾಕ್ಸೇನ್ (ಪಿ. ಡಿ. ಎಂ.) ವಿಭಿನ್ನವಾಗಿ ನಿಲ್ಲುತ್ತದೆ. ಇದು ನೀರಿಗೆ ಮತ್ತು ಎಣ್ಣೆಗೆ ಅಂಟದೇ ಇರುವುದು ಮಾತ್ರವಲ್ಲ, ಪರಿಸರಕ್ಕೆ ಮತ್ತು ನಮ್ಮ ಆರೋಗ್ಯಕ್ಕೂ ಸಮಸ್ಯೆ ಉಂಟುಮಾಡದು ಎಂದು ವಿವರಿಸುತ್ತಾರೆ ವಿಜ್ಞಾನಿಗಳು. ಈಗಾಗಲೇ ವೈದ್ಯಕೀಯರಂಗದಲ್ಲಿ ಬಳಕೆಯಲ್ಲಿರುವ 'ಕೆಥೆಟರ್'ಗಳಲ್ಲಿ, ಕೇಕ್ ತಯಾರಿಕೆಗೆ ಬೇಕಾದ ಅಚ್ಚುಗಳಲ್ಲಿ ಬಳಕೆಯಲ್ಲಿರುವ 'ಸಿಲಿಕಾನ್', ಈ ಹೊಸ 'ಪಿ. ಡಿ. ಎಂ'ನ ಮೂಲವಸ್ತು. ಈಗಾಗಲೇ ಅಪಾಯಕಾರಿಯಲ್ಲ ಎಂದು ಸಾಬೀತಾಗಿರುವ 'ಸಿಲಿಕಾನ್'ಅನ್ನು ಕೊಂಚ ಮಾರ್ಪಾಡು ಮಾಡಿ, ಕೆಲವೇ ಇಂಗಾಲ ಮತ್ತು ಫ್ಲೋರೀನ್ ಬಂಧಗಳಿರುವಂತೆ ಮಾಡಿ ತಯಾರಿಸಲಾದ ಈ ಹೊಸ 'ಪಿ. ಡಿ. ಎಂ' ಪದರವು ಸುರಕ್ಷಿತ ಎಂದು ಪ್ರಯೋಗಾಲಯದಲ್ಲಿ ಸಾಬೀತುಪಡಿಸಿದ್ದಾರೆ, ವಿಜ್ಞಾನಿಗಳು. ಅದು ನಾನ್-ಸ್ಟಿಕ್ ಪಾತ್ರೆಯ ಹೊರಕವಚವಾಗಿ ಮನೆಮನೆಗೆ ಅಡಿಯಿಡಲು ಇನ್ನು ಕೊಂಚ ಕಾಯಬೇಕಷ್ಟೆ.

ಎಸ್ಸೆಸ್ಸೆಲ್ಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ-ಪಿಯುಸಿ ಪರೀಕ್ಷೆ ದಿಕ್ಸೂಚಿ

ಪಿಯುಸಿ ಪರೀಕ್ಷೆ ದಿಕ್ಸೂಚಿ

ಎಸ್ಸೆಸ್ಸೆಲ್ಸಿ ಗಣಿತ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

ವಿಜ್ಞಾನ

ಜೀವ ಕ್ರಿಯೆಗಳು

11) ಮಾನವನ ಜೀರ್ಣಾಂಗ ವ್ಯವಸ್ಥೆಯ ಬಗ್ಗೆ ಬರೆಯಿರಿ

ಉತ್ತರ:– (..........ಹಿಂದಿನ ಸಂಚಿಕೆಯಿಂದ)

ಜಠರದಿಂದ ಆಹಾರದ ಹೊರದೂಡುವಿಕೆಯು ಸಂಕುಚನ ಸ್ನಾಯುಗಳಿಂದ (sphincter muscle) ನಿಯಂತ್ರಿಸಲ್ಪಡುತ್ತದೆ. ಅದು ಆಹಾರವನ್ನು ಸಣ್ಣ ಪ್ರಮಾಣದಲ್ಲಿ ಸಣ್ಣಕರುಳಿಗೆ ಬಿಡುಗಡೆ ಮಾಡುತ್ತದೆ. ಈಗ ಆಹಾರವು ಜಠರದಿಂದ ಸಣ್ಣಕರುಳಿಗೆ ಪ್ರವೇಶಿಸುತ್ತದೆ. ಇದು ಜೀರ್ಣನಾಳದ ಅತ್ಯಂತ ಉದ್ದದ ಭಾಗವಾಗಿದ್ದು, ವ್ಯಾಪಕವಾಗಿ ಸುರುಳಿ ಹೊಂದಿ ಕಡಿಮೆ ಸ್ಥಳದಲ್ಲಿ ಅಳವಡಿಸಲ್ಪಟ್ಟಿದೆ. ಸಣ್ಣಕರುಳಿನ ಉದ್ದವು ವಿವಿಧ ಪ್ರಾಣಿಗಳಲ್ಲಿ ಅವು ಸೇವಿಸುವ ಆಹಾರದ ಆಧಾರದ ಮೇಲೆ ವಿಭಿನ್ನವಾಗಿವೆ. ಹುಲ್ಲನ್ನು ತಿನ್ನುವ ಸಸ್ಯಾಹಾರಿಗಳಿಗೆ ಸೆಲ್ಯುಲೋಸನ್ನು ಜೀರ್ಣಿಸುವ ಸಲುವಾಗಿ ಉದ್ದನೆಯ ಸಣ್ಣಕರಳು ಇದ್ದರೆ ಹುಲಿಯಂಥ ಮಾಂಸಾಹಾರಿಗಳು ಗಿಡ್ಡ ಸಣ್ಣಕರುಳನ್ನು ಹೊಂದಿವೆ.

ಸಣ್ಣಕರುಳು ಎಂಬುದು ಕಾರ್ಬೋಹೈಡ್ರೇಟ್‌ಗಳು, ಪ್ರೋಟೀನ್‌ಗಳು ಮತ್ತು ಕೊಬ್ಬುಗಳು ಸಂಪೂರ್ಣ ಪಚನವಾಗುವ ಸ್ಥಳವಾಗಿದೆ. ಈ ಉದ್ದೇಶಕ್ಕಾಗಿ ಇದು ಮೇದೋಜೀರಕ ಗ್ರಂಥಿ ಮತ್ತು ಯಕೃತ್‌ಗಳ ಸ್ರವಿಕೆಗಳ ಸಹಾಯ ಪಡೆಯುತ್ತದೆ.

ಜಠರದಿಂದ ಬರುವ ಆಹಾರವು ಆಮ್ಲೀಯವಾಗಿದ್ದು ಮೇದೋಜೀರಕ ಕಿಣ್ವಗಳ ಪ್ರತಿವರ್ತನೆಗಾಗಿ ಅದನ್ನು ಕ್ಷಾರೀಯಗೊಳಿಸುವ ಅಗತ್ಯವಿದೆ. ಯಕೃತ್‌ನಿಂದ ಸ್ರವಿಕೆಯಾಗುವ ಪಿತ್ತರಸವು ಕೊಬ್ಬಿನ ಮೇಲೆ ಪ್ರತಿವರ್ತಿಸುವ ಜೊತೆಗೆ ಈ ಕಾರ್ಯವನ್ನು ಪೂರ್ಣಗೊಳಿಸುತ್ತದೆ.

ಸಣ್ಣಕರುಳಿನಲ್ಲಿ ಕಂಡುಬರುವ ಕೊಬ್ಬುಗಳು ದೊಡ್ಡ ದೊಡ್ಡ ದುಂಡುಕಣಗಳ(globule) ರೂಪದಲ್ಲಿದ್ದು, ಕಿಣ್ವಗಳಿಗೆ ಅದರ ಮೇಲೆ ವರ್ತಿಸಲು ಕಷ್ಟವಾಗುತ್ತದೆ. ಪಿತ್ತರಸದ ಲವಣಗಳು ಅವುಗಳನ್ನು ಚಿಕ್ಕ ಚಿಕ್ಕ ದುಂಡು ಕಣಗಳಾಗಿ ವಿಭಜಿಸಿ ಕಿಣ್ವಗಳ ಕಾರ್ಯಕ್ಷಮತೆಯನ್ನು ಹೆಚ್ಚಿಸುತ್ತದೆ.


ಮೇದೋಜೀರಕವು ಮೇದೋಜೀರಕ ರಸವನ್ನು ಸ್ರವಿಸುತ್ತದೆ. ಅದು ಪ್ರೋಟೀನನ್ನು ಜೀರ್ಣಿಸಲು ಟ್ರಿಪ್ಸಿನ್ ಮತ್ತು ಎಮಲ್ಸೀಕರಣಗೊಂಡ ಕೊಬ್ಬುಗಳನ್ನು ವಿಭಜಿಸಲು ಲೈಪೇಸ್‌ನಂತಹ ಕಿಣ್ವಗಳನ್ನು ಹೊಂದಿದೆ.

ಸಣ್ಣಕರುಳಿನ ಭಿತ್ತಿಯು ಗ್ರಂಥಿಗಳನ್ನು ಹೊಂದಿದ್ದು ಅವು ಕರುಳಿನ ರಸವನ್ನು ಸ್ರವಿಸುತ್ತವೆ. ಇದರಲ್ಲಿರುವ ಕಿಣ್ವಗಳು ಅಂತಿಮವಾಗಿ ಪ್ರೋಟಿನ್‌ಗಳನ್ನು ಅಮೈನೋ ಆಮ್ಲಗಳಾಗಿ, ಸಂಕೀರ್ಣ ಕಾರ್ಬೋಹೈಡ್ರೇಟ್‌ಗಳನ್ನು ಗ್ಲುಕೋಸ್ ಆಗಿ ಹಾಗೂ ಕೊಬ್ಬುಗಳನ್ನು ಕೊಬ್ಬಿನ ಆಮ್ಲ ಮತ್ತು ಗ್ಲಿಸರಾಲ್ ಆಗಿ ಪರಿವರ್ತಿಸುತ್ತವೆ.

ಜೀರ್ಣವಾದ ಆಹಾರವು ಕರುಳಿನ ಗೋಡೆಗಳಿಂದ ಹೀರಲ್ಪಡುತ್ತದೆ. ಹೀರಿಕೆಯಾಗದ ಆಹಾರವು ದೊಡ್ಡ ಕರುಳಿಗೆ ಕಳಿಸಲ್ಪಡುತ್ತದೆ. ಅಲ್ಲಿ ಅದರ ಗೋಡೆಯು ಈ ಪದಾರ್ಥಗಳಿಂದ ಹೆಚ್ಚಿನ ನೀರನ್ನು ಹೀರಿಕೊಳ್ಳುತ್ತದೆ. ಉಳಿದ ಪದಾರ್ಥಗಳನ್ನು ಗುದದ್ವಾರದ ಮೂಲಕ ದೇಹದಿಂದ ಹೊರಹಾಕಲಾಗುತ್ತದೆ

15) ಮಾನವನ ಜೀರ್ಣಾಂಗವ್ಯೂಹದ ಚಿತ್ರಬರೆದು ಭಾಗಗಳನ್ನು ಗುರುತಿಸಿ

ಉತ್ತರ:–



16) ಬಿಟ್ಟ ಸ್ಥಳ ತುಂಬಿ

1) ಆರೋಗ್ಯ ವ್ಯಕ್ತಿಯ ರಕ್ತದ ಒತ್ತಡ ....

ಉತ್ತರ:– 120/80 mm/hg

2) ಅಮಿಬಾ ಆಹಾರವನ್ನು ಸೆರೆಹಿಡಿಯಲು ಬಳಸುವ ವ್ಯವಸ್ಥೆ ......

ಉತ್ತರ:– ಮಿಥ್ಯಾಪಾದ

3) ಲಾಲಾರಸವು ಲಾಲಾರಸದ ಅಮೈಲೇಸ್ ಎಂಬ ಕಿಣ್ವವನ್ನು ಹೊಂದಿದ್ದು ಅದು ಪಿಷ್ಟ ಎಂಬ ಸಂಕೀರ್ಣ ಅಣುವನ್ನು ವಿಭಜಿಸಿ .... ಬಿಡುಗಡೆ ಮಾಡುತ್ತದೆ

ಉತ್ತರ:– ಸಕ್ಕರೆ.

4) ರಕ್ತದಲ್ಲಿ ಆಹಾರ, ಕಾರ್ಬನ್ ಡೈ ಆಕ್ಸೈಡ್ ಮತ್ತು ನೈಟ್ರೋಜನ್ಯುಕ್ತ ತ್ಯಾಜ್ಯಗಳನ್ನು ಕರಗಿದ ರೂಪದಲ್ಲಿ.............................. ಸಾಗಿಸುತ್ತದೆ.

ಉತ್ತರ:– ಪ್ಲಾಸ್ಮಾ

5) ದ್ಯುತಿ ಸಂಶ್ಲೇಷಣಾ ಕ್ರಿಯೆಗೆ ಬೇಕಾದ ಕಚ್ಚಾಪದಾರ್ಥಗಳು................... ಮತ್ತು ....

ಉತ್ತರ:– ಕಾರ್ಬನ್ ಡೈ ಆಕ್ಸೈಡ್ ಮತ್ತು ನೀರು

6) ದ್ಯುತಿ ಸಂಶ್ಲೇಷಣೆ ಕ್ರಿಯೆಗೆ ಬೇಕಾದ ಅಂಶಗಳು .... ಮತ್ತು.....................

ಉತ್ತರ:– ಸೂರ್ಯನ ಬೆಳಕು ಮತ್ತು ಕ್ಲೋರೋಫಿಲ್

7) ಬೆಳಗಿನ ಹೊತ್ತಿನಲ್ಲಿ ಸಸ್ಯಗಳು .... ಬಳಸಿಕೊಳ್ಳುವ ಕಾರಣ ಅದೂ ಬಿಡುಗಡೆ ಮಾಡುವುದಿಲ್ಲ

ಉತ್ತರ:– ಕಾರ್ಬನ್ ಡೈ ಆಕ್ಸೈಡ್

8) ನಮ್ಮ ದೇಹದಲ್ಲಿ ಆಹಾರ, ಕಾರ್ಬನ್ ಡೈ ಆಕ್ಸೈಡ್ ಮತ್ತು ನೈಟ್ರೋಜನ್ ಯುಕ್ತ ತ್ಯಾಜ್ಯಗಳನ್ನು ಕರಗಿದ ರೂಪದಲ್ಲಿ .... ಸಾಗಿಸುತ್ತದೆ.

ಉತ್ತರ:– ಪ್ಲಾಸ್ಮಾ

9) ಹೃದಯವು ಸ್ನಾಯುವಿನಿಂದಾದ ಒಂದು ಅಂಗವಾಗಿದ್ದು ಅದೂ ನಮ್ಮ .... ದೊಡ್ಡದಿದೆ


ಉತ್ತರ:– ಮುಷ್ಟಿಯಷ್ಟು

10)....................ಗಳಲ್ಲಿ ರಕ್ತದಿಂದ ಯೂರಿಯಾ ಅಥವಾ ಯೂರಿಕ್ ಆಮ್ಲಗಳಂಥಹ ನೈಟ್ರೋಜನ್ ಯುಕ್ತ ತ್ಯಾಜ್ಯಗಳನ್ನು ತೆಗೆದುಹಾಕುತ್ತದೆ.

ಉತ್ತರ:– ಮೂತ್ರಪಿಂಡ

17) ಮಾನವ ಹೃದಯದ ಛೇದ ನೋಟದ ಚಿತ್ರ ಬರೆದು ಭಾಗಗಳನ್ನು ಹೆಸರಿಸಿ

ಉತ್ತರ:–



(ಮುಂದುವರಿಯುವುದು)

CHEMISTRY

CHEMICAL KINETICS

36. Give some examples for the third order reactions.

Ans:- Some examples for 3[rd] order reactions are-

(a) Oxidation of stannous chloride by ferric chloride

$$2FeCl_3 + SnCl_2 \rightarrow 2FeCl_2 + SnCl_4$$

The rate of the reaction is -

$$v = k[SnCl_2]^1[FeCl_3]^2.$$

Hence the order $= 1 + 2 = 3$

(b) Reaction between nitric oxide and oxygen

$$2NO + O_2 \rightarrow 2NO_2$$

The rate of the reaction is –

$v = k[NO]^2[O_2]^1$. Hence order $=1+2=3$

37. Mention some of the differences between the order and the molecularity of a reaction.

Ans:- Some of the differences between the order and the molecularity of a reaction are –

Order of a reaction	*Molecularity of a reaction*
It is the sum of the coefficients of the reacting species involved in the rate equation.	It is the number of reacting species involved in simultaneous collisions in an elementary reaction.
It is experimentally determined value.	It is a theoretical value.
It is derived from the rate equation.	It is derived from mechanism of reaction.
It depends upon pressure and temperature.	It is independent of pressure and temperature.
Order can be zero, a fraction or a whole number.	It is only a whole number.
The overall order of the multistep reaction is given by the slowest step only.	In a multistep reaction, the molecularities of all the steps are determined.

38. Mention the characteristics of the third order reaction?

Ans:- The characteristics of the third order reaction are as follows –

(a) The rate of the reaction increases 2^3 times when the concentration of each of the reactant is doubled

(b) The half life $\left(t_{1/2}\right)$ of the third order reaction is inversely proportional to the square of the initial concentration, if there is only one reactant or the concentration of all the reactants is in the ratio found in the stoichiometric equation.

$$t_{1/2} = \frac{3}{2a^2k} \text{ (or) } t_{1/2} \alpha \frac{1}{a^2}$$

39. What is Activation energy (E_a)?

Ans:- The minimum extra energy that the (average) normal reacting molecule should acquire to attain threshold energy i.e., to form products, upon collision is called activation energy (E_a) of the reaction.

39. What is Activation energy (E_a)?

Ans:- Activation energy (E_a) = Threshold energy - average energy

40. How does the catalyst affect the activation energy of the reaction.

Ans:- A positive catalyst decreases the activation energy of the reaction and makes it faster. That is, if E_a is the activation energy of the reaction in the absence of the catalyst and Ea` is the activation energy of the reaction in the presence of the catalyst. Then Ea` < Ea.

41. The activation energy of the first order reaction at 300 K is 60 kJ mol^{-1}. In the presence of the catalyst, the activation energy gets lowered to 50 kJmol^{-1} at 300K. How many times the reaction rate changes in the presence of a catalyst at the same temperature?

Soln :- Let $k_1 = A.e^{-Ea/RT}$ and

$$k_2 = A.e^{-Ea(c)/RT}$$

$$\log\frac{k_2}{k_1} = \frac{E_a - E_a(c)}{2.303RT}$$

$$\log\frac{k_2}{k_1} = \frac{6000-5000}{2.303 \times 8.314 \times 300} = 1.741$$

$$\therefore \frac{k_2}{k_1} = 55.08$$

∴ Reaction rate increases by 55.08 times.

42. From a graph of log k versus $\frac{1}{T}$, slope of the graph was found to be 3.4 x 10^3. Calculate the energy of activation of the reaction.

Soln:- Arrhenius equation can be written as -

$$\log k = \log A - \frac{E_a}{2.303RT}$$

Hence, the graph of log k versus $\frac{1}{T}$ should be a straight line.

Its slope is $\frac{E_a}{2.303R}$

that is, $\frac{E_a}{2.303R}$ = slope

$$E_a = \text{slope} \times 2.303R = 3.4 \times 10^3 \times 2.303 \times 8.314$$
$$= 6.51 \text{ kJ / mol}$$

43. A first order reaction is 50% completed in 40 minutes. Calculate (i) rate constant and (ii) the time taken for its 90% completion.

Soln:- **Given that -** $t_{1/2} = 40$ min

$$k = \frac{0.693}{40} = 0.017325 \text{ min}^{-1}$$

$$t = \frac{2.303}{k} \times \log\frac{a}{(a-x)}$$

$$t = \frac{2.303}{0.017325} \times \log\frac{100}{10} = 132.93 \text{ min}$$

Rate constant = 0.017325 min^{-1}

Time for 90% completion =132.93 min

ಸಾಹಿತ್ಯ ಅಕಾಡೆಮಿ ಹಮ್ಮಿಕೊಂಡಿದ್ದ ಸಂವಾದದಲ್ಲಿ ಬಾನು ಮುಷ್ತಾಕ್ ಅಭಿಮತ

‘ಕನ್ನಡದಿಂದ ರೂಪುಗೊಂಡ ವ್ಯಕ್ತಿತ್ವ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಉರ್ದು ನನ್ನ ಮಾತೃಭಾಷೆಯಾದರೂ ಕನ್ನಡ ಭಾಷೆಯ ಕಲಿಕೆ ನನ್ನ ಮೇಲೆ ಅಗಾಧ ಪರಿಣಾಮ ಬೀರಿತು. ಈ ನಾಡಿನ ಸಾಂಸ್ಕೃತಿಕ ಲೋಕ ಮತ್ತು ಕನ್ನಡದ ಪ್ರಭಾವದಿಂದಲೇ ವ್ಯಕ್ತಿತ್ವ ಹಾಗೂ ಬರವಣಿಗೆ ರೂಪುಗೊಳ್ಳಲು ಸಾಧ್ಯವಾಯಿತು’ ಎಂದು ‘ಅಂತರ ರಾಷ್ಟ್ರೀಯ ಬುಕರ್ ಪ್ರಶಸ್ತಿ’ ವಿಜೇತ ಲೇಖಕಿ ಬಾನು ಮುಷ್ತಾಕ್ ಅಭಿಪ್ರಾಯಪಟ್ಟರು.

ಕರ್ನಾಟಕ ಲೇಖಕಿಯರ ಸಂಘದ ಸಹಯೋಗದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ನಗರದಲ್ಲಿ ಮಂಗಳವಾರ ಹಮ್ಮಿಕೊಂಡಿದ್ದ ‘ಬುಕರ್ ಬಾನು ಮುಷ್ತಾಕ್’ ಸಂವಾದ ಕಾರ್ಯಕ್ರಮದಲ್ಲಿ ಭಾಗವಹಿಸಿ, ಮಾತನಾಡಿದರು.

‘ನನಗೆ ಸಿಕ್ಕ ಮನ್ನಣೆ ವೈಯಕ್ತಿಕ ಆಗಿರದೆ ಸಾಮೂಹಿಕವಾಗಿದೆ. ಇಲ್ಲಿನ ನೆಲ, ಜನ, ಚಳವಳಿ, ಸೈದ್ಧಾಂತಿಕ ಸ್ಪಷ್ಟತೆ ಹಾಗೂ ಸಾಹಿತ್ಯಿಕ ವಾತಾವರಣ ನನ್ನನ್ನು ರೂಪಿಸಿದೆ. ಉರ್ದು ಭಾಷೆಯನ್ನಷ್ಟೇ ಓದಿದ್ದರೆ ಬಹುಶಃ ನನ್ನ ವ್ಯಕ್ತಿತ್ವ ಈ ರೀತಿ ರೂಪುಗೊಳ್ಳಲು ಹಾಗೂ ಬರೆಯಲು ಸಾಧ್ಯವಾಗುತ್ತಿರಲಿಲ್ಲ’ ಎಂದು ಹೇಳಿದರು.

‘ಕೋರ್ಟ್ ಸಭಾಂಗಣದಲ್ಲಿ ಕುಳಿತಾಗ ಕವನಗಳು ನನ್ನಿಂದ ಹೊರಹೊಮ್ಮುತ್ತಿದ್ದವು. ಅವನ್ನು ಆಗಲೇ ಬರೆದು ಕೋಟಿನ ಜೇಬಿನಲ್ಲಿ ಇಟ್ಟುಕೊಳ್ಳುತ್ತಿದ್ದೆ. ಕಕ್ಷಿದಾರರು ಸಿಕ್ಕಾಗ ಅದರ ಹಿಂಭಾಗದಲ್ಲಿ ದಿನಾಂಕ, ಮಾಹಿತಿ ಬರೆದುಕೊಡುತ್ತಿದ್ದೆ. ಇಂತಹ ಅವ್ಯವಸ್ಥೆಯ ಸಾಹಿತ್ಯ ಕೃಷಿ ನನ್ನದಾಗಿತ್ತು’ ಎಂದು ಸ್ಮರಿಸಿಕೊಂಡರು.

ಪತ್ರಕರ್ತ ಜಿ.ಎನ್. ಮೋಹನ್ ಸಂವಾದ ನಡೆಸಿಕೊಟ್ಟರು. ಲೇಖಕಿ ಎಂ.ಎಸ್.ಆಶಾದೇವಿ, ಕವಿ ಸುಬ್ಬು ಹೊಲೆಯಾರ್, ನಾಟಕಕಾರ ಕೆ.ವೈ. ನಾರಾಯಣಸ್ವಾಮಿ, ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕ ಡೊಮಿನಿಕ್ ಡಿ., ಸಾಮಾಜಿಕ ಕಾರ್ಯಕರ್ತೆ ನಜ್ಮಾ ಚಿಕ್ಕನೇರಳೆ, ಕರ್ನಾಟಕ ಲೇಖಕಿಯ ಸಂಘದ ಖಜಾಂಚಿ ಮಂಜುಳಾ ಶಿವಾನಂದ ಸಂವಾದದಲ್ಲಿ ಪಾಲ್ಗೊಂಡಿದ್ದರು.


ಕಾರ್ಯಕ್ರಮದಲ್ಲಿ ಬಾನು ಮುಷ್ತಾಕ್ ಅವರಿಗೆ ಅಭಿನಂದನೆ ಸಲ್ಲಿಸಲಾಯಿತು. ಲೇಖಕಿ ಪ್ರತಿಭಾ ನಂದಕುಮಾರ್, ಸಾಹಿತಿ ಹಂಪ ನಾಗರಾಜಯ್ಯ, ವಕೀಲ ಸಿ.ಎಚ್. ಹನುಮಂತರಾಯ, ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಎಲ್.ಎನ್. ಮುಕುಂದರಾಜ್, ಲೇಖಕಿಯರಾದ ಡಾ. ವಸುಂಧರಾ ಭೂಪತಿ ಹಾಗೂ ಸುಜಾತಾ ಎಚ್.ಆರ್. ಉಪಸ್ಥಿತರಿದ್ದರು —ಪ್ರಜಾವಾಣಿ ಚಿತ್ರ

‘ಮೊಹಲ್ಲಾದಾಚೆಗೂ ವಿಸ್ತರಿಸಿದ ಓದುಗರು’

‘ಮೊದಮೊದಲು ನನ್ನ ಮೊಹಲ್ಲಾದವರು, ನನ್ನ ಸಮುದಾಯದವರು ಮತ್ತು ವಿದ್ವಾಂಸರು ನನ್ನ ಕಥೆಗಳನ್ನು ಓದುತ್ತಿದ್ದರು. ಈಗ ಎಲ್ಲರೂ ಆ ಕಥೆಗಳನ್ನು ಓದುತ್ತಿದ್ದಾರೆ’ ಎಂದು ಬಾನು ಮುಷ್ತಾಕ್ ಅಭಿಪ್ರಾಯಪಟ್ಟರು.

ತಮ್ಮ ‘ಎದೆಯ ಹಣತೆ’ ಕೃತಿಗೆ ವ್ಯಕ್ತವಾದ ಸ್ಪಂದನೆ ಬಗ್ಗೆ ಮಾತನಾಡಿದ ಅವರು,‘ನಾನು ಸೃಷ್ಟಿಸಿದ ಪಾತ್ರಗಳ ಜತೆಗೆ ಸಂಬಂಧವನ್ನೂ ಬೆಳೆಸಿಕೊಳ್ಳುತ್ತಿದ್ದಾರೆ. ನಮ್ಮ ಸಂದೇಶ ಓದುಗರಲ್ಲಿ ಬೆಳೆಯಬೇಕು. ಆ ಪ್ರಕ್ರಿಯೆ ಈಗ ಆಗುತ್ತಿದೆ’ ಎಂದರು. ‘ಸಾಮಾಜಿಕ ವಿರೋಧ, ಅವಮಾನ, ಶಂಕೆಯನ್ನು ಎತ್ತಿ ತೋರಿಸುವ ಕ್ರಿಯೆ ಮಾಡದಿದ್ದರೆ, ಅದು ತಪ್ಪು ಅಂತ ತಿಳಿಯುವುದಾದರೂ ಹೇಗೆ? ಬೇರೆಯವರ ನೋವನ್ನು ಅನುಭವಿಸುವ ಸಂವೇದನಾಶೀಲತೆ ಇಲ್ಲದಿದ್ದರೆ ನಾವು ನಿಜವಾದ ಲೇಖಕರಾಗಲು ಸಾಧ್ಯವಿಲ್ಲ’ ಎಂದು ಹೇಳಿದರು.



ಬೆಂಗಳೂರು-ಬೆಳಗಾವಿ ವಂದೇ ಭಾರತ್ 10ರಂದು ಚಾಲನೆ

ನವದೆಹಲಿ: ಬೆಂಗಳೂರು-ಬೆಳಗಾವಿ ವಂದೇ ಭಾರತ್ ರೈಲಿಗೆ ಇದೇ 10ರಂದು ಪ್ರಧಾನಿ ನರೇಂದ್ರ ಮೋದಿ ಚಾಲನೆ ನೀಡಲಿದ್ದಾರೆ.

ಅಂದು ರಾಜ್ಯ ಪ್ರವಾಸ ಕೈಗೊಳ್ಳುವ ಮೋದಿ ಅವರು ವಿವಿಧ ಅಭಿವೃದ್ಧಿ ಕಾಮಗಾರಿಗಳಿಗೆ ಚಾಲನೆ ನೀಡುವರು.

‘ಈ ಹಿಂದೆ ನಾನು ಸಲ್ಲಿಸಿದ ಕೋರಿಕೆಯ ಮೇರೆಗೆ ಬೆಂಗಳೂರು - ಬೆಳಗಾವಿ ವಂದೇ ಭಾರತ್ ರೈಲಿಗೆ ಅನುಮೋದನೆ ನೀಡಲಾಗಿತ್ತು. ಬೆಳಗಾವಿಯಿಂದ ಬೆಳಿಗ್ಗೆ 5.20ಕ್ಕೆ ಹೊರಟು ಬೆಂಗಳೂರಿಗೆ ಮಧ್ಯಾಹ್ನ 1.50ಕ್ಕೆ ತಲುಪಲಿದೆ. ಬೆಂಗಳೂರಿನಿಂದ ಮಧ್ಯಾಹ್ನ 2.20ಕ್ಕೆ ಹೊರಟು ರಾತ್ರಿ 10.40ಕ್ಕೆ ಬೆಳಗಾವಿಗೆ ತಲುಪಲಿದೆ. ಈ ಮೂಲಕ ಬೆಂಗಳೂರು, ತುಮಕೂರು, ದಾವಣಗೆರೆ, ಹಾವೇರಿ, ಧಾರವಾಡ ಹಾಗೂ ಬೆಳಗಾವಿಯ ನಡುವೆ ಸಂಪರ್ಕ ಹೆಚ್ಚಿಸಲಿದೆ’ ಎಂದು ಆಹಾರ ಸಚಿವ ಪ್ರಲ್ಹಾದ ಜೋಶಿ ತಿಳಿಸಿದ್ದಾರೆ.

ಸರ್ಕಾರ ಕಟ್ಟಿ ಹಾಕಲು ಕಾರ್ಯತಂತ್ರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕಾಂಗ್ರೆಸ್ ನೇತೃತ್ವದ ಸರ್ಕಾರದ ದುರಾಡಳಿತ, ಕಾಲ್ತುಳಿತದಿಂದ 11 ಮಂದಿ ಸಾವು, ರಸಗೊಬ್ಬರದ ಕೊರತೆ, ಬಿಬಿಎಂಪಿ ವಿಭಜನೆ ಸೇರಿ ಹಲವು ಜ್ವಲಂತ ವಿಷಯಗಳನ್ನು ಈ ಬಾರಿಯ ವಿಧಾನಮಂಡಲದ ಅಧಿವೇಶನದಲ್ಲಿ ಪ್ರಸ್ತಾಪಿಸಲು ನಿರ್ಧರಿಸಲಾಗಿದೆ’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ ತಿಳಿಸಿದರು.

ಅಧಿವೇಶನದಲ್ಲಿ ಪ್ರಸ್ತಾಪಿಸಬೇಕಾದ ವಿಷಯಗಳ ಕುರಿತು ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಅವರ ಅಧ್ಯಕ್ಷತೆಯಲ್ಲಿ ಮಂಗಳವಾರ ನಡೆದ ಪ್ರಮುಖ ಶಾಸಕರ ಸಭೆಯ ಬಳಿಕ ಅವರು ಸುದ್ದಿಗಾರರಿಗೆ ಮಾಹಿತಿ ನೀಡಿದರು.

ಸದನದಲ್ಲಿ ಬಿಜೆಪಿ- ಜೆಡಿಎಸ್ ಜಂಟಿಯಾಗಿ ಹೋರಾಟ ನಡೆಸಲಿದ್ದು, ಇದಕ್ಕಾಗಿ ಇದೇ 10ರಂದು ಎರಡೂ ಪಕ್ಷಗಳ ಸಮನ್ವಯ ಸಮಿತಿ ಸಭೆಯನ್ನು ಕರೆಯಲಾಗಿದೆ. ಸರ್ಕಾರವನ್ನು ಕಟ್ಟಿ ಹಾಕಲು ಕಾರ್ಯತಂತ್ರ ರೂಪಿಸಲಾಗುವುದು ಎಂದು ಹೇಳಿದರು.

ಮಳೆಯಿಂದ ಬೆಳೆ ಹಾನಿ, ಬಿಬಿಎಂಪಿಯನ್ನು ಐದು ಭಾಗವಾಗಿ ವಿಭಜಿಸಿರುವುದು, ಖಜಾನೆ ಖಾಲಿ ಆಗಿರುವುದರಿಂದ ನೌಕರರಿಗೆ ಸಂಬಳ ಕೊಡಲಾಗದ ಸ್ಥಿತಿ ನಿರ್ಮಾಣ ಆಗಿರುವುದನ್ನು ಪ್ರಸ್ತಾಪಿಸಲಾಗುವುದು ಎಂದರು.

ಯಾವುದೇ ಅಭಿವೃದ್ಧಿ ಯೋಜನೆಗಳನ್ನು ಉದ್ಘಾಟನೆ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ಕಾಂಗ್ರೆಸ್ ಶಾಸಕರೇ ದೂರುತ್ತಿದ್ದಾರೆ. ಅಭಿವೃದ್ಧಿಗೆ ಹಣ ಬಿಡುಗಡೆ ಮಾಡುತ್ತಿಲ್ಲ. ಸರ್ಕಾರ ಪಾಪರ್ ಆಗಿದೆ. ಹೀಗಾಗಿ ಸರ್ಕಾರಿ ನೌಕರರಿಗೆ 2–3 ತಿಂಗಳಿಂದ ಸಂಬಳ ಸಿಗುತ್ತಿಲ್ಲ. ಸಾರಿಗೆ ನೌಕರರು ಮುಷ್ಕರಕ್ಕೆ ಇಳಿದಿದ್ದಾರೆ ಎಂದು ಅಶೋಕ ಹೇಳಿದರು.

‘ರಾಜ್ಯದಲ್ಲಿ ಅಪರಾಧಗಳ ಸಂಖ್ಯೆ ಹೆಚ್ಚಾಗಿದೆ. ಡ್ರಗ್ ಮಾಫಿಯಾದ ಹಾವಳಿ ವ್ಯಾಪಕವಾಗಿದೆ. ಬ್ರ್ಯಾಂಡ್ ಬೆಂಗಳೂರು ಮಾಡಲು ಹಣದ ಕೊರತೆ ಕಾಡುತ್ತಿದೆ. ಇವೆಲ್ಲ ವಿಷಯವನ್ನು ಪ್ರಸ್ತಾಪಿಸಲು ತೀರ್ಮಾನಿಸಿದ್ದೇವೆ. ಈ ಕುರಿತು ಮಿತ್ರ ಪಕ್ಷ ಜೆಡಿಎಸ್‌ನ ನಾಯಕ ಎಚ್.ಡಿ.ಕುಮಾರಸ್ವಾಮಿ ಅವರ ಜತೆಗೆ ಮಾತನಾಡಿದ್ದೇನೆ. ಭಾನುವಾರ ನಡೆಯುವ ಸಮನ್ವಯ ಸಮಿತಿ ಸಭೆಗೆ ಅವರು ಬರುವ ಸಾಧ್ಯತೆ ಇದೆ’ ಎಂದು ತಿಳಿಸಿದರು.

ಡಾ.ಸಿ.ಎನ್. ಅಶ್ವತ್ಥನಾರಾಯಣ, ವಿ.ಸುನಿಲ್ ಕುಮಾರ್, ಎಸ್. ಸುರೇಶ್‌ಕುಮಾರ್, ಆರಗ ಜ್ಞಾನೇಂದ್ರ, ಕೆ. ಗೋಪಾಲಯ್ಯ, ಸಿ.ಸಿ.ಪಾಟೀಲ ಸಭೆಯಲ್ಲಿ ಇದ್ದರು.


ಆರ್. ಅಶೋಕ ಹಾಗೂ ಬಿ.ವೈ. ವಿಜಯೇಂದ್ರ ನೇತೃತ್ವದಲ್ಲಿ ಬಿಜೆಪಿಯ ಪ್ರಮುಖ ಶಾಸಕರ ಸಭೆ

ಮತ ಕಳ್ಳತನ ಪ್ರತಿಭಟನೆ 8ಕ್ಕೆ: ಇಂದು ಕಾಂಗ್ರೆಸ್ ಸಭೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚುನಾವಣೆಯಲ್ಲಿ ಮತ ಕಳ್ಳತನ ನಡೆದಿದೆ ಎಂದು ಆರೋಪಿಸಿ ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ನೇತೃತ್ವದಲ್ಲಿ ಸ್ವಾತಂತ್ರ್ಯ ಉದ್ಯಾನದಲ್ಲಿ ಶುಕ್ರವಾರ (ಆಗಸ್ಟ್ 8) ನಡೆಯಲಿರುವ ಪ್ರತಿಭಟನಾ ಸಮಾವೇಶದ ಸಿದ್ಧತೆಗಾಗಿ ಕೆಪಿಸಿಸಿ ಕಚೇರಿಯ ಭಾರತ್ ಜೋಡೊ ಭವನದಲ್ಲಿ ಬುಧವಾರ ಪೂರ್ವಭಾವಿ ಸಭೆ ನಡೆಯಲಿದೆ.

ಸಂಜೆ 6 ಗಂಟೆಗೆ ನಡೆಯಲಿರುವ ಈ ಸಭೆಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್, ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ, ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೆಪಿಸಿಸಿ ಕಾರ್ಯಾಧ್ಯಕ್ಷರು ಮತ್ತು ಎಐಸಿಸಿಯಿಂದ ನೇಮಕಗೊಂಡಿರುವ ಉಸ್ತುವಾರಿ ಕಾರ್ಯದರ್ಶಿಗಳು ಭಾಗವಹಿಸಲಿದ್ದಾರೆ.

ಎಲ್ಲ ಸಚಿವರು, ಸಂಸದರು, ಶಾಸಕರು, ವಿಧಾನ ಪರಿಷತ್ ಸದಸ್ಯರು, ಮಾಜಿ ಸಂಸದರು, ಮಾಜಿ ಶಾಸಕರು, ಕಳೆದ ಲೋಕಸಭೆ ಚುನಾವಣೆಯಲ್ಲಿ ಪರಾಜಿತರಾದ ಅಭ್ಯರ್ಥಿಗಳು, ವಿಧಾನಸಭೆ ಚುನಾವಣೆಯಲ್ಲಿ ಪರಾಜಿತರಾದ ಅಭ್ಯರ್ಥಿಗಳು, ನಿಗಮ ಮಂಡಳಿ ಅಧ್ಯಕ್ಷರು, ಕೆಪಿಸಿಸಿ ಪದಾಧಿಕಾರಿಗಳು, ಜಿಲ್ಲಾ ಕಾಂಗ್ರೆಸ್ ಸಮಿತಿ ಅಧ್ಯಕ್ಷರು, ಮುಂಚೂಣಿ ಘಟಕಗಳ ಅಧ್ಯಕ್ಷರು, ಬಿಬಿಎಂಪಿ ವ್ಯಾಪ್ತಿಯ ಪ್ರಮುಖ ನಾಯಕರಿಗೂ ಈ ಸಭೆಗೆ ಆಹ್ವಾನ ನೀಡಲಾಗಿದೆ.

ಇದೇ 5ರಂದು ನಡೆಯಬೇಕಿದ್ದ ಈ ಪ್ರತಿಭಟನಾ ಸಮಾವೇಶವನ್ನು ಜಾರ್ಖಂಡ್ ಮಾಜಿ ಮುಖ್ಯಮಂತ್ರಿ ಶಿಬು ಸೊರೇನ್ ನಿಧನದ ಕಾರಣಕ್ಕೆ 8ಕ್ಕೆ ಮುಂದೂಡಲಾಗಿದೆ. ಚುನಾವಣೆಯಲ್ಲಿ ಅಕ್ರಮ ನಡೆದಿರುವ ಬಗ್ಗೆ ರಾಷ್ಟ್ರೀಯ ಮಟ್ಟದಲ್ಲಿ ಗಮನಸೆಳೆಯಲು ಹೋರಾಟದ ರೂಪುರೇಷೆ ಸಿದ್ಧಪಡಿಸುವ ಕುರಿತು ಸಭೆಯಲ್ಲಿ ಪಕ್ಷದ ನಾಯಕರು ಚರ್ಚೆ ನಡೆಸಲಿದ್ದಾರೆ ಎಂದು ಕಾಂಗ್ರೆಸ್ ಮೂಲಗಳು ತಿಳಿಸಿವೆ.

ಸಿಎಲ್‌ಪಿ ಸಭೆ 12ರಂದು



ಇದೇ 11ರಿಂದ 22ರವರೆಗೆ ವಿಧಾನಮಂಡಲ ಅಧಿವೇಶನ ನಡೆಯಲಿದ್ದು, ಸದನದಲ್ಲಿ ಚರ್ಚಿಸಬೇಕಾದ ವಿಷಯಗಳ ಕುರಿತು ವಿಚಾರ ವಿನಿಮಯ ನಡೆಸಲು ಕಾಂಗ್ರೆಸ್ ಶಾಸಕಾಂಗ ಪಕ್ಷದ (ಸಿಎಲ್‌ಪಿ) ಸಭೆ ಇದೇ 12ರಂದು ನಡೆಯಲಿದೆ. ಅಂದು ಸಂಜೆ 6 ಗಂಟೆಗೆ ರ್‍ಯಾಡಿಸನ್ ಬ್ಲೂ ಹೋಟೆಲ್‌ನಲ್ಲಿ ಈ ಸಭೆ ನಡೆಯಲಿದೆ. ಸರ್ಕಾರದ ವಿರುದ್ಧ ವಿರೋಧ ಪಕ್ಷಗಳು ಸದನದಲ್ಲಿ ಪ್ರಸ್ತಾಪಿಸಬಹುದಾದ ವಿಷಯಗಳಿಗೆ ಸಂಬಂಧಿಸಿದಂತೆ ಚರ್ಚಿಸಲು ಸಿಎಲ್‌ಪಿ ಸಭೆ ಆಯೋಜಿಸಲಾಗಿದೆ ಎಂದು ಸಿಎಲ್‌ಪಿ ನಾಯಕ ಸಿದ್ದರಾಮಯ್ಯ ತಿಳಿಸಿದ್ದಾರೆ.

‘ಜಾತಿಗಣತಿ: ‘ಲಿಂಗಾಯತ’ ಧರ್ಮ ಬರೆಸಿ’

ದಾವಣಗೆರೆ: ‘ಜಾತಿಗಣತಿ ಸಂದರ್ಭದಲ್ಲಿ ಧರ್ಮದ ಕಾಲಂನಲ್ಲಿ ‘ಲಿಂಗಾಯತ’, ಜಾತಿ ಕಾಲಂನಲ್ಲಿ ಉಪಪಂಗಡ ನಮೂದಿಸಬೇಕು ಎಂದು ಲಿಂಗಾಯತ ಮಠಾಧಿಪತಿಗಳ ಒಕ್ಕೂಟ ತೀರ್ಮಾನಿಸಿದೆ’ ಎಂದು ಸಾಣೇಹಳ್ಳಿ ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ ಹೇಳಿದರು.


ಪಂಡಿತಾರಾಧ್ಯ ಶಿವಾಚಾರ್ಯ ಸ್ವಾಮೀಜಿ

ಮಂಗಳವಾರ ಇಲ್ಲಿ ನಡೆದಬಸವ ಸಂಸ್ಕೃತಿ ಅಭಿಯಾನದ ಪೂರ್ವಭಾವಿ ಸಭೆಯಲ್ಲಿ ಮಾತನಾಡಿದ ಅವರು, ‘ಲಿಂಗಾಯತ ಸಮುದಾಯದ ಹಲವು ಒಳಪಂಗಡಗಳು ಸರ್ಕಾರದ ಸೌಲಭ್ಯ ಪಡೆಯುತ್ತಿವೆ. ಜಾತಿಗಣತಿಯಲ್ಲಿ ಒಳಪಂಗಡ ನಮೂದಿಸದಿದ್ದರೆ ಸೌಲಭ್ಯ ಕೈತಪ್ಪುವ ಅಪಾಯವಿದೆ’ ಎಂದು ಅಭಿಪ್ರಾಯಪಟ್ಟರು.

‘ಧರ್ಮದ ಕಾಲಂನಲ್ಲಿ ಲಿಂಗಾಯತ ಎಂದು ನಮೂದಿಸುವ ಅವಕಾಶವನ್ನು ಕೇಂದ್ರ ಸರ್ಕಾರ ಕಲ್ಪಿಸುತ್ತಿಲ್ಲ ಎಂಬ ಸುಳಿವು ಸಿಕ್ಕಿದೆ. ಅದಕ್ಕೆ ಅವಕಾಶ ಕೋರಿ ಕೇಂದ್ರದ ಮೇಲೆ ಒತ್ತಡ ಹೇರುವ ಅಗತ್ಯವಿದೆ. ಸರ್ಕಾರವೂ ಸ್ಪಂದಿಸುವ ವಿಶ್ವಾಸವಿದೆ’ ಎಂದು ಹೇಳಿದರು.

‘ಗುರು–ವಿರಕ್ತ ಭಾವನೆ ಲಿಂಗಾಯತ ಧರ್ಮದಲ್ಲಿ ಇಲ್ಲ. ಪಂಚಪೀಠಾಧೀಶರ ಜಾತಿ ಗಣತಿ ಕುರಿತ ಅಭಿಪ್ರಾಯಕ್ಕೆ ವಿರೋಧವಿಲ್ಲ. ಅವರು ಹೇಳಿದ ಎಲ್ಲವನ್ನೂ ಒಪ್ಪುವುದಿಲ್ಲ. ಬಸವತತ್ವವು ಪುರಾಣ ಪರಂಪರೆ ಅಲ್ಲ. ಅವರಲ್ಲಿಯೂ ವೈಜ್ಞಾನಿಕ, ವೈಚಾರಿಕ ಮನೋಭಾವ ಬೆಳೆಯುತ್ತಿರುವುದನ್ನು ಸಕಾರಾತ್ಮಕವಾಗಿ ಸ್ವೀಕರಿಸಿದ್ದೇವೆ’ ಎಂದರು.

‘ಜಾತಿಗಣತಿಯಲ್ಲಿ ಹೀಗೆ ಬರೆಸಬೇಕು ಎಂದು ಜನರ ಮೇಲೆ ಒತ್ತಡ ಹೇರುವುದಿಲ್ಲ. ಬೆಂಗಳೂರಿನಲ್ಲಿ ಅ.5ರಂದು ನಡೆವ ಬಸವತತ್ವ ಅಭಿಯಾನದ ಸಮಾ ರೋಪಕ್ಕೆ ಪಂಚಪೀಠಾಧೀಶರು ಬರುವು ದಾದರೆ ಸ್ವಾಗತಿಸಲು ಸಿದ್ಧ’ ಎಂದರು.

ವಿರಕ್ತ ಮಠದ ಬಸವಪ್ರಭು ಸ್ವಾಮೀಜಿ, ಪಾಂಡೊಮಟ್ಟಿ ವಿರಕ್ತ ಮಠದ ಗುರುಬಸವ ಸ್ವಾಮೀಜಿ, ಅಖಿಲ ಭಾರತ ವೀರಶೈವ ಮಹಾಸಭಾದ ರಾಷ್ಟ್ರೀಯ ಉಪಾಧ್ಯಕ್ಷ ಅಥಣಿ ವೀರಣ್ಣ, ಅಣಬೇರು ರಾಜಣ್ಣ ಹಾಜರಿದ್ದರು.

‘ಪೀಠತ್ಯಾಗ ಸ್ವಾಮೀಜಿಯಿಂದ ಟೋಪಿ ಖರೀದಿ, ಮದ್ಯ ಸೇವನೆ’

ಗುಂಡ್ಲುಪೇಟೆ: ಪೀಠತ್ಯಾಗ ಮಾಡಿದ್ದ ನಿಜಲಿಂಗ ಸ್ವಾಮೀಜಿ (ಮಹಮ್ಮದ್ ನಿಸಾರ್) ಮುಸ್ಲಿಮರು ಧರಿಸುವ ಟೋಪಿಯನ್ನು ಆನ್‌ಲೈನ್‌ನಲ್ಲಿ ಖರೀದಿಸಿರುವುದು, ಮದ್ಯ–ಮಾಂಸ ಸೇವನೆ ಮಾಡಿದ್ದಾರೆ ಎನ್ನಲಾದ ಫೋಟೊ ಹಾಗೂ ವಿಡಿಯೊಗಳು ಹಂಚಿಕೆಯಾಗಿವೆ.

ಪೂರ್ವಾಶ್ರಮದಲ್ಲಿ ಇಸ್ಲಾಂ ಧರ್ಮದವರಾಗಿದ್ದರೆಂಬುದು ಬಯಲಾಗುತ್ತಿದ್ದಂತೆ, ತಾಲ್ಲೂಕಿನ ಚೌಡಹಳ್ಳಿಯ ಗುರು ಮಲ್ಲೇಶ್ವರ ಶಾಖಾ ಮಠದ ಪೀಠ ತ್ಯಾಗಮಾಡಿದ್ದರು. ಸಾಮಾಜಿಕ ಮಾಧ್ಯಮಗಳಲ್ಲಿ ಈಗ ಹಂಚಿಕೆಯಾಗಿರುವ ವಿಡಿಯೊಗಳು ಸನ್ಯಾಸತ್ವಕ್ಕೆ ಮುಂಚಿನವೋ ಅಥವಾ ನಂತರದವೋ ಎಂಬುದು ಖಚಿತವಾಗಿಲ್ಲ. ₹139 ಬೆಲೆಯ ಟೋಪಿಯನ್ನು ನಿಜಲಿಂಗ ಸ್ವಾಮೀಜಿ ಹೆಸರಿನಲ್ಲಿ ಖರೀದಿಸಿರುವ ಬಿಲ್ ಪ್ರತಿ ಜಾಲತಾಣಗಳಲ್ಲಿ ಹರಿದಾಡಿದೆ. ಖರೀದಿಗೆ ಮಠದ ವಿಳಾಸವನ್ನೇ ನೀಡಲಾಗಿದೆ.

‘ಇಸ್ಲಾಂ ಧರ್ಮ ತ್ಯಜಿಸಿ, ಬಸವತತ್ವ ಸ್ವೀಕರಿಸಿದ ನಂತರವೂ ತಮ್ಮ ಧರ್ಮವನ್ನು ಬಿಂಬಿಸುವ ಟೋಪಿ ಖರೀದಿಸಿರುವುದು ಧರ್ಮದ್ರೋಹ’ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಸ್ವಾಮೀಜಿಯು ಗೆಳೆಯರೊಟ್ಟಿಗೆ ಮದ್ಯ, ಮಾಂಸ ಪದಾರ್ಥ ಸೇವಿಸಿ ನಶೆಯಲ್ಲಿ ತೂರಾಡುತ್ತಿರುವ ಫೋಟೊ ಹಾಗೂ ವಿಡಿಯೊಗಳು ಹಂಚಿಕೆ ಆಗುತ್ತಿದ್ದು, ಸ್ವಾಮೀಜಿ ವಿರುದ್ಧ ಆಕ್ರೋಶ ಹೆಚ್ಚಾಗಿದೆ.

ಯಾದಗಿರಿ ಜಿಲ್ಲೆಯ ಮಹಮ್ಮದ್ ನಿಸಾರ್ (23) ಬಸವ ತತ್ವಕ್ಕೆ ಮನಸೋತು ಕೆಲ ತಿಂಗಳ ಹಿಂದೆ ಲಿಂಗದೀಕ್ಷೆ ಪಡೆದು ಸನ್ಯಾಸತ್ವ ಸ್ವೀಕರಿಸಿ ದ್ದರು. ಈಚೆಗೆ ಅವರ ಆಧಾರ್ ಕಾರ್ಡ್‌ನಲ್ಲಿ ಪೂರ್ವಾಶ್ರಮದ ಧರ್ಮದ ಉಲ್ಲೇಖ ಇರುವುದು ಬಯಲಾದ ಬಳಿಕ ಭಕ್ತರ ವಿರೋಧಕ್ಕೆ ಮಣಿದು ಪೀಠ ತ್ಯಜಿಸಿ, ಮಠದಿಂದ ಹೊರ ನಡೆದಿದ್ದರು. ನಂತರ ಅವರು ಯಾರ ಸಂಪರ್ಕಕ್ಕೂ ಸಿಗುತ್ತಿಲ್ಲ.

ಬೀದರ್, ಬಾಗಲಕೋಟೆಯಲ್ಲಿ ಮಳೆ

ಭಾರಿ ಮಳೆಗೆ ರಸ್ತೆಗಳು ಜಲಾವೃತ ● ಮಾಗಡಿ: ಸರ್ಕಾರಿ ಕಚೇರಿಗಳಿಗೆ ನೀರು

ಪ್ರಜಾವಾಣಿ ವಾರ್ತೆ

ಬೀದರ್/ಹುಬ್ಬಳ್ಳಿ: ರಾಜ್ಯದಲ್ಲಿ ಮಂಗಳವಾರ ಬೀದರ್, ವಿಜಯಪುರ ಮತ್ತು ಬಾಗಲಕೋಟೆ ಜಿಲ್ಲೆಯಲ್ಲಿ ಭಾರಿ ಮಳೆಯಾಗಿದ್ದು, ಸಂಚಾರ ಅಸ್ತವ್ಯಸ್ತಗೊಂಡಿತು.

ಬೀದರ್ ನಗರ ಸೇರಿ ವಿವಿಧೆಡೆ ಸುರಿದ ಮಳೆಗೆ ರಸ್ತೆಗಳು ಜಲಾವೃತಗೊಂಡವು. ನಗರದ ತಹಶೀಲ್ದಾರ್ ಕಚೇರಿ, ಹಳೆ ಜಿಲ್ಲಾಧಿಕಾರಿ ಕಚೇರಿ, ಮಹಾನಗರ ಪಾಲಿಕೆ ಕಚೇರಿ ಆವರಣ ಹಾಗೂ ಮುಖ್ಯರಸ್ತೆಯು ಜಲಾವೃತಗೊಂಡಿತ್ತು.

ಮನ್ನಳ್ಳಿ ರಸ್ತೆ, ನೆಹರೂ ಕ್ರೀಡಾಂಗಣ ರಸ್ತೆ, ಶಿವಾಜಿ ವೃತ್ತದಲ್ಲಿ ನೀರು ಸಂಗ್ರಹವಾಗಿತ್ತು. ಮಧ್ಯಾಹ್ನ ಸುಮಾರು ಎರಡೂವರೆ ಗಂಟೆ ಮಳೆ ಸುರಿಯಿತು.

ಕಲಬುರಗಿ ನಗರದಲ್ಲೂ ಸಂಜೆ ಕೆಲ ಕಾಲ ಬಿರುಸಿನಿಂದ ಮಳೆ ಸುರಿಯಿತು. ರಾಯಚೂರು ಜಿಲ್ಲೆಯ ಲಿಂಗಸುಗೂರು, ಹಟ್ಟಿ ಚಿನ್ನದಗಣಿ, ಮಾನ್ವಿ ಭಾಗದಲ್ಲಿ ಸಾಧಾರಣ ಮಳೆಯಾಗಿದೆ.

ಮಳೆ–ಕೃಷಿಕರ ಹರ್ಷ (ಹುಬ್ಬಳ್ಳಿ ವರದಿ): ಉತ್ತರ ಕರ್ನಾಟಕದ ವಿಜಯಪುರ, ಬಾಗಲಕೋಟೆ, ವಿಜಯನಗರ ಮತ್ತು ಬಳ್ಳಾರಿ ಜಿಲ್ಲೆಯ ವಿವಿಧೆಡೆ ಉತ್ತಮ ಮಳೆಯಾಯಿತು. ಕೃಷಿಕರು ಹರ್ಷಗೊಂಡರು.

ವಿಜಯಪುರ, ಬಸವನ ಬಾಗೇವಾಡಿ, ಮುದ್ದೇಬಿಹಾಳ, ತಾಳಿಕೋಟೆ, ಬಬಲೇಶ್ವರ, ಕೊಲ್ಹಾರ, ನಾಲತವಾಡದಲ್ಲಿ ಗುಡುಗು, ಸಿಡಿಲಿನೊಂದಿಗೆ ಅರ್ಧ ಗಂಟೆ ಮಳೆ ಸುರಿಯಿತು. ಬಾಗಲಕೋಟೆಯಲ್ಲಿ ಉತ್ತಮ, ಜಮಖಂಡಿ, ಕೂಡಲಸಂಗಮದಲ್ಲಿ ಸಾಧಾರಣ ಮಳೆಯಾಯಿತು.

ವಿಜಯನಗರ ಜಿಲ್ಲೆಯ ಹೊಸಪೇಟೆ, ಹರಪನಹಳ್ಳಿ, ಕೊಟ್ಟೂರು, ಹೂವಿನಹಡಗಲಿ ಹಾಗೂ ಬಳ್ಳಾರಿ ಜಿಲ್ಲೆಯ ಸಂಡೂರು ತಾಲ್ಲೂಕಿನಲ್ಲಿ ಉತ್ತಮ ಮಳೆಯಾಯಿತು.

ತೋರಣಗಲ್ಲು ಹೋಬಳಿಯ ಎಂ.ಲಕ್ಕಲಹಳ್ಳಿ ಗ್ರಾಮದಲ್ಲಿ ಸಿಡಿಲು ಬಡಿದು ಎರಡು ಎತ್ತುಗಳು ಮೃತಪಟ್ಟವು.

ಮಳೆ ನೀರು ನುಗ್ಗಿ ಕೆರೆಯಾದ ಕಚೇರಿ ಆವರಣ: ಮಾಗಡಿ ತಾಲ್ಲೂಕಿನಲ್ಲಿ ಸೋಮವಾರ ಸುರಿದ ಭಾರಿ ಮಳೆಯ ನೀರು ತೋಟಗಾರಿಕೆ ಇಲಾಖೆ ಹಾಗೂ ಅರಣ್ಯ ಇಲಾಖೆ ಕಚೇರಿ ಆವರಣಗಳಿಗೆ ನುಗ್ಗಿದ್ದು, ಎರಡೂ ಕಚೇರಿ ಆವರಣಗಳು ಕೆರೆಯಂತಾಗಿವೆ.

ಮಳೆಯಿಂದಾಗಿ ರಾಜಕಾಲುವೆ ಒಳಗೆ ಮಣ್ಣು ಕುಸಿದು ನೀರು ಹರಿಯದೆ ತಗ್ಗು ಪ್ರದೇಶದಲ್ಲಿರುವ ತೋಟಗಾರಿಕೆ ಹಾಗೂ ಅರಣ್ಯ ಇಲಾಖೆ ಕಚೇರಿ ಆವರಣಕ್ಕೆ ನೀರು ನುಗ್ಗಿದೆ. ನೀರು ಹೊರಹಾಕಲು ಸಿಬ್ಬಂದಿ ಮಂಗಳವಾರ ಪರದಾಡಿದರು. ತೋಟಗಾರಿಕೆ ಇಲಾಖೆ ಕಾಂಪೌಂಡ್ ಬಳಿ ಇದ್ದ ವಿದ್ಯುತ್ ಕಂಬ ಮುರಿದು ಬಿದ್ದು, ಗೋಡೆ ಕುಸಿದಿದೆ.

ಕುಕ್ಕೆ ಸುಬ್ರಹ್ಮಣ್ಯ: ಶಿಶಿಲ ದೇವಸ್ಥಾನಕ್ಕೆ ನೀರು

ಸುಬ್ರಹ್ಮಣ್ಯ (ದಕ್ಷಿಣ ಕನ್ನಡ): ಕುಕ್ಕೆಸುಬ್ರಹ್ಮಣ್ಯ ಪರಿಸರದಲ್ಲಿ ಮಂಗಳವಾರ ಸಂಜೆ ಸುಮಾರು ಎರಡು ತಾಸು ಭಾರಿ ಮಳೆಯಾಗಿದೆ.

ಬಿಳಿನೆಲೆ ಗ್ರಾಮದ ಕೈಕಂಬದ ಮೂಲಕ ಹಾದುಹೋಗುವ ಮಂಗಳೂರು-ಸುಬ್ರಹ್ಮಣ್ಯ ರಾಜ್ಯ ಹೆದ್ದಾರಿಯ ಕೋಟೆಹೋಳೆಯಲ್ಲಿ ಭಾರಿ ಪ್ರವಾಹ ಬಂದು ಸೇತುವೆ ಮುಳುಗಡೆಯಾಗಿತ್ತು. ವಾಹನ ಸಂಚಾರ ಸ್ಥಗಿತಗೊಂಡಿತ್ತು. ಸುಬ್ರಹ್ಮಣ್ಯದಿಂದ ನೆಟ್ಟಣ ಸುಬ್ರಹ್ಮಣ್ಯ ರೋಡ್ ರೈಲು ನಿಲ್ದಾಣಕ್ಕೆ ತೆರಳುವ ಮತ್ತು ಕ್ಷೇತ್ರಕ್ಕೆ ರೈಲಿನಲ್ಲಿ ಬಂದ ಪ್ರಯಾಣಿಕರು ತೊಂದರೆ ಅನುಭವಿಸಿದರು.

ಬೆಳ್ತಂಗಡಿ ತಾಲ್ಲೂಕಿನಲ್ಲೂ ಉತ್ತಮ ಮಳೆಯಾಗಿದ್ದು, ಕಪಿಲಾ ನದಿ ಉಕ್ಕಿ ಶಿಶಿಲದ ಶಿಶಿಲೇಶ್ವರ ದೇವಸ್ಥಾನಕ್ಕೆ ನೀರು ನುಗ್ಗಿದೆ. ಮಂಗಳೂರು ನಗರದಲ್ಲಿಯೂ ಭಾರಿ ಗಾಳಿಯೊಂದಿಗೆ ಮಳೆ ಸುರಿಯಿತು.



ಬೀದರ್ ಜಿಲ್ಲಾ ನ್ಯಾಯಾಲಯದ ಎದುರಿನ ಮುಖ್ಯರಸ್ತೆ ಜಲಾವೃತಗೊಂಡು ವಾಹನ ಸಂಚಾರಕ್ಕೆ ತೊಡಕಾಯಿತು ಪ್ರಜಾವಾಣಿ ಚಿತ್ರ: ಲೋಕೇಶ ವಿ.ಬಿರಾದಾರ

ಜಲಾಶಯಗಳ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯೂಸೆಕ್‌ಗಳಲ್ಲಿ)	ಹೊರಹರಿವು
ಕೆ ಆರ್ ಎಸ್ *	124.80	123.35	13,915	5,699
ಹಾರಂಗಿ	2,859	2,856.17	3,817	2,500
ಕಬಿನಿ	2,284.00	2,282.89	16,024	16,050
ಹೇಮಾವತಿ	2,922	2,921.90	9,779	8,600
ಲಿಂಗನಮಕ್ಕಿ	1,819	1,811.60	7,725	7,551
ಸೂಪಾ (ಮೀ)	564	551.49	5,515.16	5,113.37
ಮಾಣಿ	595	590.68	1,293	706
ತುಂಗಭದ್ರಾ	1,633	1,626.06	24,116	23,655
ಮಲಪ್ರಭಾ	2,079.5	2,075.40	3,337	1,844
ಘಟಪ್ರಭಾ	2175	2,171.56	5,602	2,885
ಭದ್ರಾ *	186	181.9	10,953	3,962
ಆಲಮಟ್ಟಿ (ಮೀ)	519.6	519.05	48,363	11,095
ನಾರಾಯಣಪುರ (ಮೀ)	492.25	492.15	10,000	8,000

* ನೆಲಮಟ್ಟದಿಂದ

ಜಿಲ್ಲಾ ಪಂಚಾಯತ್ ಕಾರ್ಯಾಲಯ, ಮೈಸೂರು

Email: ceo_zp_mys@nic.in, zpmysceo@gmail.com, Ph: 0821-2330052

ಸಂಖ್ಯೆ: ಇಎಸ್‌ಟಿ(1)/32649/2025–26 ದಿನಾಂಕ: 02.08.2025

ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಅಧಿಸೂಚನೆ

ವಿಷಯ: ಮಾನವ ಸಂಪನ್ಮೂಲ ಸೇವೆಯನ್ನು ಇ–ಪ್ರೊಕ್ಯೂರ್‌ಮೆಂಟ್ ಮೂಲಕ ಪಡೆಯಲು ಇ–ಪ್ರೊಕ್ಯೂರ್‌ಮೆಂಟ್ ಟೆಂಡರ್ ಕರೆಯುವ ಬಗ್ಗೆ.

ವೆಬ್‌ಸೈಟ್: https://kppp.karnataka.gov.in ಇ.ಎಂ.ಡಿ. ಮೊತ್ತ ರೂ.1,59,000/–(ಒಂದು ಲಕ್ಷದ ಐವತ್ತೊಂಭತ್ತು ಸಾವಿರ ರೂ.ಗಳು ಮಾತ್ರ)
ಟೆಂಡರ್ ಸಲ್ಲಿಸಲು ಕೊನೆಯ ದಿ: 13.08.2025ರ ಪೂರ್ವಾಹ್ನ 11:00 ಗಂಟೆ
ತಾಂತ್ರಿಕ ಬಿಡ್ ತೆರೆಯುವ ದಿ: 21.08.2025ರ ಪೂರ್ವಾಹ್ನ 10:00 ಗಂಟೆ
ಹೆಚ್ಚಿನ ಮಾಹಿತಿಗಾಗಿ ಮೈಸೂರು ಜಿಲ್ಲಾ ಪಂಚಾಯತ್ ಕಛೇರಿಯ ಆಡಳಿತ ಶಾಖೆಯನ್ನು ಸಂಪರ್ಕಿಸಬಹುದು.

ಸಹಿ/– ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳ ಪರವಾಗಿ, ಜಿಲ್ಲಾ ಪಂಚಾಯತ್, ಮೈಸೂರು

DIPR/DDMYS/04/KSMCA/426/2025-26

ಪಟ್ಟಣ ಪಂಚಾಯತ್ ಕಾರ್ಯಾಲಯ

ಬೈಂದೂರು ತಾಲ್ಲೂಕು, ಉಡುಪಿ ಜಿಲ್ಲೆ,–576214

ದೂರವಾಣಿ ಸಂ: 08254–251058 ಇಮೇಲ್: ka.byndoor.tp@gmail.com

ಪತ್ರ ಸಂ:ಬೈಪಪಂ/ಆಶಾ/24/2025–26 ದಿನಾಂಕ: 30/07/2025

'ಟೆಂಡರ್ ಪ್ರಕಟಣೆ'
(E-PROCUREMENT PORTAL)

ಕರ್ನಾಟಕ ಸರ್ಕಾರದ ಸಾರ್ವಜನಿಕ ಪಾರದರ್ಶಕತೆ ಆದ್ಯಾದೇಶ 1999 ನಿಯಮಾವಳಿಗಳು 2000 ರಂತೆ ಬೈಂದೂರು ಪಟ್ಟಣ ಪಂಚಾಯತ್ ವ್ಯಾಪ್ತಿಯಲ್ಲಿನ ಪೌರ ಘನತ್ಯಾಜ್ಯ ನಿರ್ವಹಣಾ ಕಾರ್ಯಗಳಿಗೆ ಅವಶ್ಯವಿರುವ ಮಾನವ ಸಂಪನ್ಮೂಲಗಳ ಸೇವೆಯನ್ನು ಅಧಿಕೃತ ಮಾನ್ಯತೆ ಪಡೆದ ಏಜೆನ್ಸಿಯಿಂದ (ಹೊರ ಸಂಪನ್ಮೂಲ ಏಜೆನ್ಸಿ) ಸಿಬ್ಬಂದಿಯನ್ನು ಪೂರೈಸಲು ಟೆಂಡರ್ ಅನ್ನು ಆಹ್ವಾನಿಸಲಾಗಿರುತ್ತದೆ. ಬಿಡ್ ಸಲ್ಲಿಸಲು ಆರಂಭದ ದಿನಾಂಕ:31–07–2025
ಬಿಡ್ ಸಲ್ಲಿಸಲು ಕೊನೆಯ ದಿನಾಂಕ:16–08–2025 5.30pm ತನಕ
ತಾಂತ್ರಿಕ ಬಿಡ್ ತೆರೆಯುವ ದಿನಾಂಕ:18–08–2025

Sl. No	TENDER NAME	EMD	INDENT NO
1	Hiring of man power agency to providing the for Service of man powers for MSWM Activities on out source basis in byndoor tp limits	ರೂ. 54,700/–	DMA/2025-26/SE5809

Web Portal:- www.eproc.karnataka.gov.in
ಹೆಚ್ಚಿನ ಮಾಹಿತಿ ಸ್ಮಳಬೇಟಿ, ಷರತ್ತು & ನಿಬಂಧನೆಗಳಿಗಾಗಿ ಕೆಲಸದ ಸಮಯದಲ್ಲಿ ಕಛೇರಿಯನ್ನು ಸಂಪರ್ಕಿಸುವುದು. ಮೊಬೈಲ್ ನಂ : 08254–251058

ಸಹಿ/– ಮುಖ್ಯಾಧಿಕಾರಿ, ಪಟ್ಟಣ ಪಂಚಾಯತ್, ಬೈಂದೂರು.
ಸಹಿ/– ಆಡಳಿತಾಧಿಕಾರಿಗಳು, ಪಟ್ಟಣ ಪಂಚಾಯತ್, ಬೈಂದೂರು.

ಮಹಾನಗರ ಪಾಲಿಕೆ, ವಿಜಯಪುರ

ಸಂಖ್ಯೆ:ಮನಪಾ/ಲೋವಿ/ಕಾಅ/ಡಿಎಮ್‌ಎ/ಟಿಎನ್‌ಡಿ/ಇಪ್ರೋ–/2025–26 ದಿನಾಂಕ:02.08.2025

ಇ–ಪ್ರೊಕ್ಯೂರ್‌ಮೆಂಟ್ ಅಲ್ಪಾವಧಿ ಟೆಂಡರ್ ಪ್ರಕಟಣೆ

ವಿಜಯಪುರ ಮಹಾನಗರ ಪಾಲಿಕೆ ಬಿಡುಗಡೆಯಾದ ಸನ್ 2025–26 ನೇ ಸಾಲಿನ 15ನೇ ಹಣಕಾಸು ಆಯೋಗದ ಅನುದಾನ (1) 15ನೇ ಹಣಕಾಸು ಆಯೋಗದಡಿ ಸನ್ 2021–22 ನಗರ ಆರೋಗ್ಯ ಕ್ಷೇಮ ಅನುದಾನ (01), 15ನೇ ಹಣಕಾಸು ಆಯೋಗದಡಿ ಸನ್ 2022–23 ನಗರ ಆರೋಗ್ಯ ಕ್ಷೇಮ ಅನುದಾನ (01), ಸ್ವಚ್ಛ ಭಾರತ ಮಿಷನ್–2 ಅನುದಾನ (01) ಮಹಾನಗರ ಪಾಲಿಕೆಯ ಅನುದಾನ 2025–26 (05) ಕಾಮಗಾರಿ. ಕೆ.ಪಿ.ಡಬ್ಲ್ಯೂ.ಡಿ ಇವರಿಂದ ನೋಂದಾಯಿತ ಗುತ್ತಿಗೆದಾರರಿಂದ ಇ–ಪ್ರೊಕ್ಯೂರ್‌ಮೆಂಟ್ ಸ್ಟಾಂಡರ್ಡ್ ಟೆಂಡರ್ ಡಾಕ್ಯೂಮೆಂಟ್ ಮುಖಾಂತರ ಐಟಂವಾರು ಟೆಂಡರ್‌ನ್ನು ಆಹ್ವಾನಿಸಲಾಗಿದೆ. ಹೆಚ್ಚಿನ ವಿವರಗಳಿಗೆ ಆನ್‌ಲೈನ್ ಮೂಲಕ ವೆಬ್‌ಸೈಟ್ (https://kppp.karnataka.gov.in) ನಲ್ಲಿ ಪ್ರಕಟಿಸಲಾಗಿದೆ.

ಸೂಚನೆ: 1) ಟೆಂಡರ್ ತಿದ್ದುಪಡಿ ಹಾಗೂ ದಿನಾಂಕ ವಿಸ್ತರಣೆ kppp.karnataka.gov.in ಪೋರ್ಟಲ್‌ನಲ್ಲಿ ನಮೂದಿಸಲಾಗುವುದು. 2) ಆನ್‌ಲೈನ್ ಮೂಲಕ ಟೆಂಡರ್ ಸಲ್ಲಿಸುವ ಕೊನೆಯ **ದಿನಾಂಕ: 11.08.2025**

ಸಹಿ/– ಕಾರ್ಯಪಾಲಕ ಅಭಿಯಂತರರು, ಮಹಾನಗರ ಪಾಲಿಕೆ, ವಿಜಯಪುರ

ವಾಸಾಸಂಇ/ವಿಜಯಪುರ/232/ಕೆಎಸ್‌ಎಂಸಿಎ/2025–26

ಕರ್ನಾಟಕ ಅರಣ್ಯ ಇಲಾಖೆ
ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಜಾಗೃತ)ರವರ ಕಛೇರಿ

2ನೇ ಮಹಡಿ, ಅರಣ್ಯ ಭವನ, 18ನೇ ಕ್ರಾಸ್, ಮಲ್ಲೇಶ್ವರಂ, ಬೆಂಗಳೂರು–560003
ಫೋನ್: 080–23365562, 23440467, ಇ–ಮೇಲ್: apccfvigil@gmail.com

ಸಂ.: E.Comp. No.: 1799328 ದಿನಾಂಕ: 04.08.2025
File No: KFD/VIGI/WRLS/5/2025

ಟೆಂಡರ್ ಪ್ರಕಟಣೆ
(ಕೆಪಿಪಿ ಪೋರ್ಟಲ್ ಮೂಲಕ ಮಾತ್ರ)

ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಜಾಗೃತ) ರವರ ಕಛೇರಿ, ಬೆಂಗಳೂರು ರವರು ನಿಸ್ತಂತು ಉಪಕರಣಗಳ ಮತ್ತು ನಿಸ್ತಂತು ಜಾಲದ ನಿರ್ವಹಣೆ ಮಾಡಲು ಕರ್ನಾಟಕ ಸರ್ಕಾರದ E-Procurement Portal (https://kppp.karnataka.gov.in) ಮುಖಾಂತರ ಟೆಂಡರ್ ಆಹ್ವಾನಿಸಿರುತ್ತಾರೆ. ಈ ಟೆಂಡರ್‌ನಲ್ಲಿ ಭಾಗವಹಿಸಲು ಇಚ್ಛಿಸುವ ನಿರೀಕ್ಷಿತ ಪೂರೈಕೆದಾರರು ಅಗತ್ಯವಾಗಿ ಮೇಲೆ ತಿಳಿಸಿದ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳಬೇಕು.

1) ಟೆಂಡರ್ ಅಧಿಸೂಚನೆ ಸಂಖ್ಯೆ : **KFD/2025-26/SE1413**. 2) ಟೆಂಡರ್ ಪೂರ್ವಬಾವಿ ಸಭೆಯ **ದಿನಾಂಕ ಮತ್ತು ಸಮಯ: 08.08.2025ರ ಬೆಳಿಗ್ಗೆ 11:30 ಗಂಟೆಗೆ.** 3) ಟೆಂಡರ್ ಸಲ್ಲಿಸಲು ಕೊನೆಯ **ದಿನಾಂಕ ಮತ್ತು ಸಮಯ: 19.08.2025ರ ಸಂಜೆ 4:00 ಗಂಟೆಯವರೆಗೆ.** 4) ತಾಂತ್ರಿಕ ಬಿಡ್ ತೆರೆಯುವ **ದಿನಾಂಕ ಮತ್ತು ಸಮಯ: 21.08.2025ರ ಬೆಳಿಗ್ಗೆ 11:30 ಗಂಟೆಗೆ.** 5) ಆರ್ಥಿಕ ಬಿಡ್ ತೆರೆಯುವ ತಾತ್ಕಾಲಿಕ **ದಿನಾಂಕ ಮತ್ತು ಸಮಯ: 25.08.2025ರ ಬೆಳಿಗ್ಗೆ 11:30 ಗಂಟೆಗೆ.** 6) ಟೆಂಡರ್ ಪೂರ್ವಬಾವಿ ಸಭೆ ಮತ್ತು ಟೆಂಡರ್‌ಗಳನ್ನು ತೆರೆಯುವುದು ಹಾಗೂ ಸಂವಹನದ ವಿಳಾಸ : **ಮೇಲ್ಕಂಡ ವಿಳಾಸ.**

ಈ ಟೆಂಡರ್ ಭಾಗವಹಿಸಲು ಸಿದ್ಧರಿರುವ ನಿರೀಕ್ಷಿತ ಪೂರೈಕೆದಾರರು ವೆಬ್‌ಸೈಟ್: **https://kppp.karnataka.gov.in** ಗೆ ಭೇಟಿ ನೀಡುವ ಮೂಲಕ ಬಿಡ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದು.

ಸಹಿ/– ಅಪರ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ, (ಜಾಗೃತ) ಮತ್ತು ಟೆಂಡರ್ ಆಹ್ವಾನಿಸುವ ಪ್ರಾಧಿಕಾರ

ವಾಸಾಸಂಇ/ವಾ.ಪ್ರ/ಜಿಎ/2212/2025–26

ಕರ್ನಾಟಕ ಸರ್ಕಾರ
ಕಾರ್ಯಪಾಲಕ ಇಂಜಿನಿಯರವರ ಕಛೇರಿ, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ.

ಸಂಖ್ಯೆ: ಕಾಇಂ:ಲೋವಿಚಿ:ಎಇ–3:ಟೆಂಡರ್–22:2025–26 ದಿನಾಂಕ: 04.08.2025

ಅಲ್ಪಾವಧಿ ಇ–ಟೆಂಡರ್ ಪ್ರಕಟಣೆ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅದ್ಯಾದೇಶ 2000 ಹಾಗೂ ಆಕ್ಟ್ 2000 ರ ಪ್ರಕಾರ ಸ್ಟ್ಯಾಂಡರ್ಡ್ ಟೆಂಡರ್ ಡಾಕ್ಯುಮೆಂಟ್‌ಗಳ ನಿಯಮಗಳನ್ವಯ ಕರ್ನಾಟಕ ರಾಜ್ಯ ಸರ್ಕಾರದ ರಾಜ್ಯಪಾಲರ ಪರವಾಗಿ ಕಾರ್ಯಪಾಲಕ ಇಂಜಿನಿಯರು, ಲೋಕೋಪಯೋಗಿ ಇಲಾಖೆ ವಿಭಾಗ, ಚಿತ್ರದುರ್ಗ ಇವರಿಂದ ಕರ್ನಾಟಕ ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತರಾದ ಅರ್ಹ ಗುತ್ತಿಗೆದಾರರಿಂದ ಕೆಪಿಪಿಪಿ ಪೋರ್ಟಲ್ ಮುಖಾಂತರ ಈ ಕೆಳಕಂಡ ಕಾಮಗಾರಿಗೆ ದ್ವಿ ಲಕೋಟಿ ಪದ್ಧತಿಯಲ್ಲಿ ಟೆಂಡರ್‌ನ್ನು ಆಹ್ವಾನಿಸಲಾಗಿದೆ.

ಅರ್ಹ ಗುತ್ತಿಗೆದಾರರು ವೆಬ್‌ಸೈಟ್ kppp.karnataka.gov.in ನಲ್ಲಿ ಟೆಂಡರ್‌ಗಾಗಿ ವಿವರಗಳನ್ನು ಪಡೆದು ಭಾಗವಹಿಸಬಹುದು.

ಕಾಮಗಾರಿಗಳ ವಿವರ:–ಕೆಪಿಪಿಪಿ ಪೋರ್ಟಲ್ ಮೂಲಕ– ದ್ವಿ ಲಕೋಟೆ ಪದ್ಧತಿ:– ಸಾಮಾನ್ಯ:–ಲೆಕ್ಕ ಶೀರ್ಷಿಕೆ: 8443 ಠೇವಣಿ ವಂತಿಕೆ – ಜಿಲ್ಲಾ ಖನಿಜ ಪ್ರತಿಷ್ಠಾನ ಟ್ರಸ್ಟ್:–
(1) ಚಳ್ಳಕೆರೆ ತಾಲ್ಲೂಕು ಅರೆಬಾವಿ– ಚಳ್ಳಕೆರೆ ರಸ್ತೆ ಕಿ.ಮೀ. 306.00 ರಿಂದ 310.00 ವರೆಗೆ ರಸ್ತೆ ಚರಂಡಿ ಅಭಿವೃದ್ಧಿ ಹಾಗೂ ಕಿ.ಮೀ. 309.65 ರಲ್ಲಿ ಸೇತುವೆ ನಿರ್ಮಾಣ ಕಾಮಗಾರಿ (ರಾಜ್ಯ ಹೆದ್ದಾರಿ–45) ಕಾಮಗಾರಿ (ವ.ಇಂ. 22539)
ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ):–200.00
ಕಾಮಗಾರಿಗಳ ಟೆಂಡರ್ ದಿನಾಂಕಗಳು:– ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ 12–08–2025 ಸಮಯ 17–30
ಟೆಂಡರ್ ಸಲ್ಲಿಸುವ ಅಂತಿಮ ದಿನಾಂಕ:– 13–08–2025 ಸಮಯ 16–00
ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 14–08–2025 ಸಮಯ 16–15
ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ 16–08–2025 ಸಮಯ 11–00
ಹೆಚ್ಚಿನ ವಿವರಗಳಿಗೆ ಸದರಿ ಕಛೇರಿಯಿಂದ (ದೂರವಾಣಿ ಸಂಖ್ಯೆ 08194 222446) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ 080 25501216 ಮತ್ತು 080 25501227 ರಿಂದ ಮಾಹಿತಿ ಪಡೆಯಬಹುದು.

DIPR/CTA/KSMCA/271/2025-26
ಸಹಿ/– ಕಾರ್ಯಪಾಲಕ ಅಭಿಯಂತರರು, ಲೋಕೋಪಯೋಗಿ ಇಲಾಖೆ, ಚಿತ್ರದುರ್ಗ.

ಕೆ.ಎಂ.ಎಫ್ ಕರ್ನಾಟಕ ಸಹಕಾರ ಹಾಲು ಉತ್ಪಾದಕರ ಮಹಾಮಂಡಳ ನಿಯಮಿತ

ಕಹಾಮ ಸಂಕೀರ್ಣ ಡಾ: ಎಂ. ಹೆಚ್. ಮರೀಗೌಡ ರಸ್ತೆ ಬೆಂಗಳೂರು–560 029
ಫೋನ್: 26096832/910/854 ಇ–ಮೇಲ್: purchase@kmf.coop

ಸಂಖ್ಯೆ.ಕಹಾಮ/ಖರೀದಿ/ಟೆಂಡರ್–796/2025–26 ದಿನಾಂಕ.25.07.2025

ಟೆಂಡರ್ ಪ್ರಕಟಣೆ (ಕೆಪಿಪಿ ಪೋರ್ಟಲ್ ಮುಖಾಂತರ)

ಕರ್ನಾಟಕ ಹಾಲು ಮಹಾಮಂಡಳದ ಮಾತೃ ಡೇರಿ, ಯಲಹಂಕ ಘಟಕಕ್ಕೆ ಅಧಿಕಾರಿ/ಸಿಬ್ಬಂದಿಗಳನ್ನು ಕಛೇರಿಗೆ ಕರ್ತವ್ಯಕ್ಕೆ ಕರೆತರಲು / ಬಿಡಲು 21 + 1 ಸೀಟರ್ ಗುತ್ತಿಗೆ ವಾಹನದ ಸೇವೆಗೆ ಅರ್ಹ ಬಿಡ್ಡುದಾರರಿಂದ ಟೆಂಡರ್ ಆಹ್ವಾನಿಸಲಾಗಿದೆ.

ಟೆಂಡರ್ ದಾಸ್ತಾವೇಜುಗಳನ್ನು eProcurement website https://kppp.karnataka.gov.in ನಿಂದ ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿರುತ್ತದೆ. ಆಸಕ್ತಿಯುಳ್ಳ ಟೆಂಡರ್‌ದಾರರು ಟೆಂಡರ್ ದಾಖಲಾತಿಯಲ್ಲಿ ನಮೂದಿಸಿರುವ ಇ.ಎಂ.ಡಿ ಪಾವತಿಸಿ ಭಾಗವಹಿಸಬಹುದಾಗಿದೆ. ಇನ್ನಿತರೆ ದಾಖಲಾತಿಗಳನ್ನು ಟೆಂಡರ್ ದಾಸ್ತಾವೇಜಿನಲ್ಲಿ ನೋಡಬಹುದಾಗಿದೆ.

ಟೆಂಡರ್ ಡೌನ್‌ಲೋಡ್ ಪ್ರಾರಂಭದ ದಿನಾಂಕ: 05.08.2025 ರಿಂದ, ಟೆಂಡರ್ ಪೂರ್ವಭಾವಿ ಸಭೆ ದಿನಾಂಕ: 12.08.2025 ರಂದು ಬೆಳಿಗ್ಗೆ 11.00 ಗಂಟೆಗೆ, ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 19.08.2025 ರಂದು ಸಂಜೆ 5.00 ಗಂಟೆಯವರೆಗೆ, ಟೆಕ್ನಿಕಲ್ ಟೆಂಡರ್ ತೆರೆಯುವ ದಿನಾಂಕ: 20.08.2025 ರಂದು ಸಂಜೆ 05.10 ಗಂಟೆಗೆ, ಕಮರ್ಷಿಯಲ್ ಟೆಂಡರ್ ತೆರೆಯುವ ದಿನಾಂಕ: ತಾಂತ್ರಿಕ ಟೆಂಡರ್ ಪರಿಶೀಲನೆಯ ನಂತರ.

ಕರ್ನಾಟಕ ಸಹಕಾರ ಹಾಲು ಮಹಾಮಂಡಳ ಪರವಾಗಿ
ಸಹಿ/– ನಿರ್ದೇಶಕರು (ಖರೀದಿ)

ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ

ಶ್ರೀ. ಮಹಾದೇವ ಎ. ಮುರಗಿ ಕೆ.ಎ.ಎಸ್ ಕುಲಸಚಿವರು
ಮೊಬೈಲ್ ಸಂ.94806 96389
ದೂರವಾಣಿ ಸಂ. 08354–230276/278/286/280
ವೆಬ್‌ಸೈಟ್:https://uhsbagalkot.karnataka.gov.in

ಕುಲಸಚಿವರ ಕಾರ್ಯಾಲಯ
ಉದ್ಯಾನಗಿರಿ, ನವನಗರ
ಬಾಗಲಕೋಟ–587104,
ಕರ್ನಾಟಕ ಮಿಂಚಂಚೆ: registrar@uhsbagalkot.edu.in

ಸಂಖ್ಯೆ: ಕುಸ:ಶೈಕ್ಷಣಿಕ/NRI/634/2025–26 ದಿನಾಂಕ: 02.08.2025

ಅಧಿಸೂಚನೆ

2025–26 ನೇ ಶೈಕ್ಷಣಿಕ ವರ್ಷಕ್ಕಾಗಿ ಅನಿವಾಸಿ ಭಾರತೀಯರು / ಅವರ ಮಕ್ಕಳು ಹಾಗೂ ಅವರಿಂದ ಪ್ರಾಯೋಜಿತ ಅಭ್ಯರ್ಥಿಗಳಿಗೆ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟದಲ್ಲಿ "ಬಿ.ಎಸ್ಸಿ. (ಹಾನರ್ಸ್) ತೋಟಗಾರಿಕೆ/ ಬಿ.ಟೆಕ್. (ಆಹಾರ ತಂತ್ರಜ್ಞಾನ)" ಪದವಿ ಕಾರ್ಯಕ್ರಮಗಳ ಪ್ರವೇಶಕ್ಕಾಗಿ ಅರ್ಜಿಗಳನ್ನು ಆಹ್ವಾನಿಸಲಾಗಿದೆ. ಸದರಿ ಪ್ರವೇಶ ಕುರಿತು ಹೆಚ್ಚಿನ ಮಾಹಿತಿಯನ್ನು ವಿಶ್ವವಿದ್ಯಾಲಯದ ವೆಬ್‌ಸೈಟ್ https://uhsbagalkot.karnataka.gov.in. ನಿಂದ ಪಡೆಯಬಹುದು.

ಆದೇಶದ ಮೇರೆಗೆ,
ಸಹಿ/–
ಕುಲಸಚಿವರು

DIPR/BGK/RO-NO-204/KSMCA/2025-26

ಮಹಾನಗರ ಪಾಲಿಕೆ, ಕಲಬುರಗಿ

ದೂ.: 08472/278675 ಫ್ಯಾಕ್ಸ : 08472/260776 ಇ ಮೇಲ್– itstaff_ulb_gulbarga@yahoo.com

No: KMP/EE/TS-01/ NCAP/2025-26 ದಿನಾಂಕ: 05.08.2025

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್
ಮರು ಟೆಂಡರ್ ಪ್ರಕಟಣೆ ಸಂಖ್ಯೆ: 01/2025–26

1) ಕಾಮಗಾರಿಯ ವಿವರ : NCAP 2023-24 ಯೋಜನೆಯಡಿ ಅನುಮೋದನೆಗೊಂಡಿರುವ ಒಟ್ಟು (1) ಕಾಮಗಾರಿಗೆ ಕೆ.ಪಿ.ಪಿ.ಪಿ ಪ್ರೋರ್ಟಲ್–2.0 ನಲ್ಲಿ ಕೆ.ಟಿ.ಪಿ.ಪಿ ರ ಪ್ರಕಾರ ಕೆ.ಡಬ್ಲ್ಯೂ–4 ರ ಮೂಲಕ 15 ದಿನಗಳ ಟೆಂಡರ್‌ನ್ನು ದ್ವಿ ಲಕೋಟೆಯಲ್ಲಿ (Two Cover) ಟೆಂಡರವನ್ನು ಕರೆಯಲಾಗಿದೆ. ಹೆಚ್ಚಿನ ವಿವರಗಳಿಗಾಗಿ ಅಥವಾ ಯಾವುದೇ ತರಹದ ಬದಲಾವಣೆಯನ್ನು www.kppp.karnataka.gov.in ಮುಖಾಂತರ ಪಡೆದುಕೊಳ್ಳಬಹುದು. 2) ಪ್ರತಿ ಕಾಮಗಾರಿ ಅಂದಾಜು ಕನಿಷ್ಠ ಮೊತ್ತ ರೂ. **310.00 ಲಕ್ಷಗಳು,** 3) ಗುತ್ತಿಗೆದಾರರ ಅರ್ಹತೆ ವಿವರಃ 2ನೇ ದರ್ಜೆ ಮತ್ತು ಮೇಲೆ, 4) ಟೆಂಡರ ಅರ್ಜಿಯ ಬೆಲೆ ರೂ. ಕೆ.ಪಿ.ಪಿ.ಪಿ ಪ್ರೋರ್ಟಲ್–2.0 ನ ಪ್ರತಿ ಕಾಮಗಾರಿಗೆ ಮತ್ತು ಇ.ಎಂ.ಡಿ. ರೂ. **4,65,000.00 ಗಳು,** 5) ಪೂರ್ವಭಾವಿ ಸಭೆ ದಿನಾಂಕ: **22.08.2025 ರಂದು ಬೆಳಿಗ್ಗೆ 11:00 ಗಂಟೆಗೆ.** 6) ಬಿಡ್ ಸಲ್ಲಿಸುವ ಕೊನೆಯ ದಿನಾಂಕ: **25.08.2025 ರಂದು ಸಾಯಂಕಾಲ 4:30 ಗಂಟೆಗೆ.** 7) ತಾಂತ್ರಿಕ ಬಿಡ್ ತೆರೆಯುವ ಕೊನೆಯ ದಿನಾಂಕ: **26.08.2025 ರಂದು ಸಾಯಂಕಾಲ 04:35 ಗಂಟೆಗೆ.** 8) ಆರ್ಥಿಕ ಬಿಡ್ ತೆರೆಯುವ ದಿನಾಂಕ: **29.08.2025 ರಂದು ಬೆಳಿಗ್ಗೆ 11:30 ಗಂಟೆಗೆ.** ನಿಗದಿಪಡಿಸಲಾಗಿದೆ. ಹೆಚ್ಚಿನ ವಿವರಗಳಿಗಾಗಿ www.kppp.karnataka.gov.in ಮುಖಾಂತರ ಪಡೆದುಕೊಳ್ಳಬಹುದು. 9) ಹೆಚ್ಚಿನ ವಿವರಗಳಿಗೆ : ಕಾರ್ಯಾಪಾಲಕ ಅಭಿಯಂತರರು, ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿರವರನ್ನು ಸಂಪರ್ಕಿಸಬಹುದಾಗಿದೆ. 10) ಹೆಚ್ಚಿನ ಮಾಹಿತಿಯು ಪಾಲಿಕೆಯ ವೆಬ್ ಸೈಟ್‌ನಲ್ಲಿ ಲಭ್ಯವಿರುತ್ತದೆ http://www.kalaburagicity.mrc.gov.in/

Note: All subsequent corrigendum/amendment shall be published only on website and not in press. Hence, tenderers are advised to always be in touch with our said website until the tender is finally opened.

ಸಹಿ/– ಕಾರ್ಯಪಾಲಕ ಅಭಿಯಂತರರು, ಕಲಬುರಗಿ ಮಹಾನಗರ ಪಾಲಿಕೆ, ಕಲಬುರಗಿ.

ವಾ.ಸಾ.ಸಂ.ಇ/ಕಲಬುರಗಿ/358/ಕೆ.ಎಸ್.ಎಂ.ಸಿ.&ಎ/2025–26

ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)
ನಿಗಮ ಕಾರ್ಯಾಲಯ, ಖರೀದಿ ಶಾಖೆ, ಚಾವಿಸನಿನಿ, ಮೈಸೂರು–570017, ದೂರವಾಣಿ ಸಂಖ್ಯೆ: 9448994705
ಇ–ಮೇಲ್ ಐಡಿ: gmpurc@cescmysore.org, ವೆಬ್‌ಸೈಟ್: www.cescmysore.org

ಚಾವಿಸನಿನಿ/ಪ್ರ.ವ್ಯ/ಉ.ಪ್ರ.ವ್ಯ(ಖ)/ಸ.ಪ್ರ.ವ್ಯ(ಖ)–1/2025–26/13573–76 ದಿನಾಂಕ: 02.08.2025

ಅಲ್ಪಾವಧಿ ಟೆಂಡರ್ ಪ್ರಕಟಣೆ (ವಿದ್ಯುನ್ಮಾನ ಸಂಗ್ರಹಣಾ ವೇದಿಕೆ)

ಚಾ.ವಿ.ಸ.ನಿ.ನಿಯಲ್ಲಿ ಈ ಕೆಳಕಂಡ ಕಾಮಗಾರಿಗಳನ್ನು ಪೂರ್ಣ ಗುತ್ತಿಗೆ ಆಧಾರದ ಮೇಲೆ ಕೈಗೊಳ್ಳಲು ಅಲ್ಪಾವಧಿ ಟೆಂಡರ್‌ನ್ನು ಆಹ್ವಾನಿಸಿದೆ.

ಕ್ರ.ಸಂ	ವಿವರಗಳು	ವಿಚಾರಣೆ ಸಂಖ್ಯೆ/ದಿನಾಂಕ
1	ಮಳವಳ್ಳಿ ನಗರ ಉಪವಿಭಾಗ ವ್ಯಾಪ್ತಿಯ220/66/11 ಕೆವಿ ಹೆಬ್ಬಣಿ, ಸ್ವೀಕರಣಾ ಕೇಂದ್ರದಿಂದ ಹಾಲಿ ಇರುವ ಹೆಚ್.ಟಿ ಜಕಾತಿಯ ಸ್ಥಾವರ ಸಂಖ್ಯೆ MHT-18, MHT-16, MHT-21, MHT-22 ಗಳಿಗೆ 11KV Express Feeder ನಿರ್ಮಾಣ ಕಾಮಗಾರಿಗೆ ಠೇವಣಿ ವಂತಿಗೆ ಯೋಜನೆಯಡಿಲ್ಲಿ ವಿದ್ಯುತ್ ಸರಬರಾಜು ಕಲ್ಪಿಸುವ ಕಾಮಗಾರಿ	ಸಿ2–6271/ 28–07–2025
2	ವಿ.ವಿ ಮೊಹಲ್ಲಾ ವಿಭಾಗದಲ್ಲಿ ಎ.ಬಿ ಕೇಬಲ್‌ನ ಅನ್‌ಬಂಡ್ಲಿಂಗ್ ಮತ್ತು ಸ್ಟ್ರಿಂಗಿಂಗ್, ರಾಬಿಟ್ ಎಸಿಎಸ್‌ಆರ್ / ಎ.ಬಿ ಕೇಬಲ್ ಬಳಸಿಕೊಂಡು ಲಿಂಕ್ ಲೈನ್‌ಗಳ ವಾಹಕ ಬದಲಾವಣೆ ಕಾಮಗಾರಿಗಳನ್ನು ಬಾಗಶಃ ಗುತ್ತಿಗೆ ಆಧಾರದ ಮೇಲೆ ಕೈಗೊಳ್ಳಲು	ಸಿ2–6199/CALL-2/ 14–05–2025
3	ಕೆ.ಆರ್. ನಗರ ವಿಭಾಗದ ಸಾಲಿಗ್ರಾಮ ಉಪವಿಭಾಗ ವ್ಯಾಪ್ತಿಯಲ್ಲಿ ಅಧಿಕ ವಿದ್ಯುತ್ ಭಾರವನ್ನು ಹೊಂದಿರುವ 11ಕೆ.ವಿ ಸರಗೂರು ಮತ್ತು ಕೊತ್ತವಳ್ಳಿ ಐ.ಪಿ ಮಾರ್ಗಗಳ ವಿದ್ಯುತ್ ಭಾರವನ್ನು ವಿಭಜಿಸಲು ಹೊಸದಾಗಿ ಲಿಂಕ್ ಲೈನ್ ನಿರ್ಮಿಸುವ ಕಾಮಗಾರಿ	ಸಿ2–6237/CALL-2/ 26–05–2025

ಟೆಂಡರ್‌ನಲ್ಲಿ ಭಾಗವಹಿಸುವ ಬಗ್ಗೆ ಹೆಚ್ಚಿನ ವಿವರಗಳನ್ನು ವೆಬ್‌ಸೈಟ್ **https://kppp.karnataka.gov.in** ನಲ್ಲಿ ದಿನಾಂಕ: **07.08.2025**ರ ನಂತರ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಹೆಲ್ಪ್‌ಲೈನ್ +91–8046010000, +91–8068948777 ಅಥವಾ ಇ–ಮೇಲ್ ವಿಳಾಸ: **support@eprochelpdesk.com** ವ್ಯವಹರಿಸಲು ಕೋರಲಾಗಿದೆ.

ವಿದ್ಯುತ್ ಸಂಬಂಧಿಸಿದ ದೂರುಗಳಿಗೆ ಕರೆ ಮಾಡಿ: 1912

ಸಹಿ/– ಪ್ರಧಾನ ವ್ಯವಸ್ಥಾಪಕರು (ಖರೀದಿ), ಚಾ.ವಿ.ಸ.ನಿನಿ., ಮೈಸೂರು

ವಾಸಾಸಂಇ/ಮೈಸೂರು/759/ಎಸ್‌ಎಸ್‌ಸಿ/2025–26

ಕರ್ನಾಟಕ ಸರ್ಕಾರ
ಯಾದಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಯಾದಗಿರಿ

YADGIRI INSTITUTE OF MEDICAL SCIENCES, YADGIRI-585 202
(Government of Karnataka, Autonomous Institution)
E-mail id: directorymsyadgir@gmail.com Mob:9481623299

ಸಂಖ್ಯೆ :ಯಿಮ್ಸ್/ಟೆಂಡರ್/03/2025–26 ದಿನಾಂಕ:01–08–2025

::ಅಲ್ಪಾವಧಿ ಟೆಂಡರ್ ಪ್ರಕಟಣೆ ::

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್

ಯಾದಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ 2025–26ನೇ ಸಾಲೀನ ಟೆಂಡರ್.ಸಂ.1. ಯಾದಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಕೇಂದ್ರ ಗ್ರಂಥಾಲಯಕ್ಕೆ ಬೇಕಾಗುವ ಪುಸ್ತಕಗಳ ಟೆಂಡರ್ ದಿನಾಂಕ:30–07–2025 ರಿಂದ 11–08–2025 ರವರೆಗೆ ಕರೆಯಲಾಗಿದ್ದು, ಟೆಂಡರ್.ಸಂ.2.ಯಿಮ್ಸ್ ಆಸ್ಪತ್ರೆಗೆ ಔಷಧಿ ಮತ್ತು ಇತರೆ ಸಾಮಗ್ರಿಗಳ ಖರೀಧಿಗಾಗಿ ದಿನಾಂಕ:31–07–2025 ರಿಂದ 11–08–2025ವರೆಗೆ ಟೆಂಡರ್ ಕರೆಯಲಾಗಿದ್ದು, ಅಲ್ಪಾವಧಿ ಟೆಂಡನ್ನು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka.gov.in ನಲ್ಲಿ ದ್ವಿ–ಲಕೋಟೆಯಲ್ಲಿ ಆಹ್ವಾನಿಸಿರುವ ಬಗ್ಗೆ.

ಕ್ರ ಸಂ	ಸಂಸ್ಥೆ	ವಿವರ	ಟೆಂಡರ್‌ನ ಅಂದಾಜು ಮೊತ್ತ ರೂ.	ಇ.ಎಂ.ಡಿ. ಮೊತ್ತ ರೂ.
1	ಡೀನ್ & ನಿರ್ದೇಶಕರು, ಯಾದಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಯಾದಗಿರಿ	DME/2025-26/IND1586 YIMS BOOKS TEN-DER2025-26	ರೂ. 20,00,000.00	ರೂ. 50,000.00
2	ಡೀನ್ & ನಿರ್ದೇಶಕರು, ಯಾದಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಯಾದಗಿರಿ	DME/2025-26/IND1597 SHORT TERM TENDER FOR DRUGS AND OTHER ITEMS	ರೂ. 49,00,000.00	ರೂ. 1,25,000.00

ಟೆಂಡರ್ ಪ್ರಕ್ರಿಯೆ ವಿವರ: ಹೆಚ್ಚಿನ ವಿವರಗಳಿಗಾಗಿ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ https://kppp.karnataka. gov.in ನಲ್ಲಿ ಪಡೆಯಬಹುದು.

ಸಹಿ/– ಡೀನ್ ಮತ್ತು ನಿರ್ದೇಶಕರು
ಯಾದಗಿರಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಯಾದಗಿರಿ

ವಾ.ಸಾ.ಸಂ.ಇ/ಯಾದಗಿರಿ/185/ಕೆ.ಎಸ್.ಎಂ.ಸಿ.&ಎ/2025–26

ಕರ್ನಾಟಕ ಸರ್ಕಾರ
ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ

HASSAN INSTITUTE OF MEDICAL SCIENCES, HASSAN
(An Autonomous Institute under the Dept of Medical Education, Government of Karnataka)
SRI CHAMARAJENDRA HOSPITAL CAMPUS, HASSAN Website: www.hims-hassan.org
Phone/Fax No.08172-231699, 231599, Email:directorhims@yahoo.com

ಇ–ಟೆಂಡರ್ ಪ್ರಕಟಣೆ

ಕ್ರ. ಸಂ.	ಟೆಂಡರ್ ಅಧಿಸೂಚನೆ ಸಂಖ್ಯೆ	ವಿವರ	ಆನ್ ಲೈನ್ ಮೂಲಕ ಅರ್ಜಿ ಸಲ್ಲಿಕೆ ದಿನಾಂಕ	ಅಂದಾಜು ಮೊತ್ತ ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ ಲಕ್ಷಗಳಲ್ಲಿ)
01	ಹಿಮ್ಸ್/ಪಿಹೆಚ್‌ಎಸ್/ಪಿಯುಆರ್ (ಟಿಡಿಆರ್)/3/2025	ಹಿಮ್ಸ್ ಸಂಸ್ಥೆಯ ಬೋಧಕ ಆಸ್ಪತ್ರೆಯ ವಿಭಾಗಗಳಿಗೆ ಅವಶ್ಯವಿರುವ ಔಷಧ ಸಾಮಗ್ರಿ (Miscellaneous, Suturews & INfusions) ಗಳನ್ನು ಇ–ಟೆಂಡರ್ ಮೂಲಕ ಸರಬರಾಜು ಪಡೆಯುವ ಬಗ್ಗೆ.	06.08.2025 ರಿಂದ 06.09.2025 ರವರೆಗೆ	493.47	02.00

ಟೆಂಡರ್ ಪ್ರಕ್ರಿಯೆ ದಿನಾಂಕಗಳನ್ನು ಹಾಗೂ ಇತರೆ ವಿವರಗಳನ್ನು ಕರ್ನಾಟಕ ಸರ್ಕಾರದ ಇ–ಪ್ರೋಕ್ಯೂರ್ ಮೆಂಟ್ ಪೋರ್ಟಲ್ ಸಿಸ್ಟಂ ಮುಖಾಂತರ www.kpppuat.karnataka.gov.in ನ ವೆಬ್‌ಸೈಟ್‌ನಲ್ಲಿ ವೀಕ್ಷಿಸಬಹುದು, ಹೆಚ್ಚಿನ ಮಾಹಿತಿಗಾಗಿ ಕಛೇರಿ ವೇಳೆಯಲ್ಲಿ (ರಜಾ ದಿನಗಳನ್ನು ಹೊರತು ಪಡಿಸಿ) ಸಂಪರ್ಕಿಸಬಹುದು.

ಸಹಿ/– ಮುಖ್ಯ ಆಡಳಿತಾಧಿಕಾರಿಗಳು, ಹಾಸನ ವೈದ್ಯಕೀಯ ವಿಜ್ಞಾನಗಳ ಸಂಸ್ಥೆ, ಹಾಸನ.

ವಾಸಾಸಂಇ/ಹಿಸನಿ/ಹಾಸನ/417/ಕೆಎಸ್‌ಎಂಸಿಎ/2025–26

ಸವದತ್ತಿ ಯಲ್ಲಮ್ಮ ಪುರಸಭೆ ಕಾರ್ಯಾಲಯ, ಸವದತ್ತಿ – 591126

ಜಿಲ್ಲೆ: ಧಾರವಾಡ, ರಾಜ್ಯ: ಕರ್ನಾಟಕ, ದೂರವಾಣಿ ಸಂಖ್ಯೆ: 08330–222226
ಇ–ಮೇಲ್: itstaff_ulb_saundatti@yahoo.co.in ವೆಬ್‌ಸೈಟ್: www.saundattitown.mrc.gov.in

ಸಂಖ್ಯೆ: ಸಯಪು/ಕಾ.ವಿ/ಕಾ.ಪ್ರ/2025–26 ದಿನಾಂಕ: 01–08–2025

ಟೆಂಡರ್ ಪ್ರಕಟಣೆ
(ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ 2023 ರನ್ವಯ)

ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರ, ಯಲ್ಲಮ್ಮಗುಡ್ಡ ವ್ಯಾಪ್ತಿಯಲ್ಲಿ 2025–26 ನೇ ಸಾಲಿನ ಈ ಕೆಳಗೆ ವಿವರಿಸಿದ ಕೆಲಸಗಳಿಗೆ ಅರ್ಹ ಸಿವಿಲ್ ಗುತ್ತಿಗೆದಾರರಿಂದ / ಏಜೆನ್ಸಿದಾರರಿಂದ / ಸರಬರಾಜುದಾರರಿಂದ ಕೆ.ಜಿ–1 ಮತ್ತು ಕೆ.ಜಿ–2 ರ ಪ್ರಕಾರ ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ. ಕಾರಣ ಇಚ್ಛೆಯುಳ್ಳ ಗುತ್ತಿಗೆದಾರರು ಗುತ್ತಿಗೆದಾರರಿಂದ / ಏಜೆನ್ಸಿದಾರರು / ಸರಬರಾಜುದಾರರು ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳ ಪೋರ್ಟಲ್ (ಕೆಪಿಪಿಪಿ) ಮುಖಾಂತರ ಮಾತ್ರ ಟೆಂಡರ್ ಸಲ್ಲಿಸಬಹುದು.

ಕ್ರ. ಸಂ.	ಕಾಮಗಾರಿಗಳ ವಿವರ / ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ (ರೂ. ಲಕ್ಷಗಳಲ್ಲಿ)	ಇ.ಎಂ.ಡಿ ಮೊತ್ತ (ರೂ. ಗಳಲ್ಲಿ)
1	ಶ್ರೀ ಕ್ಷೇತ್ರ ಯಲ್ಲಮ್ಮನಗುಡ್ಡದ ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನಕ್ಕೆ ಅಗತ್ಯವಿರುವ ಕಿರಾಣಿ ಸಾಮಾಗ್ರಿಗಳನ್ನು ಖರೀದಿಸುವುದು. **(DMA/2025-26/IND5093)**	**36.70**	**91,770/-**
2	ಶ್ರೀ ಕ್ಷೇತ್ರ ಯಲ್ಲಮ್ಮನಗುಡ್ಡದ ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನಕ್ಕೆ ಅಗತ್ಯವಿರುವ ಕಾಯಿಪಲ್ಲೆ ಸಾಮಾಗ್ರಿಗಳನ್ನು ಖರೀದಿಸುವುದು. **(DMA/2025-26/IND5095)**	**35.89**	**8,975/-**
3	ಶ್ರೀ ಕ್ಷೇತ್ರ ಯಲ್ಲಮ್ಮನಗುಡ್ಡದ ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನಕ್ಕೆ ಅಗತ್ಯವಿರುವ ಒಣ ಊರುವಲು ಕಟ್ಟಿಗೆ ಖರೀದಿಸುವುದು. **(DMA/2025-26/IND5096)**	**6.00**	**15,000/-**
4	ಶ್ರೀ ಕ್ಷೇತ್ರ ಯಲ್ಲಮ್ಮನಗುಡ್ಡದ ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನಕ್ಕೆ ಅಗತ್ಯವಿರುವ ವಿವಿಧ ವಿಭಾಗಕ್ಕೆ ಕಂಪ್ಯೂಟರ್ ಪ್ರಿಂಟರ್ ಮತ್ತು ಇತರೆ ಸಾಮಾಗ್ರಿಗಳನ್ನು ಖರೀದಿಸುವುದು. **(DMA/2025-26/IND5077)**	**19.20**	**48,040/-**
5	ಶ್ರೀ ಕ್ಷೇತ್ರ ಯಲ್ಲಮ್ಮನಗುಡ್ಡದ ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನದ ಸ್ಟೋರ್–01 ವಿಭಾಗಕ್ಕೆ ಬೇಕಾಗುವ 60 ಜಿಎಸ್‌ಎಂ 9''x12'' ಸೈಜಿನ ಮಂಜರುಪಾಟ ಹಳದಿ ಬಟ್ಟೆಯ ಬ್ಯಾಗುಗಳ ಸಹಿತ ಅವುಗಳ ಮೇಲೆ ದೇವಸ್ಥಾನದ ವಿಳಾಸವನ್ನು ಮುದ್ರಣ ಮಾಡಿ ಪೂರೈಸುವುದು. **(DMA/2025-26/IND5089)**	**8.00**	**20,000/-**
6	ಶ್ರೀ ಕ್ಷೇತ್ರ ಯಲ್ಲಮ್ಮನಗುಡ್ಡದ ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನದ ವಸತಿ ನಿಲಯಗಳಿಗೆ ಕಬ್ಬಿಣ ಮಂಚಗಳನ್ನು ಪೂರೈಸುವುದು. **(DMA/2025-26/IND5087)**	**13.65**	**34,125/-**
7	ಶ್ರೀ ಕ್ಷೇತ್ರ ಯಲ್ಲಮ್ಮನಗುಡ್ಡದ ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನದ ಸ್ಟೋರ್–01 ವಿಭಾಗಕ್ಕೆ ಪ್ಲಾಸ್ಟಿಕ್ ತೀರ್ಥ ಬಾಟಲ್ ಮತ್ತು ಅವುಗಳ ಮೇಲೆ ಮುದ್ರಣ ಕಾರ್ಯವನ್ನು ಮಾಡಿ ಪೂರೈಸುವುದು. **(DMA/2025-26/IND5090)**	**91.70**	**1,83,400/-**
8	ಶ್ರೀ ಕ್ಷೇತ್ರ ಯಲ್ಲಮ್ಮನಗುಡ್ಡದ ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನದ ವಸತಿ ನಿಲಯುಗಳಿಗೆ ಬೆಡ್ ಹಾಗೂ ಇತರೆ ಸಾಮಾಗ್ರಿಗಳನ್ನು ಖರೀದಿಸುವುದು. **(DMA/2025-26/IND5092)**	**19.46**	**48,655/-**
9	ಶ್ರೀ ಕ್ಷೇತ್ರ ಯಲ್ಲಮ್ಮನಗುಡ್ಡದ ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನಕ್ಕೆ ಅಗತ್ಯವಿರುವ ಸ್ಟೇಷನರಿ ಸಾಮಾಗ್ರಿ, ಕ್ರಿಮಿನಾಶಕ, ಮಿಲಾಥಿನ್ ಪೌಡರ್ ಹಾಗೂ ಇತರೆ ಸಾಮಾಗ್ರಿಗಳನ್ನು ಖರೀದಿಸುವುದು. **(DMA/2025-26/IND5157)**	**40.99**	**82,000/-**
10	ಶ್ರೀ ಕ್ಷೇತ್ರ ಯಲ್ಲಮ್ಮನಗುಡ್ಡದ ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನ, ಶ್ರೀ ಪರಶುರಾಮ ದೇವಸ್ಥಾನ, ಶ್ರೀ ಜಮದಗ್ನೇಶ್ವರ ದೇವಸ್ಥಾನ, ಪರಶುರಾಮ ವಸತಿ ನಿಲಯ, ಯಾತ್ರಿ ನಿವಾಸ, ವಸತಿ ಸಂಕೀರ್ಣ, ಕಲ್ಯಾಣ ಮಂಟಪ ಹಾಗೂ ದೇವಸ್ಥಾನದ ಇನ್ನಿತರ ಕಟ್ಟಡಗಳಿಗೆ ವಾರ್ಷಿಕ ನಿರ್ವಹಣೆಗೆ ಬೇಕಾಗುವ ವಿದ್ಯುತ್ ಉಪಕರಣಗಳು / ಸಾಮಾಗ್ರಿಗಳನ್ನು ಪೂರೈಸುವುದು. **(DMA/2025-26/IND5165)**	**33.81**	**84,540/-**
11	ಶ್ರೀ ಕ್ಷೇತ್ರ ಯಲ್ಲಮ್ಮನಗುಡ್ಡದ ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನಕ್ಕೆ ಅಗತ್ಯವಿರುವ ಪಾವತಿ ಪುಸ್ತಕ ಹಾಗೂ ಇತರೆ ಮುದ್ರಣ ಮಾಡಿ ಪೂರೈಸುವುದು. **(DMA/2025-26/IND5154)**	**67.46**	**16,900/-**

1) ಟೆಂಡರ್ ಸಲ್ಲಿಸುವ ಮೊದಲು ಗುತ್ತಿಗೆದಾರರು ಅತ್ಯಂತ ಅವಶ್ಯಕವಾಗಿ ಟೆಂಡರುಗಳಿಗೆ ಸಂಬಂಧಿಸಿದಂತೆ ನಿಯಮ ನಿಭಂದಣೆಗಳನ್ನು ಓದಿ ಪಾಲಿಸಬೇಕು. 2) ಟೆಂಡರ್ ಫಾರ್ಮ ವೆಬ್‌ಸೈಟ್‌ನಿಂದ ಡೌನ್‌ಲೋಡ್ ಮಾಡಿಕೊಳ್ಳುವ ಪ್ರಾರಂಭದ ದಿನಾಂಕ: **01–08–2025.** 3) ಟೆಂಡರ್ ಫಾರ್ಮ ಟೆಂಡರ್‌ಗಳನ್ನು ಅಪ್‌ಲೋಡ್ ಮಾಡುವ ಕೊನೆಯ ದಿನಾಂಕ: **14–08–2025 ರಂದು ಸಾಯಂಕಾಲ 4.30 ಘಂಟೆಯವರೆಗೆ.** 4) ಟೆಂಡರ್‌ಗಳನ್ನು ತೆರೆಯುವ ದಿನಾಂಕ: **15–08–2025 ರಂದು ಸಾಯಂಕಾಲ 5.00 ಘಂಟೆಯ ನಂತರ ತೆರೆಯಲಾಗುವುದು.** 4) ಹೆಚ್ಚಿನ ಮಾಹಿತಿ ಮತ್ತು ಷರತ್ತುಗಳಿಗಾಗಿ ವೆಬ್‌ಸೈಟ್: **www.saundattitown.mrc.gov.in** ಮತ್ತು **www.kppp.karnataka.gov.in** ನಲ್ಲಿ ನೋಡಬಹುದು.

ಸಹಿ/– ಮುಖ್ಯಾಧಿಕಾರಿ, ಸವದತ್ತಿ ಯಲ್ಲಮ್ಮ ಪುರಸಭೆ, ಸವದತ್ತಿ.
ಸಹಿ/– ಕಾರ್ಯದರ್ಶಿ, ಶ್ರೀ ರೇಣುಕಾ ಯಲ್ಲಮ್ಮ ದೇವಸ್ಥಾನ ಅಭಿವೃದ್ಧಿ ಪ್ರಾಧಿಕಾರ, ಯಲ್ಲಮ್ಮನಗುಡ್ಡ.

ವಾಸಾಸಂಇ/ಬೆಳಗಾವಿ/783/ಅಡ್ವಟೋರ್/2025–26

ಬೆಳಿಗ್ಗೆ ಖಾಲಿ ಖಾಲಿ: ಸಂಜೆಗೆ ನಿರಾಳ

ಸಾರಿಗೆ ಮುಷ್ಕರ: ಪರೀಕ್ಷೆ ಮುಂದೂಡಿದ ಕೊಪ್ಪಳ, ತುಮಕೂರು ವಿಶ್ವವಿದ್ಯಾಲಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಾರಿಗೆ ನೌಕರರ ಮುಷ್ಕರಕ್ಕೆ ಮಂಗಳವಾರ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದೆ. ಬೆಳಿಗ್ಗೆ ಬಸ್‌ಗಳು ರಸ್ತೆಗಿಳಿಯದೇ ಪ್ರಯಾಣಿಕರಿಗೆ ಸಮಸ್ಯೆಯಾದರೆ, ಸಂಜೆಯ ವೇಳೆಗೆ ಬಸ್‌ಗಳ ಸಂಚಾರ ಆರಂಭಗೊಂಡಿದ್ದು, ಪ್ರಯಾಣಿಕರು ನಿರಾಳರಾದರು.

ಕೋಲಾರ, ಹುಬ್ಬಳ್ಳಿಯ ಕೆಲವೆಡೆ ಬಸ್‌ಗಳಿಗೆ ಕಲ್ಲು ತೂರಲಾಗಿದ್ದು, ಗಾಜುಗಳು ಒಡೆದಿವೆ. ಕೊಪ್ಪಳದಲ್ಲಿ ಪ್ರತಿ ಬಸ್‌ಗೆ ಪೊಲೀಸ್ ಸಿಬ್ಬಂದಿ ನಿಯೋಜಿಸಿ ಭದ್ರತೆ ಒದಗಿಸಲಾಗಿತ್ತು.

ಬಸ್ ಮುಷ್ಕರ ಕಾರಣದಿಂದ ಕೊಪ್ಪಳ ಮತ್ತು ತುಮಕೂರು ವಿಶ್ವವಿದ್ಯಾಲಯವು ಮಂಗಳವಾರ ನಿಗದಿಯಾಗಿದ್ದ ಪರೀಕ್ಷೆಗಳನ್ನು ಮುಂದೂಡಿದವು.

ಮುಷ್ಕರಕ್ಕೆ ಮಿಶ್ರ ಪ್ರತಿಕ್ರಿಯೆ

ಮೈಸೂರು ವರದಿ: ಮೈಸೂರು ಭಾಗದ ಜಿಲ್ಲೆಗಳಲ್ಲಿ ಮುಷ್ಕರಕ್ಕೆ ಮಿಶ್ರ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಮಂಡ್ಯ, ಹಾಸನ ಜಿಲ್ಲೆಯಲ್ಲಿ ಬಸ್‌ಗಳು ರಸ್ತೆಗಿಳಿಯಲಿಲ್ಲ.

ಈ ಜಿಲ್ಲೆಗಳಲ್ಲಿ ಸಂಪೂರ್ಣವಾಗಿ ಖಾಸಗಿ ಬಸ್‌ಗಳ ವ್ಯವಸ್ಥೆ ಮಾಡಲಾಗಿತ್ತು. ಉಳಿದ ಜಿಲ್ಲೆಗಳಲ್ಲಿ ಸರ್ಕಾರಿ, ಖಾಸಗಿ ಬಸ್‌ಗಳು ಸಂಚರಿಸಿದವು. ವಿದ್ಯಾರ್ಥಿಗಳಿಗೆ ತೊಂದರೆಯಾಯಿತು. ಕೆಲವೆಡೆ ಶಾಲೆ, ಕಾಲೇಜುಗಳು ಮಧ್ಯಾಹ್ನದ ಬಳಿಕ ರಜೆ ನೀಡಿದ್ದವು.

ಬಸ್‌ಗೆ ಕಲ್ಲು– ಪರೀಕ್ಷೆ ಮುಂದೂಡಿಕೆ

ಕಲಬುರಗಿ ವರದಿ: ಕೊಪ್ಪಳ ಜಿಲ್ಲೆಯ ಯಲಬುರ್ಗಾದಲ್ಲಿ ಸೋಮವಾರ ರಾತ್ರಿ ಬೆಂಗಳೂರಿಗೆ ಹೊರಟಿದ್ದ ಬಸ್ ಮೇಲೆ ಕಲ್ಲು ತೂರಾಟ ನಡೆಸಿದ್ದು ಬಿಟ್ಟರೆ, ಕಲ್ಯಾಣ ಕರ್ನಾಟಕ ವ್ಯಾಪ್ತಿಯಲ್ಲಿ ಮುಷ್ಕರ ಬಹುತೇಕ ಶಾಂತಿಯುತವಾಗಿತ್ತು.



ಕೋಲಾರ ತಾಲ್ಲೂಕಿನ ಹರಟಿ ಗೇಟ್ ಬಳಿ ಕೆಎಸ್‌ಆರ್‌ಟಿಸಿ ಬಸ್ಸಿನ ಮುಂಭಾಗಕ್ಕೆ ಕಲ್ಲು ತೂರಿದ ಕಿಡಿಗೇಡಿಗಳು

ಯಲಬುರ್ಗಾದಿಂದ ಬೆಂಗಳೂರಿಗೆ ಹೊರಟಿದ್ದ ಬಸ್‌ಗೆ ಕುಕನೂರು ಸಮೀಪ ಕಿಡಿಗೇಡಿಗಳು ಕಲ್ಲು ತೂರಿದ್ದರಿಂದ ಬಸ್ ಗಾಜು ಒಡೆದಿದೆ. ಮುಂಜಾಗ್ರತೆಯಾಗಿ ಪ್ರತಿ ಬಸ್‌ನಲ್ಲಿ ಪೊಲೀಸ್ ಸಿಬ್ಬಂದಿ ನಿಯೋಜಿಸಿ ಭದ್ರತೆ ನೀಡಲಾಯಿತು.

ಬಸ್‌ಗಳ ಸೇವೆ ಇಲ್ಲದ್ದರಿಂದ ಮಂಗಳವಾರ ನಿಗದಿಯಾಗಿದ್ದ ಕೊಪ್ಪಳ ವಿ.ವಿ.ಯ ಸ್ನಾತಕೋತ್ತರ ಪದವಿಯ 2ನೇ ಸೆಮಿಸ್ಟರ್ ಪರೀಕ್ಷೆ ಮುಂದೂಡಲಾಯಿತು.

ಬಸ್‌ಗಳಿಗೆ ಕಲ್ಲು, ಹಾನಿ

ಹುಬ್ಬಳ್ಳಿ ವರದಿ: ಧಾರವಾಡ, ಬಾಗಲಕೋಟೆ, ವಿಜಯಪುರ ಸೇರಿ ಬಹುತೇಕ ಜಿಲ್ಲೆಗಳಲ್ಲಿ ಬಸ್‌ಗಳು ರಸ್ತೆಗೆ ಇಳಿಯಲಿಲ್ಲ. ಬಹುತೇಕ ಮಂದಿ ಖಾಸಗಿ ಬಸ್‌ಗಳಲ್ಲಿ ಸಂಚರಿಸಿದರು.

ಹುಬ್ಬಳ್ಳಿಯಿಂದ ಹೊಸಪೇಟೆಗೆ ಹೊರಟಿದ್ದ ಬಸ್‌ಗೆ ಗದಗ ಬಳಿ ಮುಖಕ್ಕೆ ಮಾಸ್ಕ್ ಧರಿಸಿದ್ದ ಕಿಡಿಗೇಡಿಗಳು ಕಲ್ಲು ತೂರಿದರು. ವಿದ್ಯಾನಗರದ ಗ್ರಾಮಾಂತರ ಘಟಕಕ್ಕೆ ಸೇರಿದ ಒಂದು ಬಸ್‌ಗೆ ಕಿಡಿಗೇಡಿಗಳು ಕಲ್ಲು ಎಸೆದು, ಗಾಜು ಜಖಂಗೊಳಿಸಿದರು.



ವೃದ್ಧೆಯ ಅನಾರೋಗ್ಯ ಕಾರಣ ಕಾರವಾರಕ್ಕೆ ಹೋಗಿ ಮರಳಿ ಭಾಲ್ಕಿಗೆ ತೆರಳಬೇಕಿದ್ದ ಕುಟುಂಬವೊಂದು ಸಾರಿಗೆ ನೌಕರರ ಮುಷ್ಕರದ ಪರಿಣಾಮ ಕಲಬುರಗಿಯ ಕೇಂದ್ರ ಬಸ್ ನಿಲ್ದಾಣದಲ್ಲಿ ಬಸ್ ಇಲ್ಲದೆ ಪರದಾಡಿತು

ಚಿತ್ರ: ತಾಜುದ್ದೀನ್ ಆಜಾದ್

ಕರಾವಳಿ: ಎಲ್ಲ ಬಸ್ ಸಂಚಾರ

ಚಿಕ್ಕಮಗಳೂರು ಜಿಲ್ಲೆಯಲ್ಲಿ ಬಸ್ ನಿಲ್ದಾಣಗಳಲ್ಲಿ ಖಾಸಗಿ ಬಸ್, ಮಿನಿ ಬಸ್, ಜೀಪುಗಳನ್ನು ನಿಲ್ಲಿಸಲು ಅವಕಾಶ ನೀಡಲಾಗಿತ್ತು. ಅವುಗಳಲ್ಲಿ ಜನ ಪ್ರಯಾಣಿಸಿದರು.

ದಕ್ಷಿಣ ಕನ್ನಡ, ಉಡುಪಿ ಜಿಲ್ಲೆಗಳಲ್ಲಿ ಮುಷ್ಕರ ಪರಿಣಾಮ ಬೀರಲಿಲ್ಲ. ಉಡುಪಿ, ಕುಂದಾಪುರ ಬಸ್‌ನಿಲ್ದಾಣಗಳಲ್ಲಿ ಬೆಳಿಗ್ಗೆ 7.30ರ ವರೆಗೆ ಬಸ್ ಸಂಚಾರ ಇರಲಿಲ್ಲ. ನಂತರ ಸಹಜ ಸ್ಥಿತಿಗೆ ಬಂತು ಎಂದು ಅಧಿಕಾರಿಗಳು ತಿಳಿಸಿದರು.

ಸಾರಿಗೆ ನೌಕರರ ಜತೆ ಮಾತುಕತೆಗೆ ಬಿಜೆಪಿ ಆಗ್ರಹ

‘ರಾಜ್ಯ ಸಾರಿಗೆ ಸಂಸ್ಥೆಗಳ ನೌಕರರ ಸಮಸ್ಯೆಗಳನ್ನು ಬಗೆಹರಿಸಿ, ಅವರ ಬೇಡಿಕೆಗಳನ್ನು ಈಡೇರಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಕ್ಷಣವೇ ನೌಕರರ ಜತೆ ಮಾತುಕತೆ ನಡೆಸಬೇಕು’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ಒತ್ತಾಯಿಸಿದ್ದಾರೆ.

ಸುದ್ದಿಗಾರರ ಜತೆ ಮಾತನಾಡಿದ ಅವರು, ‘ಸಾರಿಗೆ ನೌಕರರ ಮುಷ್ಕರದಿಂದಾಗಿ ಸಾರ್ವಜನಿಕರು ಮತ್ತು ಶಾಲಾ–ಕಾಲೇಜು ವಿದ್ಯಾರ್ಥಿಗಳಿಗೆ ತೊಂದರೆ ಆಗಿದೆ’ ಎಂದರು.

‘ಗ್ಯಾರಂಟಿ’ ಯೋಜನೆಯಿಂದಾಗಿ ಗ್ರಾಮೀಣ ಭಾಗದಲ್ಲಿ ಬಸ್‌ಗಳ ಸಂಖ್ಯೆಯನ್ನೂ ಕಡಿಮೆ ಮಾಡಿದ್ದಾರೆ. ಆರ್ಥಿಕ ಮುಗ್ಗಟ್ಟಿನಿಂದಾಗಿ ಸಾರಿಗೆ ಸಂಸ್ಥೆಗಳ ನೌಕರರಿಗೆ ವೇತನ ಕೊಡಲಾಗದ ಪರಿಸ್ಥಿತಿ ನಿರ್ಮಾಣವಾಗಿದೆ. ಸಾರಿಗೆ ಸಂಸ್ಥೆಗಳ ಆರ್ಥಿಕ ಸಮಸ್ಯೆ ಉಲ್ಬಣಿಸಿದ್ದು, ಇದರಿಂದಾಗಿ ನೌಕರರ ಬೇಡಿಕೆಗಳನ್ನು ಈಡೇರಿಸಲು ಸಾಧ್ಯವಾಗುತ್ತಿಲ್ಲ ಎಂದು ಅವರು ದೂರಿದರು.

ಶಾಸಕ ಡಾ.ಸಿ.ಎನ್.ಅಶ್ವತ್ಥನಾರಾಯಣ ಮಾತನಾಡಿ, ‘ಕಾಂಗ್ರೆಸ್ ಪಕ್ಷ ಕೊಟ್ಟ ಮಾತಿನಂತೆ ನಡೆದುಕೊಂಡಿಲ್ಲ. ಅಧಿಕಾರಕ್ಕೆ ಬಂದ ದಿನವೇ ಸಾರಿಗೆ ನೌಕರರ ಬಗ್ಗೆ ಆಡಿದ ಮಾತನ್ನು ಮರೆತಿದ್ದಾರೆ. ನೌಕರರ ಸಮಸ್ಯೆ ಪರಿಹರಿಸುವುದಾಗಿ ಸದನದಲ್ಲೂ ಮಾತುಕೊಟ್ಟಿದ್ದರು. ಆದರೆ ಈವರೆಗೆ ಏನೂ ಮಾಡಿಲ್ಲ’ ಎಂದು ಹೇಳಿದರು.

ನೌಕರರ ವೇತನ ಹಿಂಬಾಕಿಯನ್ನೂ ಕೊಡುತ್ತಿಲ್ಲ. ನಿವೃತ್ತರಿಗೆ ಗ್ರಾಚ್ಯುಯಿಟಿ ಮತ್ತಿತರ ಸೌಲಭ್ಯಗಳನ್ನು ಕೊಟ್ಟಿಲ್ಲ. ಖಜಾನೆ ತುಂಬಿ ತುಳುಕುತ್ತಿದೆ ಎಂದು ಹೇಳಿಕೊಳ್ಳುತ್ತಾರೆ. ಆದರೆ, ಸಾರಿಗೆ ನೌಕರರ ಸಮಸ್ಯೆಗೆ ಸ್ಪಂದಿಸಲು ಏಕೆ ಸಾಧ್ಯವಾಗುತ್ತಿಲ್ಲ ಎಂದು ಅವರು ಪ್ರಶ್ನಿಸಿದರು.

ಕೋಲಾರ ವರದಿ: ಬಸ್ ನಿಲ್ದಾಣದಲ್ಲಿ ನಿಲ್ಲಿಸಿದ್ದ ಎರಡು ಕೆಎಸ್‌ಆರ್‌ಟಿಸಿ ಬಸ್‌ಗಳ ಮೇಲೆ ಕಿಡಿಗೇಡಿಗಳ ಗುಂಪೊಂದು ಕಲ್ಲು ಎಸೆದಿದ್ದು, ಕಿಟಕಿಯ ಗಾಜುಗಳು ಪುಡಿಯಾಗಿವೆ.

ಕೋಲಾರ ತಾಲ್ಲೂಕಿನ ಹರಟಿ ಗೇಟ್ ಬಳಿ ದ್ವಿಚಕ್ರ ವಾಹನದಲ್ಲಿ ಬಂದ ಕೆಲವರು ಬೇತಮಂಗಲದಿಂದ ಕೋಲಾರದತ್ತ ಹೊರಟಿದ್ದ ಬಸ್ ಮೇಲೆ ಕಲ್ಲು ತೂರಿದರು. ಚಾಲಕನ ಮುಂದಿನ ಗಾಜು ಒಡೆದಿದೆ. ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

‘ಸಾಕು ಮಾಡಿ ನವರಂಗಿ ನಾಟಕ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ಸರ್ಕಾರದ ಅವಧಿಯಲ್ಲಿ ಸಾರಿಗೆ ಸಂಸ್ಥೆ ನೌಕರರು ಮುಷ್ಕರ ನಡೆಸಿದ ವೇಳೆ ಅಂದಿನ ವಿರೋಧ ಪಕ್ಷದ ಸಿದ್ದರಾಮಯ್ಯ ಬಿಜೆಪಿ ಸರ್ಕಾರದ ವಿರುದ್ಧ ಆಡಿದ್ದ ಮಾತುಗಳ ವಿಡಿಯೊ ತುಣುಕನ್ನು ‘ಎಕ್ಸ್’ ಮೂಲಕ ಹಂಚಿಕೊಂಡಿರುವ ವಿಧಾನಸಭೆ ವಿರೋಧ ಪಕ್ಷದ ನಾಯಕ ಆರ್.ಅಶೋಕ, ಮುಖ್ಯಮಂತ್ರಿ ಅವರನ್ನು ಲೇವಡಿ ಮಾಡಿದ್ದಾರೆ.

‘ಅಧಿಕಾರ ಇದ್ದಾಗ ನವರಂಗಿ ಆಟ, ವಿರೋಧ ಪಕ್ಷದಲ್ಲಿದ್ದಾಗ ಗೋಸುಂಬೆ ನಾಟಕ. ಅಧಿಕಾರ ಇದ್ದಾಗ ಹಗಲುವೇಷ ವಿರೋಧ ಪಕ್ಷದಲ್ಲಿದ್ದಾಗ ರೋಷಾವೇಶ. ಅಧಿಕಾರ ಯಾರಿಗೂ ಶಾಶ್ವತ ಅಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯನವರೇ. ನಿಮ್ಮ ದುರಾಡಳಿತಕ್ಕೆ ಜನಸಾಮಾನ್ಯರು ಯಾಕೆ ನಿತ್ಯ ಪರದಾಡಬೇಕು? ಸಾಕು ಮಾಡಿ ಈ ನಾಟಕ. ರಾಜೀನಾಮೆ ಕೊಟ್ಟು ಕರ್ನಾಟಕವನ್ನು ಉಳಿಸಿ’ ಎಂದು ಹೇಳಿದ್ದಾರೆ.

ಸಿದ್ದರಾಮಯ್ಯ ಆಗ ಹೇಳಿದ್ದೇನು?: ‘ಸಾರಿಗೆ ನೌಕರರ ಸಮಸ್ಯೆ ಕೇಳಲಿಲ್ಲ. ಇವತ್ತು ಅವರನ್ನು ಹೆದರಿಸಿ, ಬೆದರಿಸಿ ಎಸ್ಮಾ ತರ್ತೀವಿ, ಖಾಸಗಿ ಬಸ್ ಓಡಿಸ್ತೀವಿ, ಸರ್ಕಾರಿ ಬಸ್ ನಿಲ್ಲಿಸುತ್ತೀವಿ, ವರ್ಗ ಮಾಡ್ತೀವಿ ಎಂದು ಹೇಳ್ತಾರಲ್ಲ, ಯಡಿಯೂರಪ್ಪ ಏನಪ್ಪಾ ಕುರ್ಚಿ ಶಾಶ್ವತ ಅಂತ ತಿಳ್ಕೊಬುಟ್ಟಿದ್ದೇನ್ರಪ್ಪಾ...’ ಎಂಬ ಸಿದ್ದರಾಮಯ್ಯನವರ ಮಾತು ಅಶೋಕ ಹಂಚಿಕೊಂಡಿರುವ ವಿಡಿಯೊದಲ್ಲಿದೆ.

ಆತ್ಮವಂಚಕ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ ಮುಖ್ಯಮಂತ್ರಿ ಸಿದ್ದರಾಮಯ್ಯ

‘ಈ ಬಣ್ಣನೆ ನಿಮ್ಮ ಆತ್ಮವಂಚಕ ವ್ಯಕ್ತಿತ್ವಕ್ಕೆ ಹಿಡಿದ ಕನ್ನಡಿ’ ಎಂದು ಆರ್. ಅಶೋಕ ಅವರಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ತಿರುಗೇಟು ನೀಡಿದ್ದಾರೆ.

ತಮ್ಮ ‘ಎಕ್ಸ್’ ಖಾತೆಯಲ್ಲಿ ಪ್ರತಿಕ್ರಿಯಿಸಿರುವ ಮುಖ್ಯಮಂತ್ರಿ, ‘ಸಾರಿಗೆ ನೌಕರರು ಮೊದಲ ಬಾರಿ ವೇತನ ಪರಿಷ್ಕರಣೆಗಾಗಿ ಮುಷ್ಕರ ನಡೆಸಿದಾಗ ಸಾರಿಗೆ ಸಚಿವರಾಗಿದ್ದವರು ನೀವೇ ಅಲ್ಲವೇ? ಸಾರಿಗೆ ಸಂಸ್ಥೆಗಳ ಇತಿಹಾಸದಲ್ಲಿಯೇ ಮೊದಲ ಬಾರಿಗೆ 15 ದಿನಗಳ ಸುದೀರ್ಘ ಮುಷ್ಕರ ನಡೆದಾಗಲೂ ಸಾರಿಗೆ ಸಚಿವರಾಗಿ ಕೈಕಟ್ಟಿ ಕುಳಿತು ಅಸಾಮರ್ಥ್ಯ ಪ್ರದರ್ಶಿಸಿದ್ದೂ ನೀವೇ ಅಲ್ಲವೇ’ ಎಂದಿದ್ದಾರೆ.

‘ನಿಮ್ಮ ಪಕ್ಷದ ಅಧಿಕಾರಾವಧಿಯಲ್ಲಿ ರಚಿಸಿದ್ದ ಏಕಸದಸ್ಯ ಸಮಿತಿ ₹ 718 ಕೋಟಿ ವೇತನ ಪರಿಷ್ಕರಣೆ ಬಾಕಿ ನೀಡಲು ಶಿಫಾರಸು ಮಾಡಿತ್ತು. ಆದರೆ, ಅದನ್ನು ಪಾವತಿಸಿರಲಿಲ್ಲ. ವೇತನ ಪರಿಷ್ಕರಣೆ ಬಾಕಿಯನ್ನು ಪಾವತಿಸಲು ನಮ್ಮ ಸರ್ಕಾರ ಬದ್ಧವಾಗಿದೆ. ನಮ್ಮ ಸರ್ಕಾರದ ನಿಲುವನ್ನು ಸಾರಿಗೆ ನೌಕರರಿಗೆ ತಿಳಿಸಿ, ಮುಷ್ಕರ ಕೈಬಿಟ್ಟು ಮುಂದಿನ ದಿನಗಳಲ್ಲಿ ಮಾತುಕತೆ ಮುಂದುವರಿಸಬಹುದು ಎಂದು ಮನವಿ ಮಾಡಿದ್ದರೂ ನೌಕರ ಸಂಘಟನೆಗಳು ಮುಷ್ಕರ ಹೂಡಿವೆ. ನಮ್ಮದು ಕಾರ್ಮಿಕರ ಪರ ಸರ್ಕಾರ, ಅವರ ಹಿತಾಸಕ್ತಿ ಕಾಪಾಡಲು ನಾವು ಬದ್ಧರಾಗಿದ್ದೇವೆ’ ಎಂದೂ ಹೇಳಿದ್ದಾರೆ.

ಮುಷ್ಕರ ನಿಲ್ಲಿಸದಿದ್ದರೆ ಬಂಧಿಸಿ: ಹೈಕೋರ್ಟ್

ಒಂದನೇ ಪುಟದಿಂದ...

‘ಮುಷ್ಕರ ತಡೆಹಿಡಿಯಲು ಆದೇಶಿಸಿದ್ದರೂ ಮುಷ್ಕರ ಆರಂಭಿಸಿರುವುದು ತರವಲ್ಲ. ಸರ್ಕಾರ, ಕರ್ನಾಟಕ ಅತಿ ಅವಶ್ಯಕ ಸೇವೆಗಳ ನಿರ್ವಹಣಾ ಕಾಯ್ದೆ–2013 (ಎಸ್ಮಾ) ಅನ್ನು ಜುಲೈ 17ರಂದ ಜಾರಿ ಮಾಡಿದ್ದರೂ ಅದನ್ನು ಲೆಕ್ಕಿಸದೆ ಸೇವೆ ಸ್ಥಗಿತಗೊಳಿಸಿರುವುದು ಅಕ್ರಮ’ ಎಂದು ಕಿಡಿ ಕಾರಿತು.

‘ನಿಮ್ಮ ಸಮಸ್ಯೆ ಏನೇ ಇದ್ದರೂ ಸರ್ಕಾರದೊಂದಿಗೆ ಚರ್ಚಿಸಿ ಬಗೆಹರಿಸಿಕೊಳ್ಳಿ. ಅದು ಬಿಟ್ಟು ಜನಸಾಮಾನ್ಯರನ್ನು ತೊಂದರೆಗೆ ಸಿಲುಕಿಸಬೇಡಿ. ಇದನ್ನೆಲ್ಲಾ ನಾವು ಸಹಿಸುವುದಿಲ್ಲ. ಅಕ್ರಮವಾಗಿ ಮುಷ್ಕರ ನಡೆಸುತ್ತಿರುವವರನ್ನು ಪೊಲೀಸರು ಬಂಧಿಸಬಹುದು. ನಿಮ್ಮ ಅವಿಧೇಯತೆಗೆ ನ್ಯಾಯಾಲಯವೂ ನ್ಯಾಯಾಂಗ ನಿಂದನೆ ಅಪರಾಧದಡಿ ಅಗತ್ಯ ಕಾನೂನು ಜರುಗಿಸಬಹುದಾಗಿದೆ’ ಎಂದು ಚಾಟಿ ಬೀಸಿತು.

ಇದಕ್ಕೆ ಉತ್ತರಿಸಿದ ‘ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ’ಯ ಪರ ಹಾಜರಿದ್ದ ಹೈಕೋರ್ಟ್‌ನ ಹಿರಿಯ ವಕೀಲ ಕೆ.ಬಿ. ನಾರಾಯಣ ಸ್ವಾಮಿ, ‘ರಾತ್ರಿ ದೊರೆತ ಹೈಕೋರ್ಟ್ ಆದೇಶವನ್ನು ಎಲ್ಲ ವಿಭಾಗಗಳ ಸಂಘಟನಾ ಪದಾಧಿಕಾರಿಗಳಿಗೆ ತಲುಪಿಸಲು ತಡವಾಗಿದೆ. ಬೆಂಗಳೂರು ಮಹಾನಗರದಲ್ಲಿ ಮಂಗಳವಾರ ಯಾವುದೇ ಮುಷ್ಕರ ನಡೆದಿಲ್ಲ. ಶೇ 98ರಷ್ಟು ಬಿಎಂಟಿಸಿ ಬಸ್‌ಗಳ ಸೇವೆಯನ್ನು ಒದಗಿಸಲಾಗಿದೆ’ ಎಂದು ನ್ಯಾಯಪೀಠಕ್ಕೆ ಅರುಹಿದರು.

ಮುಖ್ಯಾಂಶಗಳು

- ವಿಚಾರಣೆ ಇದೇ 7ಕ್ಕೆ ಮುಂದೂಡಿಕೆ
- ಎಸ್ಮಾ ಕಾಯ್ದೆ ಕಲಂ 9ರ ಅಡಿ ಕ್ರಮಕ್ಕೆ ಆದೇಶ

> **ಮುಷ್ಕರ ನಿಲ್ಲಿಸದಿದ್ದರೆ ಸಾರಿಗೆ ನಿಗಮಗಳ ಕಾರ್ಮಿಕ ಸಂಘಟನೆಗಳ ಜಂಟಿ ಕ್ರಿಯಾ ಸಮಿತಿ ಪದಾಧಿಕಾರಿಗಳ ವಿರುದ್ಧ ನ್ಯಾಯಾಂಗ ನಿಂದನೆ ಪ್ರಕರಣ ದಾಖಲಿಸಲಾಗುವುದು. ಬಂಧನಕ್ಕೆ ಆದೇಶಿಸಲಾಗುವುದು**
>
> **ವಿಭು ಬಖ್ರು,** ಮುಖ್ಯ ನ್ಯಾಯಮೂರ್ತಿ

ಇದನ್ನು ಒಪ್ಪದ ನ್ಯಾಯಪೀಠ, ಪ್ರತಿವಾದಿಗಳಾದ ನಾಲ್ಕೂ ಸಾರಿಗೆ ನಿಗಮಗಳ ನೌಕರರ ಸಂಘಟನೆಗಳಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು. ಮುಷ್ಕರವನ್ನು ತಡೆಹಿಡಿದು ಸೋಮವಾರ (ಆ.4) ಹೊರಡಿಸಿದ್ದ ಮಧ್ಯಂತರ ಆದೇಶವನ್ನು ಎರಡು ದಿನ ವಿಸ್ತರಿಸಿ ವಿಚಾರಣೆಯನ್ನು ಇದೇ 7ಕ್ಕೆ ಮುಂದೂಡಿತು.

‘ನೌಕರರು ಮುಷ್ಕರ ಮುಂದುವರಿಸಿದರೆ ಅವರ ವಿರುದ್ಧ ಎಸ್ಮಾ ಕಾಯ್ದೆಯ ಕಲಂ 9ರ ಅಡಿಯಲ್ಲಿ ಸೂಕ್ತ ಕಾನೂನು ಕ್ರಮ ಕೈಗೊಳ್ಳಿ’ ಎಂದು ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ ಅವರಿಗೆ ಆದೇಶಿಸಿತು. ಅರ್ಜಿದಾರರ ಪರ ಹೈಕೋರ್ಟ್ ವಕೀಲೆ ದೀಕ್ಷಾ ಎನ್.ಅಮೃತೇಶ್, ಕೆಎಸ್‌ಆರ್‌ಟಿಸಿ ಪರ ಹಿರಿಯ ವಕೀಲೆ ಎಚ್.ಆರ್.ರೇಣುಕಾ ಹಾಜರಿದ್ದರು.

ಕೋರಿಕೆಗಳು

- ಅನಿರ್ದಿಷ್ಟಾವಧಿ ಮುಷ್ಕರ ತಡೆಯಲು ಸರ್ಕಾರಕ್ಕೆ ನಿರ್ದೇಶಿಸಬೇಕು
- ಮುಷ್ಕರ ಹೂಡುವುದಾಗಿ ಘೋಷಿಸಿರುವ ಸಿಬ್ಬಂದಿ ವಿರುದ್ಧ ಶಿಸ್ತು ಕ್ರಮ ಜರುಗಿಸಲು ನಿರ್ದೇಶಿಸಬೇಕು
- ನಾಲ್ಕು ನಿಗಮಗಳು ತಮ್ಮ ಸೇವೆಯಲ್ಲಿ ಯಾವುದೇ ವ್ಯತ್ಯಯ ಉಂಟು ಮಾಡದಂತೆ ಸಂಚರಿಸಲು ನಿರ್ದೇಶಿಸಬೇಕು
- ಒಕ್ಕೂಟದ ಬೇಡಿಕೆಗಳ ಪರಿಶೀಲನೆಗಾಗಿ ಮತ್ತು ವಿವಾದ ಪರಿಹಾರದ ನಿಟ್ಟಿನಲ್ಲಿ ಮಧ್ಯಸ್ಥಿಕೆಗಾಗಿ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ನೇತೃತ್ವದಲ್ಲಿ ಉನ್ನತ ಮಟ್ಟದ ಸಮಿತಿ ರಚಿಸಲು ರಾಜ್ಯ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ನಿರ್ದೇಶಿಸಬೇಕು

ಸಾರಿಗೆ ಮುಷ್ಕರಕ್ಕೆ ಎರಡು ದಿನ ತಡೆ

ಒಂದನೇ ಪುಟದಿಂದ...

ಕಲ್ಯಾಣ ಕರ್ನಾಟಕ, ಕಿತ್ತೂರು ಕರ್ನಾಟಕ, ಮಧ್ಯ ಕರ್ನಾಟಕ, ಮೈಸೂರು ಹಾಗೂ ಬೆಂಗಳೂರು ಭಾಗದಲ್ಲಿ ಅಂತರ ಜಿಲ್ಲಾ ಪ್ರಯಾಣದ ಬಸ್‌ಗಳ ಸಂಚಾರ ಬಹುತೇಕ ಸ್ಥಗಿತಗೊಂಡಿತ್ತು. ಆದರೆ, ಆಯಾ ಜಿಲ್ಲೆಯ ಒಳಗೆ ಬಸ್‌ಗಳ ಸಂಚಾರ ಸಹಜವಾಗಿತ್ತು. ಕಲಬುರಗಿ, ದಾವಣಗೆರೆ ಸೇರಿದಂತೆ ಕೆಲ ಜಿಲ್ಲೆಗಳಲ್ಲಿ ಬಸ್ ಸಂಚಾರ ಬಹುತೇಕ ಸ್ಥಗಿತಗೊಂಡಿತ್ತು. ಉಳಿದ ಕೆಲ ಜಿಲ್ಲೆಗಳಲ್ಲಿ ಭಾಗಶಃ, ಕೆಲ ಜಿಲ್ಲೆಗಳಲ್ಲಿ ಬಸ್ ಸಂಚಾರ ನಿತ್ಯದಂತೆ ಇದ್ದವು.

ಕೊಪ್ಪಳ, ಹುಬ್ಬಳ್ಳಿ, ಧಾರವಾಡ, ಕೋಲಾರ ಜಿಲ್ಲೆಯ ಕೆಲವೆಡೆ ಬಸ್‌ಗಳ ಮೇಲೆ ಕಲ್ಲು ತೂರಾಟ ನಡೆದಿದೆ. ಕೆಲ ಬಸ್‌ಗಳ ಗಾಜುಗಳನ್ನು ಒಡೆದು ಹಾಕಲಾಗಿದೆ. ಹಲವು ಮಾರ್ಗಗಳಲ್ಲಿ ಪೊಲೀಸ್ ಗಸ್ತು ವಾಹನಗಳನ್ನು ನಿಯೋಜಿಸಲಾಗಿತ್ತು. ಬಸ್‌ಗಳ ಸಂಚಾರದ ಮೇಲೆ ನಿಗಾ ವಹಿಸಲಾಗಿತ್ತು.

ಮುಷ್ಕರದ ಮಾಹಿತಿ ಇಲ್ಲದೇ ನಿಲ್ದಾಣಗಳಿಗೆ ಬಂದಿದ್ದ ಪ್ರಯಾಣಿಕರು ಸಮಯಕ್ಕೆ ಸರಿಯಾಗಿ ಬಸ್‌ಗಳಿಲ್ಲದೆ ತೊಂದರೆ ಅನುಭವಿಸಿದರು. ಕೆಲವರು ಅಲ್ಲೇ ವಿಶ್ರಾಂತಿ ಪಡೆದರೆ, ನಿದ್ರೆಗೆ ಜಾರಿದ್ದರು. ಕೆಲ ಡಿಪೊಗಳಲ್ಲಿ ಬಸ್‌ಗಳು ಸಾಲುಗಟ್ಟಿ ನಿಂತಿದ್ದವು. ಮುಂಗಡ ಸೀಟು ಕಾಯ್ದಿರಿಸಿದ್ದ ಪ್ರಯಾಣಿಕರು ಮುಂಗಡ ಕಾಯ್ದಿರಿಸುವಿಕೆ ವಿಭಾಗದ ಸಿಬ್ಬಂದಿ ಜತೆ ವಾಗ್ವಾದ ನಡೆಸಿದರು. ಬುಕ್ಕಿಂಗ್ ಹಣ ವಾಪಸ್ ಪಡೆಯಲು ಕೆಲವೆಡೆ ಜನಸಂದಣಿ ಏರ್ಪಟ್ಟಿತ್ತು. ಕೊಪ್ಪಳ ಹಾಗೂ ತುಮಕೂರು ವಿಶ್ವವಿದ್ಯಾಲಯಗಳಲ್ಲಿ ಮಂಗಳವಾರ ನಡೆಯಬೇಕಿದ್ದ ಸ್ನಾತಕ ಹಾಗೂ ಸ್ನಾತಕೋತ್ತರ ಪರೀಕ್ಷೆಗಳನ್ನು ಸಂಚಾರ ವ್ಯತ್ಯಯದ ಕಾರಣ ಮುಂದೂಡಲಾಯಿತು.

ಬಿಎಂಟಿಸಿ ಸಂಚಾರ ಅಭಾದಿತ

ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆಯ ಶೇ 70ಕ್ಕೂ ಹೆಚ್ಚು ಬಸ್‌ಗಳು ಮಂಗಳವಾರ ರಸ್ತೆಗೆ ಇಳಿದಿದ್ದವು. ಸಾರಿಗೆ ನಿಗಮಗಳ ನೌಕರರ ಮುಷ್ಕರದ ಘೋಷಣೆಯ ನಂತರ ಬಿಎಂಟಿಸಿ ಮುಂಜಾಗ್ರತಾ ಕ್ರಮ ಕೈಗೊಂಡಿದ್ದರಿಂದ ನಗರದ ಪ್ರಯಾಣಿಕರು ತುಸು ನಿರಾಳ ಅನುಭವಿಸಿದರು.

ಎಲೆಕ್ಟ್ರಾನಿಕ್ ಬಸ್‌ಗಳನ್ನು (ಇವಿ) ಖಾಸಗಿ ಸಹಭಾಗಿತ್ವದಲ್ಲಿ ರಸ್ತೆಗೆ ಇಳಿಸಲಾಗಿತ್ತು. ಹೊಸದಾಗಿ ನೇಮಕವಾಗಿ, ತರಬೇತಿಯಲ್ಲಿರುವ 1,500 ಚಾಲಕರನ್ನು ಪೂರ್ಣ ಪ್ರಮಾಣದಲ್ಲಿ ಬಳಸಿಕೊಳ್ಳಲಾಯಿತು. ಅವರನ್ನು ಅಗತ್ಯ ಮಾರ್ಗಗಳಲ್ಲಿ ನಿಯೋಜನೆ ಮಾಡಲಾಗಿತ್ತು. ನಿವೃತ್ತಿ ಸಮೀಪದಲ್ಲಿರುವವರು, ಮುಷ್ಕರಕ್ಕೆ ಸಹಮತ ತೋರದ ಕೆಲ ಚಾಲಕರು, ನಿರ್ವಾಹಕರು ಕೆಲಸಕ್ಕೆ ಹಾಜರಾಗಿದ್ದರು.

ಕೆಲವೆಡೆ ಪರದಾಟ, ದುಬಾರಿ ಬಾಡಿಗೆ: ಕೆಲ ಮಾರ್ಗಗಳಲ್ಲಿ ಬಸ್‌ಗಳು ಸಿಗದೆ ಶಾಲಾ–ಕಾಲೇಜು ವಿದ್ಯಾರ್ಥಿಗಳು ಪರದಾಡಿದರು. ಮೆಟ್ರೊ ರೈಲುಗಳಲ್ಲಿ ಜನಸಂದಣಿ ಅಧಿಕವಾಗಿತ್ತು. ಬಹುತೇಕರು ಆಟೊರಿಕ್ಷಾ, ಕ್ಯಾಬ್‌ಗಳಲ್ಲಿ ಪ್ರಯಾಣಿಸಿದರು. ಪರಿಸ್ಥಿತಿಯ ಲಾಭ ಪಡೆದ ಕೆಲ ಖಾಸಗಿ ವಾಹನಗಳ ಚಾಲಕರು ದುಬಾರಿ ಹಣ ವಸೂಲಿ ಮಾಡುತ್ತಿದ್ದ ದೃಶ್ಯ ಕಂಡುಬಂತು. ಮೊಬೈಲ್ ಆ್ಯಪ್ ಆಧಾರಿತ ವಾಹನಗಳ ಸೇವೆಗಳು ಸಮಯಕ್ಕೆ ಸರಿಯಾಗಿ ಲಭ್ಯವಾಗದೆ ಕೆಲ ಪ್ರಯಾಣಿಕರು ಸಂಕಷ್ಟ ಅನುಭವಿಸಿದರು.

ಸರ್ಕಾರ ಅವಕಾಶ ಬಳಸಿಕೊಳ್ಳಲಿ

ಒಂದನೇ ಪುಟದಿಂದ...

‘ಆ.4ರಂದು ನಡೆದಿದ್ದ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, 14 ತಿಂಗಳ ಹೆಚ್ಚುವರಿ ವೇತನ ಬಾಕಿ ₹700 ಕೋಟಿ ನೀಡಲಾಗುವುದು, ಅಧಿವೇಶನದಲ್ಲಿ ಚರ್ಚಿಸಿದ ನಂತರ ಮತ್ತೆ ಸಭೆ ಕರೆದು ಚರ್ಚಿಸಲಾಗುವುದು ಎಂದಿದ್ದರು. ವೇತನ ಪರಿಷ್ಕರಣೆ, 38 ತಿಂಗಳ ಹೆಚ್ಚುವರಿ ವೇತನ ಬಾಕಿಗೆ ಪಟ್ಟು ಹಿಡಿದ ಕಾರಣ ಮುಷ್ಕರಕ್ಕೆ ಕರೆ ನೀಡಿದೆವು’ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮುಖಂಡರಾದ ಬಿ. ಜಯದೇವರಾಜೇ ಅರಸು, ಎಚ್.ಡಿ. ರೇವಪ್ಪ, ವೆಂಕಟರಮಣಪ್ಪ, ಎ. ಸೋಮಣ್ಣ, ಎಚ್.ಆರ್. ಜಗದೀಶ ಉಪಸ್ಥಿತರಿದ್ದರು.

ಇನ್ನೊಂದು ದೂರು ಎಸ್‌ಐಟಿಗೆ ವರ್ಗ

ಪ್ರಜಾವಾಣಿ ವಾರ್ತೆ

ಮಂಗಳೂರು: ಧರ್ಮಸ್ಥಳ ಗ್ರಾಮದಲ್ಲಿ 15 ವರ್ಷಗಳ ಹಿಂದೆ ಬಾಲಕಿಯ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸದೆ, ಎಫ್‌ಐಆರ್ ದಾಖಲಿಸದೆಯೇ ಹೂತು ಹಾಕಲಾಗಿದೆ ಎಂದು ಆರೋಪಿಸಿ ಕಡಬ ತಾಲ್ಲೂಕಿನ ಇಚ್ಲಂಪಾಡಿ ಗ್ರಾಮದ ಜಯಂತ್ ಟಿ. ಎಂಬುವರು ನೀಡಿದ್ದ ದೂರನ್ನು ವಿಶೇಷ ತನಿಖಾ ತಂಡಕ್ಕೆ (ಎಸ್‌ಐಟಿ) ವರ್ಗಾಯಿಸಲಾಗಿದೆ.

‘ಜಯಂತ್ ಟಿ. ಅವರು ಧರ್ಮಸ್ಥಳ ಠಾಣೆಗೆ ನೀಡಿರುವ ದೂರನ್ನು (200/DPS/2025) ಮುಂದಿನ ವಿಚಾರಣೆಗಾಗಿ ಎಸ್‌ಐಟಿಗೆ ಹಸ್ತಾಂತರಿಸುವಂತೆ ಡಿಜಿಪಿ ಮತ್ತು ಐಜಿಪಿ ಎಂ.ಎ. ಸಲೀಂ ಆದೇಶ ಮಾಡಿದ್ದಾರೆ’ ಎಂದು ದಕ್ಷಿಣ ಕನ್ನಡ ಜಿಲ್ಲಾ ಪೊಲೀಸ್ ಮೂಲಗಳು ತಿಳಿಸಿವೆ.

ಧರ್ಮಸ್ಥಳ ಪ್ರಕರಣದ ಆರೋಪ ಕುರಿತು ಎಸ್‌ಐಟಿಯಿಂದ ನಡೆಯುತ್ತಿರುವ ಶೋಧಕಾರ್ಯ ಮಂಗಳವಾರವೂ ಮುಂದುವರಿಯಿತು. ನೇತ್ರಾವತಿ ನದಿ ಪಕ್ಕದ ಕಾಡಿನಲ್ಲಿ ಗುರುವಾರ ಮೃತದೇಹದ ಅವಶೇಷ ಸಿಕ್ಕಿದ ಬಗ್ಗೆ ಅಸಹಜ ಸಾವು ಪ್ರಕರಣ (ಯುಡಿಆರ್) ದಾಖಲಾಗಿದೆ.

ಧರ್ಮಸ್ಥಳ ಸ್ನಾನಘಟ್ಟದ ಸಮೀಪ ರಾಜ್ಯ ಹೆದ್ದಾರಿ ಪಕ್ಕದ ಕಾಡಿನಲ್ಲಿ ಸಾಕ್ಷಿ ದೂರುದಾರ ತೋರಿಸಿರುವ 11ನೇ ಹಾಗೂ 12ನೇ ಜಾಗಗಳಲ್ಲಿ ಮಂಗಳವಾರ ಶೋಧ ನಡೆಯಿತು. ಈ ಜಾಗ ಹೆದ್ದಾರಿಯಿಂದ ಸುಮಾರು 20 ಮೀಟರ್ ದೂರದಲ್ಲಿ ಕಾಡಿನೊಳಗಿದೆ. ಶೋಧ ಕಾರ್ಯದ ದೃಶ್ಯ ಕಾಣಬಾರದೆಂದು ರಸ್ತೆ ಪಕ್ಕದಲ್ಲಿ ಉದ್ದಕ್ಕೂ ಹಸಿರು ಬಣ್ಣದ ಪರದೆ ಕಟ್ಟಲಾಗಿತ್ತು.

‘ಈ ಎರಡೂ ಜಾಗಗಳಲ್ಲಿ ಮೃತದೇಹಗಳನ್ನು ಹೂತು ಹಾಕಿರುವ ಯಾವುದೇ ಕುರುಹು ಪತ್ತೆಯಾಗಿಲ್ಲ’ ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

ಈ ಪ್ರಕರಣದ ಸಾಕ್ಷಿ ದೂರುದಾರ, ಪುತ್ತೂರು ಉಪ ವಿಭಾಗಾಧಿಕಾರಿ ಸ್ಟೆಲ್ಲಾ ವರ್ಗೀಸ್ ಹಾಗೂ ಎಸ್‌ಐಟಿಯಲ್ಲಿರುವ ಎಸ್.ಪಿ ಜಿತೇಂದ್ರ ಕುಮಾರ್ ದಯಾಮ ಸ್ಥಳದಲ್ಲಿದ್ದರು.

ಸಾಕ್ಷಿ ದೂರುದಾರ ಮೊದಲು 13, ಸೋಮವಾರ ಒಂದು ಸೇರಿ 14 ಜಾಗ ತೋರಿಸಿದ್ದರು. ಈ ಪೈಕಿ 12 ಕಡೆ ಶೋಧ ನಡೆದಿದೆ. ಆರನೇ ಜಾಗದಲ್ಲಿ ಒಂದು ಗಂಡಸಿನ ಮೃತದೇಹದ ಅವಶೇಷ ಹಾಗೂ ಸೋಮವಾರ ಶೋಧ ಕಾರ್ಯ ನಡೆಸಿದ 14ನೇ ಜಾಗದಲ್ಲಿ ಮೃತದೇಹದ ಅವಶೇಷಗಳು ಸಿಕ್ಕಿವೆ. ಉಳಿದ ಒಂಬತ್ತು ಕಡೆ ಯಾವುದೇ ಕುರುಹು ಸಿಕ್ಕಿರಲಿಲ್ಲ. ಈ ವರೆಗೆ ಸಾಕ್ಷಿ ದೂರುದಾರ ತೋರಿಸಿರುವ ಜಾಗಗಳಲ್ಲಿ ಒಂದು ಜಾಗ ಅಗೆಯುವುದು ಬಾಕಿ ಉಳಿದಿದೆ.

‘ಕಾಡಿನಲ್ಲಿ ಸೋಮವಾರ ಪತ್ತೆಯಾದ ಅವಶೇಷ ಒಬ್ಬ ವ್ಯಕ್ತಿಗೆ ಸಂಬಂಧಿಸಿದ್ದಂತೆ ಮೇಲ್ನೋಟಕ್ಕೆ ಕಾಣಿಸುತ್ತಿದೆ. ಗಂಡಸಿನದ್ದೋ, ಹೆಂಗಸಿನದ್ದೋ ಎಂಬುದು ವಿಧಿವಿಜ್ಞಾನ ತಜ್ಞರು ಪರಿಶೀಲಿಸಿದ ಬಳಿಕವೇ ಗೊತ್ತಾಗಲಿದೆ’ ಎಂದು ಎಸ್‌ಐಟಿ ಮೂಲಗಳು ತಿಳಿಸಿವೆ.

‘ಧರ್ಮಸ್ಥಳ ಪ್ರಕರಣ: ಧರ್ಮ ತರಬೇಡಿ’

ಹಾವೇರಿ: ‘ಧರ್ಮಸ್ಥಳ ಪ್ರಕರಣದಲ್ಲಿ ಧರ್ಮ ತರುವುದು ಬೇಡ. ಅದು ತಪ್ಪು’ ಎಂದು ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ನಾಗಲಕ್ಷ್ಮಿ ಚೌಧರಿ ಹೇಳಿದರು.

ಜಿಲ್ಲೆಯ ಶಿಗ್ಗಾವಿ ತಾಲ್ಲೂಕಿನ ಗೊಟಗೋಡಿಯ ಕರ್ನಾಟಕ ಜಾನಪದ ವಿಶ್ವವಿದ್ಯಾಲಯದಲ್ಲಿ ಮಂಗಳವಾರ ಸುದ್ದಿಗಾರರ ಜೊತೆ ಅವರು ಮಾತನಾಡಿದರು.

‘ನಾವು ಮಕ್ಕಳಿದ್ದಾಗಿನಿಂದ ಮಂಜುನಾಥ ಸ್ವಾಮಿಗೆ ಪೂಜಿಸುತ್ತಿದ್ದೇವೆ. ‘ಎದ್ದೇಳು ಮಂಜುನಾಥ ಬೆಳಕಾಯಿತು’ ಎನ್ನುತ್ತ ಬೆಳೆದಿದ್ದೇವೆ. ನನ್ನ ಅಣ್ಣನ ಹೆಸರು ಸಹ ಮಂಜುನಾಥ. ದೇವರನ್ನು ನಂಬುವ ವಿಚಾರ ಬೇರೆ, ಈ ಪ್ರಕರಣವೇ ಬೇರೆ’ ಎಂದರು.

‘ಧರ್ಮ ಎಂದರೆ ಮಂಜುನಾಥ, ಹಿಂದೂಗಳಿಗೆ ಮಂಜುನಾಥನೇ ಭಗವಂತ. ಭಗವಂತನಲ್ಲಿ ನಾವು ರಾಜಕಾರಣ ಮಾಡುತ್ತಿಲ್ಲ. ನ್ಯಾಯ ಮಾತ್ರ ಕೇಳುತ್ತಿದ್ದೇವೆ. ಏನಾದರೂ ಮಾಡಿದ್ದರೆ ಸತ್ಯ ಹೊರಗೆ ಬರುತ್ತದೆ. ಮಾಡಿಲ್ಲದಿದ್ದರೂ ಅವರಿಗೆ ಜಯವಾಗುತ್ತದೆ. ಎಸ್‌ಐಟಿ ತನಿಖೆ ಮೇಲೆ ವಿಶ್ವಾಸವಿರಲಿ. ಸತ್ಯ–ಅಸತ್ಯ ಏನು ಎಂಬುದನ್ನು ಕಾದು ನೋಡೋಣ’ ಎಂದರು.

ನಾಂದಣಿ ಮಠದ ಆನೆಗಾಗಿ ಒಗ್ಗೂಡಿದ ಕರ್ನಾಟಕ–ಮಹಾರಾಷ್ಟ್ರದ ಗಡಿ ಭಾಗದ ಭಕ್ತರು

ಆನೆಗಾಗಿ ಜಿಯೊ ಸಿಮ್ ಎಸೆದರು...

ಪ್ರಜಾವಾಣಿ ವಾರ್ತೆ

ಕಾಗವಾಡ (ಬೆಳಗಾವಿ ಜಿಲ್ಲೆ): ಮಹಾರಾಷ್ಟ್ರದ ನಾಂದಣಿ ಮಠದಲ್ಲಿದ್ದ ಆನೆಯನ್ನು ಮರಳಿ ಮಠಕ್ಕೇ ಒಪ್ಪಿಸುವಂತೆ ಭಕ್ತರು ಪಟ್ಟು ಹಿಡಿದಿದ್ದಾರೆ.

ಆನೆ ಒಯ್ಯಲು ಕಾರಣರಾಗಿದ್ದಾರೆ ಎಂದು ಸಿಟ್ಟಿಗೆದ್ದು, ಕರ್ನಾಟಕ ಮತ್ತು ಮಹಾರಾಷ್ಟ್ರ ಗಡಿಯ ಅಸಂಖ್ಯ ಭಕ್ತರು ಅಂಬಾನಿ ಒಡೆತನದ ಜಿಯೊ ಸಿಮ್‌ಕಾರ್ಡ್ ಕಿತ್ತೆಸೆದಿದ್ದಾರೆ.

ಮಹಾರಾಷ್ಟ್ರದ ಕೊಲ್ಲಾಪುರ ಜಿಲ್ಲೆಯ ಶಿರೋಳ ತಾಲ್ಲೂಕಿನ ನಾಂದಣಿಯ ಸ್ವಸ್ತಿಶ್ರೀ ಭಟ್ಟಾರಕ ಪಟ್ಟಾಚಾರ್ಯ ಜೈನ ಮಠದ ಮಹಾದೇವಿ (ಮಾಧುರಿ) ಎಂಬ ಆನೆಯನ್ನು ಸುಪ್ರೀಂ ಕೋರ್ಟ್ ಆದೇಶದ ಹಿನ್ನೆಲೆಯಲ್ಲಿ, ಗುಜರಾತ್ ರಾಜ್ಯದ ವನತಾರ ಪ್ರಾಣಿ ರಕ್ಷಣಾ ಕೇಂದ್ರಕ್ಕೆ (ಅಂಬಾನಿ ಒಡೆತನ) ಕರೆದೊಯ್ಯಲಾಗಿದೆ. ಇದನ್ನು ಖಂಡಿಸಿದ ಭಕ್ತರು, ಭಾನುವಾರ (ಆ.3) ನಾಂದಣಿಯಿಂದ ಕೊಲ್ಹಾಪುರ ಜಿಲ್ಲಾಧಿಕಾರಿ ಕಚೇರಿಯವರೆಗೆ ಪಾದಯಾತ್ರೆ ನಡೆಸಿ, ಜಿಲ್ಲಾಧಿಕಾರಿಗೆ ಮನವಿ ಸಲ್ಲಿಸಿದರು.



ನಾಂದಣಿ ಜೈನ ಮಠದ ಆನೆ ಮಹಾದೇವಿ (ಮಾಧುರಿ)

> **ಆನೆಯನ್ನು ಕರೆದೊಯ್ದ ಕಾರಣ ಜೈನ ಮುನಿಗಳೂ ಸೇರಿ ಇಡೀ ಊರು ಕಣ್ಣೀರು ಹಾಕುತ್ತಿದೆ. ಇದು ಭಾವನಾತ್ಮಕ ವಿಷಯ. ಸರ್ಕಾರ ಆನೆಯನ್ನು ಮಠಕ್ಕೆ ಮರಳಿಸಬೇಕು**
>
> **ಸಂಜಯ ಕೂಚನೂರೆ,** ಉಪಾಧ್ಯಕ್ಷ, ಬೆಳಗಾವಿ ದಿಗಂಬರ ಜೈನ ಬೋರ್ಡಿಂಗ್, ಬೆಳಗಾವಿ

30 ವರ್ಷಗಳಿಂದ ಆನೆ ಮಠದಲ್ಲಿತ್ತು. ಈಗ ಅದಕ್ಕೆ 35 ವರ್ಷ ವಯಸ್ಸು. ಮಠದಲ್ಲಿ ಪರಂಪರಾಗತವಾಗಿ ಆನೆ ಸಾಕುವ ಪದ್ಧತಿ ಇದೆ. ಇದನ್ನು ಪ್ರಶ್ನಿಸಿ ಮಹಾರಾಷ್ಟ್ರದ ಪ್ರಾಣಿ ದಯಾ ಸಂಘಟನೆ ದೂರು ಸಲ್ಲಿಸಿತ್ತು. ಅರಣ್ಯ ಇಲಾಖೆ ವೈದ್ಯಾಧಿಕಾರಿಗಳು ಆನೆ ಆರೋಗ್ಯ ತಪಾಸಣೆ ನಡೆಸಿ, ಸರಿಯಾದ ಪಾಲನೆ ಆಗದೆ ಆರೋಗ್ಯ ಕ್ಷೀಣಿಸಿದೆ ಎಂದು ವರದಿ ನೀಡಿದ್ದರು.

ವಿಚಾರಣೆ ನಡೆಸಿದ ಮುಂಬೈ ಹೈಕೋರ್ಟ್ ಆನೆಯನ್ನು ಅರಣ್ಯಕ್ಕೆ ಬಿಡಬೇಕು ಎಂದು ಆದೇಶಿಸಿತ್ತು. ಇದನ್ನು ಪ್ರಶ್ನಿಸಿ ಮಠದ ಭಕ್ತರು ಸುಪ್ರೀಂಕೋರ್ಟ್ ಮೊರೆ ಹೋಗಿದ್ದರು. ಅಲ್ಲಿಯೂ ಸೋಲಾಯಿತು. ಆದೇಶದಂತೆ, ಜುಲೈ 28ರಂದು ಅರಣ್ಯಾಧಿಕಾರಿಗಳು ಆನೆಯನ್ನು ವಶಕ್ಕೆ ಪಡೆದು, ವನತಾರ ಪ್ರಾಣಿ ರಕ್ಷಣಾ ಕೇಂದ್ರಕ್ಕೆ ಸೇರಿಸಿದ್ದಾರೆ.

‘ಜೈನ ಮಠಗಳ ಅಸ್ತಿತ್ವಕ್ಕೆ ಧಕ್ಕೆ ತರಲಾಗಿದೆ. ಉದ್ಯಮಿ ಅಂಬಾನಿ ಒಡೆತನದ ಕೇಂದ್ರಕ್ಕೆ ಆನೆಯನ್ನು ಸೇರಿಸಿದ್ದು ಸರಿಯಲ್ಲ ಎಂದು ಭಕ್ತರು ಆಕ್ರೋಶ ಹೊರಹಾಕಿದ್ದಾರೆ. ಇದೇ ಕಾರಣಕ್ಕೆ ಅಪಾರ ಸಂಖ್ಯೆಯ ಭಕ್ತರು ಜಿಯೊ ನೆಟ್‌ವರ್ಕ್ ಬಳಕೆಯನ್ನೂ ಕೈಬಿಟ್ಟಿದ್ದಾರೆ’ ಎಂದು ಜೈನ ಸಮಾಜದ ಮುಖಂಡರು ತಿಳಿಸಿದ್ದಾರೆ.

ಅಭಿಮತದ ವಿಳಾಸ: ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75 ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-01 editpage@prajavani.co.in

ಅಭಿಮತ

ಸುಭಾಷಿತ

ಧ್ಯಾನವು ಅನಂತ ಆನಂದಕ್ಕೆ ಇರುವ ಹೆಬ್ಬಾಗಿಲು.

_ ಸ್ವಾಮಿ ವಿವೇಕಾನಂದ

ಸಂಪಾದಕೀಯ

ನೆನಪಿನಲ್ಲಿ ಉಳಿಯುವಂಥ ಸರಣಿ ಟೆಸ್ಟ್ ಕ್ರಿಕೆಟ್‌ಗೆ ಮರಳಿ ಯೌವನ

‘ಟ್ವೆಂಟಿ-20 ಕ್ರಿಕೆಟ್‌ನ ಈ ಯುಗದಲ್ಲಿ ಟೆಸ್ಟ್ ಆಟಕ್ಕೆ ಸಂಪೂರ್ಣ ವೃದ್ಧಾಪ್ಯ ಆವರಿಸಿದ್ದು, ಇನ್ನೇನು ಅದು ತನ್ನ ಅಸ್ತಿತ್ವವನ್ನೇ ಕಳೆದುಕೊಳ್ಳಲಿದೆ’ ಎಂಬ ಮಾತು ಇತ್ತೀಚಿನ ವರ್ಷಗಳಲ್ಲಿ ಬಲವಾಗಿ ಕೇಳಿಬರುತ್ತಿತ್ತು. ಒಂದುಕಾಲಕ್ಕೆ ‘ಷೇಕ್ಸ್‌ಪಿಯರ್‌ನ ಕಾವ್ಯದಷ್ಟೇ ಮುದ ನೀಡುವ ದೃಶ್ಯಕಾವ್ಯ’ ಎಂಬ ಬಣ್ಣನೆಗೆ ಒಳಗಾಗಿದ್ದ ಕ್ರಿಕೆಟ್‌ನ ಈ ಮಾದರಿಯು ತಲುಪಿದ್ದ ದೈನೇಸಿ ಸ್ಥಿತಿಗೆ ಈ ಮಾತು ದ್ಯೋತಕವಾಗಿತ್ತು. ಆದರೆ, ಭಾರತ–ಇಂಗ್ಲೆಂಡ್ ತಂಡಗಳ ನಡುವೆ ಮೊನ್ನೆಯಷ್ಟೆ ಮುಕ್ತಾಯವಾದ ಆ್ಯಂಡರ್ಸನ್–ತೆಂಡೂಲ್ಕರ್ ಸರಣಿಯು ಅಂತಹ ಕೊರಗಿಗೆ ಯಾವುದೇ ಕಾರಣವಿಲ್ಲ ಎಂದು ಸಾಬೀತುಪಡಿಸಿದೆ; ಟೆಸ್ಟ್ ಕ್ರಿಕೆಟ್‌ಗೆ ಮರಳಿ ಯೌವನ ಪ್ರಾಪ್ತಿಯಾಗಿದೆ ಎಂಬುದಾಗಿಯೂ ಸಾರಿದೆ. ಕ್ರಿಕೆಟ್ ಪಂಡಿತರು ಇದುವರೆಗೆ ವ್ಯಕ್ತಪಡಿಸಿದ್ದ ಹಲವು ಅನಿಸಿಕೆಗಳು ಹುಸಿ ಎಂಬುದನ್ನೂ ಈ ಸರಣಿ ಎತ್ತಿತೋರಿದೆ. ಟೆಸ್ಟ್ ಪಂದ್ಯಗಳು ಇನ್ನು ಐದು ದಿನಗಳವರೆಗೆ ನಡೆಯುವುದಿಲ್ಲ ಎಂದು ಹೇಳಲಾಗುತ್ತಿತ್ತು. ಅಂತರರಾಷ್ಟ್ರೀಯ ಕ್ರಿಕೆಟ್ ಸಮಿತಿ (ಐಸಿಸಿ) ಕೂಡ ಈ ಮಾದರಿಯ ಆಟವನ್ನು ನಾಲ್ಕು ದಿನಗಳಿಗೆ ಮೊಟಕುಗೊಳಿಸಲು ಚಿಂತನೆ ನಡೆಸಿತ್ತು. ಐದು ಪಂದ್ಯಗಳ ಈ ಸರಣಿಯ ಪ್ರತೀ ಪಂದ್ಯವೂ ಐದು ದಿನಗಳವರೆಗೆ ನಡೆದಿದೆ. ಟೆಸ್ಟ್ ಪಂದ್ಯ ನೋಡಲು ಜನ ಬರುವುದಿಲ್ಲ ಎಂಬ ವಿಷಯವೂ ಚರ್ಚೆಗೆ ಒಳಗಾಗಿತ್ತು. ಆದರೆ, ಭಾರತ–ಇಂಗ್ಲೆಂಡ್ ತಂಡಗಳ ಎಲ್ಲಾ ಪಂದ್ಯಗಳ ಟಿಕೆಟ್‌ಗಳೂ ‘ಸೋಲ್ಡ್ ಔಟ್’ ಆಗಿ, ಕ್ರೀಡಾಂಗಣಗಳು ಭರ್ತಿ ತುಂಬಿದ್ದವು. ಟೆಸ್ಟ್ ಪಂದ್ಯ ರೋಚಕತೆಯಿಂದ ಕೂಡಿರುವುದಿಲ್ಲ ಎಂಬ ವಿಶ್ಲೇಷಣೆ ಜೋರಾಗಿತ್ತು. ಓವಲ್‌ನಲ್ಲಿ ನಡೆದ ಕೊನೆಯ ಪಂದ್ಯವು ಯಾವುದೇ ಟ್ವೆಂಟಿ-20 ಪಂದ್ಯಕ್ಕೂ ಕಡಿಮೆ ಇಲ್ಲದಂತೆ ರೋಚಕತೆಯಿಂದ ಕೂಡಿತ್ತು. ಈ ಪಾರಂಪರಿಕ ಮಾದರಿಯನ್ನು ಉಳಿಸಿಕೊಳ್ಳಲು ಐಸಿಸಿಯು ಆರು ವರ್ಷಗಳ ಹಿಂದೆ ವಿಶ್ವ ಟೆಸ್ಟ್ ಚಾಂಪಿಯನ್‌ಷಿಪ್ (ಡಬ್ಲ್ಯುಟಿಸಿ) ಆರಂಭಿಸಿರುವುದು ಫಲ ನೀಡಿರುವಂತಿದೆ. ಫಲಿತಾಂಶವನ್ನು ಪಡೆಯಲೇಬೇಕು ಎಂಬ ಮಹತ್ವಾಕಾಂಕ್ಷೆಯ ಆಟದಲ್ಲಿ ಸ್ಪರ್ಧಾತ್ಮಕತೆ ಹೆಚ್ಚಾಗಿದೆ.



ಭಾರತ ಮತ್ತು ಇಂಗ್ಲೆಂಡ್ ನಡುವಣ ಪಂದ್ಯಾವಳಿ, ಟೆಸ್ಟ್ ಕ್ರಿಕೆಟ್ ಪುನರುತ್ಥಾನಕ್ಕೆ ಹೊಸ ಚೈತನ್ಯ ತುಂಬಿರುವ ಸರಣಿ.

ಭಾರತ ತಂಡದ ಸುದೀರ್ಘ ಅವಧಿಯ ಇಂಗ್ಲೆಂಡ್ ಪ್ರವಾಸವು 2-2ರ ಸಮಬಲದಿಂದ ಅಂತ್ಯಕಂಡಿದೆ. ಓವಲ್‌ನಲ್ಲಿ ನಡೆದ ಕೊನೆಯ ಪಂದ್ಯದಲ್ಲಿ ಶುಭಮನ್ ಗಿಲ್ ಪಡೆಯು ಆರು ರನ್‌ಗಳ ಅಂತರದ ಮೂಲಕ ಇಂಗ್ಲೆಂಡ್ ತಂಡದಿಂದ ಗೆಲುವನ್ನು ಕಸಿದುಕೊಂಡಿರುವುದು ಸ್ಪರ್ಧೆಯ ತೀವ್ರತೆಗೆ ಹಿಡಿದ ಕನ್ನಡಿಯಾಗಿದೆ. ಭಾರತ ತಂಡವು ಆಸ್ಟ್ರೇಲಿಯಾ ತಂಡವನ್ನು ಅದರ ನೆಲದಲ್ಲಿ ಕೆಲವು ಬಾರಿ ಸೋಲಿಸಿದೆ. ಆದರೆ, ಇಂಗ್ಲೆಂಡ್ ತಂಡವು ತನ್ನ ನೆಲದಲ್ಲಿ ಭಾರತಕ್ಕೆ ಸದಾ ಕಬ್ಬಿಣದ ಕಡಲೆಯಾಗಿ ಪರಿಣಮಿಸಿದೆ. ಇಂಗ್ಲೆಂಡ್ ನೆಲದಲ್ಲಿ ಆ ತಂಡದ ವಿರುದ್ಧ ಇದುವರೆಗೆ ಮೂರು ಸರಣಿಗಳಲ್ಲಿ ಮಾತ್ರ ಭಾರತಕ್ಕೆ ಗೆಲುವು ಒಲಿದಿದೆ. ಎರಡು ತಿಂಗಳುಗಳ ಹಿಂದೆ ಗಿಲ್ ನೇತೃತ್ವದ ಯುವಪಡೆ ಲಂಡನ್ ವಿಮಾನವನ್ನು ಏರಲು ಹೊರಟಾಗ ಹೆಚ್ಚಿನ ನಿರೀಕ್ಷೆಗಳೇನೂ ಇರಲಿಲ್ಲ. ರೋಹಿತ್ ಶರ್ಮಾ, ವಿರಾಟ್ ಕೊಹ್ಲಿ, ಆರ್. ಅಶ್ವಿನ್ ಅವರಿಲ್ಲದ ಅನನುಭವಿ ತಂಡ ಎಂಬ ಹಣೆಪಟ್ಟಿಯನ್ನೂ ಅದು ಹಚ್ಚಿಕೊಂಡಿತ್ತು. ಆದರೆ, ಗಿಲ್ ಬಳಗ ಇಂಗ್ಲಿಷ್ ನಾಡಿನಲ್ಲಿ ತೇಲುತ್ತಿದ್ದ ಮೋಡಗಳ ಅಡಿಯಲ್ಲಿ ತೋರಿದ ಹೋರಾಟ ಅನನ್ಯವಾದುದು. ಇಂಗ್ಲೆಂಡ್‌ನ ಬಾಜ್‌ಬಾಲ್ (ಆಕ್ರಮಣಕಾರಿ ಬ್ಯಾಟಿಂಗ್) ಶೈಲಿಯು ಭಾರತದ ಯೋಜನೆಗಳನ್ನು ತಲೆಕೆಳಗು ಮಾಡುವಂತಿತ್ತಾದರೂ ಭಾರತೀಯ ಬೌಲರ್‌ಗಳು ಪುಟಿದೆದ್ದು ಯಶ ಗಳಿಸಿದ ರೀತಿ ಗಮನಾರ್ಹವಾಗಿತ್ತು.

ಟ್ವೆಂಟಿ–20 ಪಂದ್ಯಗಳ ಅಬ್ಬರದಿಂದ, ಅದರಲ್ಲೂ ಐಪಿಎಲ್ ಬೇಡುವ ಕಾಲಾವಕಾಶದ ಕಾರಣದಿಂದ, ಕ್ರಿಕೆಟ್ ಆಟಗಾರರಿಗೆ ಈಗ ವಿಶ್ರಾಂತಿ ಎನ್ನುವುದೇ ಇಲ್ಲ. ಅದು ಆಟಗಾರರಲ್ಲಿ ಹೆಚ್ಚುತ್ತಿರುವ ಗಾಯದ ಸಮಸ್ಯೆಯ ಮೂಲಕ ವ್ಯಕ್ತವಾಗುತ್ತಲೇ ಇದೆ. ಅಗ್ರಮಾನ್ಯ ಬೌಲರ್ ಜಸ್‌ಪ್ರೀತ್ ಬೂಮ್ರಾ ಸರಣಿಯ ಮೂರು ಪಂದ್ಯಗಳಲ್ಲಿ ಮಾತ್ರ ಆಡಿದರು. ಪ್ರಮುಖ ಬೌಲರ್‌ಗಳ ಅನುಪಸ್ಥಿತಿಯಲ್ಲಿ ಬೌಲಿಂಗ್ ಹೊಣೆ ಹೊತ್ತ ಮೊಹಮ್ಮದ್ ಸಿರಾಜ್ ಐದೂ ಪಂದ್ಯಗಳಲ್ಲಿ ಕೆಚ್ಚೆದೆಯ ಹೋರಾಟ ಪ್ರದರ್ಶಿಸಿದರು. ಸರಣಿಯಲ್ಲಿ ಅತ್ಯಧಿಕ ರನ್ ಗಳಿಸಿದ ಆಟಗಾರನಾಗಿ ಗಿಲ್ ಹೊರಹೊಮ್ಮಿದರು. ಕೆ.ಎಲ್. ರಾಹುಲ್, ಯಶಸ್ವಿ ಜೈಸ್ವಾಲ್ ತಮ್ಮ ಮೇಲಿಟ್ಟ ವಿಶ್ವಾಸವನ್ನು ಉಳಿಸಿಕೊಂಡರು. ರವೀಂದ್ರ ಜಡೇಜ, ವಾಷಿಂಗ್ಟನ್ ಸುಂದರ್, ಆಲ್‌ರೌಂಡರ್‌ಗಳ ಮಹತ್ವವನ್ನು ಮನವರಿಕೆ ಮಾಡಿಕೊಟ್ಟರು. ರೂಪಾಂತರದ ಹಾದಿಯಲ್ಲಿರುವ ಭಾರತ ತಂಡ, ಆರಂಭಿಕ ಹಂತದ ಕೆಲವು ಸಮಸ್ಯೆಗಳನ್ನು ಎದುರಿಸಿದರೂ ದೊಡ್ಡಶಕ್ತಿಯಾಗಿ ಹೊರಹೊಮ್ಮುವ ಭರವಸೆ ಮೂಡಿಸಿತು. ಇಂಗ್ಲೆಂಡ್ ತಂಡದ ನಾಯಕ ಬೆನ್ ಸ್ಟೋಕ್ಸ್ ಅವರ ಭರ್ಜರಿ ಆಲ್‌ರೌಂಡ್ ಆಟ, ಜೋ ರೂಟ್ ಅವರ ಇನಿಂಗ್ಸ್ ಕಟ್ಟುವ ರೀತಿ ಕೂಡ ಕ್ರಿಕೆಟ್‌ಪ್ರಿಯರ ಮನಸೂರೆಗೊಂಡಿತು. ಗಾಯದ ಕಾರಣದಿಂದ ಒಂಟಿಕೈಯಲ್ಲಿ ಆಡಲಿಳಿದ ಕ್ರಿಸ್ ವೋಕ್ಸ್ ಅವರ ಚಿತ್ರ ಬಹುಕಾಲ ನೆನಪಿನಲ್ಲಿ ಉಳಿಯುವಂಥದ್ದು.

ಮಾತಿಗೆ ಮುನ್ನ...



ಪ್ಯಾಲೆಸ್ಟೀನ್ ಸೇರಿದಂತೆ ಜಗತ್ತಿನಾದ್ಯಂತ ಭಯೋತ್ಪಾದನೆಯ ಪ್ರಮುಖ ರೂವಾರಿ ಆಗಿರುವ ಅಮೆರಿಕ, ಭಾರತಕ್ಕೆ ನೈತಿಕತೆಯ ಉಪನ್ಯಾಸ ನೀಡುವ ಮುನ್ನ ತಾನು ಮಾಡುತ್ತಿರುವ ತಪ್ಪನ್ನು ತಿದ್ದಿಕೊಳ್ಳಬೇಕು.

ಚೇತನ್ ಅಹಿಂಸಾ, ನಟ, ‘ಎಕ್ಸ್’ನಿಂದ

ಕಿಡಿನುಡಿ



ರಾಜ್ಯ ರಸ್ತೆ ಸಾರಿಗೆ ನೌಕರರ ಹಿಂಬಾಕಿ ಕೊಡಲು ಸರ್ಕಾರದ ಬಳಿ ದುಡ್ಡಿಲ್ಲ. ನೌಕರರ ವೇತನ ಹೆಚ್ಚಳಕ್ಕೆ ದುಡ್ಡಿಲ್ಲ. ಹೊಸ ಬಸ್ ಖರೀದಿಗೆ ದುಡ್ಡಿಲ್ಲ. ಹಳೆ ಬಸ್‌ಗಳ ರಿಪೇರಿಗೆ ದುಡ್ಡಿಲ್ಲ. ಇನ್ನೆಷ್ಟು ದಿನ ಸ್ವಾಮಿ ಈ ಭಂಡ ಬಾಳು. ನಿಮ್ಮ ಅಧಿಕಾರದ ಲಾಲಸೆಗೆ, ದುರಾಡಳಿತಕ್ಕೆ ಜನಸಾಮಾನ್ಯರು ಯಾವ್ಯಾವ ರೀತಿ ಪರದಾಡಬೇಕು

ಆರ್. ಅಶೋಕ, ವಿಧಾನಸಭೆ ವಿರೋಧ ಪಕ್ಷದ ನಾಯಕ

25 ವರ್ಷಗಳ ಹಿಂದೆ

ಭಾನುವಾರ, 6-8-2000

• ವೀರಪ್ಪನ್ ಬೇಡಿಕೆ: ಇಂದು ಚೆನ್ನೈನಲ್ಲಿ ಮಹತ್ವದ ಸಭೆ

ಚೆನ್ನೈ, ಆಗಸ್ಟ್ 5 (ಯುಎನ್‌ಐ, ಪಿಟಿಐ)– ಕನ್ನಡದ ಮೇರುನಟ ಡಾ. ರಾಜ್‌ಕುಮಾರ್ ಮತ್ತು ಇತರ ಮೂವರನ್ನು ಬಿಡುಗಡೆ ಮಾಡಲು ವೀರಪ್ಪನ್ ಮುಂದಿಟ್ಟಿರುವ ಬೇಡಿಕೆಗಳಿಗೆ, ಉಭಯ ರಾಜ್ಯ ಸರ್ಕಾರಗಳ ನಿಲುವು ನಿರ್ಧರಿಸಲು ಎಸ್.ಎಂ. ಕೃಷ್ಣ ಮತ್ತು ಎಂ. ಕರುಣಾನಿಧಿ ಅವರ ಮಧ್ಯೆ ನಾಳೆ ಇಲ್ಲಿ ಮಹತ್ವದ ಸಭೆ ನಡೆಯಲಿದೆ.

• ಕೇಂದ್ರ ಸಚಿವ ಅರುಣ್ ಶೌರಿ ಮೇಲೆ ಹಲ್ಲೆ

ಮುಂಬೈ, ಆಗಸ್ಟ್ 5 (ಯುಎನ್‌ಐ, ಪಿಟಿಐ)– ಕೇಂದ್ರದ ಷೇರು ವಿಕ್ರಯ ಖಾತೆ ಸಚಿವ ಅರುಣ್ ಶೌರಿ ಅವರ ಮೇಲೆ ಹಲ್ಲೆ ನಡೆಸಿರುವ ಘಟನೆ ಇಂದು ಇಲ್ಲಿ ನಡೆದಿದೆ. ಲಲಿತ್ ದೋಷಿ ಸ್ಮಾರಕ ಉಪನ್ಯಾಸ ನೀಡಲು ದಕ್ಷಿಣ ಮುಂಬೈಯಲ್ಲಿರುವ ಯಶವಂತ್ ರಾವ್ ಸಭಾಂಗಣಕ್ಕೆ ಬಂದಿದ್ದ ಶೌರಿ ಅವರ ಮೇಲೆ ಆರ್‌ಪಿಐ ಕಾರ್ಯಕರ್ತನೊಬ್ಬ ಹಲ್ಲೆ ನಡೆಸಿದನಲ್ಲದೆ, ಅವರ ಅಂಗಿಯನ್ನು ಹರಿದುಹಾಕಿದ.

75 ವರ್ಷಗಳ ಹಿಂದೆ

ಭಾನುವಾರ, 6-8-1950

• ದೆಹಲಿಯಲ್ಲಿ ದಶ ಸಹಸ್ರ ಟಾಂಗಾವಾಲಾಗಳ ಮುಷ್ಕರ


ದೆಹಲಿ, ಆಗಸ್ಟ್ 5– ಹುರುಳಿ ಪಡಿತರವನ್ನು ನಿಲ್ಲಿಸಿರುವುದನ್ನೂ ಮತ್ತು ತಮ್ಮ ಸಂಸ್ಥೆಯ ಅಧ್ಯಕ್ಷ ಮತ್ತು ಕಾರ್ಯದರ್ಶಿಗಳನ್ನು ಬಂಧಿಸಿರುವುದನ್ನೂ ವಿರೋಧಿಸಿ ದೆಹಲಿಯ ಹತ್ತು ಸಹಸ್ರ ಟಾಂಗಾವಾಲಾಗಳೂ, ಕುದುರೆಗಾಡಿ ಓಡಿಸುವವರೂ ಇಂದು ಮೂರು ದಿನಗಳ ಸತ್ಯಾಗ್ರಹ ಆರಂಭಿಸಿದ್ದಾರೆ.

ಪಾರ್ಲಿಮೆಂಟ್ ಭವನದ ಮುಂದೆ ನಿನ್ನೆ ಪ್ರದರ್ಶನ ನಡೆಸಿದುದಕ್ಕಾಗಿ ಸಂಘದ ಅಧ್ಯಕ್ಷ, ಕಾರ್ಯದರ್ಶಿ ಹಾಗೂ ಇತರ 43 ಮಂದಿ ಟಾಂಗಾವಾಲಾಗಳನ್ನು ದಸ್ತಗಿರಿ ಮಾಡಲಾಯಿತು.

• ಅನ್ನ ಕೇಳಿದವರಿಗೆ ಅಶ್ರುವಾಯು

ಬರ್‌ಹ್ಯಾಂಪುರ, ಆಗಸ್ಟ್ 5– ಅನ್ನ ಬೇಡಿ ಘೋಷಣೆಗಳನ್ನು ಕೂಗುತ್ತ ಜಿಲ್ಲಾ ಮ್ಯಾಜಿಸ್ಟ್ರೇಟರ ಕಚೇರಿ ಮುಂದೆ ಪ್ರದರ್ಶನ ಮಾಡಿದ 5,000 ಮಂದಿ ಸ್ತ್ರೀ, ಬಾಲರಾದಿಯಾದ ಗುಂಪನ್ನು ಚೆದುರಿಸುವ ಸಲುವಾಗಿ ಪೊಲೀಸರು ಅಶ್ರು ಬಾಂಬ್‌ಗಳನ್ನು ಎಸೆದಾಗ ಹಲವು ಜನ ಮೂರ್ಛೆಗೊಂಡರು. ಆ ನಂತರ ಪೊಲೀಸರು ಲಾಠಿ ಬೀಸಿ 30 ಮಂದಿ ಬಾಲ–ಬಾಲಕಿಯರನ್ನು ದಸ್ತಗಿರಿ ಮಾಡಿದರು.

ಆಫ್ರಿಕಾ: ಸ್ವಾತಂತ್ರ್ಯದ ಹುಡುಕಾಟ



ವಿಶ್ಲೇಷಣೆ

ಟಿ.ಎಸ್. ವೇಣುಗೋಪಾಲ್

> ಸ್ವಾತಂತ್ರ್ಯ ಪಡೆದಿದ್ದರೂ ಸ್ವಾಯತ್ತತೆ ಪಡೆಯದ ಆಫ್ರಿಕಾದ ದೇಶಗಳಲ್ಲಿ ನೈಜ ಸ್ವಾತಂತ್ರ್ಯದ ಹೋರಾಟ ನಡೆದಿದೆ. ಈ ದೇಶಗಳ ನೈಸರ್ಗಿಕ ಸಂಪತ್ತಿನ ಮೇಲೆ ಕಣ್ಣಿಟ್ಟಿರುವ ವಿದೇಶಿ ಶಕ್ತಿಗಳಿಗೆ ಯಥಾಸ್ಥಿತಿ ಮುಂದುವರಿಯುವುದು ಬೇಕಾಗಿದೆ. ಈಗಿನ ಹೋರಾಟ, ಆಫ್ರಿಕಾವನ್ನು ಒಂದು ಸಂಯುಕ್ತ ಸಂಸ್ಥಾನವನ್ನಾಗಿ ರೂಪಿಸಲು ಯಶಸ್ವಿ ಆಗಬಹುದೆ?

ಆಫ್ರಿಕಾ ಸುದ್ದಿಯಲ್ಲಿದೆ. ಟೋಗೊದಲ್ಲಿ ಯುವಜನ ಸರ್ಕಾರದ ವಿರುದ್ಧ ಬೀದಿಗಿಳಿದಿದ್ದಾರೆ. ಬುರ್ಕಿನಾ ಫಾಸೊ, ಮಾಲಿ, ನೈಜೆರ್‌ನಲ್ಲಿ ಮಿಲಿಟರಿ ದಂಗೆಗಳಾಗಿವೆ. ಹೊಸ ಸರ್ಕಾರಗಳು ಅಧಿಕಾರಕ್ಕೆ ಬಂದಿವೆ.

ದಂಗೆಗಳು ನಡೆಯುತ್ತಿರುವ ಬಹುತೇಕ ದೇಶಗಳು ಹಿಂದೆ ಫ್ರಾನ್ಸ್‌ನ ವಸಾಹತುಗಳಾಗಿದ್ದವು. ಈ ದೇಶಗಳಲ್ಲಿನ ಸಂಪನ್ಮೂಲವನ್ನು ಫ್ರಾನ್ಸ್ ಹಲವು ದಶಕಗಳಿಂದ ನಿರಂತರವಾಗಿ ಲೂಟಿ ಹೊಡೆದು, ಅತ್ಯಂತ ಕ್ರೂರವಾಗಿ ಆಡಳಿತ ನಡೆಸಿದೆ. ಆಫ್ರಿಕಾದವರು ತೀವ್ರವಾದ ಹೋರಾಟ ನಡೆಸಿದ್ದರಿಂದ 1950ರ ಸುಮಾರಿನಲ್ಲಿ ಈ ದೇಶಗಳು ಸ್ವತಂತ್ರವಾದವು. ಆದರೆ, ಬಹುತೇಕ ದೇಶಗಳಿಗೆ ಬರೀ ಹೆಸರಿಗಷ್ಟೇ ಸ್ವಾತಂತ್ರ್ಯ ದೊರೆತಿದೆ.

ಸ್ವಾತಂತ್ರ್ಯ ಕೊಡುತ್ತೇವೆ; ಆದರೆ, ವಿದೇಶಿ ವ್ಯಾಪಾರ, ಮಿಲಿಟರಿ, ನೈಸರ್ಗಿಕ ಸಂಪನ್ಮೂಲ, ಹಣಕಾಸು ನಿರ್ವಹಣೆ, ಇತ್ಯಾದಿ ವಿಷಯಗಳಲ್ಲಿ ನೀವು ಸ್ವಾಯತ್ತತೆಯನ್ನು ಬಯಸಬಾರದು ಎನ್ನುವುದು ಫ್ರಾನ್ಸ್‌ನ ಷರತ್ತಾಗಿತ್ತು. ಆ ದೇಶಗಳಿಗೆ ತಮಗೆ ಬೇಕಾದ ನಾಯಕರನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯವೂ ಇರಲಿಲ್ಲ. ಫ್ರಾನ್ಸ್ ತನಗೆ ಬೇಕಾದವರನ್ನು ಅಧಿಕಾರಕ್ಕೆ ತರುತ್ತಿತ್ತು. ವಾಸ್ತವದಲ್ಲಿ ಇಂದಿಗೂ ಅವು ವಸಾಹತುಗಳೇ. ದೇಶದ ಆರ್ಥಿಕತೆಗೆ ಚೇತರಿಸಿಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಜನ ಏನು ಯೋಚಿಸುತ್ತಾರೆ, ಅವರ ಅವಶ್ಯಕತೆಗಳೇನು ಅನ್ನುವುದನ್ನು ಯೋಚಿಸುವುದಕ್ಕೂ ಸರ್ಕಾರ ತಯಾರಿಲ್ಲ. ಅಧಿಕಾರದ ಚುಕ್ಕಾಣಿ ಹಿಡಿದವರು ಲೂಟಿಯ ಭಾಗವಾಗುತ್ತಾ ಜಗತ್ತಿನಲ್ಲೇ ಅತ್ಯಂತ ಶ್ರೀಮಂತರ ಪಟ್ಟಿಗೆ ಸೇರುತ್ತಾ ಹೋದರು. ಅವರು ಆಳಿದ ದೇಶಗಳು ಮಾತ್ರ ಹೆಚ್ಚೆಚ್ಚು ಬಡವಾಗುತ್ತಾ, ಜಗತ್ತಿನಲ್ಲೇ ಅತ್ಯಂತ ಬಡರಾಷ್ಟ್ರಗಳ ಪಟ್ಟಿಗೆ ಸೇರಿಕೊಂಡವು.

ಎರಡು ಶತಮಾನಗಳ ದಮನಕಾರಿ ಸಾಮ್ರಾಜ್ಯಶಾಹಿ ಹಣಕಾಸು ಹಾಗೂ ವಿತ್ತೀಯ ಕ್ರಮಗಳಿಂದ ದೇಶ ಆರ್ಥಿಕವಾಗಿ ಸೊರಗಿತು. ನೈಸರ್ಗಿಕ ಸಂಪತ್ತು ಬರಿದಾಗುತ್ತಾ ಸಾಗಿತು. ವಸಾಹತುಗಳಿಂದ ಖನಿಜ ಹಾಗೂ ಮಾನವ ಸಂಪನ್ಮೂಲದ ಲೂಟಿ ಮಾಡುವುದಕ್ಕೆ ಸಾಮ್ರಾಜ್ಯಶಾಹಿ ಶಕ್ತಿಗಳು ತಮ್ಮದೇ ದಾರಿಯನ್ನು ಕಂಡುಕೊಂಡಿದ್ದವು. ತನ್ನ ವಸಾಹತುಗಳೆಲ್ಲಾ ಆರ್ಥಿಕವಾಗಿ ಒಟ್ಟಿಗಿದ್ದರೆ ಅಲ್ಲಿಯ ಸಂಪನ್ಮೂಲಗಳನ್ನು, ಆರ್ಥಿಕ ಹಾಗೂ ರಾಜಕೀಯ ವ್ಯವಸ್ಥೆಗಳನ್ನು ಹಿಡಿತದಲ್ಲಿ ಇಟ್ಟುಕೊಳ್ಳುವುದು ಸಲೀಸು ಅನ್ನುವುದು ಫ್ರಾನ್ಸ್‌ನ ಆಲೋಚನೆಯಾಗಿತ್ತು.

ಅದಕ್ಕಾಗಿ ತನ್ನ ವಸಾಹತುಗಳಿಗೆಲ್ಲಾ ಅನ್ವಯಿಸುವಂತೆ ‘ಸಿಎಫ್‌ಎ ಫ್ರಾಂಕ್’ ಎಂಬ ಕರೆನ್ಸಿಯನ್ನು ಚಲಾವಣೆಗೆ ತಂದಿತು. ಪಶ್ಚಿಮ ಹಾಗೂ ಕೇಂದ್ರ ಆಫ್ರಿಕಾದ ಹದಿನೈದು ದೇಶಗಳಲ್ಲಿ ‘ಸಿಎಫ್‌ಎ’ ಚಾಲ್ತಿಗೆ ಬಂದಿತು. ಬೇರೆ ದೇಶಗಳೊಂದಿಗೆ ವ್ಯವಹಾರ ನಡೆಸುವುದಕ್ಕೆ ಆಫ್ರಿಕಾದ ದೇಶಗಳು ಇದನ್ನು ಯುರೋಗೆ ವಿನಿಮಯ ಮಾಡಿಕೊಳ್ಳಬೇಕು. ವಿನಿಮಯ ದರವನ್ನು ಅಷ್ಟೇ ಅಲ್ಲ, ‘ಸಿಎಫ್‌ಎ’ಗೆ ಸಂಬಂಧಿಸಿದ ಎಲ್ಲ ನಿರ್ಧಾರಗಳನ್ನೂ ಫ್ರಾನ್ಸ್ ತೆಗೆದುಕೊಳ್ಳುತ್ತಿದೆ. ವಸಾಹತುಗಳು ತಮ್ಮ ವಿದೇಶಿ ವಿನಿಮಯದ ಮೀಸಲನ್ನೆಲ್ಲಾ ಫ್ರೆಂಚ್ ಖಜಾನೆಯಲ್ಲಿ ಇಡಬೇಕಿತ್ತು. ಈಗಲೂ ಶೇ 50ರಷ್ಟನ್ನು ಇಡಬೇಕು.

ಫ್ರಾನ್ಸ್ ಬೇರೆ ದೇಶಗಳಿಂದ ತನಗೆ ಬೇಕಾದ ಸರಕುಗಳನ್ನು ಆಮದು ಮಾಡಿಕೊಳ್ಳಲು ಆಫ್ರಿಕಾದವರ ವಿದೇಶಿ ವಿನಿಮಯವನ್ನು ಬಳಸಿಕೊಳ್ಳುತ್ತಿದೆ. ವಸಾಹತುಗಳಿಂದ ಆಮದು ಮಾಡಿಕೊಳ್ಳುವುದಕ್ಕೆ ‘ಸಿಎಫ್‌ಎ’ ಬಳಸಿಕೊಳ್ಳುತ್ತಿದೆ. ಇದರಿಂದ ಡಾಲರ್ ಬಳಕೆಯನ್ನು ಮಿತಗೊಳಿಸಿಕೊಳ್ಳಲು ಫ್ರಾನ್ಸ್‌ಗೆ ಸಾಧ್ಯವಾಯಿತು. ಈ ಮೂಲಕ ವಿನಿಮಯ ದರದ ಸ್ಥಿರತೆಯನ್ನು ಕಾಪಾಡಿಕೊಳ್ಳುವುದಕ್ಕೂ ಅನುಕೂಲವಾಯಿತು.

ಆಫ್ರಿಕಾದವರಿಗೆ ತಮ್ಮದೇ ಆದ ಕರೆನ್ಸಿಯೇ ಇಲ್ಲ. ಹಾಗಾಗಿ, ಅವರಿಗೆ ತಮಗೆ ಬೇಕಾದಂತಹ ಹಣಕಾಸು ನೀತಿಯನ್ನು ರೂಪಿಸಿಕೊಳ್ಳುವುದಕ್ಕೂ ಸಾಧ್ಯವಾಗುತ್ತಿಲ್ಲ. ಒಂದು ದೇಶಕ್ಕೆ ಕನಿಷ್ಠ ತನಗೆ ಬೇಕಾದಂತೆ ಹಣಕಾಸು ಹಾಗೂ ವಿತ್ತೀಯ ನೀತಿಯನ್ನು ರೂಪಿಸಿಕೊಳ್ಳುವ ಸ್ವಾತಂತ್ರ್ಯವಾದರೂ ಇರಬೇಕು. ಇಲ್ಲದಿದ್ದರೆ ಆರ್ಥಿಕ ಸಾರ್ವಭೌಮತ್ವ ಕೇವಲ ಘೋಷಣೆಯಾಗುತ್ತದೆ. ಇನ್ನೂ ದುರಂತವೆಂದರೆ, ಅವರ ದೇಶದ ನೈಸರ್ಗಿಕ ಸಂಪನ್ಮೂಲವೂ ಅವರದ್ದಲ್ಲ. ಅವು ಬಹುರಾಷ್ಟ್ರೀಯ ಕಂಪನಿಗಳ ಒಡೆತನದಲ್ಲಿವೆ. ತಮ್ಮದೇ ಸಂಪನ್ಮೂಲ ವನ್ನು ಕೂಡ ತಮ್ಮ ದೇಶದ ಅಭಿವೃದ್ಧಿಗೆ ಬಳಸಿಕೊಳ್ಳುವುದಕ್ಕೆ ಅವರಿಗೆ ಸಾಧ್ಯವಾಗುತ್ತಿಲ್ಲ. ಜನರ ಕನಿಷ್ಠ ಅವಶ್ಯಕತೆಗಳನ್ನು ಪೂರೈಸುವುದಕ್ಕೂ ವಿದೇಶಿ ಸಾಲವನ್ನು ಆಶ್ರಯಿಸಬೇಕಾಗಿದೆ. ಸಾಲದ ಜೊತೆಗೆ ಅವರ ನಿರ್ಬಂಧಗಳನ್ನು ಒಪ್ಪಿಕೊಳ್ಳಬೇಕಾಗಿದೆ. ‘ಐಎಂಎಫ್’ ಸೂಚಿಸುವ ಕ್ರಮದಿಂದ ಆರ್ಥಿಕ ಬೆಳವಣಿಗೆ ಸಾಧ್ಯವಾಗುವುದಿಲ್ಲ. ಕೈಗಾರಿಕಾ ಅಭಿವೃದ್ಧಿಯೂ ಆಗುವುದಿಲ್ಲ. ಅಂತಿಮವಾಗಿ ಇವು ಅವಶ್ಯಕ ಸರಕುಗಳನ್ನು ಆಮದು ಮಾಡಿಕೊಳ್ಳುತ್ತಾ, ಮುಂದುವರಿದ ರಾಷ್ಟ್ರಗಳ ಶಾಶ್ವತ ಮಾರುಕಟ್ಟೆಗಳಾಗಿವೆ.

ಇಂದು ಆಫ್ರಿಕಾ ಒಡೆದು ಛಿದ್ರವಾಗಿದೆ. ವಸಾಹತುಶಾಹಿಗಳು ಆಫ್ರಿಕಾವನ್ನು ಆಕ್ರಮಿಸಿಕೊಳ್ಳುವ ಮೊದಲು ಅಲ್ಲಿಯ 55 ದೇಶಗಳ ನಡುವೆ ಗಡಿಗಳಿರಲಿಲ್ಲ. ಅವುಗಳ ನಡುವೆ ಗೆರೆಗಳನ್ನು ಎಳೆದದ್ದು ವಿದೇಶಿಗರು. ಆ ನಕ್ಷೆ ರೂಪುಗೊಂಡಿದ್ದು ಬರ್ಲಿನ್‌ನಲ್ಲಿ. ತಮ್ಮ ಆಳ್ವಿಕೆಗೆ ಅನುಕೂಲವಾಗುವಂತೆ ಭೌಗೋಳಿಕ ಗಡಿಗಳನ್ನು ರೂಪಿಸಿದರು.

ವಸಾಹತುಶಾಹಿ ಆಳ್ವಿಕೆ ನಿಂತಿರುವುದೇ ಶೋಷಣೆಯ ಮೇಲೆ. ಪ್ರಜಾಸತ್ತಾತ್ಮಕ ನೆಲೆಯಲ್ಲಿ ದೇಶಗಳು ಬೆಳೆಯುವುದು ಅವರಿಗೆ ಬೇಕಿರಲಿಲ್ಲ. ಸ್ವಾತಂತ್ರ್ಯ ಪಡೆದ ನಂತರವೂ ಅವುಗಳಿಗೆ ತಮಗೆ ಬೇಕಾದ ಸರ್ಕಾರವನ್ನು ಆರಿಸಿಕೊಳ್ಳುವ ಸ್ವಾತಂತ್ರ್ಯವನ್ನು ನೀಡಲಿಲ್ಲ. ತಮಗೆ ಬೇಕಾದವರನ್ನು ಅಧಿಕಾರದಲ್ಲಿ ಕೂರಿಸುವ, ಒಪ್ಪದವರನ್ನು ಉರುಳಿಸುವ ಸ್ವಾತಂತ್ರ್ಯವನ್ನು ತಾವೇ ಉಳಿಸಿಕೊಂಡರು. ಅದಕ್ಕಾಗಿ ಚುನಾವಣೆಯಲ್ಲಿ ಕುತಂತ್ರ ನಡೆಸಿದರು. ಮಿಲಿಟರಿ ದಂಗೆಗಳನ್ನೂ ಆಯೋಜಿಸಿದರು. ಭಯೋತ್ಪಾದನೆಯನ್ನು ಹುಟ್ಟುಹಾಕಿದರು. ನೆರೆಯ ರಾಷ್ಟ್ರಗಳನ್ನು ಎತ್ತಿಕಟ್ಟಿದರು. ದಿನವೂ ಒಂದಲ್ಲಾ ಒಂದು ಹೋರಾಟದಲ್ಲಿ ತೊಡಗಿರುವ ಆ ದೇಶಗಳು ಮಿಲಿಟರೀಕರಣಗೊಂಡಿವೆ. ಹಾಗಿದ್ದಾಗ ಈಗ ದಿಢೀರನೆ ಆಫ್ರಿಕಾದ ದೇಶಗಳು ಉದಾರವಾದಿ ಪ್ರಜಾಸತ್ತಾತ್ಮಕ ದೇಶಗಳಾಗಬೇಕೆಂದು ನಿರೀಕ್ಷಿಸುವುದಕ್ಕೆ ಸಾಧ್ಯವಿಲ್ಲ.

ದಿನ ಬೆಳಗಾದರೆ ಗಲಭೆ ನಡೆಯುವ ದೇಶಗಳಲ್ಲಿ ಪ್ರಜಾಸತ್ತಾತ್ಮಕ ನೆಲೆಯಲ್ಲಿ ಹೋರಾಟಗಳು ರೂಪುಗೊಳ್ಳುವುದು ಸುಲಭವಲ್ಲ. ಛಿದ್ರವಾಗಿರುವ ದೇಶಗಳಲ್ಲಿ ಅಂತಹ ಪ್ರಯತ್ನಗಳು ಸಫಲವಾಗುವುದು ಇನ್ನೂ ಕಷ್ಟ. ಮಿಲಿಟರೀಕರಣಗೊಂಡ ಈ ದೇಶಗಳಲ್ಲಿ ಮಿಲಿಟರಿ ದಂಗೆಗಳಾಗುತ್ತಿರುವುದು ಸಹಜ. ಎಷ್ಟೋ ದೇಶಗಳಲ್ಲಿ ಒಂದೇ ಕುಟುಂಬ ಹಲವು ದಶಕಗಳ ಕಾಲ ಆಳ್ವಿಕೆ ನಡೆಸಿದೆ. ಜನ ಬೇಸತ್ತಿದ್ದಾರೆ. ಜನರ ಆಶೋತ್ತರಗಳಿಗೆ ಸ್ಪಂದಿಸದ, ವಿದೇಶಿಯರ ಹಿತಾಸಕ್ತಿಗಾಗಿ ದುಡಿಯುತ್ತಿರುವ ಭ್ರಷ್ಟ ಸರ್ಕಾರಗಳ ವಿರುದ್ಧ ನಡೆಯುತ್ತಿರುವ ಹೋರಾಟಗಳನ್ನು ಕ್ರೂರವಾಗಿ ಹತ್ತಿಕ್ಕಲಾಗುತ್ತಿದೆ. ಅಂತಹ ನಾಯಕರನ್ನು ಕೊಲೆ ಮಾಡಲಾಗುತ್ತಿದೆ.

ಆಫ್ರಿಕಾ ಒಂದಾಗಬೇಕು, ಒಂದು ಸಂಯುಕ್ತರಾಷ್ಟ್ರವಾಗಿ ರೂಪುಗೊಳ್ಳಬೇಕು ಎನ್ನುವುದು ಆಫ್ರಿಕಾದ ಜನತೆಯ ಆಸೆ. ಎಲ್ಲಾ ವಿದೇಶಿ ನಿಯಂತ್ರಣಗಳಿಂದ ಮುಕ್ತರಾಗಬೇಕು; ಸಾಮ್ರಾಜ್ಯಶಾಹಿ ಶೋಷಣೆಯ ಸಾಧನವಾದ ‘ಸಿಎಫ್‌ಎ’ ಬದಲಿಗೆ ತಮ್ಮದೇ ಕರೆನ್ಸಿಯನ್ನು ಕಂಡುಕೊಳ್ಳಬೇಕು; ತಮ್ಮ ಅವಶ್ಯಕತೆಗೆ ತಕ್ಕಂತೆ ಆರ್ಥಿಕತೆಯನ್ನು ರೂಪಿಸಿಕೊಳ್ಳಬೇಕು; ತಮ್ಮ ನೈಸರ್ಗಿಕ ಸಂಪನ್ಮೂಲಗಳನ್ನು ತಾವೇ ಅನುಭವಿಸಬೇಕು ಎಂದು ಅವರಿಗನ್ನಿಸಿದೆ. ಬರ್ಕಿನಾ ಫಾಸೊ ರಾಷ್ಟ್ರದ ಯುವ ಅಧ್ಯಕ್ಷ ಇಬ್ರಾಹಿಂ ಟ್ರವೋರೆಯಂತಹ ನಾಯಕರು ಇಂತಹ ಭರವಸೆಯನ್ನು ಮೂಡಿಸುತ್ತಿದ್ದಾರೆ. ಗಣಿ ಕೈಗಾರಿಕೆಯನ್ನು ರಾಷ್ಟ್ರೀಕರಣಗೊಳಿಸುತ್ತಿದ್ದಾರೆ. ರಸ್ತೆ ಮೊದಲಾದ ಮೂಲಸೌಕರ್ಯ ಒದಗಿಸುವ ಕೆಲಸದಲ್ಲಿ ತೊಡಗಿದ್ದಾರೆ. ಕೃಷಿಯನ್ನು ಸುಧಾರಿಸಿ, ಆಹಾರದಲ್ಲಿ ಸ್ವಾವಲಂಬನೆ ಸಾಧಿಸಲು ಪ್ರಯತ್ನಿಸುತ್ತಿದ್ದಾರೆ. ಭಯೋತ್ಪಾದನೆಯನ್ನು ಎದುರಿಸಲು ಸಜ್ಜಾಗುತ್ತಿದ್ದಾರೆ. ಕೃಷಿ ಉತ್ಪನ್ನಗಳನ್ನು, ಅದಿರುಗಳನ್ನು ಪರಿಷ್ಕರಿಸಿ, ಅದರ ಮೌಲ್ಯವನ್ನು ಹೆಚ್ಚಿಸಿ, ನಂತರ ಮಾರುವ ಯೋಜನೆಗಳನ್ನು ರೂಪಿಸುತ್ತಿದ್ದಾರೆ. ಅದರಿಂದ ಉದ್ಯೋಗವೂ ಸೃಷ್ಟಿಯಾಗುತ್ತದೆ. ಆದಾಯವೂ ಹೆಚ್ಚುತ್ತದೆ. ಈ ಪ್ರಯತ್ನಗಳೆಲ್ಲಾ ವಿದೇಶಿ ಹಿತಾಸಕ್ತಿಗೆ ಮಾರಕವಾಗಿವೆ. ಈಗ ಪಾಶ್ಚಾತ್ಯರಿಗೆ ಇಲ್ಲಿಯ ಖನಿಜಗಳ ತೀವ್ರ ಅವಶ್ಯಕತೆಯಿದೆ. ಅದಕ್ಕಾಗಿ ಅವರು ಜಗತ್ತನ್ನೆಲ್ಲಾ ಬೇಟೆಯಾಡುತ್ತಿದ್ದಾರೆ. ಉಕ್ರೇನ್ ಮೇಲೆ ಟ್ರಂಪ್ ಹಾಕುತ್ತಿರುವ ಒತ್ತಡ, ಗ್ರೀನ್‌ಲ್ಯಾಂಡ್ ವಶಪಡಿಸಿಕೊಳ್ಳಲು ತೋರುತ್ತಿರುವ ತವಕ, ಇವೆಲ್ಲದರ ಹಿಂದಿರುವುದು ನೈಸರ್ಗಿಕ ಸಂಪತ್ತಿನ ಆಕರ್ಷಣೆ. ತಮ್ಮ ಆರ್ಥಿಕತೆಯನ್ನು ಸುಧಾರಿಸಿಕೊಳ್ಳಲು, ಆರ್ಥಿಕ ಬಿಕ್ಕಟ್ಟನ್ನು ಪರಿಹರಿಸಿಕೊಳ್ಳಲು ಅವರಿಗಿದು ಸುಲಭದ ಮಾರ್ಗವಾಗಿದೆ. ಸಹಜವಾಗಿಯೇ ಸ್ವಾಭಿಮಾನದ ಹೋರಾಟವನ್ನು ಹತ್ತಿಕ್ಕಲು ತೀವ್ರವಾಗಿ ಪ್ರಯತ್ನಿಸುತ್ತಿದ್ದಾರೆ. ಇದನ್ನು ಎದುರಿಸುವುದಕ್ಕೆ ಬರ್ಕಿನಾ ಫಾಸೊ, ಮಾಲಿ ಹಾಗೂ ನೈಜೆರ್ ದೇಶಗಳು ಎಸ್‌ಇಎಸ್–ಸಹೇಲಿಯನ್ ರಾಷ್ಟ್ರಗಳ ಒಕ್ಕೂಟವನ್ನು ರಚಿಸಿಕೊಂಡಿವೆ. ಜನರ ಬೆಂಬಲವೂ ಸಿಗುತ್ತಿದೆ. ಈಗಲಾದರೂ ಆಫ್ರಿಕಾ ನಿಜವಾದ ಸ್ವಾತಂತ್ರ್ಯವನ್ನು ಕಾಣಬಹುದೇ? ಒಂದು ಸಂಯುಕ್ತ ಸಂಸ್ಥಾನವಾಗಿ ರೂಪುಗೊಳ್ಳಬಹುದೇ?



ವಾಚಕರ ವಾಣಿ

ಅಸಹಿಷ್ಣುತೆ ವ್ಯಾಧಿಗೆ ಮದ್ದುಂಟೇ?

ತುಮಕೂರು ಜಿಲ್ಲೆ ಮಧುಗಿರಿ ತಾಲ್ಲೂಕಿನ ಮಿಡಿಗೇಶಿಯಲ್ಲಿ ಕೀಟನಾಶಕ ಸೇವಿಸಿ 20 ನವಿಲುಗಳು ಮೃತಪಟ್ಟಿರುವ ಸುದ್ದಿ ಓದಿ ಮನಸ್ಸು ಕದಡಿಹೋಯಿತು. ಕೆಲವು ದಿನಗಳ ಹಿಂದೆ ಮಲೆಮಹದೇಶ್ವರ ವನ್ಯಜೀವಿಧಾಮದಲ್ಲಿ ತಾಯಿ ಹುಲಿ ಹಾಗೂ ಅದರ ನಾಲ್ಕು ಮರಿಗಳನ್ನು ಇದೇ ರೀತಿ ವಿಷವಿಟ್ಟು ಕೊಲ್ಲಲಾಗಿತ್ತು. ವನ್ಯಜೀವಿಗಳ ಇಂತಹ ದಾರುಣ ಸಾವಿಗೆ ಮನುಷ್ಯನಲ್ಲದೆ ಇನ್ನಾರೂ ಕಾರಣರಲ್ಲ. ಈ ಕೃತ್ಯಗಳಿಗೆ ಅರಣ್ಯ ಇಲಾಖೆಯ ನಿಷ್ಕ್ರಿಯತೆಯೂ ಕೊಡುಗೆ ನೀಡಿದೆ.

ಇತ್ತೀಚೆಗೆ ಸಮಾಜದಲ್ಲಿ ಅಸಹಿಷ್ಣುತೆಯ ರೋಗ ಉಲ್ಬಣಿಸುತ್ತಿದೆ. ಅನ್ಯಧರ್ಮೀಯ ಶಿಕ್ಷಕನನ್ನು ಶಾಲೆಯಿಂದ ಹೊರಹಾಕಲು ಮಕ್ಕಳ ಮೂಲಕ ಕುಡಿಯುವ ನೀರಿಗೆ ವಿಷ ಬೆರೆಸುವುದು, ದಲಿತರು ಕುಡಿಯುವ ನೀರಿನ ಟ್ಯಾಂಕಿಗೆ ಮಲ ಬೆರೆಸುವುದು, ಇವೆಲ್ಲ ಸಂಕುಚಿತ ತಿಳಿವಳಿಕೆಯ ವಿಸ್ತರಣೆಯ ರೂಪಗಳು. ಸರ್ಕಾರ ಮತ್ತು ಶಿಕ್ಷಣ ವ್ಯವಸ್ಥೆ ಸಮಾಜಕ್ಕೆ ಏನನ್ನು ಬಿತ್ತುತ್ತಿದೆ ಎನ್ನುವುದನ್ನು ಪ್ರಶ್ನಿಸಿಕೊಳ್ಳಬೇಕಾಗಿದೆ.

ಈ ಫಸಲು ನಿನ್ನೆ ಮೊನ್ನೆಯಿಂದ ಕಂಡುಬರುತ್ತಿರುವುದಲ್ಲ. ಹಲವಾರು ವರ್ಷಗಳಲ್ಲಿ ಭಾರತ ಸೃಷ್ಟಿಸಿರುವ ಹೊಸ ತಲೆಮಾರಿನ ವಿಧ್ವಂಸಕ ಕ್ರಿಯಾಯೋಜನೆಗಳಿವು. ಮತೀಯವಾಗಿ ಧ್ರುವೀಕರಣಗೊಳ್ಳುತ್ತಿರುವ ಭಾರತದ ರಾಜಕೀಯ ಚಿಂತನೆಯ ಪೋಷಣೆಯೂ ಈ ಕೃತ್ಯಗಳ ಹಿಂದಿದೆ.

ಜಿ.ವಿ. ಆನಂದಮೂರ್ತಿ, ತುಮಕೂರು

ಟೆಸ್ಟ್ ಕ್ರಿಕೆಟ್‌ಗೆ ಶುಕ್ರದೆಸೆ

ಟಿ–20 ಕ್ರಿಕೆಟ್ ಭರಾಟೆಯಲ್ಲಿ ಟೆಸ್ಟ್ ಪಂದ್ಯಗಳು ಎರಡು, ಮೂರು ದಿನಗಳಲ್ಲೇ ಮುಗಿದು ಹೋಗುತ್ತಿದ್ದುದನ್ನು ನೋಡಿ, ಟೆಸ್ಟ್ ಕ್ರಿಕೆಟ್ ಭವಿಷ್ಯ ಮುಗಿದೇ ಹೋಯಿತು ಅನ್ನುವಂತಾಗಿತ್ತು. ಆದರೆ, ಭಾರತ– ಇಂಗ್ಲೆಂಡ್ ಟೆಸ್ಟ್ ಸರಣಿಯುದ್ದಕ್ಕೂ ಕೆಚ್ಚೆದೆಯ ಹೋರಾಟವು ಉಭಯ ತಂಡಗಳಿಂದ ಬಂತು. ಎಲ್ಲ ಪಂದ್ಯಗಳು ಕೊನೆಯ ದಿನದವರೆಗೂ ನಡೆದು ಎಲ್ಲ ಹಂತದಲ್ಲೂ ಕುತೂಹಲ ಇತ್ತು. ಡ್ರಾ ಆದ ಪಂದ್ಯವೂ ಕೊನೆಯ ದಿನದವರೆಗೂ ರೋಚಕತೆ ಕಾಪಾಡಿಕೊಂಡಿದ್ದುದು ವಿಶೇಷ.

ಬಿ.ಎಸ್. ಪಾಟೀಲ್, ಬೆಂಗಳೂರು

ಮೈಸೂರಿನ ಮಾನ ಹರಾಜಾಗದಿರಲಿ

ಕನ್ನಂಬಾಡಿಗೆ ಅಡಿಗಲ್ಲಿಟ್ಟ ಟಿಪ್ಪು ಸುಲ್ತಾನ್ ಆಗಲೀ, ಅರಮನೆಯ ಒಡವೆಗಳನ್ನು ಮಾರಿದ ಅರಸರಾಗಲೀ ಈಗ ಬದುಕಿಲ್ಲ. ಆದರೆ, ಅವರು ಮಾಡಿದ ಸಾಧನೆಯ ಫಲವನ್ನು ನಾವು ಅನುಭವಿಸುತ್ತಿದ್ದೇವೆ. ಕುತೂಹಲಕ್ಕೆ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಭಾಷಣಗಳನ್ನು ಗಮನಿಸಿ. ಅವು 7–8 ವಾಕ್ಯಗಳಿಗಷ್ಟೇ ಸೀಮಿತ. ಆದರೆ, ಅವರ ದೂರದರ್ಶಿತ್ವ ರಾಜ್ಯದ ಅಭಿವೃದ್ಧಿಗೆ ಮಹತ್ತರ ಕಾಣಿಕೆ ನೀಡಿದೆ. ಜಾತಿಯ ಅವಲಂಬನೆಯಿಲ್ಲದೆ ಸಂಸದರೊಬ್ಬರು ಮೈಸೂರು ಭಾಗದಲ್ಲಿ ಆಯ್ಕೆಯಾಗಬೇಕಾದರೆ ಅಲ್ಲಿನ ಜನರಿಗೆ ರಾಜರ ಮೇಲಿರುವ ಗೌರವವೇ ಕಾರಣ.

ಅಲ್ಪಸಂಖ್ಯಾತರಾದ ಮೈಸೂರು ಅರಸರು ಯಾವ ಭಾಷೆ–ಕಾರ್ಯಗಳಿಂದ ಜನಮೆಚ್ಚುಗೆಗೆ ಭಾಗಿಯಾಗಿದ್ದರು ಎಂಬುದನ್ನು ಜನಪ್ರತಿನಿಧಿಗಳು ಅರಿತು ಮಾತನಾಡುವುದು ಉತ್ತಮ.

ಅದೇ ರೀತಿ, ಮಾರುವೇಷದಲ್ಲಿ ಜನರ ಮಧ್ಯೆ ಸಂಚರಿಸಿ, ಕೆರೆ– ಕಟ್ಟೆ– ಕೃಷಿಗೆ ಉತ್ತೇಜನ ನೀಡಿದ ಟಿಪ್ಪು ಕಾಣಿಕೆಯೇನೂ ನಗಣ್ಯವಲ್ಲ. ಅರ್ಧರಾಜ್ಯವನ್ನೇ ಕಳೆದುಕೊಂಡರೂ ಬ್ರಿಟಿಷರ ಸಾಲ ತೀರಿಸಿ, ಮತ್ತೆ ಯುದ್ಧಕ್ಕೆ ನಿಲ್ಲಲು ಟಿಪ್ಪುವಿಗೆ ಕೃಷಿ ಆದಾಯವೇ ಮೂಲವಾಗಿತ್ತು. ಇಡೀ ಜಗತ್ತಿನಲ್ಲಿ ಕೃಷಿಕರ ಏಳಿಗೆಗಾಗಿ ಬ್ಯಾಂಕ್ ಸ್ಥಾಪಿಸಿದ (ತಕಾವಿ ಸಾಲ) ಇನ್ನೊಬ್ಬ ದೊರೆಯನ್ನು ಕಾಣುವುದು ಅಪರೂಪ. ರಾಜಕೀಯ ಟೀಕೆಯ ಭರದಲ್ಲಿ ಒಂದು ಪಕ್ಷಕ್ಕಿಂತ ಮಿಗಿಲಾದ ವರ್ಚಸ್ಸು ಸಂಪಾದಿಸಿರುವ ಮೈಸೂರಿನ ಗೌರವವನ್ನು ಕಳೆಯುವುದು ಸೂಕ್ತವಲ್ಲ.

ಸಿದ್ದೇಗೌಡ ಶಾಂತರಾಜು, ಬೆಂಗಳೂರು

ಮಟ್ಕಾ ದಂಧೆಗೆ ಕಡಿವಾಣ ಬೀಳುವುದೇ?

ಉತ್ತರ ಕನ್ನಡ ಜಿಲ್ಲೆಯ ಅಂಕೋಲಾ ಮಟ್ಕಾ ಆಟದ ತವರೂರಾಗುತ್ತಿದೆ ಎಂಬ ಆತಂಕ ನಾಗರಿಕರನ್ನು ಕಾಡುತ್ತಿದೆ. ಈ ಹಿಂದೆ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆಗಿದ್ದವರು, ಜಿಲ್ಲೆಯಲ್ಲಿ ಮಟ್ಕಾ ದಂಧೆಗೆ ಕಡಿವಾಣ ಹಾಕಿದ್ದರು. ಆ ನಂತರ ಬಂದ ಪೊಲೀಸ್ ವರಿಷ್ಠಾಧಿಕಾರಿಗಳು ಉದಾಸೀನ ತೋರುತ್ತಿರುವುದೇ ಹೆಚ್ಚು. ಪೊಲೀಸರಿಗೆ ಫೋನಾಯಿಸಿದರೆ, ಒಂದೆರಡು ದಿನ ಮಟ್ಕಾ ಬಂದ್ ಮಾಡಿದಂತೆ ಮಾಡುತ್ತಾರೆ. ನಂತರ ಯಥಾಸ್ಥಿತಿಯಲ್ಲಿ ದಂಧೆ ಮುಂದುವರಿಯುತ್ತದೆ. ವಿದ್ಯಾರ್ಥಿಗಳು, ಹೆಂಗಸರು ಕೂಡ ಮಟ್ಕಾದ ನಶೆ ಏರಿಸಿಕೊಂಡಿದ್ದಾರೆ. ರಾಜ್ಯ ಪೊಲೀಸ್ ಮಹಾನಿರ್ದೇಶಕರು ಇತ್ತ ಗಮನ ಹರಿಸುವರೇ?

ಚಂದ್ರಕಾಂತ ನಾಮಧಾರಿ, ಅಂಕೋಲಾ

ಸರ್ಕಾರದ ಕ್ರಾಂತಿಕಾರಕ ಹೆಜ್ಜೆ

‘ದೇವದಾಸಿ ಮಕ್ಕಳಿಗೆ ಪಿತೃತ್ವ ಹಕ್ಕು’ ಸುದ್ದಿ (ಪ್ರ.ವಾ., ಆಗಸ್ಟ್ 4) ಓದಿ ಸಂತಸವಾಯಿತು. ಕೆಳ ಸಮುದಾಯಗಳ ಹೆಣ್ಣುಮಕ್ಕಳೇ ಈ ಅನಿಷ್ಟ ಪದ್ಧತಿಯ ಕೂಪಕ್ಕೆ ಸಿಲುಕುತ್ತಾರೆ. ಒಂದೆಡೆ ಬಡತನ, ಮತ್ತೊಂದೆಡೆ ಧಾರ್ಮಿಕ ಆಚರಣೆಯ ಹೆಸರಲ್ಲಿ ‘ದೇವದಾಸಿ’ ಎಂಬ ಹಣೆಪಟ್ಟಿ ಕಟ್ಟಿ, ನಿತ್ಯವೂ ಅವರ ಮೇಲೆ ಲೈಂಗಿಕ ಶೋಷಣೆ ನಡೆಯುತ್ತಿತ್ತು. ಇದಕ್ಕೆ ಪರಿಹಾರ ಇಲ್ಲದೆ ದೇವದಾಸಿಯರು ತೀವ್ರ ಸಂಕಟ ಅನುಭವಿಸುತ್ತಿದ್ದರು. ಮೇಲ್ವರ್ಗದ ಪುರುಷರಿಂದ ನಿರಂತರವಾಗಿ ಲೈಂಗಿಕ ಶೋಷಣೆ ನಡೆಯುತ್ತಿದ್ದರೂ ದೇವರ ಹೆಸರಿನಲ್ಲಿ ಕಟ್ಟಿದ ತಾಳಿಯು ಪವಿತ್ರವೆಂದೇ ದೇವದಾಸಿಯರು ಭಾವಿಸುತ್ತಿದ್ದರು. ಅವರಿಗೆ ಎಷ್ಟೇ ಮಕ್ಕಳಾದರೂ, ತಂದೆ ಯಾರೆಂದು ಹೇಳಿಕೊಳ್ಳಲಾರದ ಸ್ಥಿತಿ. ತಂದೆಯ ಪ್ರೀತಿ ಕಾಣದೆ ನೋವಿನಿಂದ ಚಡಪಡಿಸುತ್ತಿದ್ದ ಮಕ್ಕಳಿಗೆ ಪಿತೃತ್ವದ ಹಕ್ಕು ಪಡೆಯಲು ಅನುಮತಿಸಿರುವುದು ಸರ್ಕಾರದ ಕ್ರಾಂತಿಕಾರಕ ಹೆಜ್ಜೆಯಾಗಿದೆ.

ಲಲಿತಾ ಬಿಜ್ಜರಗಿ, ಕಲಬುರಗಿ

ಚುರುಮುರಿ



ಗೃಹಲಕ್ಷ್ಮಿ ವ್ರತ

• ಮಣ್ಣೆ ರಾಜು

ಟಿ.ವಿ ಚಾನೆಲ್‌ನ ನೇರ ಪ್ರಸಾರ ಕಾರ್ಯಕ್ರಮದಲ್ಲಿ ಗುರೂಜಿ ಪ್ರತ್ಯಕ್ಷರಾದರು.

‘ಗುರೂಜಿ, ವರಮಹಾಲಕ್ಷ್ಮಿ ಹಬ್ಬ ಬಂದಿದೆ, ಗೃಹಲಕ್ಷ್ಮಿ ದುಡ್ಡು ಬಂದಿಲ್ಲ...’ ಸುಮಿ ಫೋನ್ ಮಾಡಿ ಕಷ್ಟ ಹೇಳಿಕೊಂಡಳು.

‘ಗೃಹಲಕ್ಷ್ಮಿ ವ್ರತ ಮಾಡು, ಸರ್ಕಾರಿ ಲಕ್ಷ್ಮಿ ಒಲಿದು ಬರ್ತಾಳೆ’ ಎಂದರು ಗುರೂಜಿ.

‘ಮಾಡ್ತಿದ್ದೀನಿ ಗುರೂಜಿ, ಈ ಬಾರಿ ವರಮಹಾಲಕ್ಷ್ಮಿ ಜೊತೆ ಗೃಹಲಕ್ಷ್ಮಿಯನ್ನೂ ಕೂರಿಸಿ ಪೂಜೆ ಮಾಡ್ತೀನಿ’.

‘ಇಬ್ಬರೂ ಲಕ್ಷ್ಮಿಯರಿಗೆ ಉಡಿಸಲು ಎರಡು ಹೊಸ ಸೀರೆ ತಂದಿದ್ದೀಯೇನಮ್ಮಾ?’

‘ಮೂರು ಸೀರೆ ತಂದಿದ್ದೀನಿ ಗುರೂಜಿ, ಮನೆಯ ಮಹಾಲಕ್ಷ್ಮಿಯಾದ ನಾನು ಹಬ್ಬದ ದಿನ ಹೊಸ ಸೀರೆ ಉಡಬೇಕಲ್ವಾ?’

‘ಹೌದೌದು. ದೇವರು ಒಳ್ಳೆಯದು ಮಾಡಲಿ’.

‘ಮಹಾಲಕ್ಷ್ಮಿ ಪೂಜಾ ಪದ್ಧತಿ ಗೊತ್ತು. ಗೃಹಲಕ್ಷ್ಮಿಯ ಪೂಜಾ ವಿಧಾನಗಳು ಏನು ಗುರೂಜಿ?’

‘ನನಗೂ ಮಹಾಲಕ್ಷ್ಮಿ ಪೂಜೆ ಮಾತ್ರ ಗೊತ್ತು, ಗೃಹಲಕ್ಷ್ಮಿ ಪೂಜೆ ನನ್ನ ಸಿಲೆಬಸ್‌ನಲ್ಲಿ ಇಲ್ಲಾ ತಾಯಿ’.

‘ಹಬ್ಬದಲ್ಲಿ ಕೂರಿಸುವ ಇಬ್ಬರು ಲಕ್ಷ್ಮಿಯರಿಗೆ ಹೊಸ ಸೀರೆ ಉಡಿಸಿದರೆ ಸಾಕಾಗುವುದಿಲ್ಲ. ಅವರ ಕಿವಿಗೆ, ಮೂಗಿಗೆ, ಕೊರಳಿಗೆ, ಸೊಂಟಕ್ಕೆ ಒಡವೆ ತೊಡಿಸಬೇಕಲ್ವಾ? ಇಬ್ಬರ ಮುಂದೆ ಒಂದೊಂದು ತಟ್ಟೆ ತುಂಬಾ ನೋಟಿನ ಕಂತೆ ಇಡಬೇಕಲ್ವಾ ಗುರೂಜಿ?’

‘ಹೌದಮ್ಮ, ಹೀಗೆಲ್ಲಾ ಅಲಂಕಾರ ಮಾಡಿ ಪೂಜಿಸಿದರೆ ಲಕ್ಷ್ಮೀಕಟಾಕ್ಷವಾಗುತ್ತದೆ’.

‘ಗುರೂಜಿ, ನೀವು ಹತ್ತೂ ಬೆರಳಿಗೂ ತಲಾ ಎರಡೆರಡು ಉಂಗುರ ಹಾಕಿಕೊಂಡು, ಕೊರಳಲ್ಲಿ ದೊಡ್ಡ ಬಂಗಾರದ ಸರ ಧರಿಸಿ, ಜರತಾರಿ ಶಾಲು ಹೊದ್ದು ಲಕ್ಷಣವಾಗಿ ಕಾಣ್ತಿದ್ದೀರಿ! ಇನ್‌ಕಮ್ ಟ್ಯಾಕ್ಸ್‌ನವರ ಕೆಟ್ಟ ಕಣ್ಣು ನಿಮ್ಮ ಮೇಲೆ ಬೀಳದಿರಲಿ!’

ಗುರೂಜಿಗೆ ಶಾಕ್ ಆಯ್ತು. ‘ಹಾಗೆಲ್ಲಾ ಮಾತನಾಡಬಾರದಮ್ಮ, ನಿಮ್ಮ ಸಮಸ್ಯೆ ಮಾತ್ರ ಹೇಳಬೇಕು’ ಎಂದು ಸಿಟ್ಟಾದರು. ಚಾನೆಲ್‌ನವರು ತಕ್ಷಣ ಸುಮಿಯ ಫೋನ್ ಕಟ್ ಮಾಡಿದರು.

ಸಂಗತ

ಯುಪಿಎಸ್‌ಸಿ: ಪರೀಕ್ಷೆಯೇ ಸೋತರೆ...


‘ಯುಪಿಎಸ್‌ಸಿ ಪರೀಕ್ಷೆ’ ಲಕ್ಷಾಂತರ ವಿದ್ಯಾರ್ಥಿಗಳ ಜೀವಮಾನದ ಕನಸು. ಈ ಪರೀಕ್ಷಾ ಪದ್ಧತಿಯನ್ನು ಪರಿಷ್ಕರಿಸುವುದು, ಮಾನವೀಯಗೊಳಿಸುವುದು ಅಗತ್ಯ.

• ಎಚ್.ವಿ. ಶ್ರೀನಿಧಿ

ಭಾರತದ ಬಹುಪಾಲು ವಿದ್ಯಾರ್ಥಿಗಳ ದೊಡ್ಡ ಕನಸುಗಳಲ್ಲಿ ‘ಭಾರತೀಯ ನಾಗರಿಕ ಸೇವೆ’ಗಳ (ಯುಪಿಎಸ್‌ಸಿ) ಪರೀಕ್ಷೆಯನ್ನು ಪಾಸು ಮಾಡುವುದೂ ಒಂದು. ಯುಪಿಎಸ್‌ಸಿ ಪರೀಕ್ಷೆಯನ್ನು ಪಾಸು ಮಾಡುವುದು ದೇಶ ಸೇವೆಯ ಆದರ್ಶದೊಟ್ಟಿಗೆ ಒಂದು ಲಾಭದಾಯಕ ಉದ್ಯೋಗದ ಆಯ್ಕೆಯಾಗಿ ಕಾಣಿಸುತ್ತಿದ್ದ ದಿನಗಳಿದ್ದವು. ಪ್ರಸ್ತುತ, ಸೇವೆಯ ಅಂಶ ಉಳಿದಿದ್ದರೂ ಯುಪಿಎಸ್‌ಸಿ ಒಂದು ಲಾಭದಾಯಕ ಉದ್ಯೋಗದ ಆಯ್ಕೆಯಾಗಿಲ್ಲ. ಸ್ಪರ್ಧಾತ್ಮಕ ಜಗತ್ತಿನಲ್ಲಿ ಕೌಶಲಗಳನ್ನು ಕಲಿತು ಗಳಿಸಬಹುದಾದ ಹಣ, ಅಂತಸ್ತಿಗೆ ಯುಪಿಎಸ್‌ಸಿ ಸರಿದೂಗುವುದಿಲ್ಲ. ಹಾಗಿದ್ದೂ ಲಕ್ಷಾಂತರ ಯುವಕ, ಯುವತಿಯರು ಈ ಪರೀಕ್ಷೆಯ ಹಿಂದೆ ಬಿದ್ದಿದ್ದಾರೆ. ಇದು ನಿರುದ್ಯೋಗದ ಲಕ್ಷಣದಂತೆಯೇ, ಸಾಮಾಜಿಕ ಸ್ಥಾನಮಾನದಲ್ಲಿ ಒಂದು ಜಿಗಿತವನ್ನು ಪಡೆಯುವ ಪ್ರಯತ್ನವೂ ಹೌದು.

ಯುಪಿಎಸ್‌ಸಿ ಪರೀಕ್ಷೆಯ ಸಾಗರಕ್ಕೆ ಜಿಗಿದ ಎಷ್ಟೋ ವಿದ್ಯಾರ್ಥಿಗಳಿಗೆ ಅದರ ಆಳ ಗೊತ್ತಿರುವುದಿಲ್ಲ. ವಿವಿಧ ಸಾಮಾಜಿಕ ಹಿನ್ನೆಲೆಯ ಅಭ್ಯರ್ಥಿಗಳ ನಡುವೆ ಕೆಲವರಿಗೆ ಮಾತ್ರ ಲಭ್ಯವಿರುವ ಕಲಿಕೆಯ ಅವಕಾಶಗಳು ‘ಲೈಫ್ ಜಾಕೆಟ್’ ಇದ್ದಂತೆ. ಲೈಫ್ ಜಾಕೆಟ್ ಇಲ್ಲದೆ ಈಜಲು ಹೊರಟ ಏಕಾಂಗಿವೀರರ ಕಥೆಯನ್ನು ಯಾರು ಕೇಳಬೇಕು.

ಯುಪಿಎಸ್‌ಸಿ ಪರೀಕ್ಷೆಯ ವಿಷಯದಲ್ಲಿ ಕನಿಷ್ಠ ಚರ್ಚೆಗೆ ಒಳಗಾಗಿರುವ ವಿಷಯ: ಪರೀಕ್ಷೆ ಪಾಸಾಗದೆ ಹೋದ ಅಭ್ಯರ್ಥಿಗಳು ಅನುಭವಿಸುವ ಮಾನಸಿಕ ಹಿಂಸೆ ಮತ್ತು ಹಿನ್ನಡೆ. ತನ್ನ ಸೋಲನ್ನು ಒಂದು ವ್ಯವಸ್ಥೆಯ ವೈಫಲ್ಯ ಎಂದು ಗ್ರಹಿಸಲಾಗದ ಅಭ್ಯರ್ಥಿ, ಸೋಲಿನ ಸಂಪೂರ್ಣ ಜವಾಬ್ದಾರಿಯನ್ನು ತನ್ನ ಮೇಲೆಯೇ ಹೇರಿಕೊಳ್ಳುವುದು ಮಾನಸಿಕ ಒತ್ತಡಕ್ಕೆ ಮತ್ತು ಹಿನ್ನಡೆಗೆ ಕಾರಣವಾಗುತ್ತದೆ.



ದೆಹಲಿಯ ಲೇಡಿ ಶ್ರೀರಾಮ್ ಕಾಲೇಜಿನಿಂದ ಪದವಿ ಪಡೆದು ಮೊದಲ ಬಾರಿ ಪರೀಕ್ಷೆ ಬರೆಯುತ್ತಿರುವ 21 ವರ್ಷ ವಯಸ್ಸಿನ ಮೇಲ್ಮಧ್ಯಮ ವರ್ಗಕ್ಕೆ ಸೇರಿದ ವಿದ್ಯಾರ್ಥಿಗೂ, ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಪದವಿ ಪಡೆದ, ಹಿಂದುಳಿದ ಪ್ರದೇಶ ಮತ್ತು ಜಾತಿಗೆ ಸೇರಿದ ಹಾಗೂ ತನ್ನ ಕೊನೆಯ ಪ್ರಯತ್ನದಲ್ಲಿರುವ 30 ವರ್ಷದ ವಿದ್ಯಾರ್ಥಿಗೂ ಇರುವ ಸಂದರ್ಭ ಹಾಗೂ ಅನುಕೂಲದಲ್ಲಿ ಯಾವುದೇ ಸಾಮ್ಯತೆ ಇರುವುದಿಲ್ಲ. ಪರೀಕ್ಷೆ ಒಂದೇ ಆದರೂ, ಪರೀಕ್ಷೆಯ ಅನಿಶ್ಚಿತ ಅಂತ್ಯದಿಂದ ಅವರು ಎದುರುಗೊಳ್ಳಲಿರುವ ಭವಿಷ್ಯ ಬೇರೆ ಬೇರೆ. ಹೊರ ದೇಶದಲ್ಲಿ ಶಿಕ್ಷಣ ಪಡೆಯುವ ಸವಲತ್ತುಗಳು ಒಬ್ಬರಿಗಿದ್ದರೆ, ಸತತ ಸೋಲಿನಿಂದ ಕಂಗೆಟ್ಟು ನಿರುದ್ಯೋಗ ಪರ್ವಕ್ಕೆ ತಯಾರಾಗುವುದು ಇನ್ನೊಬ್ಬ ವಿದ್ಯಾರ್ಥಿಗೆ ಕಟ್ಟಿಟ್ಟ ಬುತ್ತಿ. ಈ ವಿಷಯ ಕೇವಲ ಜಾತಿ–ವರ್ಗಗಳಿಗಷ್ಟೇ ಸೇರದೆ ಲಿಂಗ, ವಯಸ್ಸನ್ನು ಮೀರಿದ ಜಟಿಲ ಸಮಸ್ಯೆಯಾಗಿದೆ.

ಯುಪಿಎಸ್‌ಸಿ ಪರೀಕ್ಷೆಯ ಇನ್ನೊಂದು ದುರಂತವೆಂದರೆ, ಪ್ರತಿಷ್ಠಿತ ಸೇವೆಗಳಾದ ಐಎಎಸ್, ಐಪಿಎಸ್, ಐಎಫ್‌ಎಸ್ ಸ್ಥಾನವನ್ನು ಸೇರುವ ಸಲುವಾಗಿ ಪರೀಕ್ಷೆಯನ್ನು ಪಾಸಾಗಿದ್ದರೂ, ಆ ಸೇವೆಗಳು ದೊರಕದ ಅಭ್ಯರ್ಥಿಗಳು ಮರುಪ್ರಯತ್ನದಲ್ಲಿ ತೊಡಗುವ ಅನಿವಾರ್ಯತೆ ರೂಪುಗೊಳ್ಳುವುದು. ಹೊಸ ಅವಕಾಶಗಳಿಗೆ ತೆರೆದುಕೊಳ್ಳುವ, ಹೊಸ ಕೌಶಲಗಳನ್ನು ಕಲಿಯಬಹುದಾದ, ಜೀವನ ಸಂಗಾತಿಯನ್ನು ಆಯ್ಕೆ ಮಾಡಿಕೊಳ್ಳಬೇಕಾದ ಬದುಕಿನ ಮುಖ್ಯ ಕಾಲಘಟ್ಟದಲ್ಲಿ ಪರೀಕ್ಷೆಯೊಂದರ ಸಲುವಾಗಿ ಅಭ್ಯರ್ಥಿಯೊಬ್ಬ ದಿನದ ಎರಡನೇ ಒಂದು ಭಾಗವನ್ನು ಓದುತ್ತಾ ಕಳೆಯಬೇಕೆ? ಅಷ್ಟು ಕಷ್ಟಪಟ್ಟು ಪಾಸು ಮಾಡಬೇಕಾದ ಪರೀಕ್ಷೆಯನ್ನಾಗಿ ಯುಪಿಎಸ್‌ಸಿಯನ್ನು ಯಾಕೆ ರೂಪಿಸಿದ್ದೇವೆ? ಪರಾನುಭೂತಿ ಕಾಣೆಯಾಗುತ್ತಿರುವ ಈ ಜಗತ್ತಿನಲ್ಲಿ ಸೇವೆಯ ಉದ್ದೇಶ ಹೊಂದಿರುವ ವ್ಯಕ್ತಿಯೊಬ್ಬ ನಾಗರಿಕ ಸೇವೆ ಸೇರಲು ಇಂತಹ ಕಷ್ಟದ ಪರೀಕ್ಷೆಯನ್ನು ಯಾಕೆ ಬರೆಯಬೇಕು?

ಲಕ್ಷಾಂತರ ಜನರು ಬರೆಯುವ ಪೂರ್ವಭಾವಿ ಪರೀಕ್ಷೆಯನ್ನು ಇಂದು ಚಾಟ್‌ಜಿಪಿಟಿ ರೀತಿಯ ಕೃತಕ ಬುದ್ಧಿಮತ್ತೆ ತಂತ್ರಾಂಶವೂ ಬರೆದು ಪಾಸು ಮಾಡಬಲ್ಲದು. ಅದರ ಅರ್ಥ, ಲಕ್ಷಾಂತರ ಅಭ್ಯರ್ಥಿಗಳನ್ನು ಅಳೆಯುತ್ತಿರುವ ಮಾಪಕವನ್ನು ಒಂದು ಕೃತಕ ಬುದ್ಧಿಮತ್ತೆ ಸಲೀಸಾಗಿ ಮೀರಿ ಮುನ್ನುಗ್ಗಬಹುದು. ಸ್ಮರಣ ಶಕ್ತಿಯನ್ನು ಪರೀಕ್ಷಿಸುವಂತಿರುವ ಈ ವಿಧಾನ ಮನುಷ್ಯನಿಗೆ ಮಾಡುವ ಅವಮಾನ ಎನ್ನುವುದಕ್ಕಿಂತ, ಅವನ ಪರಿಶ್ರಮವನ್ನು ಅಲ್ಲಗಳೆಯುವ ಸಾಧನ ಎನ್ನಬಹುದು.

ಯುಪಿಎಸ್‌ಸಿ ಪರೀಕ್ಷೆಯಲ್ಲಿ ‘ನೀತಿಶಾಸ್ತ್ರ’ (ಎಥಿಕ್ಸ್) ಪತ್ರಿಕೆ ಬರೆದ ಎಲ್ಲರೂ ಇಂದು ಸತ್ಯಸಂಧರಾಗಿಯೇನೂ ಬದುಕುತ್ತಿಲ್ಲ. ಪರೀಕ್ಷೆ ಬರೆಯುವ ಎಳೆವಯಸ್ಸಿನಲ್ಲಿ ಅವರಿಗೆ ಇರಬಹುದಾದ ಲೋಕದೃಷ್ಟಿಗೂ, ಸೇವೆಯ ಭಾಗವಾದ ನಂತರದ ಲೋಕದೃಷ್ಟಿಗೂ ಸಾಕಷ್ಟು ವ್ಯತ್ಯಾಸವಿರುತ್ತದೆ. ಹಾಗಾಗಿ, ಯುಪಿಎಸ್‌ಸಿ ಪರೀಕ್ಷೆಗೆ ನಿಗದಿಯಾಗಿರುವ ಅರ್ಹತಾ ವಯಸ್ಸನ್ನು ಮರು ಪರಿಶೀಲಿಸುವುದು ಉತ್ತಮ. ಆಗಷ್ಟೇ ಪದವಿ ಮುಗಿಸಿದ ವಿದ್ಯಾರ್ಥಿಗಳಿಗಿಂತ, ಒಂದಷ್ಟು ವರ್ಷ ಕೆಲಸ ಮಾಡಿ ಲೋಕಾನುಭವ ಪಡೆದ ಯುವ ವಯಸ್ಕರು ನಾಗರಿಕ ಸೇವೆಯಲ್ಲಿರುವುದು ಸೂಕ್ತ.

ಜವಾಬ್ದಾರಿಯುತ ಸಮಾಜವೊಂದು ಯುಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣಗೊಂಡ ಅಭ್ಯರ್ಥಿಗಳನ್ನು ಸನ್ಮಾನಿಸುವುದಕ್ಕಿಂತ ಮುಖ್ಯವಾಗಿ, ಪದೇ ಪದೇ ಪರೀಕ್ಷೆ ಎದುರಿಸುತ್ತ ಸೋಲಿನ ವಿಷ ವೃತ್ತದಲ್ಲಿ ಸಿಲುಕಿ ಕಂಗೆಟ್ಟಿರುವವರ ಕಡೆ ಕಣ್ಣು ಹಾಯಿಸಬೇಕು. ಸಾರ್ವಜನಿಕ ಸೇವೆಯಲ್ಲಿ ಆಸಕ್ತಿ ಇರುವ ಯುವಶಕ್ತಿಯನ್ನು ಕಾರ್ಯಾಂಗದ ಭಾಗ ಆಗಿಸಿಕೊಳ್ಳುವ ಉದ್ದೇಶ ಸರ್ಕಾರಕ್ಕಿದ್ದಲ್ಲಿ, ಯುಪಿಎಸ್‌ಸಿ ಪರೀಕ್ಷೆಯ ಚಹರೆಯನ್ನು ಬದಲಿಸಬೇಕಾಗುತ್ತದೆ. ಯುವಶಕ್ತಿಯ ಸದ್ವಿನಿಯೋಗ ಸರ್ಕಾರಕ್ಕೆ ಬೇಕಾಗಿದ್ದಲ್ಲಿ ಸದ್ಯಕ್ಕೆ ಆಗಬೇಕಿರುವುದು ‘ಯುಪಿಎಸ್‌ಸಿ’ ಪರೀಕ್ಷೆಯ ನಿರ್ವಚನ ಹಾಗೂ ಪರಿಷ್ಕಾರ.


ಲೇಖಕ: ‘ಐಐಟಿ ಬಾಂಬೆ’ಯಲ್ಲಿ ಪಿಎಚ್.ಡಿ. ವಿದ್ಯಾರ್ಥಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಉದ್ದೀಪನ ಮದ್ದು ತಡೆ ನಾಡಾಗೆ ಸ್ವಾತಂತ್ರ್ಯ

2022ರ ಕಾಯ್ದೆಗೆ 'ವಾಡಾ' ಮಾನದಂಡಗಳ ಅನ್ವಯ ತಿದ್ದುಪಡಿ

ಪ್ರಜಾವಾಣಿ ವಾರ್ತೆ



ಕ್ರೀಡಾಕ್ಷೇತ್ರದಲ್ಲಿ ಉದ್ದೀಪನ ಮದ್ದು ಸೇವನೆಗೆ ತಡೆ ಒಡ್ಡುವ ಕ್ರಮಗಳನ್ನು ಉತ್ತೇಜಿಸಲು ಮತ್ತು ಬಲಪಡಿಸಲು ಕೇಂದ್ರ ಸರ್ಕಾರವು ಉದ್ದೀಪನ ಮದ್ದು ತಡೆ (ತಿದ್ದುಪಡಿ) ಮಸೂದೆಯನ್ನು ಲೋಕಸಭೆಯಲ್ಲಿ ಮಂಡಿಸಿ, ಅಂಗೀಕರಿಸಿದೆ. ಇದು 2022ರ ಉದ್ದೀಪನ ಮದ್ದು ತಡೆ ಕಾಯ್ದೆಯ ಪರಿಷ್ಕೃತ ರೂಪವಾಗಿದೆ. ಇದು ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಸಂಸ್ಥೆಯನ್ನು (ನಾಡಾ) ಸರ್ಕಾರದ ನಿಯಂತ್ರಣದಿಂದ ಮುಕ್ತ ಮಾಡಲಿದೆ. ಮೇಲ್ಮನವಿ ಸಮಿತಿಯ ಸ್ವತಂತ್ರ ಕಾರ್ಯನಿರ್ವಹಣೆ, ನಾಡಾಗೆ ಹೆಚ್ಚು ಅಧಿಕಾರ, ಸಣ್ಣ ಮಟ್ಟದ ಅಥವಾ ಆಕಸ್ಮಿಕ ಉಲ್ಲಂಘನೆಯ ಪ್ರಕರಣಗಳಲ್ಲಿ ಕ್ರೀಡಾಪಟುಗಳಿಗೆ ಕಡಿಮೆ ದಂಡ ವಿಧಿಸಲು ಅನುವಾಗುವಂತೆ ತಿದ್ದುಪಡಿ ಮಾಡಲಾಗಿದೆ. ಉದ್ದೀಪನ ಮದ್ದು ತಡೆ (ತಿದ್ದುಪಡಿ) ಕಾಯ್ದೆ ತರುವ ಉದ್ದೇಶವು ಉದ್ದೀಪನ ಮದ್ದು ಸೇವನೆ ತಡೆಯುವ, ಕ್ರೀಡಾ ವ್ಯವಸ್ಥೆಯನ್ನು ಸುಧಾರಿಸುವ ಭಾರತ ಪ್ರಯತ್ನದ ಭಾಗವಾಗಿದೆ

ಭಾರತದ ಕ್ರೀಡಾ ಕ್ಷೇತ್ರದಲ್ಲಿ ಉದ್ದೀಪನ ಮದ್ದು ಸೇವನೆ ಪ್ರಕರಣಗಳು ಹೆಚ್ಚಾಗಿದ್ದು, ದೇಶವು ಜಗತ್ತಿನಲ್ಲಿಯೇ ಮುಂಚೂಣಿಯಲ್ಲಿದೆ. ಕ್ರೀಡಾಪಟುಗಳು ಉದ್ದೀಪನ ಮದ್ದು ಸೇವಿಸುವುದನ್ನು ತಡೆಯುವ, ಅವರನ್ನು ಪರೀಕ್ಷಿಸುವ ಮತ್ತು ತಪ್ಪು ಮಾಡಿದ್ದರೆ ಶಿಕ್ಷಿಸುವ ಉದ್ದೇಶದಿಂದ 2022ರಲ್ಲಿ ಕಾಯ್ದೆಯನ್ನು ರೂಪಿಸಲಾಗಿತ್ತು. ಆದರೆ, ಅದಕ್ಕೆ ವಿಶ್ವ ಉದ್ದೀಪನ ಮದ್ದು ಸೇವನೆ ತಡೆ ಸಮಿತಿ (ವಾಡಾ) ಆಕ್ಷೇಪಣೆಗಳನ್ನು ವ್ಯಕ್ತಪಡಿಸಿತ್ತು. ಹೀಗಾಗಿ ಅದನ್ನು ಜಾರಿ ಮಾಡಿರಲಿಲ್ಲ.

ಆ ಕಾಯ್ದೆಯಲ್ಲಿ ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಮಂಡಳಿ (ನ್ಯಾಷನಲ್ ಬೋರ್ಡ್ ಫಾರ್ ಆ್ಯಂಟಿ–ಡೋಪಿಂಗ್ ಇನ್ ಸ್ಪೋರ್ಟ್ಸ್) ಸ್ಥಾಪನೆಗೆ ಅವಕಾಶ ಕಲ್ಪಿಸಲಾಗಿತ್ತು. ಈ ಮಂಡಳಿಯಿಂದಾಗಿ, ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಸಂಸ್ಥೆ (ನಾಡಾ) ಮತ್ತು ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಮೇಲ್ಮನವಿ ಸಮಿತಿಗಳ ಮೇಲೆ ಸರ್ಕಾರವು ಹೆಚ್ಚು ನಿಯಂತ್ರಣ ಹೊಂದಲು ಅನುಕೂಲವಾಗುತ್ತದೆ ಎನ್ನುವುದು 'ವಾಡಾ' ಮುಖ್ಯ ಆಕ್ಷೇಪಣೆಯಾಗಿತ್ತು.

ಸರ್ಕಾರದ ನಿಯಂತ್ರಣಕ್ಕೆ ವಿರೋಧ: ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಮಂಡಳಿಯ ಸದಸ್ಯರನ್ನು ಕೇಂದ್ರ ಸರ್ಕಾರವೇ ನೇರವಾಗಿ ಆಯ್ಕೆ ಮಾಡುತ್ತದೆ. ಅದು 'ನಾಡಾ'ವನ್ನು ಮೇಲುಸ್ತುವಾರಿ ಮಾಡುವ ಅಧಿಕಾರ ಹೊಂದಿರುತ್ತದೆ ಮತ್ತು ಉದ್ದೀಪನ ಮದ್ದು ತಡೆ ಸಂಬಂಧ ನಿಯಮಗಳನ್ನು ರೂಪಿಸುತ್ತದೆ ಎಂದು 2022ರ ಕಾಯ್ದೆಯಲ್ಲಿ ಹೇಳಲಾಗಿತ್ತು. ಆದರೆ, ಈ ಅಂಶಗಳು 'ವಾಡಾ' ನಿರ್ದಿಷ್ಟಪಡಿಸಿರುವ ಅಂತರರಾಷ್ಟ್ರೀಯ ಮಾನದಂಡಗಳಿಗೆ ವಿರುದ್ಧವಾಗಿವೆ ಎನ್ನುವುದು ಅದರ ಆಕ್ಷೇಪಣೆಯಾಗಿತ್ತು. ರಾಜಕೀಯ, ಆಡಳಿತಾತ್ಮಕ ಹಸ್ತಕ್ಷೇಪವಿಲ್ಲದಂತೆ 'ನಾಡಾ' ಸ್ವತಂತ್ರವಾಗಿ ಕಾರ್ಯನಿರ್ವಹಿಸಬೇಕು ಎನ್ನುವುದು 'ವಾಡಾ' ವಾದವಾಗಿತ್ತು. ಈ ಮಸೂದೆಯನ್ನು ಕಾಯ್ದೆಯನ್ನಾಗಿ ಜಾರಿ ಮಾಡಿದರೆ, ಭಾರತದ ಮೇಲೆ ನಿಷೇಧ ಹೇರುವುದಲ್ಲದೇ, ದೆಹಲಿಯಲ್ಲಿರುವ ಉದ್ದೀಪನ ಮದ್ದು ಪ್ರಯೋಗಾಲಯದ (ಎನ್‌ಡಿಟಿಎಲ್) ಮಾನ್ಯತೆ ರದ್ದುಪಡಿಸುವುದಾಗಿಯೂ 'ವಾಡಾ' ಎಚ್ಚರಿಕೆ ನೀಡಿತ್ತು. ನಂತರ ಭಾರತದ ಕ್ರೀಡಾ ಸಚಿವಾಲಯವು 'ವಾಡಾ' ಅಧಿಕಾರಿಗಳೊಂದಿಗೆ ವಿಸ್ತೃತ ಚರ್ಚೆ ನಡೆಸಿತ್ತು.

ಕೇಂದ್ರ ಕ್ರೀಡಾ ಸಚಿವರ ನೇತೃತ್ವದ ಆಡಳಿತ ಮಂಡಳಿಯು 'ನಾಡಾ'ದ ಉಸ್ತುವಾರಿ ಮತ್ತು ನಿಯಂತ್ರಣ ಅಧಿಕಾರವನ್ನು ಹೊಂದುವುದಕ್ಕೆ 'ವಾಡಾ' ತೀವ್ರವಾಗಿ ಆಕ್ಷೇಪಿಸಿತ್ತು. ಉದ್ದೀಪನ ಮದ್ದು ತಡೆ ಸಂಸ್ಥೆಗಳು (ಎನ್‌ಎಡಿಒ) ಸರ್ಕಾರದ ನಿಯಂತ್ರಣದಲ್ಲಿದ್ದರೆ, ಹಿತಾಸಕ್ತಿ ಸಂಘರ್ಷ ಉಂಟಾಗುತ್ತದೆ. ಹೀಗಾಗಿ ಅದು ಸ್ವತಂತ್ರ ಸಂಸ್ಥೆಯಾಗಿರಬೇಕು ಎನ್ನುವುದು 'ವಾಡಾ' ಅಭಿಪ್ರಾಯ. ತಿದ್ದುಪಡಿ ಮಸೂದೆಯಲ್ಲಿ ಮಂಡಳಿಯನ್ನು ಹಾಗೇ ಉಳಿಸಲಾಗಿದೆ. ಆದರೆ, 'ನಾಡಾ' ಮತ್ತು ಮೇಲ್ಮನವಿ ಸಮಿತಿಯ ಮೇಲೆ ಸರ್ಕಾರ/ಮಂಡಳಿಗೆ ನಿಯಂತ್ರಣ ಹೇರಲು ಇರುವ ಅವಕಾಶಗಳನ್ನು ತೆಗೆದುಹಾಕಲಾಗಿದೆ; ನಾಡಾ ಮತ್ತು ಮೇಲ್ಮನವಿ ಸಮಿತಿಯು ಸ್ವತಂತ್ರವಾಗಿ ಮತ್ತು 'ವಾಡಾ' ರೂಪಿಸಿರುವ ಜಾಗತಿಕ ಮಾನದಂಡಗಳಿಗೆ ಅನುಗುಣವಾಗಿ ಕಾರ್ಯನಿರ್ವಹಿಸಲು ಅವಕಾಶ ಕಲ್ಪಿಸಲಾಗಿದೆ.

ದಂಡ ಕಡಿಮೆ: ಹಾಗೆಯೇ ಉದ್ದೀಪನ ಮದ್ದು ಸೇವನೆ ಪ್ರಕರಣಗಳಲ್ಲಿ ಕ್ರೀಡಾಪಟುಗಳನ್ನು ಹೇಗೆ ಉತ್ತರದಾಯಿಗಳನ್ನಾಗಿಸಬೇಕು ಎನ್ನುವ ಅಂಶವನ್ನೂ ತಿದ್ದುಪಡಿ ಮಾಡಲಾಗಿದೆ. ನಿದರ್ಶನಕ್ಕೆ, ಸಣ್ಣ ಮಟ್ಟದ ಅಥವಾ ಆಕಸ್ಮಿಕ ಉಲ್ಲಂಘನೆಯ ಪ್ರಕರಣಗಳಲ್ಲಿ, ಕಡಿಮೆ ದಂಡ ವಿಧಿಸಲು ಅನುವಾಗುವಂತೆ ತಿದ್ದುಪಡಿ ಮಾಡಲಾಗಿದೆ.


ದೇಶದಲ್ಲಿ ಉದ್ದೀಪನ ಮದ್ದು ಸೇವನೆಯನ್ನು ನಿಯಂತ್ರಿಸಲು 'ನಾಡಾ'ಗೆ ಮಸೂದೆಯು ಶಾಸನಬದ್ಧ ಅಧಿಕಾರವನ್ನು ನೀಡುತ್ತದೆ. ಮಸೂದೆಯ ಪ್ರಕಾರ, ಆಟಗಾರರಷ್ಟೇ ಅಲ್ಲ, ಕೋಚ್‌ಗಳು, ವೈದ್ಯರು, ತರಬೇತುದಾರರು ಮತ್ತು ನೆರವಿನ ಸಿಬ್ಬಂದಿಯೂ ಉದ್ದೀಪನ ಮದ್ದು ಸೇವನೆ ಮಾಡುವಂತಿಲ್ಲ. ನಿಯಮ ಮೀರಿದವರು ವಜಾ, ದಂಡದ ಜತೆಗೆ ಪ್ರಶಸ್ತಿ ಪದಕಗಳನ್ನೂ ಕಳೆದುಕೊಳ್ಳಬೇಕಾಗುತ್ತದೆ. ಅವರು ಸ್ಪರ್ಧೆಗಳಲ್ಲಿ ಪಾಲ್ಗೊಳ್ಳದಂತೆ ಅನರ್ಹರನ್ನಾಗಿ ಮಾಡಲಾಗುತ್ತದೆ. ಪರೀಕ್ಷೆ ಮತ್ತು ನಿರ್ವಹಣೆಯ ದೃಷ್ಟಿಯಿಂದ ಕ್ರೀಡಾಪಟುಗಳಿಂದ ದತ್ತಾಂಶ ಸಂಗ್ರಹಿಸಲೂ ಅವಕಾಶ ಕಲ್ಪಿಸಲಾಗಿದೆ. ಆದರೆ, ನಿಜವಾಗಿಯೂ ಅಗತ್ಯ ಇದೆ ಅನ್ನಿಸಿದವರಿಗೆ ವೈದ್ಯಕೀಯ ಬಳಕೆಗೆ (ಟಿಯುಇ) ಮಾತ್ರ ಅವಕಾಶ ನೀಡಲಾಗಿದೆ.

ಸುಧಾರಣೆ ತರುವ ಯತ್ನ: ಉದ್ದೀಪನ ಮದ್ದು ತಡೆ ಕಾಯ್ದೆ ತರುವ ಉದ್ದೇಶವು ದೇಶದ ಕ್ರೀಡಾ ವ್ಯವಸ್ಥೆಯನ್ನು ಸುಧಾರಿಸುವ ಪ್ರಯತ್ನದ ಭಾಗವಾಗಿದೆ. ಭಾರತದ ಕ್ರೀಡಾಪಟುಗಳು ಉದ್ದೀಪನ ಮದ್ದು ಸೇವನೆ ಮಾಡುತ್ತಿರುವ ಪ್ರಕರಣಗಳು ಹೆಚ್ಚುತ್ತಿರುವುದರಿಂದ ಈ ಮಸೂದೆ ಮಹತ್ವ ಪಡೆದುಕೊಂಡಿದೆ. ಉದ್ದೀಪನ ಮದ್ದು ಸೇವಿಸಿದವರಿಗೆ ದಂಡ ಮತ್ತು ಶಿಕ್ಷೆ ವಿಧಿಸುವ, ಅವರ ವಿರುದ್ಧ ಕಾನೂನು ಕ್ರಮ ಜರುಗಿಸುವ ಹಾಗೂ ಪ್ರಾಮಾಣಿಕ ಕ್ರೀಡಾಪಟುಗಳ ಹಕ್ಕು ಮತ್ತು ವೃತ್ತಿಜೀವನ ರಕ್ಷಣೆಯ ಗುರಿ ಹೊಂದಿದೆ. ಈ ಮಸೂದೆಯು ಕಾಯ್ದೆಯಾಗಿ ಜಾರಿಯಾದರೆ, ಜಗತ್ತಿನ ಕ್ರೀಡಾ ಆಡಳಿತದಲ್ಲಿ ಪ್ರಮುಖ ಪಾಲುದಾರ ರಾಷ್ಟ್ರವಾಗಿರುವ ಭಾರತದ ಸ್ಥಾನ ಮತ್ತಷ್ಟು ಭದ್ರವಾಗಲಿದೆ; 'ವಾಡಾ' ಜತೆಗಿನ ದೇಶದ ಸಮಸ್ಯೆ, ಸಂಘರ್ಷಗಳಿಗೂ ಪರಿಹಾರ ಸಿಗಲಿದೆ ಎನ್ನಲಾಗುತ್ತಿದೆ.

ಆಧಾರ: ಪಿಟಿಐ, ಮಾಧ್ಯಮ ವರದಿಗಳು

ಮಸೂದೆಯಲ್ಲಿನ ಇತರ ಅಂಶಗಳು

- ರಾಷ್ಟ್ರೀಯ ಉದ್ದೀಪನ ಮದ್ದು ತಡೆ ಮೇಲ್ಮನವಿ ಸಮಿತಿಯ ನಿರ್ಧಾರದ ವಿರುದ್ಧ ಸ್ವಿಟ್ಜರ್ಲೆಂಡ್‌ನಲ್ಲಿರುವ ಅಂತರರಾಷ್ಟ್ರೀಯ ಕ್ರೀಡಾ ನ್ಯಾಯಮಂಡಳಿ (ಸಿಎಎಸ್) ಮೆಟ್ಟಿಲೇರುವುದಕ್ಕೆ ನಿರ್ದಿಷ್ಟ ಕ್ರೀಡಾ ಸಂಸ್ಥೆಗಳಿಗೆ ಮಾತ್ರ ಈ ಮಸೂದೆ ಅವಕಾಶ ನೀಡುತ್ತದೆ. 'ವಾಡಾ', ಅಂತರರಾಷ್ಟ್ರೀಯ ಒಲಿಂಪಿಕ್ ಸಮಿತಿ (ಐಒಸಿ), ಅಂತರರಾಷ್ಟ್ರೀಯ ಪ್ಯಾರಾಲಿಂಪಿಕ್ ಸಮಿತಿ (ಐಪಿಸಿ) ಮತ್ತು ಅಂತರರಾಷ್ಟ್ರೀಯ ಕ್ರೀಡಾ ಒಕ್ಕೂಟಗಳು ಅಂತರರಾಷ್ಟ್ರೀಯ ಕ್ರೀಡಾ ನ್ಯಾಯಮಂಡಳಿಯ ನಿಯಮಗಳು ಹಾಗೂ ಸಂಹಿತೆಯ ಅನುಸಾರ ಮೇಲ್ಮನವಿ ಸಲ್ಲಿಸಬಹುದು
- ಅಂತರರಾಷ್ಟ್ರೀಯ ಕ್ರೀಡಾಪಟುಗಳು ಅಥವಾ ಅಂತರರಾಷ್ಟ್ರೀಯ ಕ್ರೀಡಾ ಕೂಟಗಳಿಗೆ ಸಂಬಂಧಿಸಿದ ವಿಷಯಗಳಲ್ಲಿ ಉದ್ದೀಪನ ಮದ್ದು ತಡೆ ಶಿಸ್ತು ಸಮಿತಿಯ ನಿರ್ಧಾರದ ವಿರುದ್ಧ ಸಿಎಎಸ್‌ನಲ್ಲಿ ನೇರವಾಗಿ ಮೇಲ್ಮನವಿ ಸಲ್ಲಿಸುವುದಕ್ಕೂ ಮಸೂದೆ ಅವಕಾಶ ನೀಡುತ್ತದೆ. ಶಿಸ್ತು ಸಮಿತಿಯ ತೀರ್ಮಾನದಿಂದ ತೊಂದರೆಗೆ ಒಳಗಾದ ಕ್ರೀಡಾಪಟು, 'ನಾಡಾ', ಅಂತರರಾಷ್ಟ್ರೀಯ ಒಕ್ಕೂಟ, 'ವಾಡಾ', ಐಒಸಿ, ಮತ್ತು ಐಪಿಸಿಗಳು ಮೇಲ್ಮನವಿ ಸಲ್ಲಿಸಬಹುದು. ಅಲ್ಲದೇ 'ನಾಡಾ'ದ ನಿರ್ಧಾರದ ವಿರುದ್ಧ, ಭಾರತದಲ್ಲಿ ಬೇರೆ ಯಾರೂ ಮೇಲ್ಮನವಿ ಸಲ್ಲಿಸದೇ ಇದ್ದ ಪಕ್ಷದಲ್ಲಿ 'ವಾಡಾ'ವು ನೇರವಾಗಿ ಸಿಎಎಸ್‌ಗೆ ಮನವಿ ಸಲ್ಲಿಸಲು ಅವಕಾಶ ಇದೆ
- ಉದ್ದೀಪನ ಮದ್ದು ತಡೆ ನಿಯಮಗಳ ಉಲ್ಲಂಘನೆ ಎಂದರೆ ಏನು, ಯಾವಾಗ ಉಲ್ಲಂಘನೆಯಾಗುತ್ತದೆ ಎಂಬುದನ್ನು ಮಸೂದೆಯಲ್ಲಿ ವಿವರಿಸಲಾಗಿದೆ. ಅದರ ಪ್ರಕಾರ, (ಅ) ನಿಷೇಧಿತ ವಸ್ತು/ಮದ್ದು ಕ್ರೀಡಾಪಟುಗಳು ಹೊಂದಿರುವುದು ಅಥವಾ ಅವುಗಳಲ್ಲಿನ ಅಂಶ ಕ್ರೀಡಾಳುವಿನ ದೇಹದಲ್ಲಿರುವುದು (ಆ) ನಿಷೇಧಿತ ಮದ್ದು ಬಳಕೆ ಅಥವಾ ಹೊಂದಿರುವುದು ಅಥವಾ ಸೇವನೆಗೆ ಯತ್ನಿಸುವುದು ಅಥವಾ ನಿಷೇಧಿತ ವಿಧಾನವನ್ನು ಅನುಸರಿಸುವುದು (ಇ) ಪರೀಕ್ಷೆಗೆ ಹಾಜರಾಗದೇ ಇರುವುದು ಅಥವಾ ಇರುವ ಸ್ಥಳದ ಬಗ್ಗೆ ಮಾಹಿತಿ ನೀಡದೇ ಇರುವುದು, ಪರೀಕ್ಷೆಗೆ ಮಾದರಿಗಳನ್ನು (ರಕ್ತ, ಮೂತ್ರ ಇತ್ಯಾದಿ) ನೀಡದಿರುವುದು (ಈ) ನಿಷೇಧಿತ ವಸ್ತುಗಳನ್ನು ಕದ್ದು ಸಾಗಿಸುವುದು ಅಥವಾ ಅದಕ್ಕೆ ಯತ್ನಿಸುವುದು ಸೇರಿದಂತೆ ಹಲವು ವಿವರಣೆಗಳನ್ನು ನೀಡಲಾಗಿದೆ
- ಉದ್ದೀಪನ ಮದ್ದು ತಡೆ ಪರೀಕ್ಷೆಯನ್ನು ಮಾಡುವ ಪ್ರತಿಯೊಂದು ಪ್ರಯೋಗಾಲಯವೂ 'ವಾಡಾ'ದಿಂದ ಮಾನ್ಯತೆ ಪಡೆಯುವುದನ್ನು ಮಸೂದೆ ಕಡ್ಡಾಯಗೊಳಿಸಿದೆ. 2022ರ ಕಾಯ್ದೆಯ ಪ್ರಕಾರ, ಇದು ಕಡ್ಡಾಯವಾಗಿರಲಿಲ್ಲ



ಭಾರತದಲ್ಲೇ ಹೆಚ್ಚು ಸೇವನೆ...

ಉದ್ದೀಪನ ಮದ್ದು ಬಳಕೆಯು ಭಾರತದ ಕ್ರೀಡಾ ಕ್ಷೇತ್ರದಲ್ಲಿ ಬೃಹತ್ ಸಮಸ್ಯೆಯಾಗಿ ಕಾಡುತ್ತಿದೆ. 'ವಾಡಾ' 2023ರ ಅಂಕಿಅಂಶಗಳ ಪ್ರಕಾರ, ನಿಷೇಧಿತ ವಸ್ತುಗಳ ಸೇವನೆಯಲ್ಲಿ ಭಾರತೀಯ ಕ್ರೀಡಾಪಟುಗಳು ಮುಂಚೂಣಿಯಲ್ಲಿದ್ದಾರೆ. 5000ಕ್ಕೂ ಹೆಚ್ಚು ಮಾದರಿಗಳ ಪರೀಕ್ಷಾ ಫಲಿತಾಂಶವನ್ನು 'ವಾಡಾ' ವಿಶ್ಲೇಷಣೆಗೆ ಒಳಪಡಿಸಿದೆ.

2023ರ ಅಂಕಿ ಅಂಶಗಳ ಪ್ರಕಾರ, ಭಾರತದಲ್ಲಿ ನಿಷೇಧಿತ ವಸ್ತುಗಳ ಬಳಕೆಯ ಪ್ರಮಾಣ ಶೇ 3.8ರಷ್ಟಿದೆ. 5,606 ಮಾದರಿಗಳ ಪೈಕಿ 214 ಮಾದರಿಗಳಲ್ಲಿ ಉದ್ದೀಪನ ವಸ್ತು ಸೇವಿಸಿರುವುದು ದೃಢಪಟ್ಟಿದೆ. ಇದು ಚೀನಾ, ಅಮೆರಿಕ, ಫ್ರಾನ್ಸ್ ಸೇರಿದಂತೆ ಹಲವು ದೇಶಗಳಿಗಿಂತ ಹೆಚ್ಚು. 5,606 ಪರೀಕ್ಷೆಗಳ ಪೈಕಿ 2,748 ಪರೀಕ್ಷೆಗಳು ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದ ಕ್ರೀಡಾಪಟುಗಳಿಗೆ ಸಂಬಂಧಿಸಿದ್ದಾಗಿತ್ತು.

2022ಕ್ಕೆ ಹೋಲಿಸಿದರೆ ನಿಷೇಧಿತ ವಸ್ತುಗಳ ಬಳಕೆ ದೃಢಪಟ್ಟ ಪ್ರಮಾಣ 2023ರಲ್ಲಿ ಹೆಚ್ಚಾಗಿದೆ. 2022ರಲ್ಲಿ 3,865 ಮಾದರಿಗಳನ್ನು ಪರೀಕ್ಷೆಗೆ ಒಳಪಡಿಸಲಾಗಿತ್ತು. ಶೇ 3.2ರಷ್ಟು ಪ್ರಕರಣಗಳು ದೃಢಪಟ್ಟಿದ್ದವು.

2023ರಲ್ಲಿ ಅಥ್ಲೆಟಿಕ್ಸ್ ವಿಭಾಗದಲ್ಲಿ ಹೆಚ್ಚು ಪ್ರಕರಣಗಳು ದಾಖಲಾಗಿವೆ. 1,223 ಮಾದರಿಗಳಲ್ಲಿ 61 ಮಾದರಿಗಳಲ್ಲಿ ನಿಷೇಧಿತ ವಸ್ತುವಿನ ಬಳಕೆ ದೃಢಪಟ್ಟಿತ್ತು. ವೇಟ್‌ಲಿಫ್ಟಿಂಗ್ ವಿಭಾಗದಲ್ಲಿ 38 ಪ್ರಕರಣಗಳು (451 ಮಾದರಿಗಳು) ಪವರ್‌ಲಿಫ್ಟಿಂಗ್ ಮತ್ತು ಕುಸ್ತಿಗಳಲ್ಲಿ ಕ್ರಮವಾಗಿ 28 ಮತ್ತು 10 ಪ್ರಕರಣಗಳು ವರದಿಯಾಗಿದ್ದವು.

ರಾಷ್ಟ್ರೀಯ

ಪಾಕ್‌ಗೆ ಅಮೆರಿಕ ನೆರವು: ಹಳೇ ಸುದ್ದಿ ಹಂಚಿಕೊಂಡ ಸೇನೆ

ನವದೆಹಲಿ (ಪಿಟಿಐ): 1971ರಲ್ಲಿ ನಡೆದ ಯುದ್ಧದ ವೇಳೆ, ಶಸ್ತ್ರಾಸ್ತ್ರ ಪೂರೈಸಿರುವುದು ಸೇರಿ ಪಾಕಿಸ್ತಾನಕ್ಕೆ ಅಮೆರಿಕ ನೀಡಿದ್ದ ನೆರವಿಗೆ ಸಂಬಂಧಿಸಿದ ಸುದ್ದಿಯೊಂದನ್ನು ಭಾರತ ಮಂಗಳವಾರ 'ಎಕ್ಸ್'ನಲ್ಲಿ ಹಂಚಿಕೊಂಡಿದೆ.

ಸೇನೆಯ ಪೂರ್ವ ಕಮಾಂಡ್ ಈ ಸುದ್ದಿಯನ್ನು ಹಂಚಿಕೊಂಡಿದ್ದು, '1954ರಿಂದಲೂ ಅಮೆರಿಕ ಪಾಕಿಸ್ತಾನಕ್ಕೆ ಶಸ್ತ್ರಾಸ್ತ್ರ ಒದಗಿಸುತ್ತಿದೆ' ಎಂದು ಹೇಳಿದೆ.

ರಷ್ಯಾದಿಂದ ಕಚ್ಚಾ ತೈಲ ಖರೀದಿಸುತ್ತಿರುವ ಭಾರತದ ವಿರುದ್ಧ ಅಮೆರಿಕ ನಿರಂತರ ಟೀಕೆ ಮಾಡುತ್ತಿರುವ ಹಿನ್ನೆಲೆಯಲ್ಲಿ, ಭಾರತೀಯ ಸೇನೆ ಈ ಸುದ್ದಿ ಹಂಚಿಕೊಳ್ಳುವ ಮೂಲಕ ತಿರುಗೇಟು ನೀಡಿದೆ.

ಆಗ, ರಕ್ಷಣಾ ಉತ್ಪಾದನಾ ಸಚಿವರಾಗಿದ್ದ ವಿ.ಸಿ.ಶುಕ್ಲಾ ಅವರು ರಾಜ್ಯಸಭೆಯಲ್ಲಿ ಮಾತನಾಡುವ ವೇಳೆ, ಪಾಕಿಸ್ತಾನಕ್ಕೆ ಅಮೆರಿಕ ನೆರವು ಒದಗಿಸುತ್ತಿರುವ ಕುರಿತು ನೀಡಿದ್ದ ಹೇಳಿಕೆ ಉಲ್ಲೇಖಿಸಿ ವರದಿ ಪ್ರಕಟವಾಗಿತ್ತು. ವರದಿಯನ್ನು ಸೇನೆ ಈಗ ಹಂಚಿಕೊಂಡಿದೆ. ಪಾಕಿಸ್ತಾನಕ್ಕೆ ಅಮೆರಿಕ ಒದಗಿಸುತ್ತಿದ್ದ ಶಸ್ತ್ರಾಸ್ತ್ರಗಳ ಮೌಲ್ಯ ಕುರಿತು ಶುಕ್ಲಾ ಅವರು ನೀಡಿದ್ದ ಹೇಳಿಕೆಯೂ ಸುದ್ದಿಯಲ್ಲಿ ಉಲ್ಲೇಖವಾಗಿತ್ತು.

'#ಇಂಡಿಯನ್‌ಆರ್ಮಿ', '#ಈಸ್ಟರ್ನ್ ಕಮಾಂಡ್', '#ವಿಜಯವರ್ಷ', '#ಲಿಬರೇಷನ್‌ಆಫ್‌ಬಾಂಗ್ಲಾದೇಶ' ಹಾಗೂ '#ಮೀಡಿಯಾಹೈಲೈಟ್ಸ್' ಎಂಬುದಾಗಿ ಹ್ಯಾಷ್‌ಟ್ಯಾಗ್‌ನೊಂದಿಗೆ ಸೇನೆ ಸುದ್ದಿ ಹಂಚಿಕೊಂಡಿದೆ. 'ಈ ದಿನ ಆ ವರ್ಷ. 1971ರ ಆಗಸ್ಟ್ 5ರಂದು ಯುದ್ಧ ನಡೆಯುತ್ತಿತ್ತು. 1954ರಿಂದ ಪಾಕಿಸ್ತಾನಕ್ಕೆ ಅಮೆರಿಕ ₹17 ಸಾವಿರ ಕೋಟಿ ಮೌಲ್ಯದ ಶಸ್ತ್ರಾಸ್ತ್ರಗಳನ್ನು ಪೂರೈಸಿದೆ' ಎಂದು ಸೇನೆ ಪೋಸ್ಟ್ ಹೇಳಿದೆ.


05 AUG 1971

U.S. Arms Worth $2 Billion Shipped To Pakistan Since '54

10:04 AM · Aug 5, 2025

ಸೇನೆ ಹಂಚಿಕೊಂಡ ಸುದ್ದಿ ತುಣುಕು

'ಹಿಂದಿ ಕಡ್ಡಾಯಕ್ಕೆ ನಿರ್ದೇಶನ ನೀಡಿಲ್ಲ'

ನವದೆಹಲಿ (ಪಿಟಿಐ): ಕೇಂದ್ರೀಯ ಸೇವೆಗಳು ಅಥವಾ ಶೈಕ್ಷಣಿಕ ಸಂಸ್ಥೆಗಳಲ್ಲಿ ಅಧಿಕೃತ ಸಂವಹನ ಭಾಷೆಯಾಗಿ ಹಿಂದಿಯನ್ನು ಕಡ್ಡಾಯಗೊಳಿಸಿ ಯಾವುದೇ ನಿರ್ದೇಶನವನ್ನು ಸರ್ಕಾರ ನೀಡಿಲ್ಲ ಎಂದು ಲೋಕಸಭೆಗೆ ಕೇಂದ್ರ ಸರ್ಕಾರ ಮಾಹಿತಿ ನೀಡಿದೆ.

ಡಿಎಂಕೆ ಸಂಸದ ಕಲಾನಿಧಿ ವೀರಸ್ವಾಮಿ ಅವರ ಈ ಕುರಿತ ಪ್ರಶ್ನೆಗೆ, ಕೇಂದ್ರ ಗೃಹ ಖಾತೆಯ ರಾಜ್ಯ ಸಚಿವ ನಿತ್ಯಾನಂದ ರಾಯ್ ಅವರು ಲಿಖಿತ ಉತ್ತರ ನೀಡಿದ್ದಾರೆ.

ಮಾಲಿನ್ಯ ನಿಯಂತ್ರಣ ಮಂಡಳಿ ಅಧಿಕಾರ ಎತ್ತಿಹಿಡಿದ 'ಸುಪ್ರೀಂ'

ನವದೆಹಲಿ (ಪಿಟಿಐ): ಪರಿಸರಕ್ಕೆ ಆಗಿರುವ ಹಾನಿಯನ್ನು ಸರಿಪಡಿಸುವಂತೆ ಮತ್ತು ಪರಿಹಾರ ನೀಡುವಂತೆ ಸೂಚಿಸುವ ಅಧಿಕಾರ ಮಾಲಿನ್ಯ ನಿಯಂತ್ರಣ ಮಂಡಳಿಗಳಿಗೆ ಇದೆ ಎಂಬ ಮಹತ್ವದ ತೀರ್ಪನ್ನು ಸುಪ್ರೀಂ ಕೋರ್ಟ್ ನೀಡಿದೆ.

ಮಾಲಿನ್ಯ ನಿಯಂತ್ರಣ ಮಂಡಳಿಗಳು ಜಲ ಕಾಯ್ದೆ ಮತ್ತು ವಾಯು ಕಾಯ್ದೆಯ ನಿಯಮಗಳ ಅಡಿಯಲ್ಲಿ ಸಾಂವಿಧಾನಿಕವಾಗಿ ಹಾಗೂ ಶಾಸನಬದ್ಧವಾಗಿ ಈ ಅಧಿಕಾರ ಹೊಂದಿವೆ ಎಂದು ನ್ಯಾಯಮೂರ್ತಿಗಳಾದ ಪಿ.ಎಸ್. ನರಸಿಂಹ ಮತ್ತು ಮನೋಜ್ ಮಿಶ್ರಾ ಅವರನ್ನೊಳಗೊಂಡ ಪೀಠ ಸೋಮವಾರ ಅಭಿಪ್ರಾಯಪಟ್ಟಿದೆ.

'ಪರಿಸರ ಸಂರಕ್ಷಣೆಗೆ ಸಂಬಂಧಿಸಿದಂತೆ ಭಾರತದಲ್ಲಿರುವ ಕಾನೂನುಗಳನ್ನು ನಿಯಂತ್ರಿಸುವ ತತ್ವಗಳನ್ನು ಪರಿಗಣಿಸಿದ ನಂತರ ಈ ತೀರ್ಪು ನೀಡಿದ್ದೇವೆ. ಪರಿಸರಕ್ಕೆ ಉಂಟಾಗಿರುವ ಹಾನಿಗೆ ಪರಿಹಾರ ನೀಡುವಂತೆ ಮತ್ತು ಸಂಭಾವ್ಯ ಪರಿಸರ ಹಾನಿಯನ್ನು ತಡೆಗಟ್ಟಲು ಮುನ್ನೆಚ್ಚರಿಕೆ ಕ್ರಮವಾಗಿ ನಿರ್ದಿಷ್ಟ ಮೊತ್ತದ ಬ್ಯಾಂಕ್ ಖಾತರಿ ನೀಡುವಂತೆ ಸೂಚಿಸುವ ಅಧಿಕಾರವನ್ನು ಮಾಲಿನ್ಯ ನಿಯಂತ್ರಣ ಮಂಡಳಿಗಳು ಹೊಂದಿವೆ' ಎಂದು ಪೀಠ ತಿಳಿಸಿದೆ.

ಆದರೆ ಇದು ಶಿಕ್ಷೆಯ ರೂಪದಲ್ಲಿ ದಂಡ ವಿಧಿಸುವುದಕ್ಕಿಂತ ಭಿನ್ನವಾಗಿದೆ ಎಂದು ಪೀಠವು ಸ್ಪಷ್ಟಪಡಿಸಿತು. ನಿಯಮ ಉಲ್ಲಂಘಿಸುವವರನ್ನು ಶಿಕ್ಷಿಸುವ ಬದಲು, ಪರಿಸರಕ್ಕೆ ಆಗಿರುವ ಹಾನಿಯನ್ನು ಸರಿಪಡಿಸುವ ಅಥವಾ ಹಾನಿಯಾಗದಂತೆ ತಡೆಯುವ ಉದ್ದೇಶವನ್ನು ಇದು ಹೊಂದಿದೆ ಎಂದು ಹೇಳಿತು.

ಮಾಲಿನ್ಯ ನಿಯಂತ್ರಣ ಮಂಡಳಿಗಳು ಪರಿಸರ ಹಾನಿಗೆ ಸಂಬಂಧಿಸಿದಂತೆ ಪರಿಹಾರ ಕೋರುವ ಅಧಿಕಾರವನ್ನು ಮೊಟಕುಗೊಳಿಸಿ ದೆಹಲಿ ಹೈಕೋರ್ಟ್ 2012ರಲ್ಲಿ ನೀಡಿದ್ದ ತೀರ್ಪನ್ನು ಸುಪ್ರೀಂ ಕೋರ್ಟ್ ರದ್ದುಗೊಳಿಸಿತು.

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

24 ಸೆಕೆಂಡ್‌ಗಳ ವಿಡಿಯೊ ಒಂದು ಸಾಮಾಜಿಕ ಜಾಲತಾಣಗಳಲ್ಲಿ ವ್ಯಾಪಕವಾಗಿ ಹರಿದಾಡುತ್ತಿದೆ. ವಿಮಾನದಲ್ಲಿ ವ್ಯಕ್ತಿಯೊಬ್ಬ 'ಅಲ್ಲಾಹು ಅಕ್ಬರ್', 'ಅಮೆರಿಕದ ಸಾವು', 'ಟ್ರಂಪ್ ಸಾವು' ಎಂದು ಕೂಗುವುದು ವಿಡಿಯೊದಲ್ಲಿ ದಾಖಲಾಗಿದೆ. ಹೀಗೆ ಕೂಗಿದ ವ್ಯಕ್ತಿ ಮುಸ್ಲಿಂ ಎಂದೂ, ಪಾಕಿಸ್ತಾನಿ ಎಂದೂ ಪೋಸ್ಟ್ ಹಂಚಿಕೊಳ್ಳುತ್ತಿರುವವರು ಪ್ರತಿಪಾದಿಸುತ್ತಿದ್ದಾರೆ. ಆದರೆ, ಅದು ಸುಳ್ಳು ಸುದ್ದಿ.



ಪ್ರಕರಣದ ಬಗ್ಗೆ ಅಧಿಕೃತ ಮಾಹಿತಿ ತಿಳಿಯಲು ನಿರ್ದಿಷ್ಟ ಪದದ ಮೂಲಕ ಗೂಗಲ್‌ನಲ್ಲಿ ಹುಡುಕಾಟ ನಡೆಸಿದಾಗ ಬಿಬಿಸಿಯಲ್ಲಿ ಪ್ರಕಟವಾಗಿದ್ದ ವರದಿ ಕಂಡಿತು. ಅದರಲ್ಲಿ ಜುಲೈ 27ರಂದು ಲೂಟನ್‌ನಿಂದ ಗ್ಲಾಸ್ಗೊಗೆ ಸಂಚರಿಸುತ್ತಿದ್ದ ವಿಮಾನದಲ್ಲಿ ಘೋಷಣೆಗಳನ್ನು ಕೂಗಿದ ವ್ಯಕ್ತಿಯ ಹೆಸರು ಅಭಯ್ ನಾಯಕ್ ಎಂದು ಉಲ್ಲೇಖಿಸಲಾಗಿತ್ತು. 'ಡೆಕ್ಕನ್ ಹೆರಾಲ್ಡ್' ಸೇರಿದಂತೆ ಪ್ರಮುಖ ಪತ್ರಿಕೆಗಳಲ್ಲಿಯೂ ಈ ಬಗ್ಗೆ ವರದಿಗಳು ಪ್ರಕಟವಾಗಿವೆ. ಎಲ್ಲ ಪತ್ರಿಕೆಗಳಲ್ಲಿಯೂ ಆ ವ್ಯಕ್ತಿಯ ಹೆಸರು ಅಭಯ್ ದೇವದಾಸ್ ನಾಯಕ್ ಎಂದೇ ಉಲ್ಲೇಖವಾಗಿದ್ದು, ಆತ ಭಾರತ ಸಂಜಾತನಾಗಿದ್ದು, ಇಂಗ್ಲೆಂಡ್‌ನ ಲೂಟನ್ ವಾಸಿ ಎಂದು ವರದಿಯಾಗಿದೆ. ಕೆಲವರು ಸುಳ್ಳು ಪ್ರತಿಪಾದನೆಗಳೊಂದಿಗೆ ವಿಡಿಯೊ ಹಂಚಿಕೊಳ್ಳುತ್ತಿದ್ದಾರೆ ಎಂದು ಆಲ್ಟ್ ನ್ಯೂಸ್ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ನೋಟದ ಫಲ ಬಾಳು

ನುಡಿ ಬೆಳಗು



ವಾಸುದೇವ ನಾಡಿಗ್

ಆ ಸಾಧಾರಣ ಕುಟುಂಬದಲ್ಲಿ ಮೂವರೇ ಸದಸ್ಯರು. ಮೂವರ ಮಧ್ಯೆ ಒಂದೇ ಒಂದು ಗಾಡಿ. ಅದೂ ಸೆಕೆಂಡ್ ಹ್ಯಾಂಡ್, ಹೇಗೋ ತಗೊಂಡಿದ್ದು. ಮೂವರೂ ಗಾಡಿಯನ್ನು ಚಲಾಯಿಸಬಲ್ಲರು. ಮಗ ಮತ್ತು ತಂದೆಯ ಓಡಾಟ ಹೆಚ್ಚುಕಡಿಮೆ ಬಸ್‌ನಲ್ಲೇ ಆದ್ದರಿಂದ ಗಾಡಿ ಮನೇಲಿ ಇರುತ್ತಿತ್ತು. ತಾಯಿ ಸರಕು, ತರಕಾರಿ ಹೆಚ್ಚು ಭಾರ ಅನಿಸಿದಾಗ ಬಳಸುತ್ತಿದ್ದುದು ಅಷ್ಟೇ. ಅಗತ್ಯವಿದ್ದಾಗ ಮೂವರೂ ಬಳಸುತ್ತಿದ್ದರು. ಸಂಜೆ ಬಂದಾಗ ಸ್ನೇಹಿತರನ್ನು ಕಾಣಲು ಮಗ ಮತ್ತು ದೂರದ ಕೆಲಸ ಇದ್ದಾಗ ತಂದೆ... ಹೀಗೆ ಮೂವರ ಕೈಗೆ ಸಿಕ್ಕ ಗಾಡಿ ಅದು.

ಅಲ್ಲೊಂದು ತಕರಾರಿತ್ತು. ಮೂವರೂ ಗಾಡಿಯನ್ನು ಬಳಸುವಾಗ ಪಕ್ಕದ ಕನ್ನಡಿಯನ್ನು (ಸೈಡ್ ಮಿರರ್) ತಮ್ಮ ಕೂಡುವ ಭಂಗಿ ಮತ್ತು ಎತ್ತರಕ್ಕೆ ತಕ್ಕ ಹಾಗೆ ತಿರುಗಿಸಿಕೊಳ್ಳುತ್ತಿದ್ದರು. ಅದನ್ನು ಆ ಕಡೆ ಈ ಕಡೆ ಸರಿದಾಡಿಸುತ್ತ, ಹಿಂಬದಿಯ ವಾಹನಗಳನ್ನು ಸುಲಭವಾಗಿ ನೋಡುವ ಅನುಕೂಲಕ್ಕೆ ತಕ್ಕ ಹೊಂದಾಣಿಕೆ ಇದು. ಮೂವರೂ ಪ್ರತಿಸಲವೂ ಗೊಣಗುಟ್ಟುತ್ತಲೇ ಮತ್ತೆ ಪಕ್ಕದ ಕನ್ನಡಿಯನ್ನು ಸರಿಪಡಿಸಿಕೊಂಡು ಓಡಿಸುತ್ತಿದ್ದರು. ಕನ್ನಡಿ ಇವರ ತಿರುವಿಗೆ ತಿರುಗಿ ತಿರುಗಿ ಬಳಲಿದ ಹಾಗೆ ಕಾಣುತ್ತಾ ಸಡಿಲವಾಗಿತ್ತು. 'ಥೋ ಯಾರು ಪ್ರತಿಸಲ ಇದನ್ನು ಹೊಂದಿಸಿಕೊಂಡು ಚಲಾಯಿಸಬೇಕು' ಅಂತ ನಿರ್ಲಕ್ಷ್ಯ ಮಾಡುವಂತಿಲ್ಲ. ಅದು ಅನಿವಾರ್ಯ. ಇಲ್ಲದೇ ಇದ್ದರೆ ಹಿಂಬದಿಯ ವಾಹನಗಳು ಕಾಣದೆ ಅನಾಹುತ ತಪ್ಪಿದ್ದಲ್ಲ. ಹಾಗಾಗಿಯೇ ಈ ತಾಳ್ಮೆ.


ಜೀವನದ ಬಂಡಿಯೂ ಹಾಗೇ ಅಲ್ಲವೇ? ಅವರವರು ಅವರವರ ಅನುಕೂಲಕ್ಕೆ ತಕ್ಕ ಹಾಗೆ ಇದನ್ನು ವ್ಯಾಖ್ಯಾನಿಸುತ್ತಾರೆ, ವಿವರಿಸುತ್ತಾರೆ, ದೃಷ್ಟಿಕೋನವನ್ನು ಬದಲಾಯಿಸಿಕೊಳ್ಳುತ್ತಾರೆ. ಇದು ಸಹಜವೇ. ಸಾವಿರ ಜನ ಸಾವಿರ ತರಹ ಬಾಳುತ್ತಾರೆ. ಯಾರದ್ದು ಮುಖ್ಯ, ಯಾರದ್ದು ಅಮುಖ್ಯ ಅಂತೆಲ್ಲ ಯೋಚಿಸುವ ಹಾಗೇ ಇಲ್ಲ. ಬಾಳಬೇಕು, ಬಾಳನ್ನು ಚಲಾಯಿಸಬೇಕು, ಅವಘಡಗಳನ್ನು ತಪ್ಪಿಸಬೇಕಷ್ಟೇ. ಬಾಳ ವಾಹನದ ಪಕ್ಕದ ಕನ್ನಡಿ ಒಂದೇ. ಆದರೆ, ಅದನ್ನು ಹೊಂದಿಸಿಕೊಳ್ಳುವ ಬಗೆ ಬೇರೆ ಬೇರೆ. ತಲುಪುವ ಗಮ್ಯ ಒಂದೇ. ಅದು ಮತ್ತೊಬ್ಬರಿಗೆ ಉಪದ್ರವಕಾರಿ ಆಗಿರಬಾರದು ಅಷ್ಟೇ. ಸಾವಿರ ಸಲ ಗೊಣಗುಟ್ಟಿದರೂ ಪರವಾಗಿಲ್ಲ, ಸುರಕ್ಷಿತವಾಗಿ ಪ್ರಯಾಣ ಮುಗಿಸಿ ಮನೆ ತಲುಪಿದರೆ ಸಾಕು; ಒಂದೇ ಉದ್ದೇಶದ ಕನ್ನಡಿ; ವ್ಯಕ್ತಿಗಳು ಮೂವರು. ಜೀವನದ ಅಸಂಖ್ಯಾತ ದೃಷ್ಟಿಕೋನ; ಅವರವರ ಎತ್ತರಕ್ಕೆ ತಕ್ಕಂತೆ ಅವರವರ ಬಾಳು ಚಲನೆ. ಪರಸ್ಪರ ಗೌರವಿಸಿ ಬಾಳಬೇಕಾದುದು ಇಲ್ಲಿ ತೀರಾ ಅಪೇಕ್ಷಣೀಯ ಅಲ್ಲವೇ?

ಗುಂಡಣ್ಣ



ಪದಬಂಧ 6126

ವಿದ್ಯಾ ವಿನಯ್



ಎಡದಿಂದ ಬಲಕ್ಕೆ

1.ಮಾನ ಹೊಂದಿರುವ ಹೋಲಿಕೆಯ ವಸ್ತು (4)
2.ಬದ್ಧದ್ವೇಷವಿದು (4)
4.ಕುಬೇರನನ್ನು ಹೀಗೂ ಕರೆಯುತ್ತಾರೆ (4)
6.ಮೂಗಿನಿಂದ ಸುರಿವ ಶ್ಲೇಷ್ಮ (3)
8.ತಿರುಗಿ ನಿಂತಿರುವ ಆಕಳು (2)
10.ನಿರೂಪಣೆಯಲ್ಲಿ ಶಾಸನವಿದೆ! (3)
11.ಹಮ್ಮೀರನಿಗೆ ಶಿವ ಪ್ರತ್ಯಕ್ಷನಾಗಿರುವನಲ್ಲಾ! (2)
13.ಅರ್ಧ ತಿಂದುದನ್ನು ಪುನಃ ನುರಿಸಿ ತಿನ್ನುವಿಕೆ (3)
14.ಈತ ಪರೀಕ್ಷೆ ಮಾಡುವವನು (4)
16.ನಯವಿಲ್ಲದೆ ಒರಟಾದುದು (4)
17.ಕೊನೆಗೆ ಕಳೆಯಿದ್ದರಷ್ಟೇ ಈ ತೇಜಸ್ಸು! (4)

ಮೇಲಿಂದ ಕೆಳಕ್ಕೆ

1.ಈ ರೀತಿ ದೃಷ್ಟಾಂತವನ್ನು ಕೊಡು (5)
2.ಬೊಕ್ಕೆಗಳೆದ್ದು ತುರಿಕೆಯುಂಟಾಗುವ ಚರ್ಮರೋಗ (2)
3.ಇದು ಲಲಾಟಲಿಖಿತ (5)
5.ಯವನ ಸರಿಸಿದ ತೆರೆ! (4)
7.ಅಪ್ಪನ ಈ ರೂಪ ಬಲು ವಿರಳ! (4)
9.ಗುಲಾಲು ಹಿಡಿದಿರುವ ಈತ ಬಲು ತಕ್ಕ! (5)
12.ಯುದ್ಧವನ್ನು ಸಾರುವ ಕಹಳೆ (5)
15.ಭೂಲೋಕದ ಅಮೃತ (2)

6125ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1.ಚಿಪ್ಪಿಗ 6.ದಂತಮಂಜನ 7.ವಾಲಗ 8.ಸಖ 10.ಕಣ 11.ನಿನಾದ 13.ಅಜ 14.ಪುತ್ರ 18.ಯೋಜಕ 19.ವಾದಸರಣಿ 20.ಶಿಕ್ಷಣ

ಮೇಲಿಂದ ಕೆಳಕ್ಕೆ: 1.ಚಿನಿವಾರ 2.ಗರಗಸ 3.ವದಂತಿ 4.ಆಮಂತ್ರಣ 5.ವನಚರಿ 9.ಖನಿಜ 10.ಕದಪು 12.ಪರಿವಾರ 13.ಅವಸರ 15.ತ್ರಯೋದಶಿ 16.ಪ್ರಕರಣ 17.ಹಣಿಗೆ

ಸುಡೊಕು 6510

ಆಡುವುದು ಹೀಗೆ: ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5		6		7		3		8
			2		4		1	7
7		1		5		4		9
	9	3	5				7	
1				4				3
	6				8		5	
9		5			6	2		1
				3			8	
6		8	4			9		5

6509 ಸುಡೊಕು

8	5	3	1	6	2	4	9	7
6	1	9	7	5	4	3	2	8
7	4	2	8	9	3	1	6	5
4	6	7	5	3	9	2	8	1
1	2	8	6	4	7	9	5	3
3	9	5	2	1	8	7	4	6
5	7	4	3	2	6	8	1	9
9	3	1	4	8	5	6	7	2
2	8	6	9	7	1	5	3	4

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ, ಕಮ್ಮರಡಿ

06 ಆಗಸ್ಟ್ 2025 ಬುಧವಾರ, ಶ್ರೀ ವಿಶ್ವಾವಸು ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಶ್ರಾವಣ ಶುಕ್ಲ ದ್ವಾದಶಿ ಗಂ. 14-09 **ನಕ್ಷತ್ರ:** ಮೂಲ ಗಂ. 13-00 **ಯೋಗ:** ವೈಧೃತಿ ಗಂ. 7-18 **ಕರಣ:** ಬಾಲವ ಗಂ. 14-09, ಕರ್ಕಾಟಕ ಮಾಸದ 21 ನೇ ದಿನ. ಮಳೆ ನಕ್ಷತ್ರ : ಆಶ್ಲೇಷ 1 ನೇ ಪಾದ. **ರಾಹುಕಾಲ :** ಮಧ್ಯಾಹ್ನ 12-00 01-30 **ಸೂರ್ಯೋದಯ :** 06-20 ಸೂರ್ಯಾಸ್ತ : 06-53, **ಮುಸ್ಲಿಂ ದಿನಾಂಕ :** 11 ಸಫರ್, **ಅದೃಷ್ಟ ಸಂಖ್ಯೆ :** 3, 8

ಮೇಷ: ಕೃಷಿ ಕಾರ್ಯಗಳು ಬಿಡುವಿಲ್ಲದೆ ನಡೆಯಲಿವೆ. ಪಾರಮಾರ್ಥಿಕ ವಿಷಯಗಳತ್ತ ಮನಸ್ಸು ಹರಿಯುವುದು. ಕೆಲವೊಂದು ಸಮಸ್ಯೆಗಳಿಗೆ ಪೊಲೀಸರಿಂದ ಪರಿಹಾರ ತೆಗೆದುಕೊಳ್ಳುವುದು ಉತ್ತಮ.

ವೃಷಭ: ಮನೆಯಲ್ಲಿ ಶಾಂತ ವಾತಾವರಣವಿರುವುದು. ನಿಧಾನಗತಿಯ ಕಾರ್ಯಗಳು ಚುರುಕಾಗಿ ಮನಸ್ಸಿಗೆ ತುಸು ನೆಮ್ಮದಿ ಬರುವುದು. ಕಾರ್ಮಿಕರಲ್ಲಿನ ಸಮಸ್ಯೆ ಬಗೆಹರಿಸಿಕೊಳ್ಳಿರಿ. ಎಣ್ಣೆ ಮತ್ತು ಬೇಳೆ ಕಾಳು ವ್ಯಾಪಾರ ಜೋರು.

ಮಿಥುನ: ಹಿಂದೆ ಮಾಡಿದ ತಪ್ಪುಗಳು ಪುನರಾವರ್ತನೆಯಾಗದಂತೆ ಎಚ್ಚರ ವಹಿಸಿದರೆ ಲೇಸು. ಖರ್ಚು–ವೆಚ್ಚಗಳಲ್ಲಿ ಮಿತವ್ಯಯ ಸಾಧಿಸಲು ಪ್ರಯತ್ನಿಸಿ. ಸ್ವತ್ತು ವಿಚಾರದಲ್ಲಿ ಬಂಧುಗಳು ನೆರವಿಗೆ ಬರಲಿದ್ದಾರೆ.

ಕರ್ಕಾಟಕ: ದೇವತಾ ಕಾರ್ಯಗಳಿಗೆ ಪ್ರಯಾಣ ಮಾಡಬೇಕಾಗಲಿದೆ. ಕುಟುಂಬ ವರ್ಗದವರಲ್ಲಿ ಆರೋಗ್ಯ ಉತ್ತಮವಾಗಿ ಇರುವುದು. ಸಿವಿಲ್ ಎಂಜಿನಿಯರ್‌ಗಳಿಗೆ ಉತ್ತಮ ಅವಕಾಶಗಳು ಸಿಗಲಿವೆ.

ಸಿಂಹ: ಸ್ನೇಹಪರ ಸ್ವಭಾವದಿಂದಾಗಿ ವೈಯಕ್ತಿಕ ಸ್ಥಾನ–ಮಾನಗಳು ಲಭಿಸಲಿವೆ. ಅವಿರೋಧ ಆಯ್ಕೆಗೆ ಒಲವು ತೋರಿದ್ದರಿಂದ ಸುಲಭವಾಗಿ ಸ್ಥಾನ ಗಳಿಸುವಿರಿ. ಸಮೀಪವರ್ತಿಗಳ ದುರ್ಬುದ್ಧಿಯಿಂದ ವಂಚನಾ ಕಾರ್ಯ ನಡೆದಾವು.

ಕನ್ಯಾ: ಸಾಮರ್ಥ್ಯ, ದಕ್ಷತೆ, ಸೇವಾ ಮನೋಭಾವಗಳಿಂದ ಸಂಸ್ಥೆಯಲ್ಲಿ ಜವಾಬ್ದಾರಿಯುತ ಹುದ್ದೆ ನಿಮ್ಮದಾಗಲಿದೆ. ಸತ್ಕಾರ ಸಮಾರಂಭಗಳಲ್ಲಿ ಭಾಗ ವಹಿಸುವಿರಿ. ವಾಹನ ಖರೀದಿಗೆ ಸಕಾಲ. ಬಂಧು ಮಿತ್ರರು ಮನೆಗೆ ಬರಲಿದ್ದಾರೆ.

ತುಲಾ: ಪ್ರಯತ್ನಗಳು ಫಲಕಾರಿಯಾಗಿ ಆರ್ಥಿಕವಾಗಿ ಅನುಕೂಲ ಉಂಟಾಗುವುದು. ತಂದೆ–ತಾಯಿ ಕೋರಿಕೆಯಂತೆ ಮನೆಯಲ್ಲಿ ದೇವತಾ ಕಾರ್ಯ ನಡೆಸುವಿರಿ. ಉದ್ಯೋಗದಲ್ಲಿ ಸಮತೋಲನ ತಪ್ಪಲಿದೆ.

ವೃಶ್ಚಿಕ: ಆಧ್ಯಾತ್ಮಿಕ ವಿಚಾರಗಳ ಪುಸ್ತಕಗಳನ್ನು ಕೊಳ್ಳಲು ಧನ ವಿನಿಯೋಗ ವಾಗುವುದು. ರಸ ಪದಾರ್ಥಗಳ ವ್ಯಾಪಾರಸ್ಥರಿಗೆ ಅಧಿಕ ಲಾಭ ಬರುವುದು. ಕೃಷಿ ಕೆಲಸಗಳು ಸಮರ್ಪಕವಾಗಿ ನಡೆದು ಮನಸ್ಸಿಗೆ ನೆಮ್ಮದಿ.


ಧನು: ಮನೆಯ ಪರಿಸ್ಥಿತಿಗಳ ಸುಧಾರಣೆಯಿಂದ ಗಮನ ಕೊಡಲು ಉತ್ತಮವಾಗುವುದು. ಕೇವಲ ದೇವತಾ ಕೃಪೆಯಿಂದ ಕೆಲಸಗಳನ್ನೂ ಲಾಭಮಯವಾಗಿಸಿಕೊಳ್ಳುವುದು ಸಾಧ್ಯವಾಗುವುದಿಲ್ಲ.

ಮಕರ: ಸಮಸ್ಯೆಗಳನ್ನು ಸೌಹಾರ್ದಯುತವಾಗಿ ಮತ್ತು ನ್ಯಾಯಸಮ್ಮತವಾಗಿ ಬಗೆಹರಿಸಿಕೊಳ್ಳುವಿರಿ. ಕಂಪ್ಯೂಟರ್ ಕ್ಷೇತ್ರದಲ್ಲಿ ಅಭಿವೃದ್ಧಿಯನ್ನು ಕಾಣಬಹುದು. ನಿವೇಶನ ಮಾರುವ ಪರಿಸ್ಥಿತಿ ಎದುರಾದರೂ ಉತ್ತಮ ಲಾಭ .

ಕುಂಭ: ಶ್ವಾಸಕೋಶಕ್ಕೆ ಸಂಬಂಧಪಟ್ಟ ಕಾಯಿಲೆಗಳ ಬಗ್ಗೆ ನಿಗಾ ಇರಲಿ. ಉದ್ಯೋಗದಲ್ಲಿ ಸ್ಥಾನ ಬದಲಾವಣೆಯಾಗಿ ಮನಸ್ಸಿಗೆ ಆಘಾತವಾಗಲಿದೆ. ವೆಚ್ಚ ಸರಿ ಸಮವಾಗಿರುವುದು. ಪ್ರಯಾಣ ಮಾಡಬೇಕಾದ ಸಂದರ್ಭಗಳು ಬರಲಿವೆ.

ಮೀನ: ಸರ್ಕಾರಿ ಅಧಿಕಾರಿಗಳಿಗೆ ಕೆಲಸದ ಒತ್ತಡ ಕಡಿಮೆಯಾಗಲಿದೆ. ಹೊಸದನ್ನು ಕಲಿಯುವ ಆಸೆಗಳು ಹೆಚ್ಚಲಿವೆ. ಬೇಡಿಕೆಯ ಅರ್ಜಿಗಳಿಗೆ ಪ್ರೋತ್ಸಾಹ ಸಿಗಲಿದೆ. ಅಧ್ಯಯನಕ್ಕೆ ಸಕಾಲವಾಗಿರುತ್ತದೆ.

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ
ಹಿಂದಿನ ಅಂತ್ಯ: 24,722
ಇಂದಿನ ಅಂತ್ಯ: 24,649
ದಿನದ ಕನಿಷ್ಠ: 24,590
▼ 73

ಮೊಟ್ಟೆ ಧಾರಣೆ (ಎನ್‌ಇಸಿಸಿ)
ಬೆಂಗಳೂರು
100 ಕ್ಕೆ ₹485
12 ಕ್ಕೆ ₹66
ಮೈಸೂರು: 100 ಕ್ಕೆ ₹495

ರಾಮನಗರ ರೇಷ್ಮೆಗೂಡು
ಮಿಶ್ರತಳಿ(ಸಿ.ಬಿ) ₹388-625
ದ್ವಿತಳಿ (ಬಿ.ವಿ) ₹411-738

ಮುಂಬೈ ಖಾದ್ಯ ತೈಲ (ಆವರಣದಲ್ಲಿ ಕಳೆದ ವಹಿವಾಟಿನ ದರ)

(10 ಕೆ.ಜಿಗೆ)	
ಶೇಂಗಾ (ರಿಫೈನ್ಡ್)	₹1355 (1370)
ಸೋಯಾ (ರಿಫೈನ್ಡ್)	₹1245 (1225)
ಸೂರ್ಯಕಾಂತಿ (ರಿಫೈನ್ಡ್)	₹1360 (1370)
ಪಾಮೋಲಿನ್	₹1210 (1200)

ಅಡಿಕೆ ಧಾರಣೆ

ಸಾಗರ			
ಚಾಲಿ	34599-38469		
ರಾಶಿ	42899-55409		
ಸಿಪ್ಪೆಗೋಟು	17099-20319		
ಸಿದ್ದಾಪುರ			
ಬಿಳೆಗೋಟು	25499-31609		
ಚಾಲಿ	34899-42699		
ಕೋಕ	18089-26319		
ಕೆಂಪುಗೋಟು	18319-22119		
ರಾಶಿ	44099-49409		
ತಟ್ಟಿಬೆಟ್ಟೆ	28719-36319		
ಶಿವಮೊಗ್ಗ			
ಬೆಟ್ಟೆ	52114-61999		
ಗೊರಬಲು	15009-35230		
ರಾಶಿ	45669-58109		
ಸರಕು	54859-91896		
ಶಿರಸಿ			
ಬೆಟ್ಟೆ	28199-38699		
ಬಿಳೆಗೋಟು	24699-34399		
ಚಾಲಿ	38199-43666		
ಕೆಂಪುಗೋಟು	21099-25669		
ರಾಶಿ	44250-48399		
ಯಲ್ಲಾಪುರ			
ಆಪಿ	65009-65009		
ಬಿಳೆಗೋಟು	16899-32499		
ಚಾಲಿ	33209-43099		
ಕೋಕ	11012-19109		
ಕೆಂಪುಗೋಟು	18099-26399		
ರಾಶಿ	40199-56509		
ತಟ್ಟಿಬೆಟ್ಟೆ	28000-39999		

‘ಭಾರತದ ಮೇಲೆ 24 ತಾಸಿನಲ್ಲಿ ಇನ್ನಷ್ಟು ಸುಂಕ’


ಡೊನಾಲ್ಡ್ ಟ್ರಂಪ್

ನವದೆಹಲಿ (ಪಿಟಿಐ): ಭಾರತವು ಅಮೆರಿಕದ ಪಾಲಿಗೆ ಒಳ್ಳೆಯ ವ್ಯಾಪಾರ ಪಾಲುದಾರ ಅಲ್ಲ ಎಂದು ಹೇಳಿರುವ ಅಲ್ಲಿನ ಅಧ್ಯಕ್ಷ ಡೊನಾಲ್ಡ್ ಟ್ರಂಪ್, ರಷ್ಯಾದಿಂದ ಕಚ್ಚಾ ತೈಲವನ್ನು ಖರೀದಿ ಸುತ್ತಿರುವ ಕಾರಣಕ್ಕೆ ‘ಮುಂದಿನ 24 ಗಂಟೆಗಳಲ್ಲಿ ಭಾರತದ ಮೇಲೆ ಗಣನೀಯ ಪ್ರಮಾಣದಲ್ಲಿ ತೆರಿಗೆ ಹೆಚ್ಚು ಮಾಡಲಾಗುವುದು’ ಎಂದು ಮಂಗಳವಾರ ಎಚ್ಚರಿಕೆ ನೀಡಿದ್ದಾರೆ.

‘ಭಾರತವು ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿ ತೆರಿಗೆ ವಿಧಿಸುವ ದೇಶ. ಭಾರತದ ಬಗ್ಗೆ ಈ ಮಾತನ್ನು ಹೇಳಲು ಜನ ಬಯಸುವುದಿಲ್ಲ. ಆದರೆ ಅವರು (ಭಾರತ) ಅತಿಹೆಚ್ಚು ತೆರಿಗೆ ವಿಧಿಸುತ್ತಾರೆ. ಅವರಲ್ಲಿನ ತೆರಿಗೆ ಬಹಳ ಹೆಚ್ಚಿರುವ ಕಾರಣಕ್ಕೆ ನಾವು ಅವರೊಂದಿಗೆ ಬಹಳ ಕಡಿಮೆ ವ್ಯಾಪಾರ ನಡೆಸುತ್ತಿದ್ದೇವೆ’ ಎಂದು ಟ್ರಂಪ್ ಅವರು ಸಿಎನ್‌ಬಿಸಿ ವಾಹಿನಿಗೆ ನೀಡಿರುವ ಸಂದರ್ಶನದಲ್ಲಿ ಹೇಳಿದ್ದಾರೆ.

‘ನಾವು ಅವರಿಗೆ ಶೇ 25ರಷ್ಟು ತೆರಿಗೆ ವಿಧಿಸಿದ್ದೇವೆ. ಆದರೆ ಮುಂದಿನ 24 ಗಂಟೆಗಳಲ್ಲಿ ಅದನ್ನು ಗಣನೀಯ ಪ್ರಮಾಣದಲ್ಲಿ ಹೆಚ್ಚಿಸಲಿದ್ದೇನೆ. ಏಕೆಂದರೆ ಅವರು ರಷ್ಯಾದಿಂದ ಕಚ್ಚಾ ತೈಲ ಖರೀದಿಸುತ್ತಿದ್ದಾರೆ. ಅವರು ಯುದ್ಧಾಪರಾಧಕ್ಕೆ ನೆರವು ನೀಡುತ್ತಿದ್ದಾರೆ. ಅವರು ಹಾಗೆ ಮಾಡುವುದು ನನಗೆ ಸಂತಸ ನೀಡುವುದಿಲ್ಲ’ ಎಂದು ಟ್ರಂಪ್ ಹೇಳಿದ್ದಾರೆ.

‘ಭಾರತವು ಅತಿಹೆಚ್ಚಿನ ತೆರಿಗೆ ವಿಧಿಸುವ ಸ್ಥಿತಿಯಿಂದ ಹಿಂದೆ ಸರಿದು, ನಮಗೆ ಶೂನ್ಯ ತೆರಿಗೆ ವಿಧಿಸಲಿದೆ. ಆದರೆ, ಅವರು ಕಚ್ಚಾ ತೈಲದ ವಿಚಾರದಲ್ಲಿ ನಡೆದುಕೊಳ್ಳುತ್ತಿರುವ ರೀತಿಯನ್ನು ಕಂಡರೆ, ಅಷ್ಟು ಸಾಕಾಗುವುದಿಲ್ಲ’ ಎಂದು ಟ್ರಂಪ್ ತಿಳಿಸಿದ್ದಾರೆ.

ರಷ್ಯಾದಿಂದ ಭಾರಿ ಪ್ರಮಾಣದಲ್ಲಿ ಕಚ್ಚಾ ತೈಲ ಖರೀದಿಸಿ, ಅದನ್ನು ದೊಡ್ಡ ಲಾಭಕ್ಕೆ ಮಾರಾಟ ಮಾಡುತ್ತಿರುವುದಕ್ಕಾಗಿ ಅಮೆರಿಕವು ಭಾರತದ ಮೇಲಿನ ತೆರಿಗೆಯ ಪ್ರಮಾಣವನ್ನು ಗಣನೀಯವಾಗಿ ಹೆಚ್ಚಿಸಲಿದೆ ಎಂದು ಟ್ರಂಪ್ ಅವರು ಸೋಮವಾರವೂ ಹೇಳಿದ್ದರು.

ಈ ಮಾತಿಗೆ ಭಾರತವು ಪ್ರತ್ಯುತ್ತರ ನೀಡಿದೆ. ಅಮೆರಿಕ ಮತ್ತು ಯುರೋಪ್ ಕೂಡ ರಷ್ಯಾದ ಜೊತೆ ವ್ಯಾಪಾರ ಸಂಬಂಧ ಮುಂದುವರಿಸಿವೆ ಎಂದು ಭಾರತ ತಿರುಗೇಟು ನೀಡಿದೆ.

ಕುಸಿದ ರೂಪಾಯಿ, ಇನ್ನಷ್ಟು ಇಳಿಕೆ ಸಾಧ್ಯತೆ

ಮುಂಬೈ (ಪಿಟಿಐ): ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಸಾರ್ವಕಾಲಿಕ ಕನಿಷ್ಠ ಮಟ್ಟದ ಸನಿಹಕ್ಕೆ ತಲುಪಿದೆ. ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ರೂಪಾಯಿ ಮೌಲ್ಯವು 22 ಪೈಸೆಯಷ್ಟು ಕುಸಿದು 87.88ಕ್ಕೆ ತಲುಪಿದೆ. ಫೆಬ್ರುವರಿಯಲ್ಲಿ ರೂಪಾಯಿ ಮೌಲ್ಯವು 87.95ಕ್ಕೆ ತಲುಪಿದ್ದುದು ಸಾರ್ವಕಾಲಿಕ ಕನಿಷ್ಠ ಮಟ್ಟ.

ರಷ್ಯಾದಿಂದ ಕಚ್ಚಾ ತೈಲವನ್ನು ಭಾರತವು ಖರೀದಿಸುತ್ತಿದೆಯಾದ ಕಾರಣಕ್ಕೆ ಭಾರತದ ಸರಕುಗಳಿಗೆ ವಿಧಿಸುವ ಸುಂಕವನ್ನು ಹೆಚ್ಚು ಮಾಡಲಾಗುವುದು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಮತ್ತೆ ಎಚ್ಚರಿಕೆ ನೀಡಿರುವುದು ಕೂಡ ರೂಪಾಯಿ ಮೌಲ್ಯ ಇಳಿಕೆಗೆ ಕಾರಣವಾಯಿತು.

ಭಾರತ ಮತ್ತು ಅಮೆರಿಕದ ನಡುವಿನ ವ್ಯಾಪಾರ ಒಪ್ಪಂದ ಕುರಿತ ಅನಿಶ್ಚಿತತೆಗಳು ದೇಶದ ಮಾರುಕಟ್ಟೆಯ ಮೇಲೆ ನಕಾರಾತ್ಮಕ ಪರಿಣಾಮ ಉಂಟುಮಾಡುತ್ತಿವೆ. ಹೀಗಾಗಿ ರೂಪಾಯಿ ಮೌಲ್ಯವು ಇನ್ನಷ್ಟು ತಗ್ಗುವ ಸಾಧ್ಯತೆ ಇದೆ ಎಂದು ಮಾರುಕಟ್ಟೆ ಪರಿಣತರು ಹೇಳಿದ್ದಾರೆ.

ಪಾಕ್: ಪೊಲೀಸ್ ಠಾಣೆ ಮೇಲೆ ಡ್ರೋನ್ ದಾಳಿ

ಪೆಶಾವರ (ಪಿಟಿಐ): ಪಾಕಿಸ್ತಾನದ ಬನ್ನು ಜಿಲ್ಲೆಯಲ್ಲಿ ಪೊಲೀಸ್ ಠಾಣೆಯೊಂದರ ಮೇಲೆ ಬಂಡುಕೋರರು ಡ್ರೋನ್ ದಾಳಿ ನಡೆಸಿದ್ದಾರೆ. ಡ್ರೋನ್ ಮೂಲಕ ಠಾಣೆ ಮೇಲೆ ಕಚ್ಚಾ ಬಾಂಬ್ ಅನ್ನು ಹಾಕಲಾಗಿತ್ತು. ಆದರೆ ಈ ಬಾಂಬ್ ಸ್ಫೋಟಗೊಂಡಿಲ್ಲ.

ಟ್ರಂಪ್ ಬೆದರಿಕೆಗೆ ರಷ್ಯಾ ಖಂಡನೆ

ಮಾಸ್ಕೊ (ಎಎಫ್‌ಪಿ): ರಷ್ಯಾದಿಂದ ತೈಲವನ್ನು ಖರೀದಿಸುತ್ತಿರುವುದಕ್ಕೆ ಭಾರತದ ಮೇಲೆ ಹೆಚ್ಚಿನ ಸುಂಕ ವಿಧಿಸುವ ಅಮೆರಿಕದ ಬೆದರಿಕೆಯನ್ನು ಕ್ರೆಮ್ಲಿನ್ ಮಂಗಳವಾರ ಟೀಕಿಸಿದೆ.

ರಷ್ಯಾದಿಂದ ತೈಲ ಖರೀದಿ ಮುಂದುವರಿಸಿದರೆ ಭಾರತದ ಮೇಲಿನ ಸುಂಕ ಹೆಚ್ಚಿಸಲಾಗುವುದು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸೋಮವಾರ ಎಚ್ಚರಿಸಿದ್ದರು. ಅಮೆರಿಕದ ಈ ನಿಲುವು ‘ನ್ಯಾಯಸಮ್ಮತವಲ್ಲದ್ದು’ ಎನ್ನುವ ಮೂಲಕ ಭಾರತ ತಿರುಗೇಟು ನೀಡಿತ್ತು.

ರಷ್ಯಾ ಕೂಡಾ ಅದೇ ಧಾಟಿಯಲ್ಲಿ ಪ್ರತಿಕ್ರಿಯಿಸಿ ಭಾರತದ ಬೆಂಬಲಕ್ಕೆ ನಿಂತಿದೆ. ‘ಸಾರ್ವಭೌಮ ರಾಷ್ಟ್ರಗಳು ತಮ್ಮದೇ ಆದ ವ್ಯಾಪಾರ ಪಾಲುದಾರರನ್ನು ಆಯ್ಕೆ ಮಾಡುವ ಹಕ್ಕನ್ನು ಹೊಂದಿವೆ’ ಎಂದು ಕ್ರೆಮ್ಲಿನ್ ವಕ್ತಾರ ಡಿಮಿಟ್ರಿ ಪೆಸ್ಕೋವ್ ವರದಿಗಾರರಿಗೆ ತಿಳಿಸಿದ್ದಾರೆ.


ರಷ್ಯಾದೊಂದಿಗೆ ವ್ಯಾಪಾರ ಸಂಬಂಧ ಕಡಿತಗೊಳಿಸುವಂತೆ ಒತ್ತಾಯಿಸುವುದು ‘ನ್ಯಾಯಸಮ್ಮತವಲ್ಲ’ ಎಂದು ಅವರು ಟೀಕಿಸಿದ್ದಾರೆ.

2022ರ ಫೆಬ್ರುವರಿಯಲ್ಲಿ ಉಕ್ರೇನ್ ಜತೆಗಿನ ಯುದ್ಧ ಆರಂಭವಾದಾಗಿನಿಂದ ಯೂರೋಪಿನ ದೇಶಗಳು ರಷ್ಯಾದ ರಫ್ತು ಗಳಿಕೆಗೆ ತಡೆಯೊಡ್ಡಲು ಪ್ರಯತ್ನಿಸುತ್ತಿವೆ. ಆದರೆ, ಭಾರತ ಮತ್ತು ಚೀನಾ ಸೇರಿದಂತೆ ಯೂರೋಪ್‌ನ ಹೊರಗಿನ ದೇಶಗಳಿಗೆ ತೈಲ ರಫ್ತು ಮಾಡುವ ಮೂಲಕ ರಷ್ಯಾ, ಬಹುಕೋಟಿ ಡಾಲರ್ ಹಣದ ಹರಿವು ಮುಂದುವರಿಯುವುದನ್ನು ಖಚಿತಪಡಿಸಿಕೊಂಡಿದೆ.

ಬೆಂಗಳೂರು ಸೇರಿದ ದೇಶದ 8 ನಗರಗಳಲ್ಲಿ ಆಯೋಜನೆ

‘ಯುಎಸ್‌ನಲ್ಲಿ ಅಧ್ಯಯನ’ ಮೇಳ 10ಕ್ಕೆ

ಪ್ರಜಾವಾಣಿ ವಾರ್ತೆ



ನವದೆಹಲಿ: ಅಮೆರಿಕದಲ್ಲಿನ ಉನ್ನತ ಶಿಕ್ಷಣ ಅವಕಾಶಗಳ ಕುರಿತು ಅಧಿಕೃತ ಮಾಹಿತಿ ನೀಡುವ ‘ಎಜುಕೇಷನ್ ಯುಎಸ್‌ಎ’ ಸಂಸ್ಥೆಯು ಬೆಂಗಳೂರು ಸೇರಿದಂತೆ ದೇಶದ ಎಂಟು ನಗರಗಳಲ್ಲಿ 'ಯುಎಸ್‌ನಲ್ಲಿ ಅಧ್ಯಯನ' ಶಿಕ್ಷಣ ಮೇಳವನ್ನು ಆಯೋಜಿಸಿದೆ.

ಬೆಂಗಳೂರಿನ ಹೆಬ್ಬಾಳದಲ್ಲಿರುವ ಹೋಟೆಲ್ ಹಯಾಟ್ ಸೆಂಟ್ರಿಕ್‌ನಲ್ಲಿ ಆಗಸ್ಟ್ 10ರಂದು ಮಧ್ಯಾಹ್ನ 1ರಿಂದ ಸಂಜೆ 5ರವರೆಗೆ ಮೇಳ ನಡೆಯಲಿದೆ. ಈ ಮೇಳದಲ್ಲಿ ಮಾನ್ಯತೆ ಪಡೆದ 50ಕ್ಕೂ ಹೆಚ್ಚು ವಿಶ್ವವಿದ್ಯಾಲಯಗಳು ಭಾಗವಹಿಸಲಿದ್ದು, ಅಮೆರಿಕದ ಸಂಸ್ಥೆಗಳ ಅಧಿಕೃತ ಪ್ರತಿನಿಧಿಗಳನ್ನು ಭೇಟಿಯಾಗುವ ಅಪೂರ್ವ ಅವಕಾಶ ವಿದ್ಯಾರ್ಥಿಗಳು ಮತ್ತು ಪೋಷಕರಿಗೆ ದೊರೆಯಲಿದೆ.

ಮೇಳದಲ್ಲಿ ಭಾಗವಹಿಸಲು ಮುಕ್ತ ಅವಕಾಶವಿದ್ದು, ನೋಂದಣಿ ಕಡ್ಡಾಯ. ಆಸಕ್ತರು ವೆಬ್‌ಸೈಟ್‌ನಲ್ಲಿ (https://bit.ly/EdUSAFair25EMB) ನೋಂದಾಯಿಸಿಕೊಳ್ಳಬಹುದು.

ಅಮೆರಿಕದಲ್ಲಿ ಶಿಕ್ಷಣ ಪಡೆಯಲು ಬಯಸುವ ಪದವಿ, ಸ್ನಾತಕೋತ್ತರ ಅಥವಾ ಪಿಎಚ್.ಡಿ. ವಿದ್ಯಾರ್ಥಿಗಳಿಗೆ ನೇರ ಸಲಹೆ ಮತ್ತು ಮಾರ್ಗದರ್ಶನ ಪಡೆಯುವ ಅವಕಾಶವು ಮೇಳದಲ್ಲಿ ಲಭ್ಯವಾಗಲಿದೆ. ವಿಶ್ವವಿದ್ಯಾಲಯದ ಅಧಿಕಾರಿಗಳು, ಎಜುಕೇಶನ್ ಯುಎಸ್‌ಎ ಸಲಹೆಗಾರರು ಮತ್ತು ಅಮೆರಿಕ ರಾಯಭಾರ ಕಚೇರಿಯ ಪ್ರತಿನಿಧಿಗಳೊಂದಿಗೆ ನೇರವಾಗಿ ಸಂವಾದ ನಡೆಸುವ ಮೂಲಕ ವಿಶ್ವಾಸಾರ್ಹ ಮಾಹಿತಿಯನ್ನು ಪಡೆಯಬಹುದು.

ಶೈಕ್ಷಣಿಕ ಕಾರ್ಯಕ್ರಮಗಳು, ಅರ್ಜಿ ಸಲ್ಲಿಕೆ ಪ್ರಕ್ರಿಯೆಗಳು, ವಿದ್ಯಾರ್ಥಿ ವೇತನಗಳು, ಅರ್ಹತೆ ಹಾಗೂ ಅಮೆರಿಕದ ಕ್ಯಾಂಪಸ್ ಜೀವನ ಕುರಿತು ತಜ್ಞರ ನೇತೃತ್ವದಲ್ಲಿ ವಿಶೇಷ ಸಂವಾದಗಳು ನಡೆಯಲಿವೆ. ವಿಜ್ಞಾನ, ತಂತ್ರಜ್ಞಾನ, ಎಂಜಿನಿಯರಿಂಗ್, ಕಲೆ, ವ್ಯವಹಾರ ಸೇರಿದಂತೆ ವಿವಿಧ ಕ್ಷೇತ್ರಗಳನ್ನು ಒಳಗೊಂಡಿರುವ ಈ ಮೇಳವು, ಅಮೆರಿಕದಲ್ಲಿ ಉನ್ನತ ಶಿಕ್ಷಣ ಪಡೆಯಲು ಭಾರತೀಯ ವಿದ್ಯಾರ್ಥಿಗಳಿಗೆ ಅಗತ್ಯವಾದ ಮಾಹಿತಿ ನೀಡುವ ಉದ್ದೇಶವನ್ನು ಹೊಂದಿದೆ.

ಆಗಸ್ಟ್ 9 ರಂದು ಚೆನ್ನೈಯಲ್ಲಿ ಆರಂಭಗೊಳ್ಳಲಿರುವ ಮೇಳವು ಆಗಸ್ಟ್ 17ರಂದು ಪುಣೆಯಲ್ಲಿ ಕೊನೆಗೊಳ್ಳಲಿದೆ.

ಎಜುಕೇಷನ್ ಯುಎಸ್‌ಎ ಬಗ್ಗೆ ಹೆಚ್ಚಿನ ಮಾಹಿತಿಗಾಗಿ www.educationusa.inಗೆ ಭೇಟಿ ನೀಡಬಹುದು ಅಥವಾ india@educationusa.org ಮೂಲಕ ಸಂಪರ್ಕಿಸಬಹುದು.

ಸಂಕ್ಷಿಪ್ತ ಸುದ್ದಿ

ತೆರಿಗೆ ಪಾಲು: ರಾಜ್ಯಕ್ಕೆ ₹46,933 ಕೋಟಿ

ನವದೆಹಲಿ: 2024-25ನೇ ಹಣಕಾಸು ವರ್ಷದಲ್ಲಿ ಕೇಂದ್ರ ತೆರಿಗೆಗಳು ಮತ್ತು ಸುಂಕಗಳಲ್ಲಿ ಕರ್ನಾಟಕ ರಾಜ್ಯಕ್ಕೆ ₹46,933 ಕೋಟಿ ಬಿಡುಗಡೆ ಮಾಡಲಾಗಿದೆ ಎಂದು ಕೇಂದ್ರ ಹಣಕಾಸು ಖಾತೆ ರಾಜ್ಯ ಸಚಿವ ಪಂಕಜ್ ಚೌಧರಿ ತಿಳಿಸಿದ್ದಾರೆ.

ರಾಜ್ಯಸಭೆಯಲ್ಲಿ ಪ್ರಶ್ನೋತ್ತರ ಅವಧಿಯಲ್ಲಿ ಬಿಜೆಪಿ ಸದಸ್ಯ ಈರಣ್ಣ ಕಡಾಡಿ ಕೇಳಿರುವ ಪ್ರಶ್ನೆಗೆ ಲಿಖಿತ ಉತ್ತರ ನೀಡಿರುವ ಸಚಿವರು, 2022-23ರಲ್ಲಿ ₹34,596 ಕೋಟಿ ಹಾಗೂ 2023-24ರಲ್ಲಿ ₹41,193 ಕೋಟಿ ಬಿಡುಗಡೆಗೊಳಿಸಲಾಗಿತ್ತು ಎಂದು ಮಾಹಿತಿ ನೀಡಿದ್ದಾರೆ.

ಸ್ಥಳೀಯ ಸಂಸ್ಥೆಗಳು, ವಿಪತ್ತು ನಿರ್ವಹಣೆ ಹಾಗೂ ಆರೋಗ್ಯ ಕ್ಷೇತ್ರಕ್ಕೆ ಕಳೆದ ಮೂರು ವರ್ಷಗಳಲ್ಲಿ ಕ್ರಮವಾಗಿ ₹5426 ಕೋಟಿ, ₹3532 ಕೋಟಿ ಹಾಗೂ ₹6826 ಕೋಟಿ ಬಿಡುಗಡೆ ಮಾಡಲಾಗಿತ್ತು ಎಂದು ಅವರು ವಿವರ ನೀಡಿದ್ದಾರೆ.

ರಾಜ್ಯದಲ್ಲಿ 125 ಕೃಷಿ ಸಹಕಾರ ಸಂಘಗಳು ದಿವಾಳಿ: ಅಮಿತ್ ಶಾ

ನವದೆಹಲಿ (ಪಿಟಿಐ): ಕರ್ನಾಟಕದ 6,291 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಪೈಕಿ 125 ಸಂಘಗಳು ದಿವಾಳಿಯಾಗಿದ್ದು, ಅವುಗಳನ್ನು ಮುಚ್ಚುವ ಪ್ರಕ್ರಿಯೆ ನಡೆದಿದೆ ಎಂದು ಕೇಂದ್ರ ಸಹಕಾರ ಸಚಿವ ಅಮಿತ್ ಶಾ ಅವರು ಲೋಕಸಭೆಗೆ ಮಂಗಳವಾರ ತಿಳಿಸಿದ್ದಾರೆ.

ಮುಚ್ಚುವ ಪ್ರಕ್ರಿಯೆಯಲ್ಲಿ ಇರುವ 125 ಸಹಕಾರ ಸಂಘಗಳ ಪೈಕಿ 28 ಸಂಘಗಳು ಚಿಕ್ಕಬಳ್ಳಾಪುರದಲ್ಲಿ, 13 ಸಂಘಗಳು ಹಾಸನದಲ್ಲಿ, 12 ಸಂಘಗಳು ಬೆಳಗಾವಿಯಲ್ಲಿ ಇವೆ. ರಾಜ್ಯದ 6,291 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ಪೈಕಿ 64 ಸಂಘಗಳು ಈಗ ಕಾರ್ಯಾಚರಿಸುತ್ತಿಲ್ಲ ಎಂದು ಶಾ ಅವರು ಹೇಳಿದ್ದಾರೆ.

ಕಳೆದ ಐದು ವರ್ಷಗಳಲ್ಲಿ ರಾಜ್ಯದಲ್ಲಿ ಹೊಸದಾಗಿ 428 ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘಗಳ ನೋಂದಣಿ ಆಗಿದೆ. ಈ ಪೈಕಿ 187 ಸಂಘಗಳು ಬೆಳಗಾವಿಯಲ್ಲಿ ನೋಂದಣಿ ಆಗಿವೆ ಎಂದು ಅವರು ಲೋಕಸಭೆಗೆ ನೀಡಿರುವ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ.

ಬ್ರೆಜಿಲ್: ಮಾಜಿ ಅಧ್ಯಕ್ಷರಿಗೆ ಗೃಹಬಂಧನ ವಿಧಿಸಿದ ‘ಸುಪ್ರೀಂ’

ಸಾವೊ ಪಾಲೊ (ಎಪಿ): ಚುನಾವಣೆಯಲ್ಲಿ ಸೋತ ನಂತರ ಗಲಭೆ ಸೃಷ್ಟಿಸಿ, ಅಧಿಕಾರದಲ್ಲಿ ಮುಂದುವರಿಯಲು ಸಂಚು ರೂಪಿಸಿದ ಆರೋಪಕ್ಕೆ ಸಂಬಂಧಿಸಿದಂತೆ ವಿಚಾರಣೆ ಎದುರಿಸುತ್ತಿರುವ ಮಾಜಿ ಅಧ್ಯಕ್ಷ ಜೈರ್ ಬೊಲ್ಸನಾರೊ ಅವರಿಗೆ ಗೃಹಬಂಧನ ವಿಧಿಸುವಂತೆ ಬ್ರೆಜಿಲ್‌ನ ಸುಪ್ರೀಂ ಕೋರ್ಟ್ ಆದೇಶಿಸಿದೆ.

‘ತಮ್ಮ ಮೂವರು ಪುತ್ರರ ಸಾಮಾಜಿಕ ಮಾಧ್ಯಮ ಚಾನೆಲ್‌ಗಳಲ್ಲಿ ಚುನಾವಣೆಯ ಕುರಿತಂತೆ ಸಂದೇಶಗಳನ್ನು ಉಲ್ಲೇಖಿಸುವ ಮೂಲಕ ನ್ಯಾಯಾಂಗದ ಆದೇಶವನ್ನು ಬೊಲ್ಸನಾರೊ ಉಲ್ಲಂಘಿಸಿದ್ದಾರೆ’ ಎಂದು ನ್ಯಾಯಮೂರ್ತಿ ಅಲೆಕ್ಸಾಂಡ್ರೆ ಡಿ. ಮೊರೇಸ್ ಹೇಳಿದ್ದಾರೆ.

ಸುಪ್ರೀಂ ಕೋರ್ಟ್‌ನ ಆದೇಶವನ್ನು ಖಂಡಿಸಿ ಬ್ರೆಜಿಲ್‌ನ ವಿವಿಧೆಡೆ ಜೈರ್ ಬೊಲ್ಸನಾರೊ ಬೆಂಬಲಿಗರು ಪ್ರತಿಭಟನೆ ನಡೆಸಿದ್ದಾರೆ. ಬೊಲ್ಸನಾರೊ ಆಪ್ತ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಬ್ರೆಜಿಲ್ ಮೇಲೆ ಒತ್ತಡ ಸೃಷ್ಟಿಗೆ ಮುಂದಾದರು.

ಮಾಜಿ ದೇವದಾಸಿ ಪುತ್ರಿಯ ಸಾಗರೋಲ್ಲಂಘನೆ

ಒಂದನೇ ಪುಟದಿಂದ...

‘ಪದವಿಯವರೆಗೆ ಕನ್ನಡ ಮಾಧ್ಯಮದಲ್ಲೇ ಓದಿದೆ. ಹೊಸಪೇಟೆಯಲ್ಲಿ ದೇವದಾಸಿಯರ ಜೀವನಮಟ್ಟ ಸುಧಾರಿಸಲು ಶ್ರಮಿಸುತ್ತಿರುವ ಸಖಿ ಟ್ರಸ್ಟ್‌ನಲ್ಲಿ ಕೆಲಸ ಮಾಡಿದೆ. ಅದರ ಮುಖ್ಯಸ್ಥೆ ಭಾಗ್ಯಲಕ್ಷ್ಮಿ ಮತ್ತು ಸದಸ್ಯೆ ನಸ್ರೀನ್ ನೆರವಾದರು. ಮುಂಬೈಯ ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಸೋಷಿಯಲ್ ಸೈನ್ಸ್‌ನಿಂದ (ಟಿಸ್) ದೇವದಾಸಿಯರ ಕುರಿತು ಅಧ್ಯಯನಕ್ಕೆ ಸಖಿ ಟ್ರಸ್ಟ್‌ಗೆ ಬಂದ ಸಂಶೋಧನಾ ವಿದ್ಯಾರ್ಥಿನಿ ಅರುಣಾಚಲ ಪ್ರದೇಶದ ರಿಮಿ ತಾಡು ಅವರ ಪರಿಚಯವಾಯಿತು. ‘ಟಿಸ್’ನಲ್ಲಿ ಸ್ನಾತಕೋತ್ತರ ಪದವಿ ಪಡೆದೆ. ಸದ್ಯ ನವದೆಹಲಿಯಲ್ಲಿ ‘ಕ್ರಿಯೇಟ್‌ನಟ್’ ಎಂಬ ಸ್ವಯಂಸೇವಾ ಸಂಸ್ಥೆಯಲ್ಲಿ ಕೆಲಸ ಮಾಡುತ್ತಿದ್ದೇನೆ’ ಎಂದು ಕಾಮಾಕ್ಷಿ ಹೇಳಿದರು.

‘ದೇವದಾಸಿ ಕುಟುಂಬದ ಸಾವಿರಾರು ಮಕ್ಕಳು ‘ಅಪ್ಪ ಯಾರು’ ಎಂಬ ಕೊಂಕು ಮಾತಿನಿಂದ ನೋವು ಅನುಭವಿಸುತ್ತಾರೆ. ದೇವದಾಸಿಯರ ಮಕ್ಕಳು ಸ್ವತಃ ಉನ್ನತ ಶಿಕ್ಷಣ ಪಡೆದರೆ ತಮ್ಮ ಸಮುದಾಯದಲ್ಲಿನ ಸಮಸ್ಯೆಗಳನ್ನು ತೊಡೆದುಹಾಕಲು ಸಾಧ್ಯವಾಗಬಹುದು’ ಎಂದರು.

ಪ್ರಶ್ನೋತ್ತರ



ಪ್ರಮೋದ ಶ್ರೀಕಾಂತ ದೈತೋಟ
ತೆರಿಗೆ ಮತ್ತು ವೈಯಕ್ತಿಕ ಹಣಕಾಸು ತಜ್ಞ

ನಾಗೇಶ್ ಆಚಾರ್, ಬೆಂಗಳೂರು

• **ಪ್ರಶ್ನೆ: ನಾನು ಜೀವನಕ್ಕಾಗಿ ಕೇಟರಿಂಗ್ ಉದ್ಯೋಗ ಮಾಡುತ್ತಿದ್ದೇನೆ. ಆದಾಯ ಹಾಗೂ ವೆಚ್ಚವು ಬಹುತೇಕ ನಗದು ರೂಪದಲ್ಲೇ ಇರುತ್ತದೆ. ದೊಡ್ಡ ಸಂಸ್ಥೆಗಳಿಂದ ಬರುವ ಹಣ ಮಾತ್ರ ನೇರವಾಗಿ ಬ್ಯಾಂಕ್ ಖಾತೆಗೆ ಜಮಾ ಆಗುತ್ತದೆ. ಆಗ ಅವರು ಶೇ 1ರಷ್ಟು ತೆರಿಗೆ ಕಡಿತ ಮಾಡುತ್ತಾರೆ. ಇಂತಹ ಮೊತ್ತ ಒಂದು ವರ್ಷದಲ್ಲಿ ಸುಮಾರು ಹತ್ತು ಸಾವಿರ ಅಂದಾಜು ಆಗಿದೆ. ಕಳೆದ ವರ್ಷ ಈ ರೀತಿ ತೆರಿಗೆ ಕಡಿತ ಆದ ಮೊತ್ತ ಕೇವಲ ಒಂದೆರಡು ಸಾವಿರ ಮಾತ್ರ ಇತ್ತು.**

ನನ್ನ ಪ್ರಶ್ನೆ ಏನೆಂದರೆ, ನಾನು ನಗದು ರೂಪದಲ್ಲೇ ವ್ಯವಹಾರ ಮಾಡುತ್ತಿರುವ ಕಾರಣ, ಈ ತನಕ ಐ.ಟಿ ವಿವರ ಸಲ್ಲಿಸಿಲ್ಲ. ಕಳೆದ ವರ್ಷ ಸಣ್ಣ ಮೊತ್ತದ ಟಿಡಿಎಸ್ ಎಂಬ ಕಾರಣಕ್ಕಾಗಿ ಅದನ್ನು ಮರಳಿ ಪಡೆಯುವ ಅಥವಾ ವಿವರ ಸಲ್ಲಿಸುವ ಬಗ್ಗೆ ಯೋಚಿಸಲಿಲ್ಲ. ನನಗೆ ಈಗ ಮನೆ ನಿರ್ಮಾಣಕ್ಕೆ ಬ್ಯಾಂಕ್ ಸಾಲ ಬೇಕಾಗಿದೆ. ಯಾವ ಬ್ಯಾಂಕ್ ಸಂಪರ್ಕಿಸಿದರೂ, ಹಳೆಯ ಒಂದೆರಡು ವರ್ಷದ ಐ.ಟಿ ವಿವರ ಸಲ್ಲಿಕೆಯ ದಾಖಲೆ ಕೇಳುತ್ತಿದ್ದಾರೆ. ನನ್ನ ಪತ್ನಿ ಖಾಸಗಿ ಶಾಲೆಯೊಂದರಲ್ಲಿ ಕೆಲಸ ಮಾಡುತ್ತಿದ್ದಾಳೆ. ಆಕೆಯ ಹೆಸರಲ್ಲಿ ತೆರಿಗೆ ಹಾಗೂ ಐ.ಟಿ ವಿವರ ಸಲ್ಲಿಸಲಾಗಿದೆ. ಆದರೆ ನಿವೇಶನ ನನ್ನ ಹೆಸರಲ್ಲಿದೆ. ಈ ಸಂದರ್ಭದಲ್ಲಿ ನಾವು ಹಳೆಯ ವಿವರ ಸಲ್ಲಿಸಲು ಅವಕಾಶ ಇದೆಯೇ? ಇಲ್ಲದಿದ್ದಲ್ಲಿ, ಮುಂದೆ ಈ ವರ್ಷಕ್ಕೆ ಸಂಬಂಧಿಸಿ ಏನು ಮಾಡಬಹುದು?

ಉತ್ತರ: ಆದಾಯ ತೆರಿಗೆಯ ವಿಚಾರ ಬಂದಾಗ ಕೆಲವರು ಯೋಜನೆ ಹಾಗೂ ಯೋಚನೆ ಮಾಡದೆ ತೆರಿಗೆ ಕೊಡ ಬೇಕಾಗಬಹುದು ಎಂಬ ಭಾವನೆಯಿಂದ ಅಥವಾ ಅನಗತ್ಯ ಸಮಾಲೋಚನಾ ವೆಚ್ಚ ಮಾಡುವುದು ನಿಷ್ಪ್ರಯೋಜಕ ಎನ್ನುವ ಭಾವನೆಯಿಂದ ತೆರಿಗೆಗೊಳಪಡುವ ಆದಾಯ ಮೀರಿದಾಗಲೂ ವಿವರ ಸಲ್ಲಿಸುವುದಿಲ್ಲ. ನಗದು ವ್ಯವಹಾರ ಇದ್ದಾಗ ಈ ರೀತಿಯ ಅವಗಣನೆ ಇನ್ನೂ ಹೆಚ್ಚು. ಹೆಚ್ಚಿನ ಸಂದರ್ಭಗಳಲ್ಲಿ ಇಂತಹ ವಿಚಾರ ಗಮನಕ್ಕೆ ಬರುವುದು, ಆದಾಯ ತೆರಿಗೆ ನೋಟಿಸ್ ಬಂದಾಗ ಅಥವಾ ಬ್ಯಾಂಕ್ ಸಾಲಕ್ಕಾಗಿ ಮೊರೆಹೊಕ್ಕಾಗ ಮಾತ್ರ. ನಿಮ್ಮ ವಿಚಾರದಲ್ಲಿ ಈ ಕೆಳಗಿನ ವಿಚಾರವನ್ನು ಗಮನಿಸಿ ಮುಂದಿನ ನಿರ್ಣಯ ಕೈಗೊಳ್ಳಬಹುದು.

1. ಕಳೆದ ಆರ್ಥಿಕ ವರ್ಷಕ್ಕೆ (2023-24) ಸಂಬಂಧಿಸಿ ತಡವಾಗಿಯಾದರೂ ತೆರಿಗೆ ವಿವರ ಸಲ್ಲಿಸಲು ಇದ್ದ ಅವಕಾಶ 2024ರ ಡಿಸೆಂಬರ್ 31ಕ್ಕೆ ಮುಗಿದಿದೆ. ಹೀಗಾಗಿ, ಆ ಸಂಬಂಧಿತ ವಿಚಾರ ಪ್ರಸ್ತುತವಲ್ಲ. ಒಂದುವೇಳೆ ತೆರಿಗೆ ಅನ್ವಯಿಸುವ ಹಾಗೂ ಪಾವತಿಗೆ ಬರುವ ಆದಾಯವಿದ್ದು, ನಿಜವಾಗಿ ಆದಾಯ ಘೋಷಣೆ ಆಗದಿದ್ದರೆ, ಪ್ರತ್ಯೇಕವಾಗಿ ಐಟಿಆರ್-ಯು ನಮೂನೆ ಬಳಸಿ ಹೆಚ್ಚುವರಿ ದಂಡದೊಡನೆ ಈಗಲೂ ವಿವರ ಸಲ್ಲಿಸಬಹುದು. ನೀವು ಈಗಾಗಲೇ ನಗದು ಆಧಾರಿತ ವ್ಯವಹಾರ ನಡೆಸುತ್ತಿರುವುದರಿಂದ ಈವರೆಗೆ ಆದಾಯ ತೆರಿಗೆ ವಿವರ ಸಲ್ಲಿಸದಿರುವುದು ಉದ್ದೇಶ ಪೂರ್ವಕ ಅಲ್ಲದಿದ್ದರೂ, ₹2.50 ಲಕ್ಷಕ್ಕಿಂತ ಅಧಿಕ ಆದಾಯ ಇದ್ದಾಗ, ವಿವರ ಸಲ್ಲಿಸಬೇಕಾದುದು ಅನಿವಾರ್ಯ. ನೀವು ವ್ಯವಹಾರ ನಡೆಸುತ್ತಿರುವ ಕಾರಣ ಬರುವ ಆದಾಯ, ನಗದು ಅಥವಾ ಎಲೆಕ್ಟ್ರಾನಿಕ್ ಪಾವತಿಯ ಮೂಲಕ ಎನ್ನುವುದು ಮೊದಲ ಹಂತದಲ್ಲಿ ಪ್ರಸ್ತುತವಲ್ಲ. ಆದರೆ, ನಿಮ್ಮಂತಹ ಸಣ್ಣ ಉದ್ಯಮದವರು ವಾರ್ಷಿಕವಾಗಿ ₹2 ಕೋಟಿಗೂ ಮೀರದ ವ್ಯವಹಾರ ಮಾಡುತ್ತಿದ್ದಾಗ ಹಾಗೂ ಅದರಲ್ಲಿ ಹೆಚ್ಚಿನ ಮೊತ್ತದ ವಹಿವಾಟು ನಗದು ರೂಪದಲ್ಲೇ ಇದ್ದಾಗ, ನಗದು ವಹಿವಾಟಿನ ಮೇಲೆ ಶೇ 8ರಷ್ಟನ್ನು ಹಾಗೂ ಎಲೆಕ್ಟ್ರಾನಿಕ್ ಪಾವತಿಯ ಮೂಲಕ ನಡೆಯುವ ವಹಿವಾಟಿನ ಶೇ 6ರಷ್ಟನ್ನು ಆದಾಯ ಎಂದು ಪರಿಗಣಿಸುವ ಅವಕಾಶ ಸೆಕ್ಷನ್ 44ಎಡಿ ಅಡಿ ಇದೆ. ಇಲ್ಲಿ ಪೂರ್ಣಪ್ರಮಾಣದ ಲೆಕ್ಕಪತ್ರ ನಿರ್ವಹಣೆಯಿಂದ ಸಂಪೂರ್ಣ ವಿನಾಯಿತಿ ಇದೆ. ಈ ಬಗೆಗಿನ ಇನ್ನಷ್ಟು ವಿಚಾರವನ್ನು ನಿಮ್ಮ ತೆರಿಗೆ ಸಲಹೆಗಾರರನ್ನು ಸಂಪರ್ಕಿಸಿ ತಿಳಿದುಕೊಳ್ಳಿ.

2. ನೀವು ಸಾಲ ಪಡೆಯಲು ಇರುವ ಸಾಧ್ಯತೆಯ ಕುರಿತು ಹೇಳುವುದಾದರೆ, ಇಂದು ಬಹುತೇಕ ಬ್ಯಾಂಕ್‌ಗಳು ಗೃಹ ನಿರ್ಮಾಣ ಸಾಲವನ್ನು ಜಂಟಿ ಹೆಸರಲ್ಲಿ ನೀಡುತ್ತವೆ. ನಿಮ್ಮ ಪತ್ನಿ ಈಗಾಗಲೇ ವಿವರ ಸಲ್ಲಿಸುತ್ತಿರುವ ಕಾರಣ ಅವರ ಹೆಸರನ್ನೂ ಸೇರಿಸಿ ಸಾಲ ಪಡೆಯುವ ಅವಕಾಶ ಇದೆ. ಈ ಬಗ್ಗೆ ಬ್ಯಾಂಕುಗಳಲ್ಲಿ ವಿಚಾರಿಸಿ. ಮಾತ್ರವಲ್ಲ, ಆರ್ಥಿಕ ವರ್ಷ 2024-25ಕ್ಕೆ ಸಂಬಂಧಿಸಿ, ಸೆಪ್ಟೆಂಬರ್ ತಿಂಗಳ 15ರೊಳಗೆ ನಿಮ್ಮ ಐ.ಟಿ. ವಿವರ ಸಲ್ಲಿಸಿ ಬ್ಯಾಂಕಿಗೆ ಅಗತ್ಯವಿರುವ ಇತ್ತೀಚಿನ ವಿವರ ಒದಗಿಸಿ ಸಾಲ ಪಡೆಯುವ ಅವಕಾಶ ಇನ್ನೂ ಇದೆ.

ರೂಪಾ, ಕೊಪ್ಪಳ

• **ಪ್ರಶ್ನೆ: ನಾನು ಪ್ರೌಢಶಾಲಾ ಶಿಕ್ಷಕಿ, ವಯಸ್ಸು 45 ವರ್ಷ. ನನ್ನ ಪತಿ ಖಾಸಗಿ ವಕೀಲರಾಗಿದ್ದಾರೆ. ನನಗೆ ಪ್ರಥಮ ಪಿಯುಸಿ ಓದುವ ಮಗಳು ಹಾಗೂ 9ನೇ ತರಗತಿ ಓದುವ ಮಗನಿದ್ದಾನೆ. ನನ್ನ ಮೂಲವೇತನ ₹ 85,600, ತುಟ್ಟಿಭತ್ಯೆ ₹10,486, ಎಚ್‌ಆರ್‌ಎ ₹6,420, ವೈದ್ಯಕೀಯ ಭತ್ಯೆ ₹500. ನನ್ನ ವೇತನದಿಂದ ಕಡಿತವಾಗುವ ಮೊತ್ತ: ಕೆಜಿಐಡಿ ₹17,000 ಎನ್‌ಪಿಎಸ್ ₹9,606 ಹಾಗೂ ಸುಕನ್ಯಾ ಸಮೃದ್ಧಿ ಖಾತೆಗೆ ₹2,000. ಮನೆ ನಿರ್ಮಾಣಕ್ಕಾಗಿ ಒಂದು ನಿವೇಶನ ಕೊಂಡಿದ್ದೇವೆ. ಮನೆ ಹಾಗೂ ಮಕ್ಕಳ ವಿದ್ಯಾಭ್ಯಾಸಕ್ಕೆ ಹೇಗೆ ಹಣ ಹೊಂದಿಸಬೇಕು? ಯಾವ ರೀತಿ ಆರ್ಥಿಕ ಶಿಸ್ತು ಪಾಲಿಸಬೇಕು? ಕಡಿಮೆ ಪ್ರಮಾಣದಲ್ಲಿ ಗೃಹ ಸಾಲವನ್ನು ತೆಗೆದುಕೊಂಡು ಸ್ವಂತ ಹಣದಿಂದ ಮನೆ ನಿರ್ಮಾಣಕ್ಕಾಗಿ ಹೇಗೆ ಹಣ ಹೊಂದಿಸಬೇಕೆಂದು ತಿಳಿಸಿ.**

ಉತ್ತರ: ನೀವು ಪ್ರೌಢಶಾಲಾ ಶಿಕ್ಷಕಿಯಾಗಿ ಕೆಲಸ ನಿರ್ವಹಿಸುತ್ತಿದ್ದು ನಿಮ್ಮ ಪತಿ ಕೂಡ ಆದಾಯ ಗಳಿಸುತ್ತಿದ್ದಾರೆ. ನಿಮ್ಮ ಜಂಟಿ ಆದಾಯದಲ್ಲಿ ನಿಮ್ಮ ಮಾಸಿಕ ಅಗತ್ಯಕ್ಕೆ ತಗಲುವ ವೆಚ್ಚ, ಮಕ್ಕಳ ಶಿಕ್ಷಣ, ವೈದ್ಯಕೀಯ, ಈಗಾಗಲೇ ಆರಂಭಿಸಿರುವ ಹೂಡಿಕೆ, ಮನರಂಜನೆ, ಪ್ರವಾಸ ಹಾಗೂ ಇತರ ಆರ್ಥಿಕ ಪಾವತಿಗಳನ್ನು ಅಂದಾಜಿಸಿ ತಿಂಗಳಲ್ಲಿ ಉಳಿಯುವ ಒಟ್ಟಾರೆ ಮೊತ್ತ ಏನೆಂಬುದನ್ನು ಗೊತ್ತು ಮಾಡಿ. ಇದು ನಿಮ್ಮ ಬಜೆಟ್ ಎಂದೇ ಭಾವಿಸಿ, ಯಾವುದೇ ಅಂಶವನ್ನು ಬಿಡದೆ ಪರಿಗಣಿಸಿ. ತಮ್ಮ ಬಜೆಟ್ ಅನ್ನು ತಮಗಿಂತ ಇತರರು ಸಮರ್ಥವಾಗಿ ಮಾಡಲು ಸಾಧ್ಯವಿಲ್ಲ. ಕಾರಣ ಪ್ರತಿಯೊಬ್ಬರ ಮಾಹಿತಿ-ಅಗತ್ಯ ವೈಯಕ್ತಿಕವಾದುದು. ಆದರೆ ಈ ಮೇಲಿನ ಅಂಶಗಳನ್ನು ಪರಿಗಣಿಸಿ ನಿಮ್ಮ ಉದ್ದೇಶ ಸಾಧನೆ ಆಗುವವರೆಗೆ ಬಜೆಟ್‌ಗೆ ಸೀಮಿತವಾಗಿ ಬದುಕು ಸಾಗಿಸುವ ಸಂಯಮ ಬೆಳೆಸಿಕೊಳ್ಳಿ. ಪ್ರತಿ ತಿಂಗಳೂ ಹೂಡಿಕೆ-ಖರ್ಚಿನ ಮೊತ್ತವನ್ನು ಮೊಬೈಲ್ ಆ್ಯಪ್ ಅಥವಾ ಕಂಪ್ಯೂಟರ್ ಮುಖಾಂತರವೂ ದಾಖಲಿಸಿ ಇಟ್ಟು, ಖರ್ಚುಗಳನ್ನು ನಿಯಂತ್ರಣದಲ್ಲಿ ಇಡಬಹುದು. ಉಳಿಕೆಯಾಗುವ ಮೊತ್ತವನ್ನು ನಿಮ್ಮ ಆದ್ಯತೆ ಹಾಗೂ ಆರ್ಥಿಕ ಅಪಾಯದ ಅರಿವಿನ ಆಧಾರದ ಮೇಲೆ ವಿವಿಧ ಹೂಡಿಕೆಗಳಲ್ಲಿ ತೊಡಗಿಸಬಹುದು. ಈ ಬಗ್ಗೆ ನಿಮ್ಮದೇ ಯೋಜನೆ ರೂಪಿಸಿ.

ಹಣಕಾಸಿಗೆ ಸಂಬಂಧಿಸಿದ ಪ್ರಶ್ನೆಗಳನ್ನು ಪತ್ರದಲ್ಲಿ (ದೂರವಾಣಿ ಸಂಖ್ಯೆ ಸಹಿತ) ಬರೆದು ಕಳುಹಿಸಿ.
ವಿಳಾಸ: ಪ್ರಶ್ನೋತ್ತರ, ವಾಣಿಜ್ಯ ವಿಭಾಗ, ಪ್ರಜಾವಾಣಿ, ನಂ.75, ಮಹಾತ್ಮ ಗಾಂಧಿ ರಸ್ತೆ, ಬೆಂಗಳೂರು-560001.
ಇ-ಮೇಲ್: businessdesk@prajavani.co.in

ಸೇವಾ ವಲಯ ಬೆಳವಣಿಗೆ 11 ತಿಂಗಳ ಗರಿಷ್ಠ

ನವದೆಹಲಿ (ಪಿಟಿಐ): ದೇಶದ ಸೇವಾ ವಲಯದ ಚಟುವಟಿಕೆಗಳು ಜುಲೈನಲ್ಲಿ 11 ತಿಂಗಳ ಗರಿಷ್ಠ ಮಟ್ಟವನ್ನು ತಲುಪಿವೆ. ರಫ್ತು ಕಾರ್ಯಾದೇಶಗಳು ಹೆಚ್ಚಳ ಕಂಡಿದ್ದು, ಒಟ್ಟು ಮಾರಾಟದಲ್ಲಿ ತೀವ್ರ ಪ್ರಮಾಣದ ಏರಿಕೆ ಆಗಿದ್ದುದು ಇದಕ್ಕೆ ಕಾರಣ.

ಎಚ್‌ಎಸ್‌ಬಿಸಿ ಇಂಡಿಯಾ ಸರ್ವಿಸಸ್ ಪಿಎಂಐ ಬ್ಯುಸಿನೆಸ್ ಆ್ಯಕ್ಟಿವಿಟಿ ಸೂಚ್ಯಂಕವು ಜುಲೈನಲ್ಲಿ 60.5ಕ್ಕೆ ತಲುಪಿದೆ. ಇದು ಜೂನ್‌ನಲ್ಲಿ 60.4ರಲ್ಲಿ ಇತ್ತು. ಸೂಚ್ಯಂಕವು 50ಕ್ಕಿಂತ ಹೆಚ್ಚಿನ ಮಟ್ಟದಲ್ಲಿ ಇದ್ದರೆ ಅದನ್ನು ಬೆಳವಣಿಗೆ ಎಂದು ಗುರುತಿಸಲಾಗುತ್ತದೆ. 50ಕ್ಕಿಂತ ಕಡಿಮೆ ಇದ್ದರೆ ಚಟುವಟಿಕೆಗಳು ಕುಗ್ಗಿವೆ ಎಂದು ಅರ್ಥೈಸಲಾಗುತ್ತದೆ.

‘ಸೂಚ್ಯಂಕವು ಜುಲೈನಲ್ಲಿ 60.5ರಲ್ಲಿ ಇರುವುದು ಬೆಳವಣಿಗೆಯನ್ನು ಹೇಳುತ್ತಿದೆ’ ಎಂದು ಎಚ್‌ಎಸ್‌ಬಿಸಿ ಸಂಸ್ಥೆಯ ಮುಖ್ಯ ಅರ್ಥಶಾಸ್ತ್ರಜ್ಞರಾದ ಪ್ರಾಂಜುಲ್ ಭಂಡಾರಿ ತಿಳಿಸಿದ್ದಾರೆ.

ಜುಲೈನಲ್ಲಿ ಚಟುವಟಿಕೆಗಳು ಚುರುಕಾಗಿದ್ದರೂ, ಕಂಪನಿಗಳ ಸಾಮರ್ಥ್ಯದ ಮೇಲೆ ಹೆಚ್ಚಿನ ಒತ್ತಡ ಸೃಷ್ಟಿಯಾಗಿದ್ದರೂ, ನೌಕರರನ್ನು ನೇಮಕ ಮಾಡಿಕೊಳ್ಳುವ ಪ್ರಮಾಣವು ಅಷ್ಟೇನೂ ತೀವ್ರ ಆಗಿರಲಿಲ್ಲ. ಜುಲೈನಲ್ಲಿ ಉದ್ಯೋಗ ಸೃಷ್ಟಿಯಲ್ಲಿ ಆಗಿರುವ ಏರಿಕೆಯು 15 ತಿಂಗಳ ಕನಿಷ್ಠ ಪ್ರಮಾಣದ ಏರಿಕೆಯಾಗಿದೆ. ‘ಕಡಿಮೆ ಪ್ರಮಾಣದಲ್ಲಿ ಉದ್ಯೋಗ ಸೃಷ್ಟಿ ಆಗಿದೆ. ಶೇ 2ಕ್ಕಿಂತ ಕಡಿಮೆ ಕಂಪನಿಗಳು ಹೆಚ್ಚಿನ ಸಿಬ್ಬಂದಿಯನ್ನು ನೇಮಕ ಮಾಡಿಕೊಂಡಿವೆ’ ಎಂದು ಎಚ್‌ಎಸ್‌ಬಿಸಿ ಸಮೀಕ್ಷೆ ಹೇಳಿದೆ.

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4	₹200
ಆರ್‌ಎಸ್‌ಎಸ್-5	₹194
ಗುಡ್ ಲಾಟ್	₹178

ಮುಂಬೈ ಧಾರಣೆ (ಶೇಂಗಾ)
05-08-2025

ಜಾವಾ 70/80(ಹೊಸ)	10600-10700
ಜಾವಾ 80/90(ಹೊಸ)	9900-10000
ದಪ್ಪ ಮಧ್ಯಪ್ರದೇಶ (ಹೊಸ)	7300-7400
ದಪ್ಪ ಗುಜರಾತ್ (ಹೊಸ)	8300-8400
ಶೇಂಗಾ ಎಣ್ಣೆ (10 ಕೆಜಿಗೆ)	
ಕಚ್ಚಾ (ತೆರಿಗೆ ಬಿಟ್ಟು)	1365 (1380)
ಒಂದು ವಾರದ ಡೆಲಿವರಿ	1360 (1375)
ಪಾಮ್ ವಾರದ ಡೆಲಿವರಿ	1208 (1198)
ಸೂರ್ಯಕಾಂತಿ ಎಣ್ಣೆ ಕಚ್ಚಾ	1290 (1250)
ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)	
ಅಪರಂಜಿ ಚಿನ್ನ 10 ಗ್ರಾಂ	1,00,200 (99,900)
ಬೆಳ್ಳಿ ಕೆ.ಜಿಗೆ	1,12,700 (1,11,900)

ಆವರಣದಲ್ಲಿ ಹಿಂದಿನ ವಹಿವಾಟಿನ ಧಾರಣೆ

ಕೇಂದ್ರ–ರಾಜ್ಯ ಸಂಘರ್ಷ

ಒಂದನೇ ಪುಟದಿಂದ....


ಕೇಂದ್ರದಿಂದ ₹2,056.60 ಕೋಟಿ ಅನುದಾನ ಬಿಡುಗಡೆಯಾಗಿದ್ದರೆ, ಉಳಿದ ₹5,183.19 ಕೋಟಿ ಹಣವನ್ನು ರಾಜ್ಯ ಸರ್ಕಾರವೇ ಭರಿಸಿದೆ. ಯೋಜನೆಯ ನಿಯಮದ ಪ್ರಕಾರ, ಕೇಂದ್ರ ಸರ್ಕಾರ ಶೇ 60ರಷ್ಟು ಹಾಗೂ ರಾಜ್ಯ ಸರ್ಕಾರ ಶೇ 40ರಷ್ಟು ಅನುದಾನ ಒದಗಿಸಬೇಕು. ಕೇಂದ್ರದಿಂದ ಹೆಚ್ಚಿನ ಅನುದಾನದ ನಿರೀಕ್ಷೆಯಲ್ಲಿರುವ ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ, ಯೋಜನೆಯ ಪರಿಣಾಮಕಾರಿ ಜಾರಿಗೆ 60ರಷ್ಟು ಅನುದಾನ ಒದಗಿಸುವಂತೆ ಕೇಂದ್ರ ಆರೋಗ್ಯ ಸಚಿವಾಲಯಕ್ಕೆ ಮನವಿ ಮಾಡಿದೆ.

ಆಯುಷ್ಮಾನ್ ಮಿಷನ್ ಅಡಿ 2018ರಲ್ಲಿ ಪ್ರಾರಂಭವಾಗಿರುವ ಈ ಯೋಜನೆಯನ್ನು, ರಾಜ್ಯದಲ್ಲಿ ‘ಆಯುಷ್ಮಾನ್ ಭಾರತ್–ಆರೋಗ್ಯ ಕರ್ನಾಟಕ’ ಹೆಸರಿನಲ್ಲಿ ಅನುಷ್ಠಾನ ಮಾಡಲಾಗಿದೆ. ಯೋಜನೆಯಡಿ ಬಿಪಿಎಲ್ ಕುಟುಂಬದವರಿಗೆ ವರ್ಷಕ್ಕೆ ₹5 ಲಕ್ಷದವರೆಗೆ ಆರೋಗ್ಯ ವಿಮೆಗೆ ಅವಕಾಶವಿದೆ. ರಾಜ್ಯದಲ್ಲಿ 62.09 ಲಕ್ಷ ಕುಟುಂಬಗಳು ‘ಆಯುಷ್ಮಾನ್ ಭಾರತ್’ ಯೋಜನೆ ವ್ಯಾಪ್ತಿಗೆ ಬರಲಿವೆ. ಉಳಿದ ಕುಟುಂಬಗಳನ್ನು ‘ಆರೋಗ್ಯ ಕರ್ನಾಟಕ’ ಯೋಜನೆಯಡಿ ಸೇರ್ಪಡೆ ಮಾಡಲಾಗಿದೆ. ಎಪಿಎಲ್ ಕುಟುಂಬದ ಸದಸ್ಯರಿಗೆ ಗರಿಷ್ಠ ₹1.50 ಲಕ್ಷ ಚಿಕಿತ್ಸಾ ವೆಚ್ಚ ನಿಗದಿ ಮಾಡಿದ್ದು, ಶೇ 30ರಷ್ಟು ಹಣವನ್ನು ಪಾವತಿಸಲಾಗುತ್ತದೆ.

ಪರಿಷ್ಕರಣೆಯಾಗದ ಪ್ಯಾಕೇಜ್: ಯೋಜನೆಯಡಿ ಚಿಕಿತ್ಸಾ ಪ್ಯಾಕೇಜ್‌ಗಳ ದರ ಕಡಿಮೆ ಎಂಬ ಕಾರಣಕ್ಕೆ ಕೆಲವು ಖಾಸಗಿ ಆಸ್ಪತ್ರೆಗಳು ನೋಂದಣಿಗೆ ಅಷ್ಟಾಗಿ ಆಸಕ್ತಿ ತೋರುತ್ತಿಲ್ಲ. ಖಾಸಗಿ ಆಸ್ಪತ್ರೆಗಳ ಸಂಘಟನೆಯು ದರ ಪರಿಷ್ಕರಿಸುವಂತೆ ರಾಜ್ಯ ಸರ್ಕಾರವನ್ನು ಆಗ್ರಹಿಸುತ್ತಲೇ ಬಂದಿದೆ. ಸದ್ಯದ ಪರಿಸ್ಥಿತಿಯಲ್ಲಿ ದರ ಪರಿಷ್ಕರಿಸಿದರೆ ಯೋಜನೆಯಡಿ ಶೇ 90ರಷ್ಟು ಅನುದಾನವನ್ನು ರಾಜ್ಯ ಸರ್ಕಾರವೇ ಭರಿಸಬೇಕಾಗುತ್ತದೆ. ಆದ್ದರಿಂದ ದರ ಪರಿಷ್ಕರಣೆ ಪ್ರಸ್ತಾವ ಸಾಕಾರಗೊಂಡಿಲ್ಲ. ಈ ಅನುದಾನದ ಸಂಘರ್ಷದಿಂದಲೇ 70 ವರ್ಷ ಮೇಲ್ಪಟ್ಟವರಿಗೆ ಆರೋಗ್ಯ ವಿಮೆ ಒದಗಿಸುವ, ‘ಆಯುಷ್ಮಾನ್ ವಯೋ ವಂದನಾ’ ಯೋಜನೆಯೂ ರಾಜ್ಯದಲ್ಲಿ ಜಾರಿಯಾಗಿಲ್ಲ.

‘ಯೋಜನೆಯಡಿ ಚಿಕಿತ್ಸಾ ಪ್ಯಾಕೇಜ್ ದರ ಪರಿಷ್ಕರಣೆ ಮಾಡುವ ಪ್ರಸ್ತಾವ ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿ ಇದೆ. ದರ ಪರಿಷ್ಕರಿಸಿದರೆ ಹೆಚ್ಚಿನ ಅನುದಾನವನ್ನು ರಾಜ್ಯವೇ ಭರಿಸಬೇಕಾಗುತ್ತದೆ. ಆರ್ಥಿಕ ಇಲಾಖೆ ಅನುಮೋದನೆ ನೀಡಿದಲ್ಲಿ ಪರಿಷ್ಕರಣೆಯಾಗಲಿದೆ’ ಎಂದು ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್‌ನ ಅಧಿಕಾರಿಯೊಬ್ಬರು ‘ಪ್ರಜಾವಾಣಿ’ಗೆ ತಿಳಿಸಿದರು.

ವರ್ಷವಾರು ಅನುದಾನ ಬಿಡುಗಡೆ
(₹ ಕೋಟಿಗಳಲ್ಲಿ)



ಕೋಟಿ ದಾಟಿದ ಪ್ರಕರಣ

ಒಂದನೇ ಪುಟದಿಂದ....

ಯೋಜನೆಯಡಿ ಸರ್ಕಾರಿ ಆಸ್ಪತ್ರೆಗಳಿಗೂ ಚಿಕಿತ್ಸೆಗೆ ಅನುಸಾರ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಹಣ ಬಿಡುಗಡೆ ಮಾಡುತ್ತಿದೆ. ಈ ಹಣವನ್ನು ಆಸ್ಪತ್ರೆಗಳ ಅಭಿವೃದ್ಧಿ ಹಾಗೂ ವೈದ್ಯರು, ವೈದ್ಯಕೀಯ ಸಿಬ್ಬಂದಿಗೆ ಪ್ರೋತ್ಸಾಹ ಧನ ಒದಗಿಸಲು ಬಳಸಿಕೊಳ್ಳಲಾಗುತ್ತಿದೆ. ಇದರಿಂದಾಗಿ ಸರ್ಕಾರಿ ಆಸ್ಪತ್ರೆಗಳಲ್ಲಿ ಯೋಜನೆಯಡಿ ವಿವಿಧ ಚಿಕಿತ್ಸೆ ಹಾಗೂ ಶಸ್ತ್ರಚಿಕಿತ್ಸೆಗೆ ಆದ್ಯತೆ ನೀಡಲಾಗುತ್ತಿದೆ.

ಉಪ್ಪಿ ಚಿತ್ರಕ್ಕೆ ಆರಾಧನಾ ನಾಯಕಿ

• ಅಭಿಲಾಷ್ ಪಿ.ಎಸ್.

ಅರವಿಂದ್ ಕೌಶಿಕ್ ನಿರ್ದೇಶನದ, ತರುಣ್ ಶಿವಪ್ಪ ನಿರ್ಮಾಣ ಮಾಡುತ್ತಿರುವ 'ನೆಕ್ಸ್ಟ್ ಲೆವೆಲ್' ಸಿನಿಮಾ ಇತ್ತೀಚೆಗಷ್ಟೇ ಘೋಷಣೆಯಾಗಿತ್ತು. ಉಪೇಂದ್ರ ನಾಯಕರಾಗಿ ನಟಿಸುತ್ತಿರುವ ಈ ಸಿನಿಮಾದಲ್ಲಿ ನಾಯಕಿಯಾಗಿ ನಟಿ ಮಾಲಾಶ್ರೀ ಪುತ್ರಿ 'ಕಾಟೇರ' ಖ್ಯಾತಿಯ ಆರಾಧನಾ ನಟಿಸಲಿದ್ದಾರೆ.

ಸದ್ಯ 'ಕೂಲಿ', '45', 'ಬುದ್ಧಿವಂತ–2' ಹಾಗೂ 'ಭಾರ್ಗವ' ಸಿನಿಮಾಗಳ ಬಿಡುಗಡೆಗೆ ಎದುರುನೋಡುತ್ತಿರುವ ಉಪೇಂದ್ರ ನವೆಂಬರ್‌ನಲ್ಲಿ 'ನೆಕ್ಸ್ಟ್ ಲೆವೆಲ್'ಗೆ ಇಳಿಯಲಿದ್ದಾರೆ. 'ನಮ್ ಏರಿಯಾಲ್ ಒಂದಿನ', 'ಅರ್ದಂಬರ್ಧ ಪ್ರೇಮಕಥೆ' ನಿರ್ದೇಶಿಸಿದ್ದ ಅರವಿಂದ್ ಕೌಶಿಕ್ ಈ ಸಿನಿಮಾ ಮೂಲಕ ಪ್ಯಾನ್ ಇಂಡಿಯಾ ಲೋಕಕ್ಕೆ ಹೆಜ್ಜೆ ಇಡಲಿದ್ದಾರೆ.

ವಿಎಫ್‌ಎಕ್ಸ್ ಕೆಲಸ ಆರಂಭ

ಸಿನಿಮಾ ಚಿತ್ರೀಕರಣ ಆದ ಬಳಿಕ ಗ್ರಾಫಿಕ್ಸ್ ಕೆಲಸಗಳನ್ನು ಚಿತ್ರತಂಡಗಳು ಆರಂಭಿಸುವುದು ಸಾಮಾನ್ಯ. ಆದರೆ 'ನೆಕ್ಸ್ಟ್ ಲೆವೆಲ್' ತಂಡ ಪ್ರಿಪ್ರೊಡಕ್ಷನ್‌ನಲ್ಲೇ ವಿಎಫ್‌ಎಕ್ಸ್ ಕೆಲಸ ಆರಂಭಿಸಿದೆ. ಈ ಬಗ್ಗೆ ಮಾಹಿತಿ ನೀಡಿದ ನಿರ್ಮಾಪಕ ತರುಣ್ ಶಿವಪ್ಪ, 'ಚಿತ್ರದಲ್ಲಿ ವಿಎಫ್‌ಎಕ್ಸ್ ಹೆಚ್ಚು ಇದೆ. ಇದನ್ನು ಸಿದ್ಧಪಡಿಸಿಕೊಂಡೇ ಚಿತ್ರೀಕರಣಕ್ಕೆ ಇಳಿಯುವ ಯೋಜನೆ ನಮ್ಮದು. ಇದಕ್ಕಾಗಿ ಪ್ರಿಪ್ರೊಡಕ್ಷನ್‌ನಲ್ಲೇ ಪಕ್ವವಾಗುತ್ತಿದ್ದೇವೆ. ಗ್ರಾಫಿಕ್ಸ್‌ಗಳು ಎಲ್ಲೆಲ್ಲಿ, ಎಷ್ಟು ಹೊತ್ತು ಬೇಕು? ಏನಿರಬೇಕು ಎನ್ನುವುದನ್ನು ಚಿತ್ರಕಥೆ ಸಮಯದಲ್ಲೇ ಅಂತಿಮಗೊಳಿಸಿದ್ದೇವೆ. ನಿರ್ದೇಶಕರಿಗೆ ಈ ಕುರಿತು ಬಹಳ ಸ್ಪಷ್ಟತೆ ಇದೆ. ಚಿತ್ರೀಕರಣ ಆದ ನಂತರ ಗ್ರಾಫಿಕ್ಸ್ ಕೆಲಸಗಳಿಗೆ ಕೂತರೆ ಯಾವುದೇ ಸ್ಪಷ್ಟತೆ ಇರುವುದಿಲ್ಲ. 16 ನಿಮಿಷದ ಸಿಜಿ ಕೆಲಸ 30 ನಿಮಿಷದವರೆಗೆ ಹೋಗಬಹುದು. ಇದು ಬಜೆಟ್ ಮೇಲೆ ಪರಿಣಾಮ ಬೀರುತ್ತದೆ. ಈಗಲೇ ವಿಎಫ್‌ಎಕ್ಸ್ ಅಂತಿಮಗೊಳಿಸುತ್ತಿರುವ ಕಾರಣ ದುಂದು ವೆಚ್ಚವಿಲ್ಲ. ನವೆಂಬರ್‌ನಲ್ಲಿ ಶೂಟಿಂಗ್ ಆರಂಭವಾಗಲಿದೆ' ಎಂದರು.

ಸಿ.ಎಂ ಮಗಳ ಪಾತ್ರ

'ಕಥೆ, ಚಿತ್ರಕಥೆ ಹಾಗೂ ಸಂಭಾಷಣೆ ಸಿದ್ಧವಾಗಿದೆ. ಸಂಭಾಷಣೆಯನ್ನು ಉಪೇಂದ್ರ ಅವರೂ ಕೇಳಿದ್ದಾರೆ. ಯಾವುದೇ ಬದಲಾವಣೆ ಇಲ್ಲದೇ ಕಥೆಯನ್ನು ಅವರು ಒಪ್ಪಿದ್ದಾರೆ. ಇದು 'ಎ', 'ಉಪೇಂದ್ರ', 'ರಕ್ತಕಣ್ಣೀರು' ರೀತಿ ಟಿಪಿಕಲ್ ಉಪ್ಪಿ ಅವರ ಶೈಲಿಯ ಸಿನಿಮಾ. ಇವತ್ತಿನ ಪೀಳಿಗೆಗೆ ಉಪೇಂದ್ರ ಅವರು ಸಿನಿಮಾ ಮಾಡಿದರೆ ಹೇಗಿರುತ್ತದೆ ಆ ರೀತಿ ಚಿತ್ರದಲ್ಲಿ ಅವರ ಪಾತ್ರವಿದೆ. ಆರಾಧನಾ ಅವರು ಚಿತ್ರದಲ್ಲಿ ಮುಖ್ಯಮಂತ್ರಿಯ ಮಗಳಾಗಿ ಕಾಣಿಸಿಕೊಳ್ಳಲಿದ್ದಾರೆ. 'ಕಾಟೇರ' ಸಿನಿಮಾದಲ್ಲಿದ್ದ ಅವರ ಪಾತ್ರಕ್ಕೆ ತದ್ವಿರುದ್ಧವಾಗಿ ಇಲ್ಲಿನ ಪಾತ್ರವಿದೆ. ಬಹಳ ಬೋಲ್ಡ್ ಆಗಿರುವ ಪಾತ್ರವಿದು. ಈ ಸಿನಿಮಾವನ್ನು ಪ್ಯಾನ್ ಇಂಡಿಯಾ ಮಟ್ಟದಲ್ಲಿ ಸಿದ್ಧಪಡಿಸುತ್ತಿದ್ದು, ಶೂಟಿಂಗ್ ಆರಂಭಿಸಿದ 6–8 ತಿಂಗಳಲ್ಲಿ ಬಿಡುಗಡೆ ಮಾಡುವ ಪ್ಲ್ಯಾನ್ ಇದೆ' ಎಂದರು ತರುಣ್.

> 'ಕಾಟೇರ'ಕ್ಕೆ ನಾನು ಡಬ್ಬಿಂಗ್ ಮಾಡಿರಲಿಲ್ಲ. ಆ ಪಾತ್ರಕ್ಕೆ ನನ್ನ ದನಿ ಸರಿಹೋಗುತ್ತಿರಲಿಲ್ಲ. 'ನೆಕ್ಸ್ಟ್ ಲೆವೆಲ್'ಗೆ ಡಬ್ಬಿಂಗ್ ಮಾಡುವ ಆಸೆ ಇದೆ. ಡಬ್ಬಿಂಗ್ ಒಂದು ಪಾತ್ರಕ್ಕೆ ಜೀವಾಳ. ಅಮ್ಮನ ಪಾತ್ರಗಳಿಗೆ ಜೀವ ತುಂಬಿದ್ದೇ ಸರ್ವಮಂಗಳ ಅವರ ಡಬ್ಬಿಂಗ್. ಪಾತ್ರದ ತಯಾರಿ ಜೊತೆಗೆ ಡಬ್ಬಿಂಗ್ ತರಬೇತಿಯನ್ನೂ ಪಡೆದುಕೊಳ್ಳುತ್ತಿದ್ದೇನೆ.
>
> **ಆರಾಧನಾ,** ನಟಿ



'ಎಚ್ಚರಿಕೆಯ ಹೆಜ್ಜೆ ಇಡುವ ನನಗೆ ಅಮ್ಮನೇ ಗುರು'

ಸಿನಿಪಯಣದಲ್ಲಿ ತಮ್ಮ ಎರಡನೇ ಹೆಜ್ಜೆಯ ಬಗ್ಗೆ ಮಾತನಾಡಿದ ಆರಾಧನಾ, 'ಉಪೇಂದ್ರ ಅವರು ಈ ಕಥೆ ಏಕೆ ಒಪ್ಪಿಕೊಂಡಿದ್ದಾರೆ ಎನ್ನುವ ಕುತೂಹಲ, ನಿರೀಕ್ಷೆ ಎಲ್ಲರಿಗೂ ಇದೆ. ನಾನು ಸಿನಿಮಾ ಒಪ್ಪಿಕೊಳ್ಳಲು ಹಲವು ಕಾರಣಗಳಿವೆ. ಇದರಲ್ಲಿ ಮುಖ್ಯವಾದುದು ಉಪೇಂದ್ರ ಅವರ ಜೊತೆ ತೆರೆ ಹಂಚಿಕೊಳ್ಳುವ ಅವಕಾಶ ದೊರಕಿದ್ದು. ಉಪೇಂದ್ರ ಅವರ ಬಗ್ಗೆ ಅಪ್ಪ–ಅಮ್ಮನಿಗೆ ಬಹಳ ಗೌರವವಿದೆ. ಈ ಸಿನಿಮಾದ ಕಥೆ, ನನ್ನ ಪಾತ್ರವೂ ನನ್ನನ್ನು ಆಕರ್ಷಿಸಿತು. ಈ ಪೀಳಿಗೆಗೆ, ಇಂದಿನ ಸಿನಿಮಾ ಮಾರುಕಟ್ಟೆಗೆ ತೃಪ್ತಿ ನೀಡುವ ಸಿನಿಮಾ ಇದಾಗಲಿದೆ ಎನ್ನುವ ಭರವಸೆ ನನಗಿದೆ. ಬಜೆಟ್ ದೃಷ್ಟಿಯಿಂದ, ತಾಂತ್ರಿಕವಾಗಿಯೂ ಈ ಸಿನಿಮಾ ಬೃಹದಾಗಿರಲಿದೆ. 'ಕಾಟೇರ'ದಲ್ಲಿ ನೋಡಿರುವ ಆರಾಧನಾಗೂ 'ನೆಕ್ಸ್ಟ್ ಲೆವೆಲ್' ಆರಾಧನಾಗೂ ಬಹಳ ವ್ಯತ್ಯಾಸವಿದೆ. ಇಲ್ಲಿ ನನ್ನ ಪಾತ್ರಕ್ಕೆ ಮಾತು ಹೆಚ್ಚಿದೆ' ಎಂದರು.

''ಕಾಟೇರ' ಸಿನಿಮಾದ ಯಶಸ್ಸು ಜವಾಬ್ದಾರಿ, ನಿರೀಕ್ಷೆ ಹಾಗೂ ಒತ್ತಡ ಹೆಚ್ಚಿಸಿತ್ತು. ಎರಡನೇ ಹೆಜ್ಜೆ ಇಡುವ ಮುನ್ನ ಬಹಳ ಎಚ್ಚರಿಕೆಯಿಂದ ಇದ್ದೆ. ಹಲವು ಪಾತ್ರಗಳ ಅವಕಾಶಗಳು ಬಂದರೂ ಯಾವುದೋ ಒಂದು ಅಂಶ ಕೂಡಿಬರುತ್ತಿರಲಿಲ್ಲ. ಹೀಗಾಗಿ ಒಂದೂವರೆ ವರ್ಷ ತಾಳ್ಮೆಯಿಂದ ಕಾದೆ. ಒಂದು ಒಳ್ಳೆಯ ತಂಡ, ಕಥೆಯ ನಿರೀಕ್ಷೆಯಲ್ಲಿದ್ದಾಗ 'ನೆಕ್ಸ್ಟ್ ಲೆವೆಲ್' ಬಂದಿತ್ತು' ಎಂದರು ಆರಾಧನಾ.

'ಈ ಸಿನಿಮಾಗಾಗಿ ಅಮ್ಮನೇ ಗುರುವಾಗಿ ನನ್ನನ್ನು ಸಿದ್ಧಪಡಿಸುತ್ತಿದ್ದಾರೆ. 'ಕಾಟೇರ'ಗೂ ಮೊದಲು ಅಮ್ಮನ ಮೂಲಕ ಸಿನಿಮಾ ಜಗತ್ತು ನೋಡುತ್ತಿದ್ದೆ. ಇದೀಗ ವಿದ್ಯಾರ್ಥಿನಿಯಂತೆ 'ಕಾಟೇರ'ದ ಕಲಿಕೆಗಳನ್ನು ಸ್ಕೂಲ್‌ಬ್ಯಾಗ್‌ಗೆ ತುಂಬಿಕೊಂಡು ಹೊಸ ಸಿನಿಮಾಗೆ ಹೆಜ್ಜೆ ಇಡಲಿದ್ದೇನೆ. ಈ ವರ್ಷದ ದ್ವಿತೀಯಾರ್ಧ ನನ್ನದು. ಹಲವು ಸಿನಿಮಾಗಳ ಮಾತುಕತೆ ನಡೆಯುತ್ತಿದೆ. ಹೊಸ ಸಿನಿಮಾಗಳನ್ನು ಒಪ್ಪಿಕೊಂಡಿದ್ದೇನೆ. ಶೀಘ್ರದಲ್ಲೇ ಇವುಗಳು ಘೋಷಣೆಯಾಗಲಿವೆ' ಎನ್ನುತ್ತಾರೆ ಆರಾಧನಾ.

ಸಿನಿಮಾ ಆಯ್ತು 'ಮತ್ತೆ ಮಳೆ ಹೊಯ್ಯುತ್ತಿದೆ' ಕಥೆ



'**ಮತ್ತೆ ಮಳೆ ಹೊಯ್ಯುತ್ತಿದೆ**' ಕೆ.ಸದಾಶಿವ ಅವರ ಬಹುಜನಪ್ರಿಯ ಕಥೆ. ಯು.ಆರ್. ಅನಂತಮೂರ್ತಿ ಅವರ ಕವಿತೆಯ ಸಾಲಿನಿಂದ ಪ್ರೇರಿತ ಈ ಕಥೆ, ಅದೇ ಶೀರ್ಷಿಕೆಯಲ್ಲಿಯೇ ಸಿನಿಮಾವಾಗಿದೆ. 'ಎಲ್ಲ ನೆನಪಾಗುತಿದೆ' ಎಂಬ ಅಡಿಬರಹ ಚಿತ್ರಕ್ಕಿದೆ. ಪರಮ್ ಗುಬ್ಬಿ ಚಿತ್ರವನ್ನು ನಿರ್ದೇಶಿಸಿದ್ದಾರೆ.

'ಸಾಹಿತಿ ಕೆ.ಸದಾಶಿವ ವಿರಚಿತ ಸಣ್ಣಕಥೆ ಇದು. ಅವರ ಕುಟುಂಬದವರ ಅನುಮತಿ ಪಡೆದು ಚಿತ್ರ ಮಾಡಿದ್ದೇವೆ. ಚಿತ್ರವು ಎರಡು ಕಾಲಘಟ್ಟಗಳ ಸನ್ನಿವೇಶಗಳನ್ನು ಹೊಂದಿದೆ. ಮೊದಲನೇ ಜೋಡಿಯ ಪ್ರೇಮ ಕಥೆ ವಿಫಲವಾಗುತ್ತದೆ. ಎರಡನೇ ಜೋಡಿಯದ್ದು ಸಫಲವಾಗುತ್ತದೆ. ಇವೆರೆಡರ ನಡುವಿನ ಕೆಲ ಸನ್ನಿವೇಶಗಳು ಮನಸ್ಸನ್ನು ಕದಡುತ್ತವೆ. ಸಿನಿಮಾದಲ್ಲಿ ಮಳೆಯು ಮಹತ್ವದ ಪಾತ್ರವನ್ನು ವಹಿಸಿದೆ. ಜತೆಗೆ ಅರ್ಥಪೂರ್ಣ ಸಂದೇಶಗಳು ಅಲ್ಲಲ್ಲಿ ಬರುತ್ತವೆ. ಶೃಂಗೇರಿ, ಹೊರನಾಡು, ಕೊಪ್ಪ, ಹರಿಹರಪುರ, ಆಗುಂಬೆ ಸುಂದರ ತಾಣಗಳಲ್ಲಿ ಇಪ್ಪತ್ತನಾಲ್ಕು ದಿನಗಳಲ್ಲಿ ಯಶಸ್ವಿಯಾಗಿ ಚಿತ್ರೀಕರಣ ಮುಗಿಸಿದ್ದೇವೆ. ಸದ್ಯ ಪೋಸ್ಟ್ ಪ್ರೊಡಕ್ಷನ್ ನಡೆಯುತ್ತಿದ್ದು, ಅಕ್ಟೋಬರ್‌ನಲ್ಲಿ ಚಿತ್ರ ತೆರೆಗೆ ತರಲು ಚಿಂತನೆ ನಡೆಸಲಾಗಿದೆ. ಕಬಡ್ಡಿ ನರೇಂದ್ರಬಾಬು ಈ ಸಿನಿಮಾ ಆಗಲು ಮುಖ್ಯ ಕಾರಣ' ಎಂದರು ನಿರ್ದೇಶಕರು.

ಗಂಗಾಧರ್ ಶ್ರೀ ಗವಿರಂಗನಾಥ ಸ್ವಾಮಿ ಪಿಕ್ಚರ್ಸ್ ಬ್ಯಾನರ್‌ನಲ್ಲಿ ಬಂಡವಾಳ ಹೂಡಿದ್ದಾರೆ. ಕಬಡ್ಡಿ ನರೇಂದ್ರಬಾಬು ಚಿತ್ರಕಥೆ-ಸಂಭಾಷಣೆ-ಸಾಹಿತ್ಯ ಬರೆದಿದ್ದಾರೆ. ಜಿ.ಲಿಖಿತ್ ಹಾಗೂ ಜಯವರ್ಧನ್ ನಾಯಕರು. ಸುಲಕ್ಷ ಖೈರ, ಭೂಮಿಕ ಗೌಡ ನಾಯಕಿಯರು. ಇವರೊಂದಿಗೆ ಚಂದ್ರಶೇಖರ ರೆಡ್ಡಿ ಎ.ಎಂ, ಪ್ರಕಾಶ್‌ಮೂರ್ತಿ, ಕುಮಾರಿ ಸ್ವರ್ಣ, ಶೃತಿ, ದಿನಮಣಿ, ಕಾವ್ಯ ಕುಮಾರಿ ಮುಂತಾದವರು ಅಭಿನಯಿಸಿದ್ದಾರೆ.

'80ರ ದಶಕದಲ್ಲಿ ನಡೆಯುವ ಬಹಳ ಸುಂದರವಾದ ಕಥೆಯಿದು. ಇವತ್ತು ಸಾಹಿತ್ಯ, ಕಾದಂಬರಿಗಳನ್ನು ಚಿತ್ರವಾಗಿಸುವ ವಾಡಿಕೆ ಕಡಿಮೆಯಾಗಿದೆ. ಆದರೆ ನಾವು ಕಮರ್ಷಿಯಲ್ಲಾಗಿರುವ ಅಚ್ಚುಕಟ್ಟಾದ ಸಿನಿಮಾ ಮಾಡಿದ್ದೇವೆ. ಒಳ್ಳೆಯ ಕಥೆಗಳನ್ನು ಸಿನಿಮಾ ಮಾಡುವುದರಿಂದ ಆ ಕಥೆಗಳು ಇನ್ನಷ್ಟು ಜನರಿಗೆ ತಲುಪುತ್ತವೆ' ಎಂದರು ನರೇಂದ್ರಬಾಬು. ಶಾಂತಾರಾವ್ ಇಪಿಲಿ ಛಾಯಾಚಿತ್ರಗ್ರಹಣ, ಧನುಷ್ ವೀರ್ ಸಂಕಲನ ಚಿತ್ರಕ್ಕಿದೆ.


ಚಿತ್ರತಂಡ

ತೆಲುಗಿನಲ್ಲಿ ದುಲ್ಕರ್ ಸಲ್ಮಾನ್ ಹೊಸ ಚಿತ್ರಕ್ಕೆ ಚಾಲನೆ

ಮಲಯಾಳ ನಟ ದುಲ್ಕರ್ ಸಲ್ಮಾನ್ ತೆಲುಗಿನಲ್ಲಿ ಗಟ್ಟಿಯಾಗಿ ನೆಲೆಯೂರುತ್ತಿದ್ದಾರೆ. ಟಾಲಿವುಡ್‌ನಲ್ಲಿ ಅವರ ಹೊಸ ಚಿತ್ರವೊಂದು ಇತ್ತೀಚೆಗಷ್ಟೇ ಸೆಟ್ಟೇರಿದೆ. ಇನ್ನೂ ಹೆಸರಿಡದ ದುಲ್ಕರ್ ಅವರ 41ನೇ ಸಿನಿಮಾಕ್ಕೆ ತೆಲುಗಿನ ಮತ್ತೋರ್ವ ಸ್ಟಾರ್ ನಾನಿ ಚಾಲನೆ ನೀಡಿ ಶುಭ ಹಾರೈಸಿದ್ದಾರೆ.

ಈ ಹಿಂದೆ ಮಹೇಶ್ ಬಾಬು ಅವರ 'ಸರ್ಕಾರು ವಾರಿ ಪಾಟ' ಸೇರಿದಂತೆ ಕೆಲ ಸಿನಿಮಾಗಳಲ್ಲಿ ಕೆಲಸ ಮಾಡಿದ್ದ ರವಿಬಾಬು ಈ ಸಿನಿಮಾಕ್ಕೆ ಆ್ಯಕ್ಷನ್ ಕಟ್ ಹೇಳುತ್ತಿದ್ದಾರೆ. ಐದು ಭಾಷೆಗಳಲ್ಲಿ ನಿರ್ಮಾಣಗೊಳ್ಳುತ್ತಿರುವ ಚಿತ್ರಕ್ಕೆ ಎಸ್‌ಎಲ್‌ವಿ ಸಿನಿಮಾಸ್ ಬಂಡವಾಳ ಹೂಡುತ್ತಿದೆ.

ಮಲಯಾಳದಲ್ಲಿ ಕೆಲ ಚಿತ್ರಗಳ ಸೋಲಿನ ಬಳಿಕ ದುಲ್ಕರ್ ತೆಲುಗಿನಲ್ಲಿ ಯಶಸ್ಸು ಕಾಣುತ್ತಿದ್ದಾರೆ. ಇವರ ಹಿಂದಿನ ಸಿನಿಮಾ 'ಲಕ್ಕಿ ಭಾಸ್ಕರ' ಸೂಪರ್ ಹಿಟ್ ಎನಿಸಿಕೊಂಡಿತ್ತು. 'ಸೀತಾ ರಾಮಂ' ಕೂಡ ಯಶಸ್ಸು ಕಂಡಿತ್ತು. ವಿಭಿನ್ನ ಕಥೆಗಳನ್ನು ಆಯ್ದುಕೊಳ್ಳುವ ಇವರ ಹಿಂದಿನ ಮಲಯಾಳ ಚಿತ್ರ 'ಕಿಂಗ್ ಆಫ್ ಕೋತಾ' ಬಾಕ್ಸಾಫೀಸ್‌ನಲ್ಲಿ ಅಷ್ಟೇನು ಯಶಸ್ಸು ಕಂಡಿರಲಿಲ್ಲ. ಸದ್ಯ 'ಐ ಆ್ಯಮ್ ಗೇಮ್' ಎಂಬ ಮಲಯಾಳ ಚಿತ್ರದಲ್ಲಿ ನಟಿಸುತ್ತಿದ್ದಾರೆ. ಅದಾದ ಬಳಿಕ ತೆಲುಗಿನ ಹೊಸ ಚಿತ್ರ ಸೆಟ್ಟೇರಲಿದೆ. ಜಿ.ವಿ.ಪ್ರಕಾಶ್ ಸಂಗೀತ, ಅನಯ್ ಗೋಸ್ವಾಮಿ ಛಾಯಾಚಿತ್ರಗ್ರಹಣ ಈ ಚಿತ್ರಕ್ಕಿದೆ.


ದುಲ್ಕರ್ ಸಲ್ಮಾನ್, ನಾನಿ

ವಿಪಕ್ಷಗಳ ವಿರುದ್ಧ ಮೋದಿ ವಾಗ್ದಾಳಿ

ಆಪರೇಷನ್ ಸಿಂಧೂರ: ಎನ್‌ಡಿಎ ಮಿತ್ರಪಕ್ಷಗಳ ಶ್ಲಾಘನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಆಪರೇಷನ್ ಸಿಂಧೂರ ಬಗ್ಗೆ ಪ್ರಶ್ನೆಗಳನ್ನು ಎತ್ತುವ ಮೂಲಕ ವಿಪಕ್ಷಗಳು ಸ್ವಯಂ ಹಾನಿ ಮಾಡಿಕೊಳ್ಳುತ್ತಿವೆ ಎಂದು ಅಭಿಪ್ರಾಯಪಟ್ಟ ಪ್ರಧಾನಿ ನರೇಂದ್ರ ಮೋದಿ, 'ತಮ್ಮ ಕಾಲಿಗೆ ಕಲ್ಲಿನಿಂದ ಹೊಡೆದುಕೊಳ್ಳುವ ವಿರೋಧ ಪಕ್ಷವನ್ನು ನೀವು ಬೇರೆಲ್ಲಿ ಕಾಣುವಿರಿ' ಎಂದು ಪ್ರಶ್ನಿಸಿದರು.

ಸಂಸತ್ ಭವನದಲ್ಲಿ ಮಂಗಳವಾರ ನಡೆದ ಎನ್‌ಡಿಎ ಮೈತ್ರಿಕೂಟದ ಸಂಸದೀಯ ಪಕ್ಷದ ಸಭೆಯಲ್ಲಿ ಮಾತನಾಡಿದ ಅವರು, ವಿರೋಧ ಪಕ್ಷಗಳ ಬೇಡಿಕೆಯನ್ನು ಕಾರ್ಯತಂತ್ರದ ತಪ್ಪು ಹೆಜ್ಜೆ ಎಂದು ಬಣ್ಣಿಸಿದರು. ಸಂಸತ್‌ನಲ್ಲಿ ನಡೆದ ಚರ್ಚೆಯು ವಿಪಕ್ಷಗಳಿಗೆ ತಿರುಗುಬಾಣವಾಯಿತು ಎಂದು ಪ್ರತಿಪಾದಿಸಿದರು.

ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಸುಪ್ರೀಂ ಕೋರ್ಟ್ ತರಾಟೆಗೆ ತೆಗೆದುಕೊಂಡಿರುವ ಬಗ್ಗೆ ಪ್ರತಿಕ್ರಿಯಿಸಿದ ಅವರು, 'ಸುಪ್ರೀಂ ಕೋರ್ಟ್ ನೀಡಿದ ಆದೇಶಕ್ಕಿಂತ ದೊಡ್ಡ ಛೀಮಾರಿ ಇನ್ನೊಂದಿಲ್ಲ' ಎಂದು ಹೇಳಿದರು.

ಭಾರತದ ಭಾಗ ಮತ್ತು ಭದ್ರತೆಯ ಬಗ್ಗೆ ರಾಹುಲ್ ಬಾಲಿಶ ಮತ್ತು ಆಧಾರರಹಿತ ಹೇಳಿಕೆಗಳನ್ನು ನೀಡುತ್ತಾರೆ ಮತ್ತು ನ್ಯಾಯಾಲಯವು ಅವರಿಗೆ ಪಾಠ ಕಲಿಸಿದೆ ಎಂದು ಮೋದಿ ಹೇಳಿದರು.

1998ರಲ್ಲಿ ಮೈತ್ರಿಕೂಟವು ಸ್ಥಾಪನೆಯಾದಾಗಿನಿಂದ ಅದರ ಪ್ರಯಾಣವು ಯಶಸ್ಸಿನಿಂದ ಕೂಡಿದೆ ಮತ್ತು ಇನ್ನೂ ಅನೇಕ ಸಾಧನೆಗಳನ್ನು ಮಾಡಬೇಕಾಗಿದೆ ಎಂದು ಅವರು ಪ್ರತಿಪಾದಿಸಿದರು.

ಆಪರೇಷನ್ ಸಿಂಧೂರ ಬಗ್ಗೆ ಮೈತ್ರಿಕೂಟದ ನಾಯಕರು ಶ್ಲಾಘಿಸಿದರು. ಭಯೋತ್ಪಾದಕರನ್ನು ನಿಗ್ರಹಿಸಿದ್ದಕ್ಕಾಗಿ ಮೋದಿ ಅವರನ್ನು ಅಭಿನಂದಿಸಿದರು. ಆಪರೇಷನ್ ಸಿಂಧೂರ ಮತ್ತು ಆಪರೇಷನ್ ಮಹಾದೇವ ಸಮಯದಲ್ಲಿ ಸಶಸ್ತ್ರ ಪಡೆಗಳ ಅಸಾಧಾರಣ ಧೈರ್ಯ ಮತ್ತು ಅಚಲ ಬದ್ಧತೆಯನ್ನು ಪ್ರಶಂಸಿಸಿ ಮೂರು ನಿರ್ಣಯಗಳನ್ನು ತೆಗೆದುಕೊಳ್ಳಲಾಯಿತು.

2024ರ ಜೂನ್‌ನಲ್ಲಿ ಎನ್‌ಡಿಎ ಮೈತ್ರಿಕೂಟ ಸರ್ಕಾರ ರಚಿಸಿದ ಬಳಿಕ ಸಂಸತ್ತಿನ ಅಧಿವೇಶನಗಳಲ್ಲಿ ಮೈತ್ರಿಕೂಟದ ಸದಸ್ಯರು ಸಭೆ ಸೇರಿರುವುದು ಇದು ಎರಡನೇ ಬಾರಿ.


ಎನ್‌ಡಿಎ ಮೈತ್ರಿಕೂಟದ ಸಂಸದೀಯ ಪಕ್ಷದ ಸಭೆಯಲ್ಲಿ ರಕ್ಷಣಾ ಸಚಿವ ರಾಜನಾಥ್ ಸಿಂಗ್, ಪ್ರಧಾನಿ ನರೇಂದ್ರ ಮೋದಿ, ಕೇಂದ್ರ ಸಚಿವರೂ ಆದ ಬಿಜೆಪಿ ಅಧ್ಯಕ್ಷ ಜೆ.ಪಿ.ನಡ್ಡಾ ಮತ್ತು ಇತರರು ಭಾಗವಹಿಸಿದ್ದರು —ಪಿಟಿಐ ಚಿತ್ರ

ದೀರ್ಘಾವಧಿಯ ಗೃಹ ಸಚಿವ: ಶಾ ದಾಖಲೆ

ದೇಶದ ದೀರ್ಘಾವಧಿಯ ಗೃಹ ಸಚಿವ ಎಂಬ ದಾಖಲೆಗೆ ಅಮಿತ್ ಶಾ ಪಾತ್ರರಾಗಿದ್ದಾರೆ. ಅವರನ್ನು ಮೋದಿ ಅಭಿನಂದಿಸಿದರು.

ಶಾ ಅವರು ಬಿಜೆಪಿಯ ಹಿರಿಯ ನಾಯಕ ಎಲ್.ಕೆ. ಆಡ್ವಾಣಿ ಅವರ ದಾಖಲೆಯನ್ನು ಮುರಿದಿದ್ದಾರೆ. 2019ರಲ್ಲಿ ಬಿಜೆಪಿ ಮೈತ್ರಿಕೂಟ ಮತ್ತೆ ಅಧಿಕಾರಕ್ಕೆ ಬಂದಾಗ ಗೃಹ ಸಚಿವರಾಗಿ ಶಾ ಚುಕ್ಕಾಣಿ ಹಿಡಿದಿದ್ದರು. ಆರು ವರ್ಷ 65 ದಿನಗಳಿಂದ ಗೃಹ ಖಾತೆ ಹೊಂದಿದ್ದಾರೆ. 'ಇದು ಆರಂಭ ಮಾತ್ರ. ಅವರು ಬಹಳ ದೂರ ಕ್ರಮಿಸಬೇಕಾಗಿದೆ' ಎಂದು ಮೋದಿ ಹೇಳಿದರು.

ರಾಹುಲ್ ಬೆಂಬಲಕ್ಕೆ 'ಇಂಡಿಯಾ'

ನವದೆಹಲಿ (ಪಿಟಿಐ): ಸೇನೆಯ ಕುರಿತು ನೀಡಿದ್ದ ಹೇಳಿಕೆಗೆ ಸಂಬಂಧಿಸಿದಂತೆ ರಾಹುಲ್ ಗಾಂಧಿ ಅವರನ್ನು ಸುಪ್ರೀಂ ಕೋರ್ಟ್ ಅನಗತ್ಯವಾಗಿ ತರಾಟೆಗೆ ತೆಗೆದುಕೊಂಡಿದೆ ಎಂದು 'ಇಂಡಿಯಾ' ಮೈತ್ರಿಕೂಟದ ಪಕ್ಷಗಳು ಹೇಳಿವೆ.

'ರಾಷ್ಟ್ರೀಯ ಹಿತಾಸಕ್ತಿಗೆ ಸಂಬಂಧಿಸಿದ ವಿಷಯಗಳಿಗೆ ಪ್ರತಿಕ್ರಿಯಿಸುವುದು ರಾಜಕೀಯ ಪಕ್ಷಗಳ ಜವಾಬ್ದಾರಿ' ಎಂದಿವೆ.

ಭಾರತ್ ಜೋಡೊ ಯಾತ್ರೆ ಸಂದರ್ಭದಲ್ಲಿ ಭಾರತೀಯ ಸೇನೆ ಬಗ್ಗೆ ಆಕ್ಷೇಪಾರ್ಹ ಹೇಳಿಕೆ ನೀಡಿದ್ದಕ್ಕಾಗಿ ಲೋಕಸಭೆಯ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರನ್ನು ಸುಪ್ರೀಂ ಕೋರ್ಟ್ ತರಾಟೆಗೆ ತೆಗೆದುಕೊಂಡಿತ್ತು.


ರಾಹುಲ್ ಗಾಂಧಿ

'ಇಂಡಿಯಾ' ಮೈತ್ರಿಕೂಟದ ಹಲವು ಪಕ್ಷಗಳ ಮುಖಂಡರು ಹಾಗೂ ಸದನದ ನಾಯಕರು ಮಂಗಳವಾರ ಇಲ್ಲಿ ನಡೆಸಿದ ಸಭೆಯಲ್ಲಿ ರಾಹುಲ್ ವಿರುದ್ಧ ಸುಪ್ರೀಂ ಕೋರ್ಟ್‌ನ ವ್ಯಾಖ್ಯಾನದ ಬಗ್ಗೆ ಚರ್ಚಿಸಿದರು. ಮಲ್ಲಿಕಾರ್ಜುನ ಖರ್ಗೆ ಮತ್ತು ರಾಹುಲ್ ಗಾಂಧಿ ಸಹ ಈ ಸಭೆಯಲ್ಲಿ ಉಪಸ್ಥಿತರಿದ್ದರು.

ಅಸಾಧಾರಣ ಅವಲೋಕನ: 'ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ರಾಜಕೀಯ ಪಕ್ಷಗಳ ಹಕ್ಕುಗಳ ಬಗ್ಗೆಯೇ ನ್ಯಾಯಮೂರ್ತಿಗಳು ಅನಗತ್ಯವಾಗಿ ಅಸಾಧಾರಣವಾದ ಅವಲೋಕನ ನಡೆಸಿದ್ದಾರೆ ಎಂಬುದನ್ನು 'ಇಂಡಿಯಾ' ಮೈತ್ರಿಕೂಟದ ಎಲ್ಲ ನಾಯಕರು ಒಪ್ಪಿಕೊಂಡಿದ್ದಾರೆ' ಎಂದು ಕಾಂಗ್ರೆಸ್ ಹೇಳಿಕೆಯಲ್ಲಿ ತಿಳಿಸಿದೆ.

'ರಾಷ್ಟ್ರೀಯ ಹಿತಾಸಕ್ತಿಯ ವಿಷಯದಲ್ಲಿ ಪ್ರತಿಕ್ರಿಯಿಸುವುದು ರಾಜಕೀಯ ಪಕ್ಷಗಳ ಅದರಲ್ಲೂ ವಿರೋಧ ಪಕ್ಷದ ನಾಯಕನ ಮಹತ್ವದ ಜವಾಬ್ದಾರಿ' ಎಂದಿದೆ.

'ದೇಶದ ಗಡಿಯನ್ನು ರಕ್ಷಿಸುವಲ್ಲಿ ನಮ್ಮ ಸರ್ಕಾರವು ವಿಫಲವಾದಾಗ ಅದನ್ನು ಹೊಣೆಗಾರರನ್ನಾಗಿ ಮಾಡುವುದು ಪ್ರತಿಯೊಬ್ಬ ನಾಗರಿಕರ ನೈತಿಕ ಕರ್ತವ್ಯ' ಎಂದೂ ಹೇಳಿದೆ.

ಕಾಂಗ್ರೆಸ್ ನಾಯಕರಾದ ಪ್ರಿಯಾಂಕಾ ಗಾಂಧಿ ವಾದ್ರಾ ಹಾಗೂ ರಾಹುಲ್ ಗಾಂಧಿ ಅವರು ಭಾರತೀಯ ಸೇನಾ ಪಡೆಗಳನ್ನು ಗೌರವಿಸುತ್ತಾರೆ ಮತ್ತು ವಿರೋಧ ಪಕ್ಷದ ನಾಯಕರಾಗಿ ಸರ್ಕಾರವನ್ನು ಪ್ರಶ್ನಿಸುವ ಹಕ್ಕು ಹೊಂದಿದ್ದಾರೆ ಎಂದಿದೆ.

ತಪ್ಪು ವ್ಯಾಖ್ಯಾನ: ಪ್ರಿಯಾಂಕಾ

'ನೈಜ ಭಾರತೀಯ ಯಾರು ಎಂಬುದನ್ನು ಸುಪ್ರೀಂ ಕೋರ್ಟ್‌ನ ಗೌರವಾನ್ವಿತ ನ್ಯಾಯಮೂರ್ತಿಗಳು ನಿರ್ಧರಿಸುವುದಲ್ಲ' ಎಂದು ಕಾಂಗ್ರೆಸ್‌ನ ಸಂಸದೆ ಪ್ರಿಯಾಂಕಾ ಗಾಂಧಿ ವಾದ್ರಾ ಅವರು ಸಂಸತ್ ಆವರಣದಲ್ಲಿ ಸುದ್ದಿಗಾರರಿಗೆ ತಿಳಿಸಿದರು. 'ಪ್ರಶ್ನೆಗಳನ್ನು ಕೇಳುವುದು, ಸರ್ಕಾರಕ್ಕೆ ಸವಾಲು ಹಾಕುವುದು ವಿರೋಧ ಪಕ್ಷದ ನಾಯಕನ ಕರ್ತವ್ಯ' ಎಂದು ಹೇಳಿದರು.

'ನನ್ನ ಸಹೋದರ ಸೇನೆಯ ವಿರುದ್ಧ ಎಂದೂ ಏನನ್ನೂ ಮಾತನಾಡಲ್ಲ. ಸೇನೆಯ ಬಗ್ಗೆ ಅಪಾರ ಗೌರವ ಹೊಂದಿದ್ದಾರೆ. ಆದ್ದರಿಂದ ಇದು ತಪ್ಪು ವ್ಯಾಖ್ಯಾನವಾಗಿದೆ' ಎಂದು ತಿಳಿಸಿದರು.

ಮುಖ್ಯಾಂಶಗಳು

- ರಾಹುಲ್ ಅವರನ್ನು ತರಾಟೆಗೆ ತೆಗೆದುಕೊಂಡಿದ್ದ 'ಸುಪ್ರೀಂ'
- 'ರಾಷ್ಟ್ರೀಯ ಹಿತಾಸಕ್ತಿ ವಿಷಯಕ್ಕೆ ಪ್ರತಿಕ್ರಿಯಿಸುವುದು ರಾಜಕೀಯ ಪಕ್ಷಗಳ ಜವಾಬ್ದಾರಿ'

ಮೇಘಸ್ಫೋಟ: ಕೊಚ್ಚಿಹೋದ ಪಟ್ಟಣ

ಒಂದನೇ ಪುಟದಿಂದ....

ಪ್ರವಾಹದಿಂದಾಗಿ ನೀರು ಗ್ರಾಮಕ್ಕೆ ನುಗ್ಗುತ್ತಿರುವುದು ಹಾಗೂ ಮನೆಗಳಿಗೆ ಹಾನಿಯಾಗುತ್ತಿರುವುದನ್ನು ತೋರಿಸುವ ವಿಡಿಯೊಗಳು ವ್ಯಾಪಕವಾಗಿ ಹಂಚಿಕೆಯಾಗಿವೆ. ಅವಶೇಷಗಳಡಿ ಸಿಲುಕಿರುವ ವ್ಯಕ್ತಿಯೊಬ್ಬರು ಹೊರಗೆ ಬರಲು ಪ್ರಯತ್ನಿಸುತ್ತಿರುವುದು ವಿಡಿಯೊದಲ್ಲಿ ಸೆರೆಯಾಗಿದೆ.

'ಪ್ರಾಥಮಿಕ ವರದಿಗಳ ಪ್ರಕಾರ, ಕನಿಷ್ಠ ಐವರು ಮೃತಪಟ್ಟಿದ್ದಾರೆ. ಹರ್ಸಿಲ್‌ನಿಂದ ಸೇನೆಯ ತುಕಡಿಯೊಂದು ಘಟನಾ ಸ್ಥಳಕ್ಕೆ ತೆರಳಿ, ಪರಿಹಾರ ಕಾರ್ಯ ಕೈಗೊಂಡಿದೆ' ಎಂದು ಉತ್ತರಕಾಶಿ ಜಿಲ್ಲಾಧಿಕಾರಿ ಪ್ರಶಾಂತ ಆರ್ಯ ತಿಳಿಸಿದ್ದಾರೆ.

ಮಾಹಿತಿ ಪಡೆದ ಪ್ರಧಾನಿ: 'ಪ್ರವಾಹದಿಂದ ತೊಂದರೆಗೆ ಒಳಗಾದವರ ಸುರಕ್ಷತೆಗೆ ನಾನು ಪ್ರಾರ್ಥಿಸುವೆ. ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರೊಂದಿಗೆ ಮಾತನಾಡಿ, ಪರಿಸ್ಥಿತಿ ಕುರಿತು ಮಾಹಿತಿ ಪಡೆದಿರುವೆ. ಸಂತ್ರಸ್ತರಿಗೆ ಎಲ್ಲ ನೆರವು ನೀಡಲಾಗುವುದು' ಎಂದು ಪ್ರಧಾನಿ ನರೇಂದ್ರ ಮೋದಿ ಅವರು 'ಎಕ್ಸ್'ನಲ್ಲಿ ಹೇಳಿದ್ದಾರೆ.

ಭಾರಿ ನಷ್ಟ: 'ಪ್ರವಾಹದಿಂದ ಭಾರಿ ನಷ್ಟ ಉಂಟಾಗಿರುವುದು ದುಃಖ ತಂದಿದೆ. ಎಸ್‌ಡಿಆರ್‌ಎಫ್, ಎನ್‌ಡಿಆರ್‌ಎಫ್, ಜಿಲ್ಲಾಡಳಿತ ಹಾಗೂ ಇತರ ತಂಡಗಳು ಸಮರೋಪಾದಿಯಲ್ಲಿ ರಕ್ಷಣಾ ಕಾರ್ಯ ಕೈಗೆತ್ತಿಕೊಂಡಿವೆ' ಎಂದು ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಅವರು 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ.

ಸತ್ಯಪಾಲ್ ಮಲಿಕ್ ನಿಧನ

ನವದೆಹಲಿ (ಪಿಟಿಐ): ಜಮ್ಮು–ಕಾಶ್ಮೀರದ ಮಾಜಿ ರಾಜ್ಯಪಾಲ ಸತ್ಯಪಾಲ್ ಮಲಿಕ್ (79) ಮಂಗಳವಾರ ಮಧ್ಯಾಹ್ನ 1.12ಕ್ಕೆ ನಿಧನರಾದರು.

ಗೋವಾ, ಬಿಹಾರ, ಮೇಘಾಲಯ ಹಾಗೂ ಒಡಿಶಾ ರಾಜ್ಯಪಾಲರೂ ಆಗಿದ್ದ ಮಲಿಕ್, ತಮ್ಮ ಸುದೀರ್ಘ ರಾಜಕೀಯ ಜೀವನದಲ್ಲಿ ಲೋಕಸಭೆ ಮತ್ತು ರಾಜ್ಯಸಭೆಯ ಸದಸ್ಯರೂ ಆಗಿದ್ದರು.



ಸಂವಿಧಾನದ 370ನೇ ವಿಧಿಯಡಿ ಜಮ್ಮು–ಕಾಶ್ಮೀರಕ್ಕೆ ಕಲ್ಪಿಸಿದ್ದ ವಿಶೇಷ ಸ್ಥಾನಮಾನವನ್ನು ರದ್ದುಗೊಳಿಸಿದ ಮಹತ್ತರ ಬೆಳವಣಿಗೆ ಸೇರಿದಂತೆ ರಾಜ್ಯವನ್ನು ಎರಡು ಕೇಂದ್ರಾಡಳಿತ ಪ್ರದೇಶಗಳಾಗಿ ವಿಭಜಿಸಿದಾಗ ಮಲಿಕ್ ಅಲ್ಲಿನ ರಾಜ್ಯಪಾಲರಾಗಿದ್ದರು. ಕಾಕತಾಳೀಯ ಎಂಬಂತೆ ಜಮ್ಮು–ಕಾಶ್ಮೀರದ ವಿಶೇಷ ಸ್ಥಾನಮಾನವನ್ನು ರದ್ದುಗೊಳಿಸಿದ ಆರನೇ ವಾರ್ಷಿಕೋತ್ಸವದಂದೇ ಅವರು ನಿಧನರಾಗಿದ್ದಾರೆ.

ಜಮ್ಮು–ಕಾಶ್ಮೀರದಲ್ಲಿನ ಎರಡು ಪ್ರಮುಖ ಯೋಜನೆಗಳಿಗೆ ಅನುಮೋದನೆ ನೀಡಲು ಲಂಚ ಸ್ವೀಕರಿಸಿದ್ದರು ಎಂಬ ಆರೋಪ ಸತ್ಯಪಾಲ್ ಮಲಿಕ್ ಮೇಲೆ ಕೇಳಿಬಂದಿತ್ತು.

ಮಲ್ಲಿಕಾರ್ಜುನ ಖರ್ಗೆ ಆರೋಪಕ್ಕೆ ಉಪಸಭಾಪತಿ ಹರಿವಂಶ್ ಸ್ಪಷ್ಟನೆ

ರಾಜ್ಯಸಭೆ: ಸಿಐಎಸ್‌ಎಫ್ ನಿಯೋಜಿಸಿಲ್ಲ

ಪ್ರಜಾವಾಣಿ ವಾರ್ತೆ

ನವದೆಹಲಿ: ರಾಜ್ಯಸಭೆಯ ಶುಕ್ರವಾರದ ಕಲಾಪದ ವೇಳೆ ವಿರೋಧ ಪಕ್ಷಗಳ ಸದಸ್ಯರು ಸಭಾಪತಿಯ ಪೀಠದ ಮುಂದೆ ಪ್ರತಿಭಟಿಸಲು ಮುಂದಾದಾಗ ತಡೆಯಲು ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆಯನ್ನು (ಸಿಐಎಸ್‌ಎಫ್) ನಿಯೋಜಿಸಿದ್ದು ಸರಿಯಲ್ಲ ಎಂದು ವಿರೋಧ ಪಕ್ಷಗಳ ಸದಸ್ಯರು ಮಂಗಳವಾರ ಕಲಾಪದಲ್ಲಿ ಪ್ರಸ್ತಾಪಿಸಿದರು. ಈ ವಿಷಯ ಆಡಳಿತ ಮತ್ತು ವಿರೋಧ ಪಕ್ಷಗಳ ಸದಸ್ಯರ ನಡುವೆ ವಾಗ್ವಾದಕ್ಕೆ ಕಾರಣವಾಯಿತು.

ಈ ಸಂಬಂಧ ರಾಜ್ಯಸಭೆ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರು ಉಪಸಭಾಪತಿ ಹರಿವಂಶ್ ಅವರಿಗೆ ಶುಕ್ರವಾರವೇ ಪತ್ರ ಬರೆದು, 'ರಾಜ್ಯಸಭೆಯನ್ನು ಸಿಐಎಸ್‌ಎಫ್ ಏನಾದರೂ ವಶಕ್ಕೆ ಪಡೆದಿದೆಯೇ' ಎಂದು ಪ್ರಶ್ನಿಸಿದ್ದರು.

ಮಂಗಳವಾರ ಕಲಾಪದ ಆರಂಭದಲ್ಲಿ ಖರ್ಗೆ ಅವರ ಪತ್ರವನ್ನು ಉಲ್ಲೇಖಿಸಿದ ಉಪಸಭಾಪತಿ, 'ಸಿಐಎಸ್‌ಎಫ್ ಸಿಬ್ಬಂದಿಯನ್ನು ಕೊಠಡಿಯೊಳಗೆ ನಿಯೋಜಿಸಲಾಗಿಲ್ಲ' ಎಂದು ಸ್ಪಷ್ಟಪಡಿಸಿದರು.

'ಕಲಾಪದ ವೇಳೆಯಲ್ಲಿ ನಿರಂತರ ಅಡಚಣೆಗಳು ನಡೆಯುತ್ತಿರುವುದು ಕಳವಳಕಾರಿ ಸಂಗತಿ. ಅದು ಸದನದ ಘನತೆಗೆ ತಕ್ಕುದಲ್ಲ. ಸದಸ್ಯರು ಈ ಬಗ್ಗೆ ಆತ್ಮಾವಲೋಕನ ಮಾಡಿಕೊಳ್ಳಬೇಕು. ವಿರೋಧ ಪಕ್ಷಗಳ ಕೆಲ ಸದಸ್ಯರ ನಡವಳಿಕೆ ಪ್ರಜಾಪ್ರಭುತ್ವ ವಿರೋಧಿಯಾಗಿದೆ' ಎಂದು ಬೇಸರ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಖರ್ಗೆ ಅವರು, 'ಕಾಂಗ್ರೆಸ್ ನಾಯಕರು ಮತ್ತು ವಿರೋಧ ಪಕ್ಷದ ಸದಸ್ಯರು ಸಭಾಪತಿ ಪೀಠದ ಬಳಿ ಪ್ರವೇಶಿಸದಂತೆ ಸಿಐಎಸ್‌ಎಫ್ ಸಿಬ್ಬಂದಿ ತಡೆದರು. ಸದನವನ್ನು ನಡೆಸುತ್ತಿರುವುದು ಸಭಾಪತಿಯವರೋ ಅಥವಾ ಸಿಐಎಸ್‌ಎಫ್ ವರದಿ ಮಾಡಿಕೊಳ್ಳುವ ಗೃಹ ಸಚಿವ ಅಮಿತ್ ಶಾ ಅವರೋ' ಎಂದು ಕೇಳಿದರು.

'ಸಿಐಎಸ್‌ಎಫ್ ಅನ್ನು ಸದನಕ್ಕೆ ಕರೆಸಿದ್ದೇಕೆ. ನಾವೇನು ಭಯೋತ್ಪಾದಕರೇ?' ಎಂದು ಖರ್ಗೆ ಆಕ್ರೋಶ ವ್ಯಕ್ತಪಡಿಸಿದರು.

ಅದಕ್ಕೆ ಪ್ರತಿಕ್ರಿಯಿಸಿದ ಹರಿವಂಶ್, 'ಅವರು ಸಿಐಎಸ್‌ಎಫ್ ಸಿಬ್ಬಂದಿ ಅಲ್ಲ, ಸಂಸದೀಯ ಭದ್ರತಾ ಸೇವಾ ಸಿಬ್ಬಂದಿ' ಎಂದು ಹೇಳಿದರು.

ಖರ್ಗೆ ಅವರ ಹೇಳಿಕೆಯನ್ನು ಖಂಡಿಸಿದ ಸಂಸದೀಯ ವ್ಯವಹಾರಗಳ ಸಚಿವ ಕಿರಣ್ ರಿಜಿಜು, 'ಪೊಲೀಸರಾಗಲಿ ಅಥವಾ ಸಿಐಎಸ್‌ಎಫ್ ಸಿಬ್ಬಂದಿಯಾಗಲಿ ಸದನ ಪ್ರವೇಶಿಸಿಲ್ಲ. ಸದನ ಪ್ರವೇಶಿಸಿದ್ದು ಮಾರ್ಷಲ್‌ಗಳು' ಎಂದು ತಿಳಿಸಿದರು.



ಎಸ್‌ಐಆರ್ ವಿರೋಧಿಸಿ ಕಾಂಗ್ರೆಸ್ ಸಂಸದರಾದ ಸೋನಿಯಾ ಗಾಂಧಿ, ಪ್ರಿಯಾಂಕಾ ಗಾಂಧಿ ವಾದ್ರಾ ಸೇರಿದಂತೆ 'ಇಂಡಿಯಾ' ಮೈತ್ರಿಕೂಟದ ಸಂಸದರು ಮಂಗಳವಾರ ಸಂಸತ್ತಿನ ಮುಂಭಾಗ ಪ್ರತಿಭಟನೆ ನಡೆಸಿದರು —ಪಿಟಿಐ ಚಿತ್ರ

ಗದ್ದಲದ ನಡುವೆಯೇ ಅಂಗೀಕಾರ

ನವದೆಹಲಿ (ಪಿಟಿಐ): ಚುನಾವಣಾ ಆಯೋಗ ಬಿಹಾರದಲ್ಲಿ ನಡೆಸುತ್ತಿರುವ ಮತದಾರರ ಚೀಟಿಯ ವಿಶೇಷ ಸಮಗ್ರ ಪರಿಷ್ಕರಣೆ (ಎಸ್‌ಐಆರ್) ಕುರಿತು ಚರ್ಚೆಗೆ ಅವಕಾಶ ನೀಡುವಂತೆ ಕಾಂಗ್ರೆಸ್, ಟಿಎಂಸಿ ಸೇರಿದಂತೆ ವಿವಿಧ ವಿರೋಧ ಪಕ್ಷಗಳ ಸದಸ್ಯರು ರಾಜ್ಯಸಭೆಯಲ್ಲಿ ಮಂಗಳವಾರ ಇಡೀ ದಿನ ಪ್ರತಿಭಟನೆ ಮುಂದುವರಿಸಿದರು.

ಇದರಿಂದ ಕಲಾಪಕ್ಕೆ ಉಂಟಾದ ಅಡೆತಡೆಗಳ ನಡುವೆಯೇ, ಕಸ್ಟಮ್ಸ್ ಸುಂಕ ಕಾಯ್ದೆ 1975ಕ್ಕೆ ತಿದ್ದುಪಡಿ ತರುವ ಮಸೂದೆಯ ಮಂಡನೆಗೆ ಉಪಸಭಾಪತಿ ಹರಿವಂಶ್ ಅವರು ಅವಕಾಶ ನೀಡಿದರು. ಅದಕ್ಕೆ ಅಂಗೀಕಾರ ದೊರೆಯಿತು. ಅದರ ಬೆನ್ನಲ್ಲೇ ಮಣಿಪುರದಲ್ಲಿ ರಾಷ್ಟ್ರಪತಿ ಆಡಳಿತವನ್ನು ಮತ್ತೆ ಆರು ತಿಂಗಳು ವಿಸ್ತರಿಸುವ ನಿರ್ಣಯವನ್ನು ಸರ್ಕಾರ ಮಂಡಿಸಿತು. ಅದಕ್ಕೆ ಧ್ವನಿ ಮತದ ಮೂಲಕ ಅನುಮೋದನೆ ದೊರೆಯಿತು.

ಲೋಕಸಭೆಯಲ್ಲಿ ಮುಂದುವರಿದ ಗದ್ದಲ: ಎಸ್‌ಐಆರ್ ಕುರಿತು ಚರ್ಚೆಗೆ ಅವಕಾಶ ನೀಡುವಂತೆ ಒತ್ತಾಯಿಸಿ ಕಾಂಗ್ರೆಸ್ ಮತ್ತು ಇತರ ವಿರೋಧ ಪಕ್ಷಗಳ ಸದಸ್ಯರು ಮಂಗಳವಾರ ಲೋಕಸಭೆಯಲ್ಲೂ ಪ್ರತಿಭಟನೆ ಮುಂದುವರಿಸಿದರು.

₹67 ಸಾವಿರ ಕೋಟಿ ವೆಚ್ಚದ ಶಸ್ತ್ರಾಸ್ತ್ರ ಖರೀದಿಗೆ ಅಸ್ತು

ನವದೆಹಲಿ (ಪಿಟಿಐ): ದೀರ್ಘ ಅವಧಿಯ ಹಾರಾಟ ಸಾಮರ್ಥ್ಯವುಳ್ಳ ಡ್ರೋನ್‌ಗಳು, ಕ್ಷಿಪಣಿಗಳ ಖರೀದಿ ಸೇರಿ ಅಂದಾಜು ₹67 ಸಾವಿರ ಕೋಟಿ ವೆಚ್ಚದಲ್ಲಿ ವಿವಿಧ ರಕ್ಷಣಾ ವ್ಯವಸ್ಥೆಗಳ ಖರೀದಿಗೆ ರಕ್ಷಣಾ ಖರೀದಿ ಪರಿಷತ್ತು (ಡಿಎಸಿ) ಮಂಗಳವಾರ ಅನುಮೋದನೆ ನೀಡಿದೆ.

ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅಧ್ಯಕ್ಷತೆಯಲ್ಲಿ ನಡೆದ ಡಿಎಸಿ ಸಭೆಯಲ್ಲಿ ಈ ಖರೀದಿಗೆ ಅನುಮೋದನೆ ನೀಡಲಾಯಿತು ಎಂದು ರಕ್ಷಣಾ ಸಚಿವಾಲಯ ಪ್ರಕಟಣೆಯಲ್ಲಿ ತಿಳಿಸಿದೆ.

ಮೂರು ಸಶಸ್ತ್ರ ಪಡೆಗಳಿಗಾಗಿ ಕಡಿಮೆ ಎತ್ತರದಲ್ಲಿ ದೀರ್ಘಕಾಲ ಹಾರಾಡಬಲ್ಲ ಹಾಗೂ ದೂರದಿಂದ ನಿಯಂತ್ರಣ ವ್ಯವಸ್ಥೆಹೊಂದಿದ ಯುದ್ಧವಿಮಾನಗಳ (ಎಂಎಎಲ್‌ಇ- ಆರ್‌ಪಿಎ) ಖರೀದಿಗೂ ಆರಂಭಿಕ ಅನುಮೋದನೆ ನೀಡಲಾಗಿದೆ ಎಂದು ಸಚಿವಾಲಯ ತಿಳಿಸಿದೆ.

'ಎಂಎಎಲ್‌ಇ–ಆರ್‌ಪಿಎ'ಗಳು ಶಸ್ತ್ರಾಸ್ತ್ರಗಳು ಹಾಗೂ ಇತರ ಪರಿಕರಗಳನ್ನು ದೂರದ ಪ್ರದೇಶಗಳಿಗೆ ಕೊಂಡೊಯ್ಯುವ ಹಾಗೂ ಬಹಳ ಹೊತ್ತಿನವರೆಗೆ ಹಾರಾಟ ನಡೆಸುವ ಸಾಮರ್ಥ್ಯ ಹೊಂದಿವೆ. ದಿನದ 24 ಗಂಟೆಯೂ ಸಶಸ್ತ್ರ ಪಡೆಗಳ ಕಣ್ಗಾವಲು ಹಾಗೂ ಯುದ್ಧ ಸಾಮರ್ಥ್ಯವನ್ನು ಈ ಯುದ್ಧವಿಮಾನಗಳು ಹೆಚ್ಚಿಸಲಿವೆ' ಎಂದು ತಿಳಿಸಿದೆ.

ಸರಕು ಸಾಗಣೆ ವಿಮಾನಗಳಾದ ಸಿ–17 ಹಾಗೂ ಸಿ–130ಜೆ ಹಾಗೂ ಎಸ್–400 ಕ್ಷಿಪಣಿ ವ್ಯವಸ್ಥೆಯ ನಿರ್ವಹಣೆ ಗುತ್ತಿಗೆ ಕುರಿತಂತೆಯೂ ಡಿಎಸಿ ಅನುಮೋದನೆ ನೀಡಿದೆ.

ಕೇರಳ: 'ಬ್ಯಾಕ್‌ಬೆಂಚ್'ಗೆ ವಿದಾಯ ಹೇಳಲು ಚಿಂತನೆ

ತಿರುವನಂತಪುರ (ಪಿಟಿಐ): ಸರ್ಕಾರಿ ಶಾಲೆಗಳಲ್ಲಿ 'ಬ್ಯಾಕ್‌ಬೆಂಚ್' ಎಂಬ ಪರಿಕಲ್ಪನೆಗೆ ವಿದಾಯ ಹೇಳಲು ಕೇರಳ ಸರ್ಕಾರ ಮುಂದಾಗಿದೆ.

'ನಮ್ಮ ಶಿಕ್ಷಣ ವ್ಯವಸ್ಥೆಗೆ ಸೂಕ್ತವಾದ ಆಸನ ವ್ಯವಸ್ಥೆಯನ್ನು ರೂಪಿಸಲು ತಜ್ಞರ ಸಮಿತಿ ರಚಿಸಲು ಸಾರ್ವಜನಿಕ ಶಿಕ್ಷಣ ಇಲಾಖೆ ನಿರ್ಧರಿಸಿದೆ. ಸಮಿತಿಯ ಸಲಹೆಯಂತೆ ನಿರ್ಧಾರ ಕೈಗೊಳ್ಳಲಾಗುವುದು' ಎಂದು ಶಿಕ್ಷಣ ಸಚಿವ ವಿ.ಶಿವನ್‌ಕುಟ್ಟಿ ಅವರು ತಿಳಿಸಿದ್ದಾರೆ.

'ಬ್ಯಾಕ್‌ಬೆಂಚ್' ಎಂಬ ಪರಿಕಲ್ಪನೆಯು ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಮತ್ತು ಕಲಿಕೆಗೆ ಸಂಬಂಧಿಸಿದಂತೆ ನಕಾರಾತ್ಮಕ ಪರಿಣಾಮ ಬೀರುತ್ತದೆ. ಮಕ್ಕಳು ಜೀವನದಲ್ಲಿ ಅಥವಾ ಶಿಕ್ಷಣದಲ್ಲಿ ಹಿಂದೆ ಬೀಳಬಾರದು. ಎಲ್ಲ ವಿದ್ಯಾರ್ಥಿಗಳಿಗೂ ಸಮಾನ ಅವಕಾಶವನ್ನು ಕಲ್ಪಿಸುವುದು ನಮ್ಮ ಗುರಿಯಾಗಿದೆ. ಇದನ್ನು ಹೇಗೆ ಮಾಡಲು ಸಾಧ್ಯ ಎಂಬ ಕುರಿತು ಚಿಂತನೆ ನಡೆಸುತ್ತಿದ್ದೇವೆ' ಎಂದು ಹೇಳಿದ್ದಾರೆ.

'ಹಲವು ದೇಶಗಳಲ್ಲಿ ವಿವಿಧ ಮಾದರಿಗಳನ್ನು ಅನುಸರಿಸುವ ಮೂಲಕ ಈ ಬ್ಯಾಕ್ ಬೆಂಚ್ ಪರಿಕಲ್ಪನೆಯನ್ನು ತೊಡೆದುಹಾಕಲಾಗಿದೆ. ಈ ಬಗ್ಗೆ ಎಲ್ಲರ ಅಭಿಪ್ರಾಯಗಳನ್ನು ಕೋರುತ್ತಿದ್ದೇನೆ' ಎಂದು ತಿಳಿಸಿದ್ದಾರೆ.

ಕಾರ್ಯಭಾರ ನಿಯಮ ಪರಿಷ್ಕರಣೆಯತ್ತ ಚಿತ್ತ

ಇಂಗ್ಲೆಂಡ್ ಸರಣಿಯಲ್ಲಿ ಫಲ ನೀಡಿದ ಕೋಚ್ ಗಂಭೀರ್– ಅಗರಕರ್ 'ಜೊತೆಯಾಟ'ದ ತಂತ್ರಗಾರಿಕೆ


ಗೌತಮ್ ಗಂಭೀರ್ ಮತ್ತು ಅಜಿತ್ ಅಗರಕರ್ ಪಿಟಿಐ ಚಿತ್ರ

ನವದೆಹಲಿ (ಪಿಟಿಐ): ಭಾರತದ ಕ್ರಿಕೆಟ್‌ನಲ್ಲಿ ಮೆಗಾ ಸ್ಟಾರ್ ಸಂಸ್ಕೃತಿಯನ್ನು ಯಾವಾಗಲೂ ವಿರೋಧಿಸುತ್ತಲೇ ಬಂದವರು ಗೌತಮ್ ಗಂಭೀರ್. ಇಂಗ್ಲಿಷ್ ನಾಡಿನ ಬೇಸಿಗೆಯಲ್ಲಿ ಮೊಹಮ್ಮದ್ ಸಿರಾಜ್ ಅವರು ಟೆಸ್ಟ್ ಸರಣಿಯುದ್ದಕ್ಕೂ ತೋರಿಸಿದ ದಿಟ್ಟ ಆಟವು ಮುಖ್ಯ ಕೋಚ್ ಗಂಭೀರ್ ನಿಲುವನ್ನು ಪುಷ್ಟೀಕರಿಸಿದೆ.

ಇಂಗ್ಲೆಂಡ್‌ನಲ್ಲಿ ಸೋಮವಾರ ಮುಕ್ತಾಯವಾದ ಐದು ಪಂದ್ಯಗಳ ಟೆಸ್ಟ್ ಸರಣಿಯಲ್ಲಿ ಭಾರತ ತಂಡವು 2–2ರಿಂದ ಸಮಬಲ ಸಾಧಿಸಿರುವುದು ಗಂಭೀರ್ ಮತ್ತು ರಾಷ್ಟ್ರೀಯ ಕ್ರಿಕೆಟ್ ತಂಡದ ಆಯ್ಕೆ ಸಮಿತಿ ಮುಖ್ಯಸ್ಥ ಅಜಿತ್ ಅಗರಕರ್ ಅವರ ಸ್ಥಾನಗಳನ್ನು ಮತ್ತಷ್ಟು ಬಲಿಷ್ಠಗೊಳಿಸಿದೆ. ಇವರಿಬ್ಬರ 'ಜೊತೆಯಾಟ'ದಿಂದಾಗಿ ತಂಡದಲ್ಲಿ 'ಸಮಾನ ಸಂಸ್ಕೃತಿ' ನೆಲೆಗೊಳಿಸುವ ಕಾರ್ಯಕ್ಕೆ ಚಾಲನೆ ದೊರೆತಿದೆ. ತಂಡದಲ್ಲಿ ಕೆಲವು ಆಟಗಾರರಿಗೆ ಮಾತ್ರ ವಿಶೇಷವಾದ ಆದ್ಯತೆ ನೀಡುವುದನ್ನು ತಪ್ಪಿಸುವಲ್ಲಿ ಬಹುತೇಕ ಯಶಸ್ವಿಯಾಗಿದ್ದಾರೆ. ಗಂಭೀರ್, ಆಯ್ಕೆಗಾರರು ಮತ್ತು ಬಿಸಿಸಿಐ ಅಧಿಕಾರಿಗಳೆಲ್ಲರೂ ಎಲ್ಲರನ್ನೂ ಸಮಾನವಾಗಿ ಒಳಗೊಳ್ಳುವ ಏಕ ಉದ್ದೇಶ ಹೊಂದಿರುವುದು ಈ ಸರಣಿಯಲ್ಲಿ ಮೇಲ್ನೋಟಕ್ಕೇ ಕಂಡುಬಂದಿದೆ.

ಇದರಿಂದಾಗಿ ಹುರುಪುಗೊಂಡಿರುವ ವ್ಯವಸ್ಥಾಪನ ಮಂಡಳಿಯು ಮತ್ತೊಂದು ಮಹತ್ವದ ಹೆಜ್ಜೆ ಇಡಲು ಮುಂದಾಗಿದೆ. ಆಟಗಾರರು ತಾವು ಯಾವ ಪಂದ್ಯಗಳಲ್ಲಿ ಅಥವಾ ಸರಣಿಗಳಲ್ಲಿ ಆಡಬೇಕು ಎಂದು ನಿರ್ಧರಿಸುವ ಕಾರ್ಯಭಾರ ನಿರ್ವಹಣೆ ನಿಯಮವನ್ನು ಬದಲಾಯಿಸುವತ್ತ ಈಗ ದೃಷ್ಟಿ ನೆಟ್ಟಿದೆ.

'ಕೇಂದ್ರ ಗುತ್ತಿಗೆಯಲ್ಲಿರುವ ಆಟಗಾರರಿಗೆ ಈ ಕುರಿತು ತಿಳಿಸಬೇಕು ಎಂಬ ಚರ್ಚೆಗಳು ನಡೆಯುತ್ತಿವೆ. ವಿಶೇಷವಾಗಿ ಮೂರು ಮಾದರಿಗಳಲ್ಲಿಯೂ ಆಡುವ ಕ್ರಿಕೆಟಿಗರಿಗೆ ಈ ವಿಚಾರ ತಿಳಿಸಲಾಗಿದೆ. ಆಟಗಾರರೇ ತಮಗೆ ಬೇಕಾದ ಪಂದ್ಯಗಳನ್ನು ಮಾತ್ರ ಆಡಲು ನಿರ್ಧರಿಸುವ ಪರಿಪಾಠಕ್ಕೆ ಕೊನೆ ಹಾಡಲು ತೀರ್ಮಾನಿಸಲಾಗಿದೆ' ಎಂದು ಹೆಸರು ಹೇಳಲು ಇಚ್ಛಿಸದ ಅಧಿಕಾರಿಯೊಬ್ಬರು ತಿಳಿಸಿದರು.

ನಾವು ಒಂದಿಷ್ಟು ಗೆಲ್ಲಬಹುದು, ಮತ್ತೊಂದಿಷ್ಟು ಸೋಲಬಹುದು. ಆದರೆ, ನಾವೆಂದೂ ಶರಣಾಗತರಾಗುವುದಿಲ್ಲ! ಅಮೋಘವಾಗಿ ಆಡಿದ್ದೀರಿ ಹುಡುಗರೇ..
ಗೌತಮ್ ಗಂಭೀರ್, ಭಾರತ ಕ್ರಿಕೆಟ್ ತಂಡದ ಮುಖ್ಯ ಕೋಚ್

'ಆದರೆ ಕಾರ್ಯಭಾರ ನಿರ್ವಹಣೆ ನಿಯಮವನ್ನು ತೆಗೆದು ಹಾಕುವುದಿಲ್ಲ. ಅದರಲ್ಲೂ ವೇಗದ ಬೌಲರ್‌ಗಳ ಆಟದ ಪ್ರಮಾಣದ ನಿರ್ವಹಣೆ ಮಹತ್ವದ್ದು. ಆದರೆ ಅದಕ್ಕಾಗಿ ಕಾರ್ಯಭಾರ ಒತ್ತಡ ನಿರ್ವಹಣೆ ಎಂಬ ಪರಿಭಾಷೆ ಬಳಸುವುದು ಸೂಕ್ತವಲ್ಲ. ಇದರಿಂದಾಗಿ ಆಟಗಾರರು ಅತಿ ಮಹತ್ವದ ಪಂದ್ಯಗಳನ್ನು ತಪ್ಪಿಸಿಕೊಳ್ಳುವಂತಾಗುತ್ತದೆ' ಎಂದೂ ಅವರು ವಿವರಿಸಿದರು.

ಭಾರತದ ಮೊಹಮ್ಮದ್ ಸಿರಾಜ್ ಅವರು ಈ ಸರಣಿಯ ಎಲ್ಲ ಪಂದ್ಯಗಳಲ್ಲಿಯೂ ಆಡಿದರು. ಒಟ್ಟು 185.3 ಓವರ್‌ಗಳನ್ನು ಬೌಲಿಂಗ್ ಮಾಡಿದರು. ಇದರೊಂದಿಗೆ ಫೀಲ್ಡಿಂಗ್ ಹಾಗೂ ನೆಟ್ಸ್‌ನಲ್ಲಿ ಬೌಲಿಂಗ್ ಮಾಡಿದ ಅವಧಿಯನ್ನೂ ಪರಿಗಣಿಸಬೇಕು. ಅವರು ಕಳೆದ ಆರು ವಾರಗಳಲ್ಲಿ ಬೌಲಿಂಗ್ ಹೊಣೆ ನಿಭಾಯಿಸಿದ ರೀತಿ ಉತ್ತಮ ಉದಾಹರಣೆಯಾಗಿದೆ. ಇದು ಅವರ ಅತ್ಯುತ್ತಮ ದೈಹಿಕ ಕ್ಷಮತೆಯನ್ನೂ ತೋರಿಸಿದೆ. ಎಲ್ಲಕ್ಕಿಂತ ಮುಖ್ಯವಾಗಿ ಸಿರಾಜ್, ಪ್ರಸಿದ್ಧ ಕೃಷ್ಣ ಮತ್ತು ಆಕಾಶ್ ದೀಪ್ ಅವರು ತಮ್ಮ ಹೊಣೆಯನ್ನು ಅಚ್ಚುಕಟ್ಟಾಗಿ ನಿಭಾಯಿಸಿದ್ದಾರೆ. ತಂಡದ ಪ್ರಮುಖ ಬೌಲರ್ ಗೈರುಹಾಜರಿಯಲ್ಲಿಯೂ ತಂಡಕ್ಕೆ ಆಸರೆಯಾಗಿದ್ದಾರೆ.

ಇಂಗ್ಲೆಂಡ್ ತಂಡದ ಬೆನ್ ಸ್ಟೋಕ್ಸ್ ಅವರು ಕೂಡ ತಮ್ಮ ಗಾಯದ ಸಮಸ್ಯೆಯ ನಡುವೆಯೂ ದೀರ್ಘ ಸ್ಪೆಲ್‌ಗಳಲ್ಲಿ ಬೌಲಿಂಗ್ ಮಾಡಿದರು. ಅವರು ಸತತ ನಾಲ್ಕು ಪಂದ್ಯಗಳಲ್ಲಿ ಆಡಿದ್ದರು. ಇದರಿಂದಾಗಿ ಕಾರ್ಯಭಾರ ನಿರ್ವಹಣೆ ನಿಯಮ ಕುರಿತು ಚರ್ಚೆ ಶುರುವಾಗಿತ್ತು. ಈ ನಿಯಮವು ಅತಿರಂಜಿತ ಪರಿಕಲ್ಪನೆಯಾಗಿದ್ದು ತಮ್ಮ ಅನುಕೂಲಕ್ಕೆ ತಕ್ಕಂತೆ ಆಟಗಾರರು ಬಳಕೆ ಮಾಡಿಕೊಳ್ಳುತ್ತಿರುವ ಬಗ್ಗೆ ಮಾತುಗಳು ಕೇಳಿಬಂದಿದ್ದವು.

ವೇಗಿ ಜಸ್‌ಪ್ರೀತ್ ಬೂಮ್ರಾ ಅವರು ಐದು ಪಂದ್ಯಗಳಲ್ಲಿಯೂ ಆಡಲು ಸಾಧ್ಯವಾಗದಿರುವುದು ಕೂಡ ಚರ್ಚೆಗೆ ಕಾರಣವಾಗಿದೆ. ಅವರ ಗಾಯದ ಸಮಸ್ಯೆಗೆ ಪೂರ್ಣ ಪರಿಹಾರ ನೀಡುವಲ್ಲಿ ಬೆಂಗಳೂರಿನ ಸೆಂಟರ್ ಆಫ್ ಎಕ್ಸಲೆನ್ಸ್ (ಸಿಒಇ)ನಲ್ಲಿ ಕಾರ್ಯನಿರ್ವಹಿಸುತ್ತಿರುವ ಕ್ರೀಡಾ ವಿಜ್ಞಾನ ತಂಡದ ಬಗ್ಗೆಯೂ ಟೀಕೆಗಳು ವ್ಯಕ್ತವಾಗಿವೆ.

ಬೂಮ್ರಾ ಅವರು ಮುಂದಿನ ಒಂದು ತಿಂಗಳು ವಿಶ್ರಾಂತಿ ಪಡೆದ ನಂತರ ಸೆಪ್ಟೆಂಬರ್‌ನಲ್ಲಿ ನಡೆಯಲಿರುವ ಏಷ್ಯಾ ಕಪ್ ಟಿ20 ಕ್ರಿಕೆಟ್ ಟೂರ್ನಿಗೆ ಲಭ್ಯರಾಗುವ ಸಾಧ್ಯತೆ ಇದೆ. ಅದರಿಂದಾಗಿ ಅಕ್ಟೋಬರ್ 2ರಿಂದ ಆರಂಭವಾಗುವ ವೆಸ್ಟ್ ಇಂಡೀಸ್ ವಿರುದ್ಧದ ಟೆಸ್ಟ್ ಸರಣಿಯಿಂದ ವಿಶ್ರಾಂತಿ ಪಡೆಯಬಹುದು. ಅವರು ಗಾಯಗೊಳ್ಳದೇ ಇದ್ದರೆ, ನವೆಂಬರ್‌ನಲ್ಲಿ ವಿಶ್ವ ಟೆಸ್ಟ್ ಚಾಂಪಿಯನ್ ದಕ್ಷಿಣ ಆಫ್ರಿಕಾ ತಂಡದ ವಿರುದ್ಧದ ಎರಡು ಟೆಸ್ಟ್‌ಗಳಲ್ಲಿ ಆಡಬಹುದು ಎನ್ನಲಾಗಿದೆ.


ಭಾರತ ತಂಡದ ಬೌಲರ್‌ಗಳಾದ ಆಕಾಶ್ ದೀಪ್, ಮೊಹಮ್ಮದ್ ಸಿರಾಜ್ ಮತ್ತು ಪ್ರಸಿದ್ಧ ಕೃಷ್ಣ ಎಎಫ್‌ಪಿ ಚಿತ್ರ

ಸ್ವದೇಶಕ್ಕೆ ಮರಳಿದ ಸಿರಾಜ್, ಶಾರ್ದೂಲ್, ಅರ್ಷದೀಪ್

ಲಂಡನ್ (ಪಿಟಿಐ): ಓವಲ್ ಕ್ರೀಡಾಂಗಣದಲ್ಲಿ ಸೋಮವಾರ ಮುಕ್ತಾಯವಾದ ಇಂಗ್ಲೆಂಡ್ ಎದುರಿನ ಟೆಸ್ಟ್ ಪಂದ್ಯದಲ್ಲಿ ಜಯಗಳಿಸಿದ ಭಾರತ ತಂಡದ ಆಟಗಾರರು ದೊಡ್ಡಮಟ್ಟದ ಸಂಭ್ರಮಾಚರಣೆ ಮಾಡಲಿಲ್ಲ. ಸರಳವಾಗಿ ಸಂಭ್ರಮ ಆಚರಿಸಿಕೊಂಡ ಆಟಗಾರರು ಮಂಗಳವಾರ ಬೆಳಿಗ್ಗೆ ಸ್ವದೇಶಕ್ಕೆ ಪಯಣ ಆರಂಭಿಸಿದರು.

ವೇಗಿ ಮೊಹಮ್ಮದ್ ಸಿರಾಜ್ ಸೇರಿದಂತೆ ಕೆಲವು ಆಟಗಾರರು ಎಮಿರೇಟ್ಸ್ ವಿಮಾನದಲ್ಲಿ ಪ್ರಯಾಣ ಆರಂಭಿಸಿದರು. ಮಂಗಳವಾರ ಸಂಜೆ ದುಬೈಗೆ ತಲುಪಿದ ಆಟಗಾರರು ಅಲ್ಲಿಂದ ತಮ್ಮ ತವರೂರುಗಳಿಗೆ ಪ್ರಯಾಣಿಸಿದರು. ಸಿರಾಜ್ ಅವರು ದುಬೈನಿಂದ ನೇರವಾಗಿ ಹೈದರಾಬಾದಿಗೆ, ಅರ್ಷದೀಪ್ ಸಿಂಗ್ ಮತ್ತು ಶಾರ್ದೂಲ್ ಠಾಕೂರ್ ಅವರು ತಮ್ಮ ತವರೂರುಗಳಿಗೆ ತೆರಳುವ ವ್ಯವಸ್ಥೆ ಮಾಡಲಾಗಿತ್ತು.

ತಂಡದ ಇನ್ನೂ ಕೆಲವು ಆಟಗಾರರು ಕೆಲವು ದಿನಗಳನ್ನು ಇಂಗ್ಲೆಂಡ್‌ನಲ್ಲಿಯೇ ಕಳೆಯಲು ನಿರ್ಧರಿಸಿದ್ದಾರೆ. ಬಿಡುವಿನ ದಿನಗಳನ್ನು ಕಳೆಯಲಿದ್ದಾರೆ. ಕುಲದೀಪ್ ಯಾದವ್, ಅರ್ಷದೀಪ್ ಸಿಂಗ್ ಅವರು ಮಾಜಿ ಆಟಗಾರ ಪಿಯೂಷ್ ಚಾವ್ಲಾ ಅವರೊಂದಿಗೆ, ಪ್ರಸಿದ್ಧ ಕೃಷ್ಣ ಸೇರಿದಂತೆ ಕೆಲವು ಆಟಗಾರರು ತಮ್ಮ ಕುಟುಂಬದ ಸದಸ್ಯರೊಂದಿಗೆ ಲಂಡನ್‌ನಲ್ಲಿ ವಿಹರಿಸಿದರು.

'ಕಳೆದ ರಾತ್ರಿ ಯಾವುದೇ ವಿಜಯೋತ್ಸವವನ್ನು ಆಚರಿಸಿಲ್ಲ. ಇದೊಂದು ದೀರ್ಘ ಹಾಗೂ ಪ್ರಯಾಸದ ಸರಣಿಯಾಗಿತ್ತು. ಅದರಿಂದಾಗಿ ಆಟಗಾರರು ವಿಶ್ರಾಂತಿಗೆ ಒತ್ತು ನೀಡಿದರು. ಕೆಲವರು ತಮ್ಮ ಕುಟುಂಬದೊಂದಿಗೆ ಕಾಲ ಕಳೆದರು. ಬಹುತೇಕ ಆಟಗಾರರು ಭಾರತಕ್ಕೆ ಮರಳಲು ಪ್ರಯಾಣ ಆರಂಭಿಸಿದರು' ಎಂದು ಬಿಸಿಸಿಐ ಮೂಲಗಳು ತಿಳಿಸಿವೆ.

'ಕ್ರಿಕೆಟ್ ಪದಕೋಶದಿಂದ 'ಕಾರ್ಯಭಾರ ಒತ್ತಡ' ಕಿತ್ತುಹಾಕಿ'



'ಭಾರತದ ಕ್ರಿಕೆಟ್ ಪದಕೋಶದಿಂದ ಕಾರ್ಯಭಾರ ಒತ್ತಡ ನಿರ್ವಹಣೆ ಎಂಬ ಪದಗಳು ಅಳಿಸಿಹೋಗಬೇಕು. ಇದನ್ನು ನಾನು ಬಹಳ ವರ್ಷಗಳಿಂದ ಹೇಳುತ್ತಿದ್ದೇನೆ. ಕಾರ್ಯಭಾರ ಎನ್ನುವುದು ನಮ್ಮ ಮನಸ್ಥಿತಿಯಷ್ಟೇ ಎಂಬುದನ್ನು ಅರಿಯಬೇಕು' ಎಂದು ವೀಕ್ಷಕ ವಿವರಣೆಗಾರ ಸುನಿಲ್ ಗಾವಸ್ಕರ್ ಹೇಳಿದ್ದಾರೆ.

'ದೇಶಕ್ಕಾಗಿ ಆಡುವಾಗ ನೋವು, ಸಂಕಟಗಳನ್ನು ಮರೆತುಬಿಡಬೇಕು. ರಾಷ್ಟ್ರದ ಗಡಿಯಲ್ಲಿರುವ ಸೈನಿಕರು ವಿಪರೀತ ಚಳಿಯ ಬಗ್ಗೆ ಯಾವತ್ತಾದರೂ ದೂರಿದ್ದಾರೆಯೇ? ರಿಷಭ್ ಪಂತ್ ತೋರಿದ ಮಾದರಿ ಎಂತಹದು? ತಮ್ಮ ಮೂಳೆ ಮುರಿದಿದ್ದರೂ ಬ್ಯಾಟಿಂಗ್ ಮಾಡಲು ಕ್ರೀಸ್‌ಗೆ ಬಂದರು. ಎಲ್ಲ ಆಟಗಾರರಿಂದಲೂ ಇಂತಹ ನಿರೀಕ್ಷೆಯು ಅಪೇಕ್ಷಿತ. ಭಾರತಕ್ಕಾಗಿ ಕ್ರಿಕೆಟ್ ಆಡುವುದು ಗೌರವದ ಸಂಗತಿ' ಎಂದು ಗಾವಸ್ಕರ್ ಅಭಿಪ್ರಾಯಪಟ್ಟಿದ್ದಾರೆ.

ಆಟಗಾರರ ಕಾರ್ಯಭಾರ ಒತ್ತಡ ನಿರ್ವಹಣೆ ನಿಯಮ ಕುರಿತು 'ಇಂಡಿಯಾ ಟುಡೆ' ಸಂವಾದದಲ್ಲಿ ಭಾಗವಹಿಸಿದ್ದ ಅವರು, '140 ಕೋಟಿ ಜನಸಂಖ್ಯೆಯ ದೇಶವನ್ನು ನೀವು (ಆಟಗಾರರು) ಪ್ರತಿನಿಧಿಸುತ್ತಿದ್ದೀರಿ. ಮೊಹಮ್ಮದ್ ಸಿರಾಜ್ ಅವರು ಗಟ್ಟಿ ಗುಂಡಿಗೆಯ ಬೌಲರ್. ಅವರು ಇಡೀ ಸರಣಿಯಲ್ಲಿ ದಿಟ್ಟ ಬೌಲಿಂಗ್ ಮಾಡಿದರು. ಸತತ ಎಲ್ಲ ಪಂದ್ಯಗಳಲ್ಲಿಯೂ ಆಡುವುದರೊಂದಿಗೆ ಕಾರ್ಯಭಾರ ನಿಯಮ ಪೊಳ್ಳು ಎಂಬುದನ್ನು ತೋರಿಸಿಕೊಟ್ಟರು. 7–8 ಓವರ್‌ಗಳ ಸ್ಪೆಲ್‌ಗಳನ್ನು ಅವರು ಸತತವಾಗಿ ಮಾಡುತ್ತಲೇ ಇದ್ದರು. ನಾಯಕನಿಗೂ ಸಿರಾಜ್ ಮೇಲೆ ಹೆಚ್ಚು ವಿಶ್ವಾಸವಿತ್ತು ಮತ್ತು ದೇಶಕ್ಕೆ ಅವರಿಂದ ಅಪಾರ ನಿರೀಕ್ಷೆ ಇತ್ತು' ಎಂದರು.

ವಿದ್ಯಾರ್ಥಿನಿ ಶುಲ್ಕ ಭರಿಸಿದ ಪಂತ್

ಪ್ರಜಾವಾಣಿ ವಾರ್ತೆ


ರಿಷಭ್ ಪಂತ್

ಜಮಖಂಡಿ (ಬಾಗಲಕೋಟೆ ಜಿಲ್ಲೆ): ಆರ್ಥಿಕ ಸಂಕಷ್ಟದಲ್ಲಿದ್ದ ಬೀಳಗಿ ತಾಲ್ಲೂಕಿನ ಚವಡಾಪುರ ರಬಕವಿ ಗ್ರಾಮದ ಜ್ಯೋತಿ ಕಣಬೂರ ಅವರಿಗೆ ಭಾರತ ಕ್ರಿಕೆಟ್ ತಂಡದ ವಿಕೆಟ್ ಕೀಪರ್ ರಿಷಬ್ ಪಂತ್ ಆರ್ಥಿಕ ನೆರವು ನೀಡಿದ್ದಾರೆ. ಪಿಯುಸಿಯಲ್ಲಿ ಶೇ 83 ಅಂಕ ಗಳಿಸಿದ್ದ ಜ್ಯೋತಿ ಅವರಿಗೆ ಪದವಿ ಪ್ರವೇಶ ಪಡೆಯಲು ಹಣಕಾಸಿನ ಸಮಸ್ಯೆ ಎದುರಾಗಿತ್ತು.

ಚಹಾ ಅಂಗಡಿ ಹೊಂದಿರುವ ವಿದ್ಯಾರ್ಥಿನಿ ತಂದೆ ತೀರ್ಥಯ್ಯ, ತಮ್ಮದೇ ಗ್ರಾಮದ ನಿವಾಸಿ ವಿಜಯಪುರದಲ್ಲಿರುವ ಗುತ್ತಿಗೆದಾರ ಅನಿಲ ಹುಣಶಿಕಟ್ಟಿ ಅವರಿಗೆ ಜಮಖಂಡಿಯ ಬಿಎಲ್‌ಡಿಇ ಕಾಲೇಜಿನಲ್ಲಿ ಬಿಸಿಎಗೆ ಸೀಟು ಕೊಡಿಸಿ, ಆರ್ಥಿಕ ನೆರವು ಕೋರಿದ್ದರು. ಇದಕ್ಕೆ ಅವರೂ ಒಪ್ಪಿದ್ದರು.

ಅನಿಲ ಅವರು ಬೆಂಗಳೂರಿನ ಸ್ನೇಹಿತ ಅಕ್ಷಯ ನಾಯಕ ಜೊತೆ ಈ ವಿಷಯ ಹಂಚಿಕೊಂಡರು. ಅಕ್ಷಯ ಅವರು ಸ್ನೇಹಿತ ರಿಷಬ್ ಪಂತ್ ಅವರಿಗೆ ಇದನ್ನು ಗಮನಕ್ಕೆ ತಂದರು. ಕೂಡಲೇ ರಿಷಬ್ ಅವರು, ಕಾಲೇಜಿನ ಖಾತೆ ವಿವರ ಪಡೆದು, ಮೊದಲ ಸೆಮಿಸ್ಟರ್‌ನ ₹40 ಸಾವಿರ ಶುಲ್ಕ ಪಾವತಿಸಿದರು.

'ಜ್ಯೋತಿ ಕಣಬೂರ ಅವರ ಬಗ್ಗೆ ಗೊತ್ತಾಗಿದೆ. ಅವರ ಕುಟುಂಬದವರ ಜೊತೆ ಚರ್ಚಿಸಿ, ಬಿಎಲ್‌ಡಿಇ ಸಂಸ್ಥೆಯಿಂದ ನೆರವು ನೀಡಲಾಗುವುದು' ಎಂದು ಬಿಎಲ್‌ಡಿಇ ಸಂಸ್ಥೆಯ ಆಡಳಿತಾಧಿಕಾರಿ ಪ್ರೊ. ಶ್ರೀಕಾಂತ ಲಗಳಿ 'ಪ್ರಜಾವಾಣಿ'ಗೆ ತಿಳಿಸಿದರು.



ತನಿಷ್ಕಾ ತನಿಷ್ಕಾ ಕಪಿಲ್ ಕಾಲಭೈರವ (ಎಡ) ಮತ್ತು ಅಥರ್ವ ನವರಂಗೆ

ಅಥರ್ವಗೆ ಪುರುಷರ ಸಿಂಗಲ್ಸ್ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಅಥರ್ವ ನವರಂಗೆ ಅವರು ಮಲ್ಲೇಶ್ವರಂ ಅಸೋಸಿಯೇಷನ್ ಆಶ್ರಯದಲ್ಲಿ ನಡೆಯುತ್ತಿರುವ 5ನೇ ರಾಜ್ಯ ರ‍್ಯಾಂಕಿಂಗ್ ಟೇಬಲ್ ಟೂರ್ನಿಯಲ್ಲಿ ಮಂಗಳವಾರ ಪುರುಷರ ಸಿಂಗಲ್ಸ್ ಪ್ರಶಸ್ತಿ ಗೆದ್ದುಕೊಂಡರು. 17 ವರ್ಷದೊಳಗಿನವರ ಬಾಲಕಿಯರ ಸಿಂಗಲ್ಸ್‌ನಲ್ಲಿ ತನಿಷ್ಕಾ ಕಪಿಲ್ ಕಾಲಭೈರವ ಅವರು ಚಾಂಪಿಯನ್ ಆದರು.

ಅಸೋಸಿಯೇಷನ್‌ನ ಸಭಾಂಗಣದಲ್ಲಿ ನಡೆದ ಟೂರ್ನಿಯ ಫೈನಲ್‌ನಲ್ಲಿ ಅಥರ್ವ 12–14, 11–2, 11–6, 11–9, 8–11, 8–11, 11–5 ರಿಂದ ಸಂಜಯ್ ಮಾಧವನ್ ಅವರನ್ನು ಸೋಲಿಸಿದರು.

ಸೆಮಿಫೈನಲ್ ಪಂದ್ಯಗಳಲ್ಲಿ ಅಥರ್ವ 11–6, 15–13, 8–11, 12–10, 11–8 ರಿಂದ ಎಂ.ಕಲೈವಣ್ಣನ್ ಅವರನ್ನು, ಸಂಜಯ್ 11–8, 12–10, 11–1, 8–11, 11–8 ರಿಂದ ಯಶವಂತ್ ಪಿ. ಅವರನ್ನು ಮಣಿಸಿದರು.

17 ವರ್ಷದೊಳಗಿನ ಬಾಲಕಿಯರ ಫೈನಲ್‌ನಲ್ಲಿ 11–8, 14–12, 8–11, 11–3 ರಿಂದ ಹಿಯಾ ಸಿಂಗ್ ಅವರನ್ನು ಮಣಿಸಿದರು. ಸೆಮಿಫೈನಲ್ ಪಂದ್ಯಗಳಲ್ಲಿ ತನಿಷ್ಕಾ ಹಿನ್ನಡೆಯಿಂದ ಚೇತರಿಸಿಕೊಂಡು 8–11, 12–14, 11–9, 11–5, 11–5 ರಿಂದ ಹಿಮಾಂಶಿ ಚೌಧರಿ ವಿರುದ್ಧ, ಹಿಯಾ ಸದಿಂಗ್ 11–8, 16–14, 11–5 ರಿಂದ ಲಕ್ಷ್ಮಿ ಆಶ್ರಿತಾ ಅವರನ್ನು ಸೋಲಿಸಿದ್ದರು.

ಚಿಟಿಕೆ ಸುದ್ದಿ

ಹಾಕಿ: ಜಾರ್ಖಂಡ್‌ಗೆ ಮಣಿದ ಕರ್ನಾಟಕ



ಕಾಕಿನಾಡ (ಪಿಟಿಐ): ಜಾರ್ಖಂಡ್ ತಂಡ, ಜೂನಿಯರ್ ಮಹಿಳಾ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನ 'ಎ' ಡಿವಿಷನ್ ಪಂದ್ಯದಲ್ಲಿ ಮಂಗಳವಾರ ಕರ್ನಾಟಕ ತಂಡವನ್ನು 2–0 ಗೋಲುಗಳಿಂದ ಸೋಲಿಸಿತು.

ರೋಶನಿ ಐಂದ್ 44ನೇ ನಿಮಿಷ ಜಾರ್ಖಂಡ್ ತಂಡಕ್ಕೆ ಮುನ್ನಡೆ ಒದಗಿಸಿದರು. ಪಂದ್ಯ ಮುಗಿಯಲು ಎರಡು ನಿಮಿಷಗಳಿರುವಾಗ ಸರೋಜ್ ಕುಮಾರಿ ತಂಡದ ಮುನ್ನಡೆಯನ್ನು ಹೆಚ್ಚಿಸಿದರು.

ಇತರ ಪಂದ್ಯಗಳಲ್ಲಿ ಮಧ್ಯಪ್ರದೇಶ, ಹರಿಯಾಣ, ಕೂಡ ಮುನ್ನಡೆ ಸಾಧಿಸಿದವರು. ಹರಿಯಾಣ 7–1 ಗೋಲುಗಳಿಂದ ಬಂಗಾಳ ತಂಡವನ್ನು, ಮಧ್ಯಪ್ರದೇಶ 5–0 ಗೋಲುಗಳಿಂದ ಚಂಡೀಗಢ ತಂಡವನ್ನು ಮಣಿಸಿದವು.

ಡುರಾಂಡ್ ಕಪ್: ಭಾರತೀಯ ಸೇನಾಪಡೆಗೆ ಜಯ

ಜಮ್ಷೆಡ್‌ಪುರ (ಪಿಟಿಐ): ಭಾರತೀಯ ಸೇನೆ ತಂಡವು ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿ 'ಸಿ' ಗುಂಪಿನ ಪಂದ್ಯದಲ್ಲಿ ಮಂಗಳವಾರ ನೇಪಾಳದ ತ್ರಿಭುವನ್ ಆರ್ಮಿ ಎಫ್‌ಸಿ ತಂಡವನ್ನು 1–0 ಗೋಲಿನಿಂದ ಸೋಲಿಸಿತು.

ಪಿ.ಕ್ರೋಸ್ಟೋಫರ್ ಕೇಮಿ ಅವರು 21ನೇ ನಿಮಿಷ ನಿರ್ಣಾಯಕ ಗೋಲು ಗಳಿಸಿದರು.

ಸಬ್ ಜೂನಿಯರ್ ಬಾಕ್ಸಿಂಗ್ ನಾಳೆಯಿಂದ

ನವದೆಹಲಿ (ಪಿಟಿಐ): 400 ಬಾಲಕರು ಸೇರಿ 700ಕ್ಕೂ ಹೆಚ್ಚು ಮಂದಿ ಉದಯೋನ್ಮುಖ ಬಾಕ್ಸರ್‌ಗಳು, ಇದೇ 7ರಿಂದ 13ರವರೆಗೆ ಗ್ರೇಟರ್ ನೊಯ್ಡಾದಲ್ಲಿ ನಡೆಯುವ ರಾಷ್ಟ್ರೀಯ ಸಬ್ ಜೂನಿಯರ್ (15 ವರ್ಷದೊಳಗಿನವರ) ಚಾಂಪಿಯನ್‌ಷಿಪ್‌ನಲ್ಲಿ ಭಾಗವಹಿಸಲಿದ್ದಾರೆ ಎಂದು ಭಾರತ ಬಾಕ್ಸಿಂಗ್ ಫೆಡರೇಷನ್ ಮಂಗಳವಾರ ತಿಳಿಸಿದೆ.

ಕೆಳಹಂತದಲ್ಲಿ ಬಾಕ್ಸರ್‌ಗಳ ಪಡೆಯನ್ನು ಸಜ್ಜುಗೊಳಿಸುವ ಉದ್ದೇದಿಂದ ನಡೆಸಲಾಗುತ್ತಿರುವ ಸಬ್ ಜೂನಿಯರ್ ಚಾಂಪಿಯನ್‌ಷಿಪ್ 15 ತೂಕ ವಿಭಾಗಗಳಲ್ಲಿ ನಡೆಯಲಿದೆ.

ಈ ವರ್ಷ ಪುರುಷರ, ಮಹಿಳೆಯರ ಮತ್ತು ಜೂನಿಯರ್ ವಿಭಾಗಗಳಲ್ಲಿ ಈಗಾಗಲೇ ರಾಷ್ಟ್ರೀಯ ಚಾಂಪಿಯನ್‌ಷಿಪ್ ನಡೆಸಲಾಗಿದೆ.


ಹೆಬ್ಬಾಳದಲ್ಲಿರುವ ಕೇಂದ್ರಿಯ ವಿದ್ಯಾಲಯದ ಮೈದಾನದಲ್ಲಿ ಮಂಗಳವಾರ ನಡೆದ ಕ್ವಾರ್ಟರ್ ಫೈನಲ್ ಪಂದ್ಯದಲ್ಲಿ ದೆಹಲಿ ತಂಡದ ನಿಹಾರಿಕಾ ಅವರು ಆಗ್ರಾ ತಂಡದ ಆಟಗಾರ್ತಿಯರಿಂದ ತಪ್ಪಿಸಿಕೊಳ್ಳಲು ಯತ್ನಿಸಿದರು ಚಿತ್ರ: ಕೃಷ್ಣ ಕುಮಾರ್ ಪಿ.ಎಸ್.

ಕೆ.ವಿ. ಕ್ರೀಡಾಕೂಟ: ಕರ್ನಾಟಕಕ್ಕೆ ನಿರಾಸೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರಿಯ ವಿದ್ಯಾಲಯಗಳ ಬೆಂಗಳೂರು ವಲಯದ ಬಾಲಕಿಯರ ತಂಡವು ಇಲ್ಲಿ ನಡೆಯುತ್ತಿರುವ ಕೇಂದ್ರಿಯ ವಿದ್ಯಾಲಯಗಳ ರಾಷ್ಟ್ರೀಯ ಕ್ರೀಡಾಕೂಟದ 14 ವರ್ಷದೊಳಗಿನವರ ವಿಭಾಗದಲ್ಲಿ ಕ್ವಾರ್ಟರ್ ಫೈನಲ್ ತಲುಪಲು ವಿಫಲವಾಯಿತು.

ಹೆಬ್ಬಾಳದಲ್ಲಿರುವ ಕೇಂದ್ರಿಯ ವಿದ್ಯಾಲಯದ ಮೈದಾನದಲ್ಲಿ ಮಂಗಳವಾರ ನಡೆದ ಲೀಗ್ ಹಂತದ ಕೊನೆಯ ಪಂದ್ಯದಲ್ಲಿ ಬೆಂಗಳೂರು ತಂಡವು ಗುವಾಹಟಿ ತಂಡದ ಎದುರು ಹೋರಾಡಿ 36–37ರಿಂದ ಸೋತಿತು.

ನಂತರ ನಡೆದ ಕ್ವಾರ್ಟರ್ ಫೈನಲ್ ಸುತ್ತಿನ ಮೊದಲ ಪಂದ್ಯದಲ್ಲಿ ಕೋಲ್ಕತ್ತ 37–19ರಿಂದ ಲಖನೌ ವಿರುದ್ಧ; ಜಬಲ್‌ಪುರ 21–18ರಿಂದ ರಾಂಚಿ ವಿರುದ್ಧ; ದೆಹಲಿ 34–15ರಿಂದ ಆಗ್ರಾ ವಿರುದ್ಧ; ಚೆನ್ನೈ 34–12ರಿಂದ ಜಮ್ಮು ವಿರುದ್ಧ ಗೆಲುವು ಸಾಧಿಸಿ ಸೆಮಿಫೈನಲ್ ಹಂತಕ್ಕೆ ಪ್ರವೇಶಿಸಿದವು.

ಕೆ.ವಿ ಎಎಫ್‌ಎಸ್ ಯಲಹಂಕದಲ್ಲಿ ನಡೆದ ಬಾಲಕರ ವಿಭಾಗ 17ವರ್ಷದೊಳಗಿನ ಕಬಡ್ಡಿ ಫಲಿತಾಂಶ: ದೆಹಲಿ 31–28ರಿಂದ ಬೆಂಗಳೂರು ವಿರುದ್ಧ; ಜೈಪುರ 33–25ರಿಂದ ಚೆನ್ನೈ ವಿರುದ್ಧ; ಪಟ್ನಾ 29–13ರಿಂದ ವಾರಾಣಸಿ ವಿರುದ್ಧ; ಕೋಲ್ಕತ್ತ 31–21ರಿಂದ ಡೆಹ್ರಾಡೂನ್ ವಿರುದ್ಧ ಗೆಲುವು ಸಾಧಿಸಿದವು. ಸೆಮಿಫೈನಲ್ ಪಂದ್ಯದಲ್ಲಿ ಜೈಪುರ 44–42ರಿಂದ ದೆಹಲಿ ವಿರುದ್ಧ ಹಾಗೂ ಕೋಲ್ಕತ್ತ 49–44ರಿಂದ ಜೈಪುರ ವಿರುದ್ಧ ಗೆಲುವು ಸಾಧಿಸಿ ಪ್ರಶಸ್ತಿ ಸುತ್ತಿಗೆ ಪ್ರವೇಶಿಸಿದವು.

ಸೆಮಿಫೈನಲ್‌ಗೆ ಭುವನೇಶ್ವರ: ಕೆ.ವಿ ಡಿಆರ್‌ಡಿಒದಲ್ಲಿ ನಡೆದ 17 ವರ್ಷದೊಳಗಿನ ಬಾಲಕಿಯರ ವಿಭಾಗದ ಸೆಮಿಫೈನಲ್ ಪಂದ್ಯದಲ್ಲಿ ಭುವನೇಶ್ವರ 34–29ರಿಂದ ಜೈಪುರ ವಿರುದ್ಧ ಹಾಗೂ ಚೆನ್ನೈ 30–25ರಿಂದ ಡೆಹ್ರಾಡೂನ್ ವಿರುದ್ಧ ಗೆದ್ದು ಅಂತಿಮ ಸುತ್ತಿಗೆ ಪ್ರವೇಶಿಸಿದವು.

ಭಾರತದ ವನಿತೆಯರಿಗೆ 7 ಪದಕ ಖಚಿತ

ಬ್ಯಾಂಕಾಕ್ (ಪಿಟಿಐ): ಭಾರತದ ಬಾಕ್ಸರ್‌ಗಳು, 19 ಮತ್ತು 22 ವರ್ಷದೊಳಗಿನವರ ಏಷ್ಯನ್ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಮಂಗಳವಾರ ಸಹ ಉತ್ತಮ ಸಾಧನೆ ತೋರಿದ್ದು, ಏಳು ಮಂದಿ ಮಹಿಳಾ ಬಾಕ್ಸರ್‌ಗಳು ಪದಕ ಗೆಲ್ಲುವುದು ಖಚಿತವಾಗಿದೆ.



19 ವರ್ಷದೊಳಗಿನವರ ವಿಭಾಗದಲ್ಲಿ ಯಶಿಕಾ (51 ಕೆ.ಜಿ), ನಿಶಾ (54 ಕೆ.ಜಿ), ಮುಷ್ಕಾನ್ (57 ಕೆ.ಜಿ), ನಿನಿ (60 ಕೆ.ಜಿ), ನಿಶಾ (65 ಕೆ.ಜಿ), ಅಕಾನ್ಷಾ ಫಲಸ್ವಾಲ್ (70 ಕೆ.ಜಿ) ಮತ್ತು ಆರತಿ ಕುಮಾರಿ (75 ಕೆ.ಜಿ) ಅವರು ತಮ್ಮ ತೂಕ ವಿಭಾಗಗಳಲ್ಲಿ ಸೆಮಿಫೈನಲ್ ತಲುಪಿದ್ದಾರೆ.

22 ವರ್ಷದೊಳಗಿನವರ ವಿಭಾಗದಲ್ಲಿ ಭಾರತಕ್ಕೆ ಒಂದು ಡಜನ್‌ಗೂ ಹೆಚ್ಚು ಪದಕ ಖಚಿತವಾಗಿದೆ. ತಂಡವು ಇವುಗಳಲ್ಲಿ ಸಾಧ್ಯವಾದಷ್ಟು ಚಿನ್ನ ಗೆಲ್ಲುವ ವಿಶ್ವಾಸದೊಡನೆ ಕಣಕ್ಕಿಳಿಯಲಿದೆ.

ಯಶಿಕಾ 51 ಕೆ.ಜಿ. ವಿಭಾಗದ ಕ್ವಾರ್ಟರ್‌ಫೈನಲ್ ಹೋರಾಟದಲ್ಲಿ 3:2 ವಿಭಜಿತ ತೀರ್ಪಿನಲ್ಲಿ ಉಜ್ಬೇಕಿಸ್ತಾನದ ಮುಖ್ತಾಸರ್ ಅಲಿಯೇವಾ ಅವರನ್ನು ಮಣಿಸಿದರು. ನಿಶಾ ತಮ್ಮ ತೂಕ ವಿಭಾಗದ ಪಂದ್ಯದಲ್ಲಿ ಕಿರ್ಗಿಸ್ತಾನದ ಮಿಲನಾ ಶಿಕ್ಷಾಬೆಕೋವಾ ಅವರನ್ನು ಆರ್‌ಎಫ್‌ಸಿ (ರೆಫ್ರಿ ಸ್ಟಾಪ್ಸ್ ಕಂಟೆಸ್ಟ್) ಆಧಾರದಲ್ಲಿ ಮಣಿಸಿದರು.

ಮುಸ್ಕಾನ್ 57 ಕೆ.ಜಿ ವಿಭಾಗದಲ್ಲಿ ಉಜ್ಬೇಕಿಸ್ತಾನ ರಬಿಯಾ ರೆವಶನೋವಾ ಅವರನ್ನು 'ಸರ್ವಾನುಮತದ ತೀರ್ಪಿ'ನಲ್ಲಿ ಮಣಿಸಿದರು. ವಿನಿ, ಸತತ ಪಂಚ್‌ಗಳಿಂದ ಕಿರ್ಗಿಸ್ತಾನದ ಅಡೇಲಿಯಾ ಅಸಿಲ್ಬೆಕ್ ಅವರನ್ನು ಆರ್‌ಎಫ್‌ಸಿ ತೀರ್ಪಿನಲ್ಲಿ ಸೋಲಿಸಿದರು.

ನಿಶಾ 65 ಕೆ.ಜಿ. ವಿಭಾಗದ ಸೆಣಸಾಟದಲ್ಲಿ ಚೀನಾ ತೈಪೆಯ ಯು ಎನ್‌ಲಿ ಅವರ ವಿರುದ್ಧ ಪ್ರಾಬಲ್ಯ ಸಾಧಿಸಿದರು. ಅಕಾನ್ಷಾ, 70 ಕೆ.ಜಿ. ವಿಭಾಗದ ಮೊದಲ ಸುತ್ತಿನಲ್ಲೇ ಮಂಗೋಲಿಯಾದ ಎನ್ಖಾಜೆರೆಲ್ ಜೆರೆಲ್‌ಮುಂಕ್ ಅವರನ್ನು ಮಣಿಸಿದರು. ಆರತಿ, ಕಜಕಸ್ತಾನದ ಝುರಿನಾ ಟೊಲಿಬೈ ಅವರನ್ನು ಸೋಲಿಸಿದರು.

ಭಾರತದ ಸಹನಾ ಕುಮಾರಿ ಮಾತ್ರ ನಿರಾಶೆ ಅನುಭವಿಸಿದರು. ತೀವ್ರ ಸೆಣಸಾಟದ ನಂತರ ಅವರು 2:3 ರಲ್ಲಿ ಉಜ್ಬೇಕಿಸ್ತಾನದ ಮುಫ್ತುನಾ ಮುಸುರಮನೋವಾ ಎದುರು ಸೋಲನುಭವಿಸಿದರು.

ಸಬ್ ಜೂನಿಯರ್ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್ • ಕೊಯಿಜಮ್ ಶ್ರೇಷ್ಠ ಈಜುಪಟು

ಸಮಗ್ರ ಪ್ರಶಸ್ತಿ ಗೆದ್ದ ಕರ್ನಾಟಕ ತಂಡ

ಪ್ರಜಾವಾಣಿ ವಾರ್ತೆ


41ನೇ ಸಬ್ ಜೂನಿಯರ್ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿ ಗೆದ್ದುಕೊಂಡ ಕರ್ನಾಟಕ ತಂಡ


ಕೊಯಿಜಮ್ ಅಥೋಯಿಬಾ ಸಿಂಗ್


ಪೂರ್ವಿ ರಿತೇಶ್ ನಾಯ್ಕ್

ಬೆಂಗಳೂರು: ಕರ್ನಾಟಕ ತಂಡವು ಬಸವನಗುಡಿ ಈಜು ಕೇಂದ್ರದಲ್ಲಿ ಮಂಗಳವಾರ ಮುಕ್ತಾಯಗೊಂಡ 41ನೇ ಸಬ್ ಜೂನಿಯರ್ ರಾಷ್ಟ್ರೀಯ ಈಜು ಚಾಂಪಿಯನ್‌ಷಿಪ್‌ನಲ್ಲಿ ಸಮಗ್ರ ಪ್ರಶಸ್ತಿ ಗೆದ್ದುಕೊಂಡಿತು. ಆತಿಥೇಯ ತಂಡದ ಈಜುಪಟುಗಳು ಟೂರ್ನಿಯಲ್ಲಿ ಒಟ್ಟು 104 ಅಂಕಗಳನ್ನು ಕಲೆಹಾಕಿದರು.

ಮಣಿಪುರ ತಂಡ 81 ಅಂಕಗಳೊಂದಿಗೆ ರನ್ನರ್ಸ್ ಅಪ್ ಆಯಿತು. ಈ ತಂಡದ ಕೊಯಿಜಮ್ ಅಥೋಯಿಬಾ ಸಿಂಗ್ ಅವರು 28 ಅಂಕ ಗಳಿಸಿ ಬಾಲಕರ ವಿಭಾಗದ ಶ್ರೇಷ್ಠ ಈಜುಪಟು ಪ್ರಶಸ್ತಿಗೆ ಭಾಜನರಾದರು. ಗೋವಾದ ಪೂರ್ವಿ ರಿತೇಶ್ ನಾಯ್ಕ್ ಅವರು (19 ಅಂಕ) ಬಾಲಕಿಯರ ವಿಭಾಗದಲ್ಲಿ ಈ ಗೌರವ ಪಡೆದರು.

ಫಲಿತಾಂಶಗಳು ಇಂತಿವೆ:

ಬಾಲಕರು: ಮೂರನೇ ಗುಂಪು: 100 ಮೀ. ಬ್ಯಾಕ್‌ಸ್ಟ್ರೋಕ್: ಎ.ಪಿ. ಆರ್ಯ ಸತಾರ್ (ತಮಿಳುನಾಡು, ಕಾಲ: 1ನಿ.05.53ಸೆ.)–1, ಕೃಷಿವ್ ದೋಷಿ (ಮಧ್ಯಪ್ರದೇಶ)–2, ಹೇಮಾಂಶು ನಹಾಕ್‌ಪಮ್ (ಮಣಿಪುರ)–3.

100 ಮೀ. ಫ್ರೀಸ್ಟೈಲ್: ಕೊಯಿಜಮ್ ಅಥೋಯಿಬಾ ಸಿಂಗ್ (ಮಣಿಪುರ, ಕಾಲ: 58.59ಸೆ)–1, ಹೇಮಾಂಶು ನಹಾಕ್‌ಪಮ್ (ಮಣಿಪುರ)–2, ಎ.ಪಿ. ಆರ್ಯ ಸತಾರ್ –3.

ಬಾಲಕಿಯರು: 100 ಮೀಟರ್ ಬ್ಯಾಕ್‌ಸ್ಟ್ರೋಕ್: ಅಲ್ಫಿಯಾ ಎಂ. (ತಮಿಳುನಾಡು, ಕಾಲ: 1ನಿ. 10.70ಸೆ.)–1, ಸೆರೆನಾ ಸರೋಹಾ (ಹರಿಯಾಣ)–2, ಅನ್ನಿಕಾ ಗೋಪ್ಲಾನಿ (ಮಹಾರಾಷ್ಟ್ರ)–3.

100 ಮೀ. ಫ್ರೀಸ್ಟೈಲ್: ಪೂರ್ವಿ ರಿತೇಶ್ ನಾಯ್ಕ್ (ಗೋವಾ, ಕಾಲ: 1ನಿ.04.33ಸೆ.)–1, ಸ್ತುತಿ ಸಿಂಗ್ (ಕರ್ನಾಟಕ)–2, ಅಮಾತುಲ್ಲಾ ಧೋಲ್ಕಾವಾಲಾ (ಮಹಾರಾಷ್ಟ್ರ)–3.

ವಾಟರ್‌ಪೋಲೊ: ಕರ್ನಾಟಕಕ್ಕೆ ಸುಲಭ ಜಯ

ಕರ್ನಾಟಕ ತಂಡ, ಹಲಸೂರಿನ ಕೆನ್ಸಿಂಗ್ಟನ್ ಕೊಳದಲ್ಲಿ ನಡೆಯುತ್ತಿರುವ 51ನೇ ಜೂನಿಯರ್ ವಾಟರ್‌ಪೋಲೊ ಚಾಂಪಿಯನ್‌ಷಿಪ್‌ನ ಪಂದ್ಯದಲ್ಲಿ ಹರಿಯಾಣ ತಂಡವನ್ನು 12–2 ಅಂತರದಿಂದ ಸುಲಭವಾಗಿ ಸೋಲಿಸಿತು.

ಇನ್ನೊಂದು ಏಕಪಕ್ಷೀಯ ಪಂದ್ಯದಲ್ಲಿ ಕೇರಳ 14–1 ಗೋಲುಗಳಿಂದ ತಮಿಳುನಾಡು ತಂಡವನ್ನು ಸದೆಬಡಿಯಿತು. ನವನೀತ್ ಎಸ್. ಮೂರು ಗೋಲುಗಳನ್ನು ಗಳಿಸಿದರು.


ಮಹಾರಾಷ್ಟ್ರ 18–1 ರಿಂದ ಆಂಧ್ರಪ್ರದೇಶ ತಂಡವನ್ನು, ಒಡಿಶಾ 17–3 ರಿಂದ ಮಣಿಪುರ ತಂಡವನ್ನು, ಬಂಗಾಳ 12–4 ರಿಂದ ಪಂಜಾಬ್ ತಂಡವನ್ನು ಸೋಲಿಸಿದವು.

ಮಹಿಳೆಯರ ವಿಭಾಗದಲ್ಲಿ ಕರ್ನಾಟಕ 9–0 ಯಿಂದ ಅಸ್ಸಾಂ ವಿರುದ್ಧ, ಒಡಿಶಾ 6–4 ರಿಂದ ಬಂಗಾಳ ವಿರುದ್ಧ, ಮಹಾರಾಷ್ಟ್ರ 9–1 ರಿಂದ ತಮಿಳುನಾಡು ವಿರುದ್ಧ ಜಯಗಳಿಸಿದವು.

ಚೆನ್ನೈ ಗ್ರ್ಯಾಂಡ್‌ಮಾಸ್ಟರ್ಸ್ ಚೆಸ್ ಟೂರ್ನಿ

ಅರ್ಜುನ್‌ಗೆ ವಿದಿತ್, ಗಿರಿ ಸವಾಲು


ವಿದಿತ್ ಗುಜರಾತಿ


ಅರ್ಜುನ್ ಇರಿಗೇಶಿ

ಚೆನ್ನೈ (ಪಿಟಿಐ): ಭಾರತದ ಅಗ್ರಮಾನ್ಯ ಆಟಗಾರ ಅರ್ಜುನ್ ಇರಿಗೇಶಿ ಅವರಿಗೆ ಸೋಮವಾರ ಆರಂಭವಾಗುವ ಮೂರನೇ ವರ್ಷದ ಚೆನ್ನೈ ಗ್ರ್ಯಾಂಡ್ ಮಾಸ್ಟರ್ಸ್ ಚೆಸ್ ಟೂರ್ನಿಯಲ್ಲಿ ಸ್ವದೇಶದ ವಿದಿತ್ ಗುಜರಾತಿ, ನೆದರ್ಲೆಂಡ್ಸ್‌ನ ದಿಗ್ಗಜ ಅನಿಶ್ ಗಿರಿ ಅವರಿಂದ ತೀವ್ರ ಸ್ಪರ್ಧೆ ಎದುರಾಗುವ ಸಾಧ್ಯತೆಯಿದೆ.

ಒಂದು ಕೋಟಿ ರೂಪಾಯಿ ಬಹುಮಾನ ಹಣ ಹೊಂದಿರುವ ಈ ಟೂರ್ನಿಯು ಮಾಸ್ಟರ್ಸ್ ಮತ್ತು ಚಾಲೆಂಜರ್ಸ್ ವಿಭಾಗದಲ್ಲಿ 9 ಸುತ್ತುಗಳಲ್ಲಿ ನಡೆಯಲಿದೆ.

ಈ ಹಿಂದೆ ಏಳು ಸುತ್ತುಗಳು ಇರುತ್ತಿದ್ದವು. ಈ ಬಾರಿ 19 ಗ್ರ್ಯಾಂಡ್‌ಮಾಸ್ಟರ್‌ಗಳು ಕಣದಲ್ಲಿದ್ದು, ಫಿಡೆ ಸರ್ಕಿಟ್ ಅಮೂಲ್ಯ ಪಾಯಿಂಟ್‌ಗಳನ್ನು ಗಳಿಸಲು ಅವಕಾಶವಿದೆ. ಅತಿ ಹೆಚ್ಚು ಸರ್ಕಿಟ್ ಪಾಯಿಂಟ್ ಪಡೆಯುವ ಆಟಗಾರ ಕ್ಯಾಂಡಿಡೇಟ್ಸ್ ಟೂರ್ನಿಯಲ್ಲಿ ಆಡುವ ಅವಕಾಶ ಪಡೆಯುತ್ತಾರೆ. ಹೀಗಾಗಿ ಈ ಟೂರ್ನಿಯಲ್ಲಿ ಪಡೆಯುವ ಪಾಯಿಂಟ್ಸ್ ಸಹ ಮಹತ್ವದ್ದಾಗಲಿದೆ.

2023ರಲ್ಲಿ ಈ ಟೂರ್ನಿಯಲ್ಲಿ ಪಡೆದ ಪಾಯಿಂಟ್‌ಗಳು ಡಿ.ಗುಕೇಶ್ ಅವರ ಪಾಲಿಗೆ ನಿರ್ಣಾಯಕವಾಗಿದ್ದವು. ಅವರು ಫಿಡೆ ಸರ್ಕಿಟ್‌ನಲ್ಲಿ ಅತಿ ಹೆಚ್ಚು ಪಾಯಿಂಟ್ಸ್ ಪಡೆದು ಕ್ಯಾಂಡಿಡೇಟ್ಸ್‌ಗೆ ಆಯ್ಕೆಯಾಗಿದ್ದರು. ಅಲ್ಲಿ ವಿಜೇತರಾಗಿ ನಂತರ ವಿಶ್ವ ಚಾಂಪಿಯನ್‌ಗೆ (ಆಗ ಡಿಂಗ್ ಲಿರೆನ್‌ಗೆ) ಚಾಲೆಂಜರ್ ಆಗಿದ್ದರು.

2800ರ ರೇಟಿಂಗ್ ಕ್ಲಬ್‌ಗೆ ಸೇರ್ಪಡೆಯಾಗಿರುವ ಇರಿಗೇಶಿ, ಸ್ವದೇಶದ ಯುವ ಆಟಗಾರ ನಿಹಾಲ್ ಸರಿನ್, ಜರ್ಮನಿಯ ಯುವತಾರೆ ವಿನ್ಸೆಂಟ್ ಕೀಮರ್ ಅವರನ್ನೂ ಎದುರಿಸಲಿದ್ದಾರೆ. ಕೀಮರ್, ವಿಶ್ವ ಚಾಂಪಿಯನ್‌ಷಿಪ್ ವೇಳೆ ಗುಕೇಶ್ ಅವರ ನೆರವು ತಂಡದಲ್ಲಿ 'ಸೆಕೆಂಡ್' ಆಗಿದ್ದರು.

ಆದರೆ ಅನಿಶ್ ಗಿರಿ ಅವರಿಂದ ಇರಿಗೇಶಿ ತೀವ್ರ ಪೈಪೋಟಿ ಎದುರಿಸುವ ನಿರೀಕ್ಷೆಯಿದೆ. ಪ್ರಬಲ ಆಟ ಹೊಂದಿರುವ ಗಿರಿ ಈ ಟೂರ್ನಿಯ ಫೇವರಿಟ್‌ಗಳಲ್ಲಿ ಒಬ್ಬರಾಗಿದ್ದಾರೆ. ಭಾರತದ ಪ್ರಣವ್ ವಿ ಮತ್ತು ಕಾರ್ತಿಕೇಯನ್ ಮುರಳಿ ಅವರೂ ಈ ಟೂರ್ನಿಯಲ್ಲಿ ಆಡಲಿದ್ದಾರೆ.

ಚಾಲೆಂಜರ್ ವಿಭಾಗದಲ್ಲಿ ಗೆಲ್ಲುವ ಆಟಗಾರ, 2026ರ ಮಾಸ್ಟರ್ಸ್ ವಿಭಾಗದಲ್ಲಿ ಆಡುವ ಅವಕಾಶ ಗಳಿಸಲಿದ್ದಾರೆ.

ಚಾಲೆಂಜರ್ಸ್ ವಿಭಾಗದಲ್ಲೂ ಪ್ರತಿಭಾನ್ವಿತರಿದ್ದಾರೆ. ಡಿ.ಹಾರಿಕಾ, ಆರ್.ವೈಶಾಲಿ, ಹರ್ಷವರ್ಧನ ಜಿ.ಬಿ., ಅಭಿಮನ್ಯು ಪುರಾಣಿಕ್, ಗ್ರ್ಯಾಂಡ್‌ಮಾಸ್ಟರ್ ಭಾಸ್ಕರನ್ ಅಧಿಬನ್ ಮೊದಲಾದವರು ಕಣದಲ್ಲಿದ್ದಾರೆ.

ಸೆಮಿಫೈನಲ್‌ಗೆ ಎಚ್‌ಬಿಆರ್ ತಂಡ

ಬೆಂಗಳೂರು: ಎಚ್‌ಬಿಆರ್ ಬ್ಯಾಸ್ಕೆಟ್ ಬಾಲ್ ಕ್ಲಬ್ ತಂಡ, ಚಿಕ್ಕಮಗಳೂರು ಜಿಲ್ಲಾ ತಂಡ, ಎಂಇಜಿ & ಸೆಂಟರ್ ಹಾಗೂ ಮೈಸೂರು ಜಿಲ್ಲಾ ತಂಡಗಳು ಎಸ್. ರಂಗರಾಜನ್ ಸ್ಮರಣಾರ್ಥ ಟ್ರೋಫಿಗಾಗಿ ನಡೆಯುತ್ತಿರುವ ರಾಜ್ಯ 'ಸಿ' ಡಿವಿಷನ್ ಲೀಗ್ ಪುರುಷರ ಬ್ಯಾಸ್ಕೆಟ್‌ಬಾಲ್ ಚಾಂಪಿಯನ್‌ಷಿಪ್‌ನ ಸೆಮಿಫೈನಲ್‌ಗೆ ಅರ್ಹತೆ ಪಡೆದವು.

ಕಂಠೀರವ ಕ್ರೀಡಾಂಗಣದ ಬ್ಯಾಸ್ಕೆಟ್‌ಬಾಲ್ ಕೋರ್ಟ್‌ನಲ್ಲಿ ಮಂಗಳವಾರ ನಡೆದ ಸೂಪರ್ ಲೀಗ್ ಪಂದ್ಯದಲ್ಲಿ, ಎಚ್‌ಬಿಆರ್ ಬಿ.ಸಿ ತಂಡವು 77–53ರಿಂದ ಮೈಸೂರು ಜಿಲ್ಲಾ ತಂಡವನ್ನು ಮಣಿಸಿತು. ಎಚ್‌ಬಿಆರ್ ಪರ ಸಂಕೇತ್ 29 ಅಂಕ ಗಳಿಸಿದರೆ, ಮೈಸೂರು ಜಿಲ್ಲಾ ತಂಡದ ರೋನಕ್ 19 ಅಂಕ ಕಲೆಹಾಕಿದರು.

ಲೀಗ್ ಪಂದ್ಯಗಳ ಫಲಿತಾಂಶ: ಎಂಇಜಿ & ಸೆಂಟರ್ ತಂಡ 78–51ರಿಂದ ಚಿಕ್ಕಮಗಳೂರು ಜಿಲ್ಲಾ ತಂಡದ ಎದುರು; ಹೂಪ್ಸ್ 7 ಬಿ.ಸಿ ತಂಡವು 40–38ರಿಂದ ಸಿನ್ಸಿನಾಟೀಸ್ ಬಿ.ಸಿ ಎದುರು; ಡಿಆರ್‌ಡಿಒ ತಂಡವು 60–56ರಿಂದ ರಾಜ್‌ಕುಮಾರ್ ಬಿ.ಸಿ ಎದುರು; ಎಚ್‌ಬಿಆರ್ ಬಿ.ಸಿ ತಂಡ 77–53ರಿಂದ ಮೈಸೂರು ಜಿಲ್ಲಾ ತಂಡದ ವಿರುದ್ಧ ಜಯ ಸಾಧಿಸಿದವು.